ಶನಿವಾರ, ನವೆಂಬರ್ 26, 2022 | ಬೆಂಗಳೂರು | ₹ 6.00 | ಸಂಪುಟ 75 | ಸಂಚಿಕೆ 326 | ಪುಟ 20
www.prajavani.net
/prajavani.net @prajavani /prajavani http://bit.ly/Prajavani

ಪ್ರಜಾವಾಣಿ @75

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ

ಅನುಭವ ಮಂಟಪ
ಇಡಬ್ಲ್ಯುಎಸ್ ಮೀಸಲು: ಸುಪ್ರೀಂ ಕೋರ್ಟ್ ತೀರ್ಪು ಮರುಪರಿಶೀಲನೆ ನಡೆಸಿ

ಓಲಾ, ಉಬರ್: ಪ್ರಯಾಣ ದರ ಶೇ 10ರಷ್ಟು ಹೆಚ್ಚಳ 3B
ಗಡಿಯಲ್ಲಿ ದ್ವೇಷಮಯ ವಾತಾವರಣ 4
ಇಂದು ಭೂಮಿಕಾ 6

ಸೆನ್ಸೆಕ್ಸ್	ನಿಫ್ಟಿ	ಚಿನ್ನ (Std. 10g)	ಶುದ್ಧ ಬೆಳ್ಳಿ (kg)	₹/$
62,293 ▲	18,512 ▲	₹54,420 (ಬೆಂಗಳೂರು) ▲	₹64,100 (ಬೆಂಗಳೂರು) ▼	81.71 ▼

‘ಏಕರೂಪ ಸಂಹಿತೆ ಜಾರಿಗೆ ತಯಾರಿ’

ಶಿವಮೊಗ್ಗ: ‘ರಾಜ್ಯದಲ್ಲಿ ಏಕರೂಪ ನಾಗರಿಕ ಸಂಹಿತೆ ಜಾರಿಗೊಳಿಸಲು ಸರ್ಕಾರ ನಿರ್ಧರಿಸಿದೆ. ಯಾವ ರೀತಿ ಹಾಗೂ ಹೇಗೆ ಜಾರಿ ಮಾಡಬೇಕು ಎಂಬುದರ ಬಗ್ಗೆ ಗಂಭೀರ ಚಿಂತನೆ ನಡೆಸಿದ್ದೇವೆ’ ಎಂದು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಹೇಳಿದರು.

ಶುಕ್ರವಾರ ಇಲ್ಲಿ ಆರಂಭವಾದ ಬಿಜೆಪಿಯ ರಾಜ್ಯ ಪದಾಧಿಕಾರಿಗಳ ಹಾಗೂ ಕಾರ್ಯಕಾರಿಣಿ ಸಮಿತಿ ಸದಸ್ಯರ ಮೂರು ದಿನಗಳ ಪ್ರಶಿಕ್ಷಣ ವರ್ಗದ ಉದ್ಘಾಟನಾ ಸಮಾರಂಭದಲ್ಲಿ ಅವರು ಮಾತನಾಡಿದರು.

‘ಸಂವಿಧಾನದ ಮೂಲ ಪ್ರಸ್ತಾವನೆಯಲ್ಲಿ ಅಡಕವಾಗಿರುವ ಸಮಾನತೆಯ ಆಶಯವನ್ನು ಕಾರ್ಯ ರೂಪಕ್ಕೆ ತರಲು ದೀನದಯಾಳ್ ಉಪಾಧ್ಯಾಯ ಅವರ ಕಾಲದಿಂದಲೂ ನಾವು (ಬಿಜೆಪಿ) ಏಕರೂಪ ನಾಗರಿಕ ಸಂಹಿತೆ ಜಾರಿಯ ಅಗತ್ಯದ ಬಗ್ಗೆ ಹೇಳುತ್ತಾ ಬಂದಿದ್ದೇವೆ. ಅದರ ಬಗ್ಗೆ ರಾಷ್ಟ್ರ ಹಾಗೂ ರಾಜ್ಯ-ಮಟ್ಟದಲ್ಲಿ ಈಗ ಚರ್ಚೆಗಳು ನಡೆಯುತ್ತಿವೆ. ಅದನ್ನು ರಾಜ್ಯದಲ್ಲಿ ಸಕಾಲಕ್ಕೆ ಜಾರಿಗೊಳಿಸಬೇಕು ಎಂಬ ಉದ್ದೇಶವಿದೆ’ ಎಂದರು.

ಇನ್ನಷ್ಟು ಸುದ್ದಿಗಳು 3B

ಚಿನಕುರಳಿ

ಪ್ರಕಾಶ್ ಶೆಟ್ಟಿ

‘ಚಿಲುಮೆ’ ಅಕ್ರಮ: ಕೇಂದ್ರ ಚುನಾವಣಾ ಆಯೋಗದ ಆದೇಶ

ಇಬ್ಬರು ‘ಐಎಎಸ್’ ಅಮಾನತು

ಪ್ರಜಾವಾಣಿ ವಾರ್ತೆ

ಬೆಂಗಳೂರು: ಶಿವಾಜಿನಗರ, ಚಿಕ್ಕಪೇಟೆ ಮತ್ತು ಮಹದೇವಪುರ ವಿಧಾನಸಭಾ ಕ್ಷೇತ್ರಗಳ ಮತದಾರರ ಪಟ್ಟಿಯ ಸಮಗ್ರ ಪರಿಶೀಲನೆಗೆ ನಿರ್ದೇಶನ ನೀಡಿರುವ ಕೇಂದ್ರ ಚುನಾವಣಾ ಆಯೋಗ, ಹೆಚ್ಚುವರಿ ಜಿಲ್ಲಾ ಚುನಾವಣಾ ಅಧಿಕಾರಿಯಾಗಿರುವ ಇಬ್ಬರು ಐಎಎಸ್ ಅಧಿಕಾರಿಗಳನ್ನು ತಕ್ಷಣದಿಂದ ಅಮಾನತು ಮಾಡುವಂತೆ ಕಟ್ಟಪ್ಪಣೆ ವಿಧಿಸಿದೆ.

ಎಸ್.ರಂಗಪ್ಪ

ಕೆ.ಶ್ರೀನಿವಾಸ್

ಬಿಬಿಎಂಪಿ ವಿಶೇಷ ಆಯುಕ್ತ ಎಸ್.ರಂಗಪ್ಪ ಹಾಗೂ ಬೆಂಗಳೂರು ನಗರ ಜಿಲ್ಲಾಧಿಕಾರಿ ಕೆ.ಶ್ರೀನಿವಾಸ್ ಅವರ ಅಮಾನತಿಗೆ ನಿರ್ದೇಶಿಸಿದೆ. ರಂಗಪ್ಪ ಅವರು ಶಿವಾಜಿನಗರ ಮತ್ತು ಚಿಕ್ಕಪೇಟೆ ಕ್ಷೇತ್ರಗಳ ಹೆಚ್ಚುವರಿ ಜಿಲ್ಲಾ ಚುನಾವಣಾಧಿಕಾರಿಯಾಗಿದ್ದರೆ, ಶ್ರೀನಿವಾಸ್ ಅವರು ಮಹದೇವಪುರ ಕ್ಷೇತ್ರದ ಹೆಚ್ಚುವರಿ ಜಿಲ್ಲಾ ಚುನಾವಣಾಧಿಕಾರಿ ಆಗಿದ್ದರು. ಇಬ್ಬರನ್ನೂ ತಕ್ಷಣ ಅಮಾನತುಗೊಳಿಸಿ, ಇಲಾಖಾ ವಿಚಾರಣೆ ಆರಂಭಿಸುವಂತೆ ರಾಜ್ಯ ಸರ್ಕಾರದ ಮುಖ್ಯ ಕಾರ್ಯದರ್ಶಿಗೆ ಆಯೋಗ ನಿರ್ದೇಶನ ನೀಡಿದೆ.

‘ಚಿಲುಮೆ’ ಸಂಸ್ಥೆಯು ಮತದಾರರ ಜಾಗೃತಿ ಅಭಿಯಾನವನ್ನು ದುರ್ಬಳಕೆ ಮಾಡಿಕೊಂಡು ಮತದಾರರ ಮಾಹಿತಿ ಕಳವು ಮಾಡಿದೆ ಹಾಗೂ ಮತ ಪಟ್ಟಿಗೆ ಅಕ್ರಮವಾಗಿ ಹೆಸರು ಸೇರ್ಪಡೆ ಹಾಗೂ ಪಟ್ಟಿಯಿಂದ ಕೈಬಿಡುವ ಕೆಲಸ ಮಾಡಿದೆ ಎಂಬ ಆರೋಪದ ಕುರಿತು ವರದಿ ಪಡೆದ ಬಳಿಕ ಚುನಾವಣಾ ಆಯೋಗ ಈ ಕ್ರಮ ಕೈಗೊಂಡಿದೆ. ಈ ಸಂಬಂಧ ಕಾಂಗ್ರೆಸ್ ನಾಯಕರು ಕೇಂದ್ರ ಚುನಾವಣಾ ಆಯೋಗಕ್ಕೆ ದೂರು ನೀಡಿದ್ದರು.

‘ಶಿವಾಜಿನಗರ, ಚಿಕ್ಕಪೇಟೆ ಮತ್ತು ಮಹದೇವಪುರ ವಿಧಾನಸಭಾ ಕ್ಷೇತ್ರಗಳ ವ್ಯಾಪ್ತಿಯಲ್ಲಿ ಖಾಸಗಿ ವ್ಯಕ್ತಿಗಳಿಗೆ ಮತಗಟ್ಟೆ ಹಂತದ ಅಧಿಕಾರಿಗಳು (ಬಿಎಲ್‌ಒ ಮತ್ತು ಬಿಎಲ್‌ಸಿ) ಎಂಬ ಗುರುತಿನ ಚೀಟಿ ನೀಡಿರುವುದನ್ನು ತನಿಖಾ ವರದಿ ಖಚಿತಪಡಿಸಿದೆ. ಈ ಕ್ಷೇತ್ರಗಳಲ್ಲಿ ಮತದಾರರ ಪಟ್ಟಿಗೆ ಸೇರ್ಪಡೆ ಹಾಗೂ ಪಟ್ಟಿಯಿಂದ ಮತದಾರರ ಹೆಸರುಗಳನ್ನು ಕೈಬಿಟ್ಟಿರುವ ಕುರಿತು ಶೇಕಡ 100ರಷ್ಟು ಪರಿಶೀಲನೆ ನಡೆಸಬೇಕು’ ಎಂದು ಆಯೋಗ ತಿಳಿಸಿದೆ.

ಮೂರೂ ಕ್ಷೇತ್ರಗಳಲ್ಲಿ ಮತದಾರರ ಪಟ್ಟಿ ಪರಿಷ್ಕರಣೆ ಕುರಿತು ಪರಿಶೀಲನೆಗೆ ವಿಶೇಷಾಧಿಕಾರಿಗಳನ್ನಾಗಿ ಐಎಎಸ್ ಅಧಿಕಾರಿಗಳನ್ನು ನೇಮಿಸಲಾಗಿದೆ. ಶಿವಾಜಿನಗರ ಕ್ಷೇತ್ರಕ್ಕೆ ಪ್ರಿಯಾಂಕಾ ಮೇರಿ ಫ್ರಾನ್ಸಿಸ್, ಚಿಕ್ಕಪೇಟೆ ಕ್ಷೇತ್ರಕ್ಕೆ ಡಾ.ಆರ್. ವಿಶಾಲ್ ಹಾಗೂ ಮಹದೇವಪುರ ಕ್ಷೇತ್ರಕ್ಕೆ ಅಜಯ್ ನಾಗಭೂಷಣ್ ಅವರನ್ನು ಆಯೋಗ ನೇಮಿಸಿದೆ.

4ನೇ ಪುಟ ನೋಡಿ

ಮತದಾರರ ಸಮೀಕ್ಷೆಗೆ 500 ಸಿಬ್ಬಂದಿ

ಬೆಂಗಳೂರು: ‘ಮತದಾರರ ವೈಯಕ್ತಿಕ ಮಾಹಿತಿ ಕಲೆಹಾಕಲು ಯೋಜನೆ ರೂಪಿಸಿದ್ದ ಚಿಲುಮೆ ಸಂಸ್ಥೆ, ಈ ಕೆಲಸಕ್ಕಾಗಿ ಸುಮಾರು 500 ಸಿಬ್ಬಂದಿಯನ್ನು ಅರೆಕಾಲಿಕ ಅವಧಿಗಾಗಿ ನೇಮಿಸಿತ್ತು. ಡಿಜಿಟಲ್ ಸಮೀಕ್ಷಾ ಆ್ಯಪ್ ಬಗ್ಗೆ ಸಿಬ್ಬಂದಿಗೆ ತರಬೇತಿ ನೀಡಿ, ಮತದಾರರ ಮನೆ ಮನೆಗೆ ಕಳುಹಿಸಿತ್ತು’ ಎಂಬುದು ತನಿಖೆಯಿಂದ ಹೊರಬಿದ್ದಿದೆ.

ಚಿಲುಮೆ ಸಂಸ್ಥೆಯ ಸಂಸ್ಥಾಪಕ ರವಿಕುಮಾರ್, ಸಹೋದರ ಕೆಂಪೇಗೌಡ ಅವರನ್ನು ವಿಚಾರಣೆ ನಡೆಸುತ್ತಿರುವ ಹಲಸೂರು ಗೇಟ್ ಠಾಣೆ ಪೊಲೀಸರು, ಮತದಾರರ ಮಾಹಿತಿ ಕಲೆಹಾಕುತ್ತಿದ್ದ ಸಿಬ್ಬಂದಿಯ ಪಟ್ಟಿಯನ್ನು ಸಿದ್ಧಪಡಿಸುತ್ತಿದ್ದಾರೆ. ಪ್ರತಿಯೊಬ್ಬರಿಗೂ ನೋಟಿಸ್ ನೀಡಿ ವಿಚಾರಣೆ ನಡೆಸುತ್ತಿದ್ದಾರೆ.

ಸಮೀಕ್ಷೆ ನಡೆಸಲು ಸಿಬ್ಬಂದಿಗೆ ಸಹಕಾರ ನೀಡಿದ್ದರು ಎನ್ನಲಾದ ಬಿಬಿಎಂಪಿ ಅಧಿಕಾರಿಗಳನ್ನೂ ವಿಚಾರಣೆ ನಡೆಸುತ್ತಿರುವ ಪೊಲೀಸರು, ಅವರಿಂದಲೂ ಹೇಳಿಕೆ ಪಡೆದು ಪರಿಶೀಲಿಸುತ್ತಿದ್ದಾರೆ. ‘ಬಿಬಿಎಂಪಿ ವ್ಯಾಪ್ತಿಯಲ್ಲಿ ಮನೆ ಮನೆಗೆ ಹೋಗಿ, ಮತದಾರರ ಮಾಹಿತಿ ಕಲೆಹಾಕಲು ಸಿಬ್ಬಂದಿ ಬೇಕಾಗಿದ್ದಾರೆ’ ಎಂಬುದಾಗಿ ಜಾಹೀರಾತು ನೀಡಿದ್ದ ಆರೋಪಿಗಳು, ಯುವಜನರನ್ನು ನೇಮಿಸಿಕೊಂಡಿದ್ದರು. ಅವರಿಗೆ ದಿನದ ಲೆಕ್ಕದಲ್ಲಿ ಸಂಬಳ ನಿಗದಿ ಮಾಡಿದ್ದರು’ ಎಂದು ಪೊಲೀಸ್ ಮೂಲಗಳು ಹೇಳಿವೆ.

4ನೇ ಪುಟ ನೋಡಿ

ಇತಿಹಾಸದ ತಪ್ಪು ತಿದ್ದುಪಡಿ ನಿಶ್ಚಿತ: ಮೋದಿ

ನವದೆಹಲಿ (ಪಿಟಿಐ): ‘ಇತಿಹಾಸದ ಪುಟಗಳಲ್ಲಿ ಕಳೆದು ಹೋಗಿರುವ ವೀರ ಯೋಧರು, ಧೈರ್ಯಶಾಲಿಗಳನ್ನು ಸ್ಮರಿಸುವ ಮೂಲಕ ಭಾರತವು ತನ್ನ ಹಿಂದಿನ ತಪ್ಪುಗಳನ್ನು ಸರಿಪಡಿಸಿಕೊಳ್ಳುತ್ತಿದೆ’ ಎಂದು ಪ್ರಧಾನಿ ನರೇಂದ್ರ ಮೋದಿ ಶುಕ್ರವಾರ ಇಲ್ಲಿ ತಿಳಿಸಿದರು.

ವಸಾಹತುಶಾಹಿ ಯುಗದಲ್ಲಿ ಪಿತೂರಿಯ ಭಾಗವಾಗಿ ಬರೆಯಲಾದ ಇತಿಹಾಸದಲ್ಲಿ ಈ ಮಹಾನ್ ನಾಯಕರನ್ನು ತೆರೆಯ ಮರೆಗೆ ಸರಿಸಲಾಗಿತ್ತು ಎಂದು ಅವರು ಶುಕ್ರವಾರ ಇಲ್ಲಿ ವೀರ ಯೋಧ ಲಾಚಿತ್ ಬರ್ಫುಕನ್ ಅವರ 400ನೇ ಜನ್ಮ ದಿನಾಚರಣೆಯ ಸಮಾರಂಭದಲ್ಲಿ ಬೇಸರ ವ್ಯಕ್ತಪಡಿಸಿದರು.

> ಇತಿಹಾಸವನ್ನು ‘ವಿರೂಪ’ಗಳಿಂದ ಮುಕ್ತಗೊಳಿಸುವ ಮತ್ತು ಪುನರ್ ರಚಿಸುವ ಕಾರ್ಯವನ್ನು ಯಾರಿಂದಲೂ ನಿಲ್ಲಿಸಲು ಸಾಧ್ಯವಿಲ್ಲ
> **ಅಮಿತ್ ಶಾ,** ಗೃಹ ಸಚಿವ

‘ಭಾರತದ ಇತಿಹಾಸವು ಕೇವಲ ಗುಲಾಮಗಿರಿಗೆ ಸಂಬಂಧಿಸಿದ್ದಲ್ಲ. ಅದರಲ್ಲಿ ಯೋಧರೂ ಇದ್ದಾರೆ. ಇದು ವಿಜಯದ ಇತಿಹಾಸ, ತ್ಯಾಗ, ನಿಸ್ವಾರ್ಥ ಮತ್ತು ಶೌರ್ಯದ ಇತಿಹಾಸವಾಗಿದೆ’ ಎಂದು ಅವರು ಹೇಳಿದರು.

‘ಗುಲಾಮಗಿರಿಯ ಈ ಕಾರ್ಯಸೂಚಿಯನ್ನು ಸ್ವಾತಂತ್ರ್ಯದ ಬಳಿಕ ಬದಲಿಸುವ ಅಗತ್ಯವಿತ್ತು. ಆದರೆ ಅದು ಆಗಿರಲಿಲ್ಲ. ಇಂದು ಭಾರತವು ವಸಾಹತುಶಾಹಿಯ ಸಂಕೋಲೆಗಳನ್ನು ಮುರಿದಿದೆ. ನಮ್ಮ ಪರಂಪರೆಯನ್ನು ಆಚರಿಸುತ್ತಾ, ನಮ್ಮ ವೀರರನ್ನು ಹೆಮ್ಮೆಯಿಂದ ಸ್ಮರಿಸುತ್ತಾ ಮುನ್ನುಗ್ಗುತ್ತಿದೆ’ ಎಂದು ಪ್ರಧಾನಿ ಹೇಳಿದರು.

ಲಾಚಿತ್ ಬರ್ಫುಕನ್ ಅವರು ರಕ್ತ ಸಂಬಂಧಿಗಳ ಹಿತಕ್ಕಿಂತ ರಾಷ್ಟ್ರೀಯ ಹಿತಾಸಕ್ತಿಯೇ ಮುಖ್ಯ ಎಂದುಕೊಂಡಿದ್ದರು. ಅವರು ಇದಕ್ಕಾಗಿ ತನ್ನ ನಿಕಟ ಸಂಬಂಧಿಯನ್ನು ಶಿಕ್ಷಿಸಲೂ ಹಿಂಜರಿಯಲಿಲ್ಲ ಎಂದು ಪ್ರಧಾನಿ ಸ್ಮರಿಸಿದರು.

ಅಸ್ಸಾಂನ ಅಹೋಂ ಸಾಮ್ರಾಜ್ಯದ ಸೇನೆಯ ಜನರಲ್ ಆಗಿದ್ದ ಬರ್ಫುಕನ್ (1622ರ ನವೆಂಬರ್‌ನಿಂದ 1672ರ ಏಪ್ರಿಲ್) ಅವರು ಮೊಘಲರನ್ನು ಸೋಲಿಸಿದ್ದರು. ಅಲ್ಲದೆ ಈ ಭಾಗದಲ್ಲಿ ರಾಜ್ಯ ವಿಸ್ತರಿಸುವ ಔರಂಗಜೇಬನ ಮಹತ್ವಾಕಾಂಕ್ಷೆಗೆ ಅಡ್ಡಿಯಾಗಿದ್ದರು.

ಅಮಿತ್ ಶಾ ಮಾತನಾಡಿ, ದೇಶದ 30 ಮಹಾನ್ ಸಾಮ್ರಾಜ್ಯಗಳು ಮತ್ತು 300 ಯೋಧರ ಬಗ್ಗೆ ಸಂಶೋಧನೆ ಕೈಗೊಂಡು, ಬರೆಯುವಂತೆ ವಿದ್ವಾಂಸರನ್ನು ಕೋರಿದರು.

SALE @ Jayanagar, BENGALURU
11th Main Rd, 4th T Block East, Near Cosmopolitan Club, Jayanagar, Ph: 9010200090
ANDHRA PRADESH TELANGANA KARNATAKA NEW DELHI Shop Online: WWW.KANKATALA.COM

SINGHANIA UNIVERSITY
(Recognized under Section 2(f) of the UGC Act, 1956 WEBSITE: www.singhaniauniversity.ac.in)
MAIN CAMPUS : Pacheri Bari, Jhunjhunu, Rajasthan OTHER ADMISSION, EDUCATION PROMOTION & EXAMINATION CENTERS:
RAJASTHAN: Jaipur, Neemrana, Jodhpur. HARYANA: Narnaul, Manesar, Gurgaon. NEW DELHI: Green Park Extn., Vasant Vihar, Gadaipur. UTTARPRADESH: Noida, Lucknow. MP: Bhopal. WEST BENGAL: Kolkata. ASSAM: Guwahati. MAHARASHTRA: Mumbai. KARNATAKA : Bangalore. TELANGANA: Hyderabad. TAMILNADU: Chennai.
MISSION : EDUCATION FOR ALL, HEALTHCARE FOR ALL, EMPLOYMENT FOR ALL, CORRUPTION FREE, AUTONOMOUS & MULTI TASKING EDUCATION SYSTEM
INTEGRATED UNIVERSITY EDUCATION & SCHOOL EDUCATION WITH MULTI CAREER / MULTI DISCIPLINARY & STUDENT CENTRIC CHOICE BASED EDUCATION
FOR ATTENTION OF MEDICAL STUDENTS RETURNED FROM UKRAINE & OTHER FOREIGN COUNTRIES TO CONTINUE THEIR MEDICAL EDUCATION IN INDIA IN AFFORDABLE FEES.
FACULTY OF MEDICINE introduces HOLISTIC & PROBLEM BASED LEARNING in medical education as is prevalent in US & other developed countries
DEPARTMENT OF MEDICINE & SURGERY : MBBS, MD/MS (All Specializations), BDS, MDS, Diploma In (General Medicine / General Surgery / Gynaecology & Obstetrics / Opthalmic Medicine & Surgery / Orthopaedics / Cardiology / Paediatrics / Neurology / Dermatology / Health Education / Medicine (Pharmacology) / Community Medicine / Radiation Medicine / Diabetology / Clinical Pathology / Public Health / Anaesthesiology / Sports Medicine / Forensic Medicine / Physical Medicine & Rehabilitation / Emergency Medicine / Infertility & Assisted Reproductive Technique).
*As per law & legal advise, above recognised Degree/Diploma holders are eligible for registration with State Medical Councils and NMC.
DEPARTMENT OF ALLIED & HEALTHCARE PROFESSIONS : B.SC (Nursing), M.SC (Nursing), ANM, GNM, Physiotherapy (DPT, BPT, MPT), D.Pharma, B.Pharma, M.Pharma, Medical Lab Technology (DMLT, BMLT, BSC-MLT, MSC-MLT, B.VOC-MLT), Radio Imaging Techno. (DRIT/BRIT), DIPLOMA IN Nursing Care Assistant / Sonography / Dental Mechanics / Dialysis Technology / Health Inspector / X-Ray Technology / OT Technology / Occupational Therapy / MRI Technology / ECG Technology / Naturopathy Assistant / Ayurvedic Medicine Assistant & other courses.
*As per law and legal advice for Degree/Diploma holders registration is not mandatory to practice as a nurse also licence is not required to open a drug retail store & allied and healthcare professionals are also eligible to get registered under The National Commission for Allied and Healthcare Professions Act, 2021 which received the assent of the Hon'ble President on 28 March 2021.
DEPARTMENT OF HOMEOPATHY : BHMS & all other courses.
DEPARTMENT OF INDIAN SYSTEM OF MEDICINE : BAMS, BUMS, BNYS, MD (All Specialization) & all other courses.

DEPARTMENT OF MULTI CAREER / MULTI DISCIPLINARY EDUCATION	DEPARTMENT OF PROFESSIONAL EDUCATION	DEPARTMENT OF RESEARCH
BA, MA, BSC, MSC, BCOM, MCOM, BBA, MBA, BCA, MCA, BED, BPED, MED, MPED, BTECH, MTECH, CERTIFICATE/DIPLOMA/ITI in Engineering (Computer/Electrical/Mechanical/Electronics/Civil/Textile/Chemical/Aerospace etc.) & other courses.	DEGREE/DIPLOMA/CERTIFICATE in Architecture, Hotel Management, Fashion Designing, Financial Accounting, Beauty & Wellness, Photography, Food & Beverage Production & Management, 3D Animation & VFX, Taxation, Airline, Mass Comm. & Journalism. LLB/LLM (Hons. In General Practice/Civil Practice/Criminal Practice/Litigation Practice), CA & other courses.	PHD in all disciplines, D Litt. in all subjects, DSc and LLD.

SINGHANIA UNIVERSITY BOARD OF SECONDARY & SR. SECONDARY EDUCATION : 10th / 12th
** NOTE : THE STUDENTS CAN CHOOSE ANY COMBINATIONS OF TWO COURSES OF THEIR CHOICE FOR DUAL DEGREE
MODE OF STUDY : *ASSISTED SELF STUDY *BLENDED LEARNING *CONVENTIONAL MODE OF LEARNING
ALL UNDERGRADUATE, POST GRADUATE AND RESEARCH COURSES AVAILABLE. FOR MORE DETAILS VISIT UNIVERSITY WEBSITE
LEGAL OPINION - (IN PUBLIC INTEREST)
As per law and legal opinion, Singhania University (“SU”) being established by Government of Rajasthan by an Act of State Legislature and being recognised Constitutionally and also under Section 2(f) of the UGC Act, in exercise of its fundamental right and by authority of law under Section 12A and 22 of the UGC Act, can take admission and impart education in all courses including medical i.e. MBBS and award degree, diploma, certificate to its pass out students which are sui generis valid for all intents and purposes i.e. registration with all professional councils including State Medical Councils and for Government jobs. Under Rule 2(ee)(i) of the Drugs and Cosmetics Rules, 1954, recognised medical degree holders are deemed to be registered medical practitioner in law and as such, can practice medicine in India and also get registered with State Medical Councils. The medical qualifications awarded by SU are recognised under Section 35(1) and 35(8) of the NMC Act, 2019 and are also entitled for registration with the State Medical Councils & NMC. SU being a self-regulated autonomous constitutionally recognised statutory apex body for all education can also take admission of students returning from Ukraine, China and other countries on lateral entry basis and can award degree/ diploma on completion of left out course. SU degree holder will be entitled to practice medicine throughout India and also be entitled to be registered with State Councils & NMC. For detailed opinion, visit university website. or mail at : legal@singhaniauniversity.ac.in.
APPLY FOR COLLABORATION / AFFILIATION
INVITING APPLICATIONS FOR COLLABORATION/AFFILIATION FROM INSTITUTIONS, HOSPITALS, DIAGNOSTIC CENTERS, MEDICAL RESEARCH LABS & OTHER INTERESTED ORGANIZATIONS FOR COUNSELING, ADMISSIONS, TRAINING & EXAMINATIONS. Mail At : coll@singhaniauniversity.ac.in
FOR ADMISSION : 8447836846 OR MAIL : admission@singhaniauniversity.ac.in

ಬೆಸ್ಕಾಂ ವ್ಯಾಪ್ತಿಯ ಜಿಲ್ಲೆಗಳಲ್ಲಿ ದುರಸ್ತಿ ಕಾರ್ಯ

1 ಲಕ್ಷಕ್ಕೂ ಅಧಿಕ ವಿದ್ಯುತ್ ಪರಿವರ್ತಕಗಳ ನಿರ್ವಹಣೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ದುರಸ್ತಿ ಸ್ಥಿತಿಯಲ್ಲಿರುವ ಹಾಗೂ ತಾಂತ್ರಿಕ ದೋಷದಿಂದ ಕೂಡಿರುವ 1,02,713 ವಿದ್ಯುತ್ ಪರಿವರ್ತಕಗಳ ನಿರ್ವಹಣೆಯನ್ನು ಬೆಸ್ಕಾಂ ಕಳೆದ ಏಳು ತಿಂಗಳಲ್ಲಿ ಕೈಗೊಂಡಿದೆ.

ವಿದ್ಯುತ್ ಪರಿವರ್ತಕ ನಿರ್ವಹಣೆಯನ್ನು ಎಲ್ಲ 535 ಸೆಕ್ಷನ್‌ಗಳಲ್ಲಿ ಕೈಗೆತ್ತಿಕೊಳ್ಳಲಾಗಿದೆ. ಈ ನಿರ್ವಹಣೆ ಅಭಿಯಾನಕ್ಕೆ ಇದೇ ವರ್ಷದ ಮೇ 5ರಂದು ಚಾಲನೆ ನೀಡಲಾಗಿತ್ತು. ನಿರ್ವಹಣೆ ಕಾರ್ಯವನ್ನು ಬೆಸ್ಕಾಂ ವ್ಯಾಪ್ತಿಯ ಎಂಟು ಜಿಲ್ಲೆಗಳಲ್ಲಿ ಏಕಕಾಲದಲ್ಲಿ ಆರಂಭಿಸಲಾಗಿತ್ತು. ನ.24ರ ವೇಳೆಗೆ 1,02,713 ವಿದ್ಯುತ್ ಪರಿವರ್ತಕಗಳ ನಿರ್ವಹಣೆ ಕಾರ್ಯ ಪೂರ್ಣಗೊಳಿಸಲಾಗಿದೆ.

ಮಹಾಂತೇಶ ಬೀಳಗಿ

ಬೆಸ್ಕಾಂ ವ್ಯಾಪ್ತಿಯಲ್ಲಿ ವಿದ್ಯುತ್ ಪರಿವರ್ತಕಗಳ ನಿರ್ವಹಣೆಯನ್ನು ತ್ವರಿತಗತಿಯಲ್ಲಿ ಕೈಗೊಳ್ಳುವಂತೆ ಇತ್ತೀಚೆಗೆ ನಡೆದ ಪರಿಶೀಲನಾ ಸಭೆಯಲ್ಲಿ ಬೆಸ್ಕಾಂ ವ್ಯವಸ್ಥಾಪಕ ನಿರ್ದೇಶಕ ಮಹಾಂತೇಶ ಬೀಳಗಿ ಅವರು ಅಧಿಕಾರಿಗಳಿಗೆ ಸೂಚನೆ ನೀಡಿದ್ದರು.

ನಿರ್ವಹಣೆ ಸಂದರ್ಭದಲ್ಲಿ ವಿದ್ಯುತ್ ಪರಿವರ್ತಕಗಳಲ್ಲಿನ 'ಬುಶ್'ಗಳು ಸಡಿಲಗೊಂಡಿದ್ದರೆ ಗಟ್ಟಿಗೊಳಿಸಲಾಗುತ್ತಿದೆ. ಸಡಿಲಗೊಂಡ ವೈರ್‌ಗಳನ್ನು ಸರಿಪಡಿಸಲಾಗುತ್ತಿದೆ ಮತ್ತು ಆಯಿಲ್ ನಿರ್ವಹಣೆ ಮಾಡಲಾಗುತ್ತಿದೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ.

'ತಾಂತ್ರಿಕ ಸಮಸ್ಯೆ ಎದುರಿಸುತ್ತಿರುವ ವಿದ್ಯುತ್ ಪರಿವರ್ತಕಗಳಿಗೆ ಶಾಶ್ವತ ಕಾಯಕಲ್ಪ ಒದಗಿಸಲಾಗುತ್ತಿದೆ. ವಿದ್ಯುತ್ ಪರಿವರ್ತಕಗಳ ನಿರ್ವಹಣೆಯಿಂದಾಗಿ ಅವುಗಳ ಕಾರ್ಯಕ್ಷಮತೆ ಹೆಚ್ಚಾಗುವುದರಿಂದ ಗ್ರಾಹಕರಿಗೆ ಉತ್ತಮ ಗುಣಮಟ್ಟದ ವಿದ್ಯುತ್ ಪೂರೈಸಲು ನೆರವಾಗುತ್ತದೆ ಎಂದು ವ್ಯವಸ್ಥಾಪಕ ನಿರ್ದೇಶಕ ಮಹಾಂತೇಶ ಬೀಳಗಿ ತಿಳಿಸಿದ್ದಾರೆ.

ಬೆಸ್ಕಾಂ ವ್ಯಾಪ್ತಿಯ ಬೆಂಗಳೂರು ನಗರ ಜಿಲ್ಲೆಯಲ್ಲಿ 35,235 ವಿದ್ಯುತ್ ಪರಿವರ್ತಕಗಳ ನಿರ್ವಹಣೆ ಮಾಡಲಾಗಿದೆ. ದಾವಣಗೆರೆ ಜಿಲ್ಲೆಯಲ್ಲಿ 12,365, ತುಮಕೂರು ಜಿಲ್ಲೆಯಲ್ಲಿ 16,234, ಚಿತ್ರದುರ್ಗ ಜಿಲ್ಲೆಯಲ್ಲಿ 12230 , ರಾಮನಗರದಲ್ಲಿ 9,873, ಚಿಕ್ಕಬಳ್ಳಾಪುರದಲ್ಲಿ 7,981, ಕೋಲಾರದಲ್ಲಿ 4018 ಹಾಗೂ ಬೆಂಗಳೂರು ಗ್ರಾಮಾಂತರದಲ್ಲಿ 4,687 ವಿದ್ಯುತ್ ಪರಿವರ್ತಕಗಳ ನಿರ್ವಹಣೆ ಮಾಡಲಾಗಿದೆ ಎಂದು ಅವರು ತಿಳಿಸಿದ್ದಾರೆ.

ದಾಸರಹಳ್ಳಿಯಲ್ಲಿ ಮಹೇಶ್ವರಮ್ಮ ದೇವಿಯ ಮೆರವಣಿಗೆಯಲ್ಲಿ ಮಾಜಿ ಶಾಸಕ ಎಸ್.ಮುನಿರಾಜು, ಬಿಬಿಎಂಪಿ ಮಾಜಿ ಸದಸ್ಯೆ ಉಮಾದೇವಿ ನಾಗರಾಜು, ನಾಗಣ್ಣ, ಬಿ.ಟಿ. ಶ್ರೀನಿವಾಸ್, ವೆಂಕಟೇಶ್, ಶ್ರೀನಿವಾಸ ಬಾಬು, ಚಂದ್ರಶೇಖರ್, ಬಸವರಾಜು ಹಾಜರಿದ್ದರು.

ದಾಸರಹಳ್ಳಿ ಗ್ರಾಮೋತ್ಸವ

ಪೀಣ್ಯ ದಾಸರಹಳ್ಳಿ: ದಾಸರಹಳ್ಳಿ ಶ್ರೀರಾಮ ಮಂದಿರ ರಸ್ತೆ ಹತ್ತಿರ ಬಲಮುರಿ ವಿನಾಯಕ ಗೆಳೆಯರ ಬಳಗ ಮತ್ತು ಚಪಲಮ್ಮ ಸಂಘದ ವತಿಯಿಂದ ದಾಸರಹಳ್ಳಿ ಗ್ರಾಮೋತ್ಸವ ಮತ್ತು ಕನ್ನಡ ರಾಜ್ಯೋತ್ಸವ ಸಮಾರಂಭ ಆಯೋಜಿಸಲಾಯಿತು.

ಮಾಜಿ ಶಾಸಕ ಎಸ್.ಮುನಿರಾಜು ಅವರು ದಾಸರಹಳ್ಳಿಯ ಮಹೇಶ್ವರಮ್ಮ ದೇವಿಗೆ ಪೂಜೆ ಸಲ್ಲಿಸಿ ಮೆರವಣಿಗೆಗೆ ಚಾಲನೆ ನೀಡಿದರು.

ಡೊಳ್ಳು ಕುಣಿತ, ಪೂಜಾ ಕುಣಿತ, ಗೊಂಬೆ ಕುಣಿತ, ಚಿಟ್ಟಿ ವಾದ್ಯ, ಹುಲಿವೇಷ, ಭದ್ರಕಾಳಿ ವೇಷ, ಕೀಲು ಕುದುರೆ ಮುಂತಾದ ಕಲಾ ತಂಡಗಳೊಂದಿಗೆ ಮಹೇಶ್ವರಮ್ಮ ದೇವಿ ಮೆರವಣಿಗೆ ನಡೆಯಿತು.

ಮೆರವಣಿಗೆಯು ದಾಸರಹಳ್ಳಿ ಮೆಟ್ರೊ ನಿಲ್ದಾಣದಿಂದ ಜಾಲಹಳ್ಳಿ ವೃತ್ತ, 8ನೇ ಮೈಲಿ ಮುಖಾಂತರ ಕೆಂಪೇಗೌಡ ನಗರ, ಮಹೇಶ್ವರಮ್ಮ ದೇವಸ್ಥಾನದ ಮಾರ್ಗವಾಗಿ ಬೈಲಪ್ಪ ವೃತ್ತ, ಸೆಲೆಕ್ಷನ್ ಕಾರ್ನರ್ ಮತ್ತೆ ತಿರುಗಿ ದೇವಸ್ಥಾನದ ತನಕ ಹಮ್ಮಿಕೊಳ್ಳಲಾಯಿತು.

ಬಿಬಿಎಂಪಿ ಮಾಜಿ ಸದಸ್ಯೆ ಉಮಾದೇವಿ ನಾಗರಾಜು, ಮುಖಂಡರಾದ ನಾಗಣ್ಣ, ವೆಂಕಟೇಶ್, ಬಿ.ಟಿ.ಶ್ರೀನಿವಾಸ್, ಶ್ರೀನಿವಾಸ್ ಬಾಬು, ಮುಬಾರಕ್, ಚಂದ್ರಶೇಖರ್, ಬಸವರಾಜು, ಉಮಾಶಂಕರ್, ಅಮರ್ ಹಾಜರಿದ್ದರು.

'ಗಡಿ ವಿಷಯದಲ್ಲಿ ಗೊಂದಲದ ಹೇಳಿಕೆ ಸಲ್ಲ'

ಬೆಂಗಳೂರು: ಮಹಾರಾಷ್ಟ್ರದ ಮುಖ್ಯಮಂತ್ರಿ ಮತ್ತು ಸಚಿವರುಗಳು ಕರ್ನಾಟಕ-ಮಹಾರಾಷ್ಟ್ರ ಗಡಿ ವಿಚಾರದಲ್ಲಿ ಆಗಾಗ ಗೊಂದಲದ ಹೇಳಿಕೆ ನೀಡುವುದು ಸರಿಯಲ್ಲ ಎಂದು ಕರ್ನಾಟಕ ಗಡಿ ಪ್ರದೇಶ ಅಭಿವೃದ್ಧಿ ಪ್ರಾಧಿಕಾರ ಡಾ.ಸಿ ಸೋಮಶೇಖರ ಹೇಳಿದ್ದಾರೆ.

'ನಾಡಿನ ಗಡಿ ಮತ್ತು ಜಲ ವಿಷಯದಲ್ಲಿ ಈ ರೀತಿಯ ಹೇಳಿಕೆ ನೀಡುವ ಮೂಲಕ ಗಡಿ ಭಾಗದಲ್ಲಿನ ಕನ್ನಡಿಗರ ಭಾವನೆಗಳಿಗೆ ಧಕ್ಕೆ ತರುತ್ತಿದ್ದಾರೆ. ಕನ್ನಡ ಭಾಷಿಕರ ಪ್ರದೇಶಗಳಾದ ಸೊಲ್ಲಾಪುರ, ಜತ್ತ, ಅಕ್ಕಲಕೋಟೆಯು ಕರ್ನಾಟಕಕ್ಕೆ ಸೇರಬೇಕೆಂಬುದು ಅಲ್ಲಿ ವಾಸವಿರುವ ಕನ್ನಡಿಗರ ಬೇಡಿಕೆಯಾಗಿದೆ. ವಿಶೇಷವಾಗಿ ಕನ್ನಡ ಭಾಷಿಕರು ವಾಸಮಾಡುತ್ತಿರುವ ಈ ಭಾಗದಲ್ಲಿ ಕನ್ನಡ ಅಸ್ಮಿತೆಯ ವಾತಾವರಣವು ತುಂಬಾ ಜಾಗೃತವಾಗಿದೆ. ಅಲ್ಲಿನ ಕನ್ನಡಿಗರು ಭೌಗೋಳಿಕವಾಗಿ ಮಹಾರಾಷ್ಟ್ರದಲ್ಲಿದ್ದರೂ ಕರ್ನಾಟಕದೊಂದಿಗೆ ಭಾವನಾತ್ಮಕವಾದ ಸಂಬಂಧಗಳನ್ನು ಹೊಂದಿದ್ದಾರೆ. ಸಾಮರಸ್ಯ ಕದಡುವ ಮಾತುಗಳನ್ನು ನಿಲ್ಲಿಸಬೇಕು' ಎಂದಿದ್ದಾರೆ.

'ಪುಣ್ಯಕೋಟಿ ದತ್ತು ಯೋಜನೆ': ತೆರಿಗೆ ವಿನಾಯಿತಿಗೆ ಅವಕಾಶ

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಪುಣ್ಯಕೋಟಿ ದತ್ತು ಯೋಜನೆ'ಗೆ ದೇಣಿಗೆ ನೀಡುವ ಅಧಿಕಾರಿಗಳಿಗೆ ತೆರಿಗೆ ವಿನಾಯಿತಿ ಪಡೆಯಲು ಅವಕಾಶವಿದೆ ಎಂದು ಸರ್ಕಾರ ತಿಳಿಸಿದೆ. ಆದಾಯ ತೆರಿಗೆ ಇಲಾಖೆಯಿಂದ ಪಡೆದಿರುವ ಫಾರ್ಮ್ ನಂಬರ್: 10ಎಸಿಯಂತೆ ಈ ಯೋಜನೆಗೆ ದೇಣಿಗೆ ನೀಡುವವರು ಆದಾಯ ತೆರಿಗೆ ಕಾಯ್ದೆ 1961ರ ಸೆಕ್ಷನ್ 80ಜಿ ಅನ್ವಯ ತೆರಿಗೆ ವಿನಾಯಿತಿ ಪಡೆಯಬಹುದು ಎಂದಿದೆ.

ಗೋಶಾಲೆಯಲ್ಲಿ ಹಸುಗಳನ್ನು ಪೋಷಿಸಲು ನೌಕರರು, ನವೆಂಬರ್ ತಿಂಗಳ ವೇತನದಿಂದ ಒಂದು ಬಾರಿಗೆ ಸೀಮಿತವಾಗಿ 'ಎ' ವೃಂದದ ಅಧಿಕಾರಿಗಳು ₹ 11 ಸಾವಿರ, 'ಬಿ' ವೃಂದದ ಅಧಿಕಾರಿಗಳು ₹ 4 ಸಾವಿರ, 'ಸಿ' ವೃಂದದ ನೌಕರರು ₹ 400 ದೇಣಿಗೆ ನೀಡಬಹುದೆಂದು ಆದೇಶಿಸಿತ್ತು.

ಇರಾನ್ ಹೋರಾಟ ಬೆಂಬಲಿಸಿ ಪ್ರತಿಭಟನೆ

ಸೋಷಿಯಲಿಸ್ಟ್ ಯೂನಿಟಿ ಸೆಂಟರ್ ಆಫ್ ಇಂಡಿಯಾ ವತಿಯಿಂದ ಹೋರಾಟ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಇರಾನ್ ಮಹಿಳೆಯರ ಹೋರಾಟ ಬೆಂಬಲಿಸಿ ಸೋಷಿಯಲಿಸ್ಟ್ ಯೂನಿಟಿ ಸೆಂಟರ್ ಆಫ್ ಇಂಡಿಯಾ (ಕಮ್ಯುನಿಸ್ಟ್) ಪಕ್ಷದ ಬೆಂಗಳೂರು ಜಿಲ್ಲಾ ಸಮಿತಿ ಕಾರ್ಯಕರ್ತರು ಇಲ್ಲಿನ ಫ್ರೀಡಂ ಪಾರ್ಕ್‌ನಲ್ಲಿ ಶುಕ್ರವಾರ ಪ್ರತಿಭಟನೆ ನಡೆಸಿದರು.

'ಇರಾನಿನ ಮಹಿಳೆಯರು ಹಾಗೂ ಯುವಜನರು ನಡೆಸುತ್ತಿರುವ ಹೋರಾಟಕ್ಕೆ ಜಯ ದೊರೆಯಬೇಕು. ನಾವು ಅವರ ಹೋರಾಟಕ್ಕೆ ಬೆಂಬಲ ಸೂಚಿಸುತ್ತಿದ್ದೇವೆ. ಅವರೊಂದಿಗೆ ನಾವಿದ್ದೇವೆ' ಎಂದು ಜಿಲ್ಲಾ ಸಮಿತಿ ಕಾರ್ಯದರ್ಶಿ ಎಂ.ಎನ್.ಶ್ರೀರಾಂ ಅವರು ಹೇಳಿದರು.

ಇರಾನ್ ಮಹಿಳೆಯರ ಹೋರಾಟ ಬೆಂಬಲಿಸಿ ಸೋಷಿಯಲಿಸ್ಟ್ ಯೂನಿಟಿ ಸೆಂಟರ್ ಆಫ್ ಇಂಡಿಯಾ (ಕಮ್ಯುನಿಸ್ಟ್) ಪಕ್ಷದ ಬೆಂಗಳೂರು ಜಿಲ್ಲಾ ಸಮಿತಿ ಕಾರ್ಯಕರ್ತರು ಶುಕ್ರವಾರ ಪ್ರತಿಭಟಿಸಿದರು

'ಪ್ರಜಾಸತ್ತಾತ್ಮಕ ಸರ್ಕಾರ ಸ್ಥಾಪಿಸುವುದಕ್ಕಾಗಿ ಹೋರಾಟ ನಡೆಯುತ್ತಿದೆ. ನೈತಿಕ ಪೊಲೀಸರು ಯುವತಿಯ ಬರ್ಬರವಾಗಿ ಕೊಲೆ ಮಾಡಿದ ಬಳಿಕ ಈ ಹೋರಾಟ ಆರಂಭವಾಗಿದೆ. ದಬ್ಬಾಳಿಕೆ ಪ್ರತಿರೋಧಿಸುವ ಧೀರ ಮಹಿಳೆಯರು ಈ ಚಳವಳಿ ಆರಂಭಿಸಿದ್ದಾರೆ. ಇಸ್ಲಾಮಿಕ್ ಮೂಲಭೂತವಾದಿಗಳಿಂದ ಆರ್ಥಿಕ, ರಾಜಕೀಯ ಮತ್ತು ಸಾಂಸ್ಕೃತಿಕವಾಗಿ ಶೋಷಣೆಗೆ ಒಳಗಾದ ಎಲ್ಲ ವರ್ಗದ ಜನರೂ ಒಂದುಗೂಡಿದ್ದಾರೆ. ಇರಾನ್‌ನಲ್ಲಿ ಮಹಿಳೆಯರಿಗೆ ನ್ಯಾಯ ಸಿಗಬೇಕಿದೆ' ಎಂದು ಹೇಳಿದರು.

'ಈ ಚಳವಳಿ ತಡೆಯಲು ಚಿತ್ರಹಿಂಸೆ, ಕೊಲೆ, ಮರಣ ದಂಡನೆ, ದೈಹಿಕ ಹಲ್ಲೆ ನಡೆಸಲಾಗುತ್ತಿದೆ. ಮಹಿಳೆಯರು, ಮಕ್ಕಳನ್ನು ಬಂಧಿಸಲಾಗುತ್ತಿದೆ. ಇದು ಅತ್ಯಂತ ಹೇಡಿತನ ಹಾಗೂ ಖಂಡನೀಯ ಕೃತ್ಯ. ಇಷ್ಟಾದರೂ ಮಹಿಳೆಯರು ಹಿಂಜರಿಯದೇ ಹೋರಾಟ ನಡೆಸುತ್ತಿದ್ದಾರೆ. ಈ ಹೋರಾಟವು ಉಳಿದ ಎಲ್ಲ ಹೋರಾಟಕ್ಕೂ ಸ್ಫೂರ್ತಿ ಆಗಬೇಕು' ಎಂದು ಕರೆ ನೀಡಿದರು.

ಪ್ರತಿಭಟನೆಯಲ್ಲಿ ಜಿಲ್ಲಾ ಸಮಿತಿ ಸದಸ್ಯರಾದ ಎನ್.ರವಿ, ಎಸ್. ಶೋಭಾ ಭಾಗವಹಿಸಿದ್ದರು.

ಪಿಯು ಕಾಲೇಜುಗಳಲ್ಲಿ ಸಿಇಟಿ ಸಹಾಯ ಕೇಂದ್ರ

ಪ್ರಜಾವಾಣಿ ವಾರ್ತೆ

ಬೆಂಗಳೂರು: ವಿದ್ಯಾರ್ಥಿಗಳು ತಪ್ಪಿಲ್ಲದೆ ಸಿಇಟಿ ಅರ್ಜಿ ಭರ್ತಿ ಮಾಡುವುದನ್ನು ಕಲಿಸಲು ರಾಜ್ಯದ ಎಲ್ಲ ವಿಜ್ಞಾನ ಪದವಿಪೂರ್ವ ಕಾಲೇಜುಗಳಲ್ಲೂ ಸಹಾಯ ಕೇಂದ್ರ ಸ್ಥಾಪಿಸಲಾಗುವುದು ಎಂದು ಉನ್ನತ ಶಿಕ್ಷಣ ಸಚಿವ ಡಾ.ಸಿ. ಎನ್. ಅಶ್ವತ್ಥನಾರಾಯಣ ಹೇಳಿದರು.

ಶುಕ್ರವಾರ ಸುದ್ದಿಗಾರರ ಜತೆ ಮಾತನಾಡಿದ ಅವರು, 'ಸಾಕಷ್ಟು ವಿದ್ಯಾರ್ಥಿಗಳು ಸಿಇಟಿ ಅರ್ಜಿಯಲ್ಲಿ ಆರ್.ಡಿ. ಸಂಖ್ಯೆ, ತಂದೆಯ ಹೆಸರು, ಜಾತಿ ಇತ್ಯಾದಿಗಳನ್ನು ತಪ್ಪಾಗಿ ದಾಖಲಿಸುತ್ತಿದ್ದಾರೆ. ಇದನ್ನೆಲ್ಲ ಸರಿಪಡಿಸಲು ಏಳೆಂಟು ಬಾರಿ ಅವಕಾಶ ನೀಡಲಾಗುತ್ತಿದೆ. ಇದರಿಂದ ಸಮಯ ವ್ಯರ್ಥವಾಗುತ್ತಿದೆ. ಉಳಿದ ಪ್ರಕ್ರಿಯೆಗಳೂ ವಿಳಂಬವಾಗುತ್ತಿವೆ. ಅದಕ್ಕಾಗಿ ಪಿಯುನಲ್ಲೇ ಸಿಇಟಿ ಅರ್ಜಿ ತುಂಬಲು ಕಲಿಸುವ ವಿದ್ಯಾರ್ಥಿ ಸ್ನೇಹಿ ವ್ಯವಸ್ಥೆ ರೂಪಿಸಲಾಗುವುದು' ಎಂದರು.

ಪ್ರತಿ ಕಾಲೇಜಿನಲ್ಲೂ ತಲಾ 100 ವಿದ್ಯಾರ್ಥಿಗಳಿಗೆ ಒಬ್ಬ ಉಪನ್ಯಾಸಕರನ್ನ ಸಂಯೋಜಕರನ್ನಾಗಿ ನೇಮಿಸಲಾಗುವುದು. ಜಿಲ್ಲೆಗೆ ತಲಾ ನಾಲ್ವರು ಮುಖ್ಯ ತರಬೇತುದಾರರನ್ನು ಒದಗಿಸಲಾಗುವುದು ಕರ್ನಾಟಕ ಪರೀಕ್ಷಾ ಪ್ರಾಧಿಕಾರದಿಂದ ತರಬೇತಿ ಕೊಡಲಾಗುವುದು ಎಂದರು.

ಎಸ್ಸೆಸ್ಸೆಲ್ಸಿ ಹಂತದಲ್ಲಿನ ವಿದ್ಯಾರ್ಥಿಗಳ ಸಾಧನೆ ಮೇಲೆ ನಿಗಾ ವಹಿಸುವ ವ್ಯವಸ್ಥೆಯನ್ನು (ಎಸ್‌ಎಟಿಎಸ್) ಕರ್ನಾಟಕ ಪರೀಕ್ಷಾ ಪ್ರಾಧಿಕಾರದ (ಕೆಇಎ) ಜತೆ ಸಂಯೋಜನೆಗೊಳಿಸುವ ಕುರಿತು ಚರ್ಚಿಸಲಾಯಿತು. ಯಾವ ರೀತಿಯ ಮಾಹಿತಿ ಅಗತ್ಯ ಇದೆ ಎನ್ನುವುದನ್ನು ಕೆಇಎ ತಿಳಿಸಲಿದೆ. ಎರಡೂ ಇಲಾಖೆಗಳ ಸಮನ್ವಯದಿಂದ ವಿದ್ಯಾರ್ಥಿಗಳು ಎದುರಿಸುತ್ತಿರುವ ಸಮಸ್ಯೆಗಳಿಗೆ ಶಾಶ್ವತ ಪರಿಹಾರ ಕಂಡುಕೊಳ್ಳಬಹುದು ಎಂದರು.

ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಸಚಿವ ಬಿ.ಸಿ. ನಾಗೇಶ್ ಮಾತನಾಡಿ, ಈಗ ಇರುವ ಎಸ್‌ಎಟಿ ವ್ಯವಸ್ಥೆಯಲ್ಲಿ ಲಭ್ಯವಾಗುವ ವಿದ್ಯಾರ್ಥಿಗಳ ವಿವರಗಳನ್ನು ಸಿಇಟಿ ಅರ್ಜಿಯಲ್ಲಿ ವಿಲೀನಗೊಳಿಸಲು ಚಿಂತಿಸಲಾಗುತ್ತಿದೆ ಎಂದು ಹೇಳಿದರು.

ಹೀರೊ ದ್ವಿಚಕ್ರ ವಾಹನ ಬೆಲೆ ಏರಿಕೆ

ನವದೆಹಲಿ (ಪಿಟಿಐ): ಹೀರೊ ಮೋಟೊಕಾರ್ಪ್ ಕಂಪನಿಯು ಡಿಸೆಂಬರ್ 1ರಿಂದ ಜಾರಿಗೆ ಬರುವಂತೆ ದ್ವಿಚಕ್ರ ವಾಹನಗಳ ಬೆಲೆಯನ್ನು ಗರಿಷ್ಠ ₹ 1,500ರವರೆಗೆ ಹೆಚ್ಚಿಸಲಿದೆ.

ಬೆಲೆ ಏರಿಕೆ ಪ್ರಮಾಣದಲ್ಲಿ ಮಾದರಿಯಿಂದ ಮಾದರಿಗೆ ವ್ಯತ್ಯಾಸ ಇರಲಿದೆ ಎಂದು ಕಂಪನಿಯು ಪ್ರಕಟಣೆಯಲ್ಲಿ ತಿಳಿಸಿದೆ. ಹಣದುಬ್ಬರದ ಕಾರಣದಿಂದಾಗಿ ಬೆಲೆ ಏರಿಕೆ ಮಾಡಬೇಕಾಗಿದೆ ಎಂದು ಕಂಪನಿಯ ಮುಖ್ಯ ಹಣಕಾಸು ಅಧಿಕಾರಿ ನಿರಂಜನ್ ಗುಪ್ತ ಹೇಳಿದ್ದಾರೆ.

ತಹಶೀಲ್ದಾರ್ ಅಮಾನತು

ಬೆಂಗಳೂರು: ರಾಜಕಾಲುವೆ ಒತ್ತುವರಿ ತೆರವಿಗೆ ನೋಟಿಸ್ ನೀಡಿ, ತುರ್ತಾಗಿ ಆದೇಶ ಹೊರಡಿಸದ ಬೆಂಗಳೂರು ನಗರ ಜಿಲ್ಲೆ ಪೂರ್ವ ತಾಲ್ಲೂಕಿನ ತಹಶೀಲ್ದಾರ್ ಎಸ್. ಅಜಿತ್‌ಕುಮಾರ್ ರೈ ಅವರನ್ನು ಅಮಾನತು ಮಾಡಲಾಗಿದೆ.

ಮಹದೇವಪುರ ವಲಯದ ರಾಜಕಾಲುವೆ ಮೇಲೆ ಕಟ್ಟಡ ಹಾಗೂ ಇತರೆ ನಿರ್ಮಾಣಗಳನ್ನು ತೆಗೆಯಲು ನೋಟಿಸ್ ನೀಡಿ, ತುರ್ತಾಗಿ ಆದೇಶ ನೀಡಲು ಬಿಬಿಎಂಪಿ ಕೋರಿತ್ತು. ಆದರೆ ಅಜಿತ್ ಕುಮಾರ್ ಸರಿಯಾದ ರೀತಿಯಲ್ಲಿ ವಿಚಾರಣೆ ಮಾಡದೆ, ವಿಳಂಬವಾಗಿ ತೆರವಿಗೆ ಆದೇಶ ನೀಡಿದ್ದಾರೆ. ಈ ಎಲ್ಲ ನ್ಯೂನತೆಗಳಿಂದ ಒತ್ತುವರಿ ತೆರವು ಕಾರ್ಯಾಚರಣೆಗೆ ನ್ಯಾಯಾಲಯದಿಂದ ತಡೆಯಾಜ್ಞೆ ಸಿಕ್ಕಿದೆ. ಈ ಅಧಿಕಾರಿಯನ್ನು ಈ ಹುದ್ದೆಯಲ್ಲಿ ಮುಂದುವರಿಸಬಾರದು ಎಂದು ಬಿಬಿಎಂಪಿ ಆಯುಕ್ತರು ಸೆ.21ರಂದು ಪತ್ರ ಬರೆದಿದ್ದರು.

ನಗರಾಭಿವೃದ್ಧಿ ಇಲಾಖೆಯೂ ಟಿಪ್ಪಣಿ ಕಳಿಸಿದೆ. ಇದನ್ನು ಪರಿಶೀಲಿಸಿದ ಕಂದಾಯ ಇಲಾಖೆ, ಕರ್ತವ್ಯಲೋಪಗಳಿಗಾಗಿ ಅಜಿತ್ ಕುಮಾರ್ ಅವರನ್ನು ನ.23ರಂದು ಅಮಾನತು ಮಾಡಿದೆ.



‘ವಿಚಾರಣೆ ಸಮಿತಿಗೆ ಸಿಂಡಿಕೇಟ್ ಸದಸ್ಯರು ಬೇಡ’

ಬೆಂಗಳೂರು: ರಾಜ್ಯದಲ್ಲಿನ ವಿಶ್ವವಿದ್ಯಾಲಯಗಳ ಸ್ಥಳೀಯ ವಿಚಾರಣೆ ಸಮಿತಿಗಳಿಗೆ ಸಿಂಡಿಕೇಟ್ ಸದಸ್ಯರನ್ನು ನೇಮಿಸದಂತೆ ಉನ್ನತ ಶಿಕ್ಷಣ ಇಲಾಖೆ ಸೂಚನೆ ನೀಡಿದೆ.

ಈ ಸಮಿತಿಗಳಿಗೆ ಕೇವಲ ವಿಷಯ ಪರಿಣತರು ಅಥವಾ ಶಿಕ್ಷಣ ತಜ್ಞರನ್ನು ನೇಮಿಸುವಂತೆ ಎಲ್ಲ ಕುಲಪತಿಗಳಿಗೆ ಸೂಚಿಸಲಾಗಿದೆ.

ಸ್ಥಳೀಯ ವಿಚಾರಣೆ ಸಮಿತಿಗಳಿಗೆ ಸಿಂಡಿಕೇಟ್ ಸದಸ್ಯರನ್ನು ನೇಮಿಸುವ ನೀತಿಯ ಬಗ್ಗೆ ವ್ಯಾಪಕ ವಿರೋಧ ವ್ಯಕ್ತವಾಗಿದ್ದರಿಂದ ಈ ಕ್ರಮ ಕೈಗೊಳ್ಳಲಾಗಿದೆ.

ಸಿಂಡಿಕೇಟ್ ಸದಸ್ಯರನ್ನು ಸ್ಥಳೀಯ ವಿಚಾರಣೆ ಸಮಿತಿಗಳ ಅಧ್ಯಕ್ಷ ಅಥವಾ ಸದಸ್ಯರನ್ನಾಗಿ ಮಾಡಿದರೆ, ಸಿಂಡಿಕೇಟ್ ಸಭೆಯಲ್ಲೂ ಇವರೇ ಸಮಿತಿಯ ವರದಿಯ ಬಗ್ಗೆ ನಿರ್ಣಯ ಕೈಗೊಳ್ಳಬೇಕಾಗುತ್ತದೆ. ಇದರಿಂದ, ನಿಷ್ಪಕ್ಷಪಾತ ಹಾಗೂ ಪಾರದರ್ಶಕ ನಿರ್ಧಾರ ಕೈಗೊಳ್ಳಲು ಸಾಧ್ಯವಾಗುವುದಿಲ್ಲ. ಇದು ಹಿತಾಸಕ್ತಿ ಸಂಘರ್ಷಕ್ಕೂ ಕಾರಣವಾಗುತ್ತದೆ ಎಂದು ಸುತ್ತೋಲೆಯಲ್ಲಿ ತಿಳಿಸಲಾಗಿದೆ.

51ನೇ ದಿನಕ್ಕೆ ಕಾಲಿಟ್ಟ ಮುಷ್ಕರ ● ಸಮಸ್ಯೆ ಆಲಿಸಿದ ಸಚಿವ ಬಿ.ಸಿ. ನಾಗೇಶ್

ಪಿಂಚಣಿ ಹೋರಾಟ: ಸಚಿವರ ಸಭೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ಪಿಂಚಣಿ ಸೌಲಭ್ಯ ಕಲ್ಪಿಸಬೇಕು’ ಎಂದು ಒತ್ತಾಯಿಸಿ ಅನುದಾನಿತ ಶಾಲಾ-ಕಾಲೇಜುಗಳ ನೌಕರರು ಸ್ವಾತಂತ್ರ್ಯ ಉದ್ಯಾನದಲ್ಲಿ ನಡೆಸುತ್ತಿರುವ ಪ್ರತಿಭಟನೆ ಶುಕ್ರವಾರ 50ನೇ ದಿನ ಪೂರೈಸಿತು. ಇದರ ಬೆನ್ನಲ್ಲೇ ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಸಚಿವ ಬಿ.ಸಿ.ನಾಗೇಶ್ ಅವರು ಮುಖಂಡರ ಸಭೆ ನಡೆಸಿ ಸಮಸ್ಯೆ ಆಲಿಸಿದರು.

ಅನುದಾನಿತ ಶಾಲಾ-ಕಾಲೇಜುಗಳ ಪಿಂಚಣಿ ವಂಚಿತ ನೌಕರರ ಸಂಘದ ವತಿಯಿಂದ ಪ್ರತಿಭಟನೆ ನಡೆಯುತ್ತಿದ್ದು, ರಾಜ್ಯದ ವಿವಿಧ ಜಿಲ್ಲೆಗಳ ಎಲ್ಲ ನೌಕರರು ಪ್ರತಿಭಟನೆಯಲ್ಲಿ ಪಾಲ್ಗೊಂಡಿದ್ದಾರೆ.

‘ರಾಜ್ಯದ ಪ್ರತಿಯೊಬ್ಬ ಅನುದಾನಿತ ನೌಕರರಿಗೂ ‘ಹಳೆಯ ನಿಶ್ಚಿತ ಪಿಂಚಣಿ’ ಸೌಲಭ್ಯ ನೀಡಬೇಕು. ಸರ್ಕಾರಿ ಹಾಗೂ ಅನುದಾನಿತ ನೌಕರರ ಮಧ್ಯೆ ತಾರತಮ್ಯ ಮಾಡದೇ ಆರೋಗ್ಯ ಚಿಕಿತ್ಸಾ ಸೌಲಭ್ಯ ಕಲ್ಪಿಸಬೇಕು’ ಎಂದು ಪ್ರತಿಭಟನಕಾರರು ಆಗ್ರಹಿಸುತ್ತಿದ್ದಾರೆ.

ವಿಧಾನಪರಿಷತ್ ಸದಸ್ಯರಾದ ಎಸ್.ವಿ.ಸಂಕನೂರು, ಶಶಿಲ್ ನಮೋಶಿ, ಆಯನೂರು ಮಂಜುನಾಥ್, ಪುಟ್ಟಣ್ಣ, ಸಾಹಿತಿ ಬರಗೂರು ರಾಮಚಂದ್ರಪ್ಪ ಅವರು ಪ್ರತಿಭಟನಾ ಸ್ಥಳಕ್ಕೆ ಭೇಟಿ ನೀಡಿದರು.

ಬರಗೂರು ರಾಮಚಂದ್ರಪ್ಪ ಮಾತನಾಡಿ, ‘ಪ್ರತಿಭಟನೆಗೆ ನೈತಿಕ ಬೆಂಬಲ ಸೂಚಿಸುತ್ತೇನೆ. ಬೇಡಿಕೆ ಈಡೇರದಿದ್ದರೆ, ಹೋರಾಟ ಗಂಭೀರ ಮಾಡುವ ಭೂಮಿಕೆ ಸಿದ್ಧಪಡಿಸಿ’ ಎಂದು ಪ್ರತಿಭಟನಕಾರರಿಗೆ ಕರೆ ನೀಡಿದರು.

‘ಮುಂದಿನ ಪ್ರಜೆಗಳನ್ನು ಸೃಷ್ಟಿಸುವ ಶಿಕ್ಷಕರಿಗೆ ಅನ್ಯಾಯ ಮಾಡಬಾರದು. ಅನುದಾನಿತ ಶಾಲಾ- ಕಾಲೇಜುಗಳ ನೌಕರರಿಗೆ ಪಿಂಚಣಿ ನೀಡಲು ಸರ್ಕಾರ ಕ್ರಮ ಕೈಗೊಳ್ಳಬೇಕು’ ಎಂದು ಅವರು ಒತ್ತಾಯಿಸಿದರು.

ಸಚಿವರ ಸಭೆ: ಸಂಘದ ಮುಖಂಡರನ್ನು ತಮ್ಮ ಕಚೇರಿಗೆ ಆಹ್ವಾನಿಸಿದ್ದ ಸಚಿವ ಬಿ.ಸಿ. ನಾಗೇಶ್, ಬೇಡಿಕೆಗಳ ಬಗ್ಗೆ ಚರ್ಚಿಸಿದರು. ‘ಪಿಂಚಣಿ ಕಲ್ಪಿಸುವ ಸಂಬಂಧ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಅವರ ಜೊತೆ ಮಾತುಕತೆ ನಡೆಸಲಾಗುವುದು’ ಎಂದು ನಾಗೇಶ್ ಭರವಸೆ ನೀಡಿದರು. ಅದಕ್ಕೆ ಪ್ರತಿಕ್ರಿಯಿಸಿದ ಮುಖಂಡರು, ‘ಬೇಡಿಕೆ ಈಡೇರಿಕೆಯಾಗುವವರೆಗೂ ಪ್ರತಿಭಟನೆ ನಡೆಸಲಾಗುವುದು’ ಎಂದು ಹೇಳಿ ಸಭೆಯಿಂದ ಹೊರನಡೆದರು. ಪ್ರತಿಭಟನೆ ಯಥಾಪ್ರಕಾರ ಮುಂದುವರಿದಿದೆ.

ರಾಜ್ಯ ಅನುದಾನಿತ ಶಾಲಾ ಕಾಲೇಜುಗಳ ನೌಕರರು ಬೆಂಗಳೂರಿನ ಸ್ವಾತಂತ್ರ್ಯ ಉದ್ಯಾನದಲ್ಲಿ ನಡೆಸುತ್ತಿರುವ ಪ್ರತಿಭಟನೆಗೆ ಶುಕ್ರವಾರ ಸಾಹಿತಿ ಬರಗೂರು ರಾಮಚಂದ್ರಪ್ಪ ಹಾಗೂ ವಿಧಾನಪರಿಷತ್ ಸದಸ್ಯ ಪುಟ್ಟಣ್ಣ ಅವರು ಪ್ರತಿಭಟನಾನಿರತರ ಜೊತೆ ಸೇರಿ ಘೋಷಣೆ ಕೂಗಿದರು – ಪ್ರಜಾವಾಣಿ ಚಿತ್ರ

ಅನಗತ್ಯ ದಾವೆ: ಸರ್ಕಾರಕ್ಕೆ ಎಚ್ಚರಿಕೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ಅನಗತ್ಯ ಹಾಗೂ ಕ್ಷುಲ್ಲಕ ದಾವೆಗಳನ್ನು ಹೊತ್ತು ಕೋರ್ಟ್ ಮೆಟ್ಟಿಲು ತುಳಿಯುವ ಸರ್ಕಾರ ನ್ಯಾಯಾಂಗದ ಅಮೂಲ್ಯ ಸಮಯವನ್ನು ವ್ಯಯ ಮಾಡುತ್ತಿದೆ’ ಎಂದು ಹೈಕೋರ್ಟ್ ಅಸಮಾಧಾನ ವ್ಯಕ್ತಪಡಿಸಿದೆ.

ನಿವೃತ್ತ ಸಹಾಯಕ ಪೊಲೀಸ್ ಸಬ್ ಇನ್‌ಸ್ಪೆಕ್ಟರ್ ಎಂ.ರಹಮತ್‌ಉಲ್ಲಾ ವಿರುದ್ಧದ ಪ್ರಕರಣದಲ್ಲಿ ಕರ್ನಾಟಕ ಆಡಳಿತಾತ್ಮಕ ನ್ಯಾಯಮಂಡಳಿ (ಕೆಎಟಿ) ಆದೇಶ ಪ್ರಶ್ನಿಸಿ ಸರ್ಕಾರ ಸಲ್ಲಿಸಿದ್ದ ಮೇಲ್ಮನವಿ ವಿಚಾರಣೆ ನಡೆಸಿದ ನ್ಯಾಯಮೂರ್ತಿ ಜಿ.ನರೇಂದರ್ ಮತ್ತು ನ್ಯಾಯಮೂರ್ತಿ ಪಿ.ಎನ್ ದೇಸಾಯಿ ಅವರಿದ್ದ ವಿಭಾಗೀಯ ನ್ಯಾಯಪೀಠ, ‘ಈ ರೀತಿಯ ವ್ಯಾಜ್ಯಗಳನ್ನು ನಿಯಂತ್ರಿಸದೇ ಇದ್ದರೆ ಯಾವ ಅಧಿಕಾರಿಗಳು ವ್ಯಾಜ್ಯಕ್ಕೆ ಕಾರಣವಾಗುತ್ತಾರೋ ಅಂತಹವರಿಂದಲೇ ದಂಡ ವಸೂಲು ಮಾಡಬೇಕಾಗುತ್ತದೆ’ ಎಂದು ಎಚ್ಚರಿಸಿದೆ.

‘ವ್ಯಾಜ್ಯ ಪರಿಹಾರ ನೀತಿ-2021 ಅನ್ನು ಕಾನೂನು ಇಲಾಖೆ ರೂಪಿಸಿದ್ದು, ಇದನ್ನು ಪರಿಣಾಮಕಾರಿಯಾಗಿ ಜಾರಿಗೊಳಿಸುವ ಬಗ್ಗೆ ಅಧಿಕಾರಿಗಳಿಗೆ ಜಾಗೃತಿ ಮೂಡಿಸಬೇಕು. ಈ ಕುರಿ ತಂತೆ ರಾಜ್ಯದಲ್ಲಿ ವಿಭಾಗಾವಾರು ಕಾರ್ಯಾಗಾರಗಳನ್ನು ನಡೆಸಬೇಕು’ ಎಂದು ಸರ್ಕಾರಕ್ಕೆ ನಿರ್ದೇಶಿಸಿರುವ ನ್ಯಾಯಪೀಠ, ನೀತಿ ಸಂಹಿತೆಯ ದಾಖಲೆಯನ್ನು ಎಲ್ಲಾ ಇಲಾಖೆಗಳಿಗೆ ರವಾನಿಸಲು ಕ್ರಮ ಕೈಗೊಳ್ಳುವಂತೆ ಅಡ್ವೊಕೇಟ್ ಜನರಲ್ ಕಚೇರಿಗೂ ನಿರ್ದೇಶಿಸಿದೆ.

ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ

ಟಿ. ಚೌಡಯ್ಯ ರಸ್ತೆ, ಕುಮಾರ ಪಾರ್ಕ್ ಪಶ್ಚಿಮ, ಬೆಂಗಳೂರು-560 020.

ಸಂ: ಬೆಂಅಪ್ರಾ/ನಯೋಸ/CLU-228/1975/2022–23 ದಿನಾಂಕ: 25.11.2022

ತಿದ್ದುಪಡಿ ಪ್ರಕಟಣೆ

ದಿನಾಂಕ 24.11.2022 ರಂದು ‘ಪ್ರಜಾವಾಣಿ’ ಮತ್ತು ‘ವಿಜಯ ಕರ್ನಾಟಕ’ ದಿನಪತ್ರಿಕೆಗಳಲ್ಲಿ ಭೂಉಪಯೋಗ ಬದಲಾವಣೆಗೆ ಸಂಬಂಧಿಸಿದಂತೆ ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ ಕಾಯ್ದೆ 1961 ರ ಕಲಂ 14(ಎ) ರ ಅಡಿಯಲ್ಲಿ ಸಾರ್ವಜನಿಕರಿಂದ ಆಕ್ಷೇಪಣೆಗಳನ್ನು ಆಹ್ವಾನಿಸಿ ಹೊರಡಿಸಿರುವ ಪ್ರಕಟಣೆಯಲ್ಲಿ ಬೆಂಗಳೂರು ಉತ್ತರ ತಾಲ್ಲೂಕು, ಯಲಹಂಕ ಹೋಬಳಿ, ಗಂಟಿಗಾನಹಳ್ಳಿ ಗ್ರಾಮ ಎಂದು ತಪ್ಪಾಗಿ ನಮೂದಾಗಿರುತ್ತದೆ. ಅದರ ಬದಲಾಗಿ ಪ್ರಕಟಣೆಯಲ್ಲಿ ಯಲಹಂಕ ತಾಲ್ಲೂಕು, ಜಾಲ ಹೋಬಳಿ, ಬೆಟ್ಟಹಲಸೂರು ಗ್ರಾಮ ಎಂದು ಓದಿಕೊಳ್ಳತಕ್ಕದ್ದು.

ಸಹಿ/– ನಗರ ಯೋಜಕ ಸದಸ್ಯರು, ಬೆಂಅಪ್ರಾ, ಬೆಂಗಳೂರು.

ನೈಋತ್ಯ ರೈಲ್ವೆ

ಇ–ಟೆಂಡರ್ ಸೂಚನೆ ಸಂ.: L7225796, ದಿನಾಂಕ: 17.11.2022

ಈ ಕೆಳ ಸಹಿದಾರರು, ಭಾರತದ ರಾಷ್ಟ್ರಪತಿಗಳ ಪರವಾಗಿ ಕೆಳಗಡೆ ನೀಡಿರುವ ಕಾಮಗಾರಿಗಳಿಗೆ ಐಆರ್‌ಇಪಿಎಸ್‌ಮೂಲಕ ಮಾತ್ರ ಕೆಳಕಂಡ ಸಾಮಗ್ರಿಗಳ ಪೂರೈಕೆಗಾಗಿ ಇ–ಟೆಂಡರ್‌ಗಳನ್ನು ಆಹ್ವಾನಿಸಿದ್ದಾರೆ:

ಸಂಕ್ಷಿಪ್ತವಾದ ವಿವರಣೆ: ಲೇಜರ್ ವ್ಹೀಲ್ ಪ್ರೊಫಿಲೊಮೀಟರ್ (ಪರಿಮಾಣ: 05 ಸೆಟ್‌ಗಳು) (ಟೆಂಡರು ಸಂ. ಎಲ್ 7225796)

ಬಿಡ್‌ಗಳನ್ನು ಸಲ್ಲಿಸಲು ಕೊನೆಯ ದಿನಾಂಕ: **12.12.2022, 14:00 ಗಂಟೆಯವರೆಗೆ**

ಹೆಚ್ಚಿನ ಮಾಹಿತಿಗಾಗಿ www.ireps.gov.in ಗೆ ಲಾಗ್ ಆನ್ ಆಗಿ

ವರಿಷ್ಠ ವಿಭಾಗೀಯ ಸಾಮಗ್ರಿ ವ್ಯವಸ್ಥಾಪಕರು ಹುಬ್ಬಳ್ಳಿ

PUB/506/AAD/PRB/SWR/2022-23

S.W.Railways SWRRLY SWRRLY

(ಲೋಕೋಪಯೋಗಿ ಇಲಾಖೆ)
ಕಾರ್ಯಪಾಲಕ ಇಂಜಿನಿಯರ್,
ಚಿಕ್ಕಬಳ್ಳಾಪುರ ವಿಭಾಗ, ಚಿಕ್ಕಬಳ್ಳಾಪುರ

ಅಲ್ಪಾವಧಿ ಟೆಂಡರ್‌ಗಾಗಿ ಆಹ್ವಾನ (ಐ.ಎಫ್.ಟಿ) ಸಂಖ್ಯೆ: 16–1/2022–23
ದಿನಾಂಕ: 18.11.2022

(ರಸ್ತೆ ಕಾಮಗಾರಿಗಾಗಿ–ಸ್ಟ್ಯಾಂಡರ್ಡ್ ಬಿಡ್ಡಿಂಗ್ ಡಾಕ್ಯೂಮೆಂಟ್ ಕೆ.ಡಬ್ಲ್ಯೂ–4 ರಂತೆ ದ್ವಿ–ಲಕೋಟೆ ಪದ್ಧತಿಯಲ್ಲಿ)

ಲೋಕೋಪಯೋಗಿ ಇಲಾಖೆಯಲ್ಲಿ ನೋಂದಾಯಿತ ಅರ್ಹ ಗುತ್ತಿಗೆದಾರರಿಂದ ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮೂಲಕ **ದ್ವಿ–ಲಕೋಟೆ** ಪದ್ಧತಿಯಲ್ಲಿ ಕಾಮಗಾರಿಗಳ ಟೆಂಡರ್‌ಗಳನ್ನು ಕರ್ನಾಟಕ ರಾಜ್ಯಪಾಲರ ಹೆಸರಿನಲ್ಲಿ ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳಲ್ಲಿ ಪಾರದರ್ಶಕತೆ ಅಧ್ಯಾದೇಶ 2000ರ ಅನ್ವಯ ಈ ಕೆಳಗೆ ಸಹಿ ಮಾಡಿದವರು ಆಹ್ವಾನಿಸಿರುತ್ತಾರೆ. ಟೆಂಡರ್‌ನಲ್ಲಿ ಭಾಗವಹಿಸಲು ಇಚ್ಛಿಸುವವರು **ದಿನಾಂಕ:19.11.2022 ರಿಂದ 03.12.2022 ರ ಸಂಜೆ 4.00 ಘಂಟೆಯವರೆಗೆ** ಟೆಂಡರ್‌ಗಳನ್ನು ಸಲ್ಲಿಸಬಹುದಾಗಿರುತ್ತದೆ. (1) ಆಕ್ಷೇಪಣೆ–ಸಂದೇಹ ಮತ್ತು ವಿವರಣೆಗಳಿಗೆ ಕಡೆಯ **ದಿನಾಂಕ: 28.11.2022 (ಸಂಜೆ 3.00 ಘಂಟೆಗೆ ಕಛೇರಿ ವೇಳೆಯಲ್ಲಿ)** (2) ಭರ್ತಿ ಮಾಡಿದ ಟೆಂಡರ್‌ಗಳನ್ನು ಸಲ್ಲಿಸಲು ಕಡೆಯ **ದಿನಾಂಕ: 03.12.2022 (ಸಂಜೆ 4.00 ಘಂಟೆಯವರೆಗೆ)** (3) ತಾಂತ್ರಿಕ ಬಿಡ್‌ನ್ನು ತೆರೆಯುವ ದಿನಾಂಕ: **05.12.2022 ಬೆಳಿಗ್ಗೆ 11.00 ಘಂಟೆಗೆ.** (4) ತಾಂತ್ರಿಕ ಬಿಡ್ ಅನುಮೋದನೆಯಾದ ನಂತರ ಆರ್ಥಿಕ ಬಿಡ್‌ನ್ನು ತೆರೆಯುವ **ದಿನಾಂಕ:08.12.2022 ಬೆಳಿಗ್ಗೆ 11.00 ಘಂಟೆಗೆ.** ಹೆಚ್ಚಿನ ಮಾಹಿತಿಗಾಗಿ **www.kpwd.gov.in** ವೆಬ್‌ಸೈಟ್‌ನ್ನು ಸಂಪರ್ಕಿಸಬಹುದು ಅಥವಾ ಕಛೇರಿಯ ಕೆಲಸದ ವೇಳೆಯಲ್ಲಿ ಸಂಪರ್ಕಿಸಬಹುದು.

ಸಹಿ/– ಕಾರ್ಯಪಾಲಕ ಇಂಜಿನಿಯರ್,
ಲೋ.ಇ. ಚಿಕ್ಕಬಳ್ಳಾಪುರ ವಿಭಾಗ, ಚಿಕ್ಕಬಳ್ಳಾಪುರ

ವಾಸಾಸಂಇ/ಚಿಕ್ಕಬಳ್ಳಾಪುರ/ಆರ್.ಓ.ಸಂಖ್ಯೆ350/ಎಂ.ಸಿ.ಎ/2022–23

ಕೋವಿಡ್-19. ಆತಂಕ ಬೇಡ; ಮುನ್ನೆಚ್ಚರಿಕೆ ಇರಲಿ. ಮಾಸ್ಕ್ ಧರಿಸಿ | 6 ಅಡಿ ದೈಹಿಕ ಅಂತರ ಪಾಲಿಸಿ | ಕೈಗಳ ಸ್ವಚ್ಛತೆ ಕಾಪಾಡಿಕೊಳ್ಳಿ

PUBLIC NOTICE

This is inform and whatsoever it may concern that my client This is inform and whatsoever it may concern that my client **HARNIKS INFRA INDIA LLP**, has intending to purchase the schedule Property from its present owner viz., **SRI.K.AMRUTHAPPA**, S/o. Late Krishnappa, and his family members, R/at Managondanahalli Village, Kundana Hobli, Devanahalli Taluk, Bangalore Rural District and the said K.Amruthappa and his family members have entered in to an Agreement of sale dated 23.08.2021.

If any third party/s Person/s has/have any manner of right, title, interest, demand, clients, charges or lien over the schedule property they are hear by requested to file the objections to this sale transaction or mortgage of said property to the financial intuitions/Bank/third parties and shell informed/said object the same in writing along with the photocopies, related such claims, objections through the RPAD with the under mentioned address within 30 days from the publication of this notice.

If no valid claim/objections are received by the undersigned as aforesaid, my client shall proceed to complete the sale transaction deeming that apart from the aforesaid owner no one else has/have any manner of right or claim or interest whatsoever over the schedule property.

SCHEDULE PROPERTY

All that piece & parcel of agricultural land in Sy. No. 128, Sy.No.129, Sy.No.130, Sy.No.131, Sy.No.132 and Sy.No.133 measuring 16 acres 20 guntas out of 31 acres 22 guntas, Sy.No.171 measuring 4 acres, Sy.No.169 measuring 2 acres, Sy.12/2 measuring 2 acres, Sy.No.13 measuring 4 acres 17 guntas Sy.No.13 measuring 2 acres (totally measuring 30 acres 37 guntas), situated at Beerasandra Village, Kundana Hobli, Devanahalli Taluk, Bangalore Rural District.

K.V.MAHENDRA KUMAR, Advocate
1st Floor, Abhay Complex,
Above Union Bank, Sulibele Road,
Devanahalli – 562 110
9538276877 /9449730778

ನಿಧನ



ಡಾ. ಎಸ್. ಎನ್ ಅಂಗೇಗೌಡ
ನಿವೃತ್ತ ಶಸ್ತ್ರ ಚಿಕಿತ್ಸಾ ಪ್ರಾಧ್ಯಾಪಕರು, ಕಿಮ್ಸ್
ಇವರು ದಿನಾಂಕ 25-11-2022 ರಂದು ನಿಧನರಾದರೆಂದು ತಿಳಿಸಲು ವಿಷಾದಿಸುತ್ತೇವೆ ಇವರ ಅಂತ್ಯಕ್ರಿಯೆಯನ್ನು ಚಾಮರಾಜಪೇಟೆ ರುದ್ರಭೂಮಿಯಲ್ಲಿ ದಿನಾಂಕ 26.11.2022 ರಂದು ಮಧ್ಯಾಹ್ನ 12.00 ಕ್ಕೆ ನೆರವೇರಿಸಲಾಗುವುದು
ಇಂತಿ ದುಃಖತಪ್ತರು
ಪದ್ಮಾವತಿ ಅಂಗೇಗೌಡ ಮತ್ತು ಮಕ್ಕಳು

ಕಾರ್ಯನಿರ್ವಾಹಕ ಇಂಜಿನಿಯರ್, ಲೋಕೋಪಯೋಗಿ ಇಲಾಖೆ, ಕೋಲಾರ ವಿಭಾಗ,

ಕೋಲಾರ–563101. e-mail : eepwdkolar07@gmail.com,
website: www.kpwd.gov.in, e-portal: http://eproc.karnataka.gov.in
ದೂರವಾಣಿ: 08152–222022, ಫ್ಯಾಕ್ಸ್: 08152–227443

ಇ–ಟೆಂಡರ್ ಪ್ರಕಟಣೆ– ಕೆಡಬ್ಲ್ಯು – 1:2:3
ಅಲ್ಪಾವಧಿ ಟೆಂಡರ್ ಪ್ರಕಟಣೆ ಸಂಖ್ಯೆ 21/ 2022–23 ದಿನಾಂಕ: 19.11.2022

ಕೋಲಾರ ಜಿಲ್ಲೆ ಲೋಕೋಪಯೋಗಿ ಇಲಾಖೆ ವ್ಯಾಪ್ತಿಯಲ್ಲಿ ಲೆಕ್ಕಶೀರ್ಷಿಕೆ: 8443–ಠೇವಣಿ ವಂತಿಗೆ ಅಡಿಯಲ್ಲಿ ಶಾಲಾ ಕಟ್ಟಡ ನಿರ್ಮಾಣ ಕಾಮಗಾರಿಗಳಿಗೆ ಟೆಂಡರ್ ಕರೆಯಲಾಗಿದ್ದು, ಕಾಮಗಾರಿಗಳಿಗೆ ಟೆಂಡರ್‌ಗಿಟ್ಟ ಮೊತ್ತ: **ಕನಿಷ್ಟ: ರೂ.13.90 ಲಕ್ಷಗಳು ಗರಿಷ್ಟ: ರೂ.83.40 ಲಕ್ಷಗಳು.** ಇ.ಎಂ.ಡಿ ಮೊತ್ತ: **ಕನಿಷ್ಟ: ರೂ.17,375.00 ಗರಿಷ್ಟ: ರೂ.1.67 ಲಕ್ಷಗಳು.** ಕಾಲಾವಧಿ: **ಕನಿಷ್ಟ: 6 ತಿಂಗಳು ಗರಿಷ್ಟ: 9 ತಿಂಗಳು.** ನಿರ್ವಹಿಸಲು ನೊಂದಾಯಿತ ಗುತ್ತಿಗೆದಾರರಿಂದ ಇ–ಪ್ರೊಕ್ಯೂರ್‌ಮೆಂಟ್ ಅನ್ವಯ ಟೆಂಡರ್ ಆಹ್ವಾನಿಸಲಾಗಿದೆ. ಗುತ್ತಿಗೆದಾರರು ಕೆಡಬ್ಲ್ಯೂ–1:2:3 ರ ಟೆಂಡರ್ ಡಾಕ್ಯೂಮೆಂಟ್‌ಗಳನ್ನು ಕರ್ನಾಟಕ ರಾಜ್ಯದ ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್ (Viz., http://eproc.karnataka. gov.in) ನಿಂದ ಡೌನ್‌ಲೋಡ್ ಮಾಡಿಕೊಳ್ಳಬಹುದಾಗಿರುತ್ತದೆ. ಭರ್ತಿ ಮಾಡಿದ ಟೆಂಡರ್‌ಗಳನ್ನು ಆನ್‌ಲೈನ್ ಮುಖಾಂತರ ಕರ್ನಾಟಕ ರಾಜ್ಯದ ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್‌ನಲ್ಲಿ ದಿನಾಂಕ: **14.12.2022 ರಂದು ಸಂಜೆ 16.00 ಗಂಟೆ** ಒಳಗೆ ಅಪ್‌ಲೋಡ್ ಮಾಡಬಹುದಾಗಿರುತ್ತದೆ. ಸ್ವೀಕೃತವಾದ ಟೆಂಡರ್‌ಗಳನ್ನು ದಿನಾಂಕ: **15.12.2022 ರಂದು ಸಂಜೆ 16.30 ಗಂಟೆಯ** ನಂತರ ಇ–ಪ್ರೊಕ್ಯೂರ್‌ಮೆಂಟ್‌ನಲ್ಲಿ ತೆರೆಯಲಾಗುವುದು. ಕಾಮಗಾರಿಗಳಿಗೆ ಸಂಬಂಧಿಸಿದಂತೆ ಹೆಚ್ಚಿನ ವಿವರಗಳಿಗೆ ಹಾಗೂ ಸದರಿ ಟೆಂಡರ್ ಅಧಿಸೂಚನೆಯ ವಿವರಗಳನ್ನು ಪಡೆಯಲು ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್ (Viz., http://eproc.karnataka.gov.in) ನಲ್ಲಿ ಸಂಪರ್ಕಿಸ ಬಹುದಾಗಿದೆ. ಹಾಗೂ ಈ ಕಛೇರಿಯ ಕೆಲಸದ ವೇಳೆಯಲ್ಲಿ ಹೆಚ್ಚಿನ ವಿವರಗಳನ್ನು ಪಡೆಯಲು ಸಹಾ ಕೋರಲಾಗಿದೆ.

ವಿಶೇಷ ಸೂಚನೆ: ಸದರಿ ನೋಟಿಫಿಕೇಶನ್‌ಗೆ ಸಂಬಂಧಿಸಿದಂತೆ ಟೆಂಡರ್ ಪ್ರಕ್ರಿಯೆಯಲ್ಲಿ ಯಾವುದೇ ಬದಲಾವಣೆಗಳು ಇದ್ದಲ್ಲಿ ದಿನಪತ್ರಿಕೆಗಳಲ್ಲಿ ಪ್ರಕಟಿಸಲಾಗುವುದಿಲ್ಲ. ಬದಲಾಗಿ ಇ–ಪೋರ್ಟಲ್‌ನಲ್ಲಿ ಮಾತ್ರ ಬದಲಾವಣೆಗಳನ್ನು ಪ್ರಕಟಿಸಲಾಗುವುದು.

ಸಹಿ/– ಕಾರ್ಯನಿರ್ವಾಹಕ ಇಂಜಿನಿಯರ್, ಲೋ.ಇ ಕೋಲಾರ ವಿಭಾಗ, ಕೋಲಾರ

ವಾ.ಸಾ.ಸಂ.ಇ./ಕೋಲಾರ/ಆರ್.ಓ.ಸಂಖ್ಯೆ 387 /ಎಂಸಿಎ/2022–23

ಕೋವಿಡ್-19. ಆತಂಕ ಬೇಡ; ಮುನ್ನೆಚ್ಚರಿಕೆ ಇರಲಿ. ಮಾಸ್ಕ್ ಧರಿಸಿ | 6 ಅಡಿ ದೈಹಿಕ ಅಂತರ ಪಾಲಿಸಿ | ಕೈಗಳ ಸ್ವಚ್ಛತೆ ಕಾಪಾಡಿಕೊಳ್ಳಿ

ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ

ಟಿ. ಚೌಡಯ್ಯ ರಸ್ತೆ, ಕುಮಾರ ಪಾರ್ಕ್ ಪಶ್ಚಿಮ, ಬೆಂಗಳೂರು–560020.

ಸಂ: ಬೆಂಅಪ್ರಾ/ನಯೋಸ/CLU-219/1984/2022–23 ದಿನಾಂಕ: 25.11.2022

ಪ್ರಕಟಣೆ

ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ ಕಾಯ್ದೆ 1961ರ ಕಲಂ 14–Aರ ಅಡಿಯಲ್ಲಿ ಈ ಕೆಳಕಂಡ ಅರ್ಜಿದಾರರು ವ್ಯವಸಾಯ ವಲಯದಿಂದ ವಸತಿ ಉಪಯೋಗಕ್ಕಾಗಿ ಭೂಉಪಯೋಗ ಬದಲಾವಣೆ ಕೋರಿ ಅರ್ಜಿ ಸಲ್ಲಿಸಿರುತ್ತಾರೆ. ಭೂಉಪಯೋಗ ಬದಲಾವಣೆಯ ಪ್ರಸ್ತಾವನೆಯ ವಿವರಗಳು ಈ ಕೆಳಕಂಡಂತೆ ಇರುತ್ತದೆ. ಸದರಿ ಭೂಉಪಯೋಗ ಬದಲಾವಣೆ ಪ್ರಸ್ತಾವನೆ ಬಗ್ಗೆ ಯಾವುದೇ ಆಕ್ಷೇಪಣೆಗಳಿದ್ದರೆ, ಈ ಪ್ರಕಟಣೆ ಪ್ರಕಟವಾದ ದಿನಾಂಕದಿಂದ 15 ದಿವಸಗಳೊಳಗಾಗಿ ಆಕ್ಷೇಪಣೆಗಳನ್ನು ಲಿಖಿತವಾಗಿ ನಗರ ಯೋಜಕ ಸದಸ್ಯರು, ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ, ಬೆಂಗಳೂರು ಕಛೇರಿಗೆ ಸಲ್ಲಿಸಲು ತಿಳಿಸಲಾಗಿದೆ. ನಿಗದಿತ ಅವಧಿಯ ನಂತರ ಬರುವ ಯಾವುದೇ ಆಕ್ಷೇಪಣೆಗಳನ್ನು ಪರಿಗಣಿಸುವುದಿಲ್ಲ.

ಕ್ರ. ಸಂ.	ಅರ್ಜಿದಾರರ ಹೆಸರು	ತಾಲ್ಲೂಕು	ಹೋಬಳಿ	ಗ್ರಾಮದ ವಿವರ	ಸರ್ವೆ.ನಂ	ವಿಸ್ತೀರ್ಣ ಎ–ಗುಂ	ಪರಿಷ್ಕೃತ ಮಹಾಯೋಜನೆ–2015ರ ಪ್ರಕಾರ ಭೂಉಪಯೋಗ	ಬದಲಾವಣೆ ಕೋರಿರುವ ಭೂಉಪಯೋಗ
1	ಶ್ರೀಮತಿ ಕವಿತಾ ಪ್ರಸಾದ್	ಆನೇಕಲ್	ಸರ್ಜಾಪುರ	ರಾಮನಾಯಕನಹಳ್ಳಿ	64/2	02–10	ವ್ಯವಸಾಯ	ವಸತಿ
					ಒಟ್ಟು	02–10		

ಷರಾ: ಅರ್ಜಿದಾರರು ಪ್ರಶ್ನಿತ ಜಮೀನುಗಳನ್ನು ವ್ಯವಸಾಯ ವಲಯದಿಂದ ವಸತಿ ಉಪಯೋಗಕ್ಕಾಗಿ ಭೂಉಪಯೋಗ ಬದಲಾವಣೆ ಮಾಡಿದಲ್ಲಿ ಈ ಜಮೀನಿನಲ್ಲಿ ವಿನ್ಯಾಸ ಅಭಿವೃದ್ಧಿಪಡಿಸುವುದರಿಂದ ಸಾರ್ವಜನಿಕರಿಗೆ ಯೋಗ್ಯ ಬೆಲೆಯಲ್ಲಿ ನಿವೇಶನಗಳು ಲಭ್ಯವಾಗುತ್ತದೆ. ವಿನ್ಯಾಸ ಅಭಿವೃದ್ಧಿ ಕಾಮಗಾರಿಗಳು ನಡೆಯುವಾಗ ಸ್ಥಳೀಯ ಕೂಲಿ ಕಾರ್ಮಿಕರಿಗೆ ಉದ್ಯೋಗ ದೊರಕುತ್ತದೆ. ಈ ವಿನ್ಯಾಸದ ಅಭಿವೃದ್ಧಿಯಿಂದ ಸುತ್ತಮುತ್ತಲಿನ ಪ್ರದೇಶ ಅಭಿವೃದ್ಧಿಗೆ ಸಹಕಾರಿಯಾಗಲಿದೆ ಮತ್ತು ಯೋಜನಾ ಬದ್ಧವಾದ ವಿನ್ಯಾಸ ರಚನೆಯಿಂದ ಉತ್ತಮ ರಸ್ತೆಗಳು, ನಾಗರೀಕ ಸೌಲಭ್ಯದ ಜಾಗಗಳು, ಉದ್ಯಾನವನಗಳು ಸಾರ್ವಜನಿಕರ ಉಪಯೋಗಕ್ಕೆ ಲಭ್ಯವಾಗುತ್ತದೆ ಎಂಬ ಸಾರ್ವಜನಿಕ ಹಿತಾಸಕ್ತಿ ಅಂಶ ಅಡಗಿದೆ ಎಂದು ತಿಳಿಸುತ್ತಾ ಸದರಿ ಪ್ರದೇಶವನ್ನು **‘ವ್ಯವಸಾಯ’** ವಲಯದಿಂದ **‘ವಸತಿ’** ಉಪಯೋಗಕ್ಕೆ ಭೂಉಪಯೋಗ ಬದಲಾವಣೆ ಮಾಡಿಕೊಳ್ಳಲು ಇಚ್ಛಿಸಿರುವುದಾಗಿ ತಿಳಿಸಿರುತ್ತಾರೆ.

BDA/PRO/CLU/160/2022-23 ಸಹಿ/– ನಗರ ಯೋಜಕ ಸದಸ್ಯರು, ಬೆಂಅಪ್ರಾ, ಬೆಂಗಳೂರು.

ಸಾರ್ವಜನಿಕ ಪ್ರಕಟಣೆ

ನಮ್ಮ ಕಕ್ಷಿದಾರ, (**‘ಕಕ್ಷಿದಾರ’**) ಈ ಕೆಳಕಂಡ **“ಷೆಡ್ಯೂಲ್”** ನಲ್ಲಿ ವಿವರಿಸಿರುವ ಮತ್ತು ಇದನ್ನು ಇನ್ನುಮುಂದೆ **“ಷೆಡ್ಯೂಲ್ ಸ್ವತ್ತು”** ಎಂದು ಕರೆಯಲ್ಪಡುವ, ಸದರಿ ಮಾಲೀಕರಾದ **ಸುಯಾದೆಲ ಕನ್‌ಸ್ಟ್ರಕ್ಷನ್ಸ್ ಪ್ರೈವೇಟ್ ಲಿಮಿಟೆಡ್**, ಈ ಕಂಪನಿಯ ನೋಂದಾಯಿತ ಕಛೇರಿ ನಂ.514, ದಲಮಲ್ ಟವರ್ಸ್, 211, ಎಫ್‌ಪಿಜೆ ಮಾರ್ಗ್, ನಾರಿಮನ್ ಪಾಯಿಂಟ್, ಮುಂಬಯಿ–400021, (**‘ಮಾಲೀಕರು’**) ಇವರೊಡನೆ ಸ್ಥಿರಾಸ್ತಿ ಸ್ವತ್ತಿಗೆ ಸಂಬಂಧಿಸಿದಂತೆ ಕೆಲವೊಂದು ವ್ಯವಹಾರ ನಡೆಸಲು ಅಪೇಕ್ಷಿಸಿರುತ್ತಾರೆ. ತಾವು ಸದರಿ ಷೆಡ್ಯೂಲ್ ಸ್ವತ್ತುಗಳ ಏಕಮೇವ ಮಾಲೀಕರೆಂದು ಹಾಗೂ ನಿರುಪಾಧಿಕ ಮಾಲೀಕರೆಂದು ಮತ್ತು ಷೆಡ್ಯೂಲ್ ಸ್ವತ್ತನ್ನು ಶಾಂತಿಯುತ ಸ್ವಾಧೀನವನ್ನು ಹೊಂದಿರುವುದಾಗಿಯೂ ಮಾಲೀಕರು ನಮ್ಮ ಕಕ್ಷಿದಾರರಿಗೆ ತಿಳಿಸಿರುತ್ತಾರೆ.

ಯಾವುದೇ ವ್ಯಕ್ತಿ (ಮೇಲ್ಕಂಡ ಮಾಲೀಕರನ್ನು ಹೊರತುಪಡಿಸಿ) ಸದರಿ ಷೆಡ್ಯೂಲ್ ಸ್ವತ್ತಿನ ಮೇಲೆ (ಅಥವಾ ಯಾವುದೇ ಭಾಗದ ಮೇಲೆ) ಯಾವುದೇ ರೀತಿಯ ಹಕ್ಕು, ಹಕ್ಕು ಬಾಧ್ಯತೆ, ಹಿತಾಸಕ್ತಿ, ಕ್ಲೇಮ್‌ಗಳು ಹೊಂದಿದ್ದಲ್ಲಿ, ಅಥವಾ ಯಾವುದೇ ಸ್ವರೂಪದ ಷೆಡ್ಯೂಲ್ ಸ್ವತ್ತಿನ ಮೇಲೆ (ಅಥವಾ ಯಾವುದೇ ಭಾಗದ ಮೇಲೆ) ಯಾವುದೇ ಕ್ಲೇಮುಗಳು/ಹಿತಾಸಕ್ತಿಯನ್ನು ಹೊಂದಿದ್ದರೆ ಮತ್ತು/ಅಥವಾ ವ್ಯವಹಾರಕ್ಕೆ ಸಂಬಂಧಿಸಿದಂತೆ ಆಕ್ಷೇಪಣೆಗಳು ಹೊಂದಿದ್ದರೆ, ಅಂತಹ ಕ್ಲೇಮುಗಳನ್ನು ಅಥವಾ ಆಕ್ಷೇಪಣೆಗಳನ್ನು, (ಷೆಡ್ಯೂಲ್ ಸ್ವತ್ತಿನ ಮೇಲೆ ಅವರ ಕ್ಲೇಮು/ಹಿತಾಸಕ್ತಿಯ ದೃಷ್ಟಿಯಿಂದ) ಸೂಕ್ತ ಸಾಕ್ಷ್ಯಾಧಾರ ಹಾಗೂ ಕಾಗದಪತ್ರಗಳೊಡನೆ, ಲಿಖಿತರೂಪದಲ್ಲಿ ಈ ತಿಳುವಳಿಕೆ ಪ್ರಕಟವಾದ **15 (ಹದಿನೈದು)** ದಿನಗಳ ಕಾಲಾವಧಿಯ ಒಳಗೆ ಈ ಕೆಳಕಂಡ ವಿಳಾಸಕ್ಕೆ ತಲುಪುವಂತೆ ಈ ಮೂಲಕ ಕರೆ ನೀಡಲಾಗಿದೆ. ಒಂದು ವೇಳೆ ಈ ದಿನ ಪ್ರಕಟವಾದ ನೋಟೀಸನ್ನು ತಿಳಿಸಿದ 15 (ಹದಿನೈದು) ದಿನದೊಳಗೆ ಆಕ್ಷೇಪಣೆಗಳು ಸಲ್ಲಿಕೆಯಾಗದಿದ್ದಲ್ಲಿ, ಷೆಡ್ಯೂಲ್ ಸ್ವತ್ತಿನ ಮೇಲೆ ಯಾವುದೇ ಮೂರನೇ ವ್ಯಕ್ತಿಯ ಕ್ಲೇಮುಗಳು ಇರುವುದಿಲ್ಲ ಎಂದು ಮತ್ತು ಉಲ್ಲೇಖಿಸಿದ ಉದ್ದೇಶಿತ ವ್ಯವಹಾರಕ್ಕೆ ಯಾವುದೇ ಆಕ್ಷೇಪಣೆಗಳು ಇರುವುದಿಲ್ಲವೆಂದು ಪರಿಗಣಿಸಲಾಗುವುದು.

ಷೆಡ್ಯೂಲ್
(ಷೆಡ್ಯೂಲ್ ಸ್ವತ್ತಿನ ವಿವರ)

ಬೆಂಗಳೂರು ನಗರ ಜಿಲ್ಲೆ, ಬೆಂಗಳೂರು ದಕ್ಷಿಣ ತಾಲ್ಲೂಕು, ಬೇಗೂರು ಹೋಬಳಿ, ಬೇಗೂರು ಗ್ರಾಮದಲ್ಲಿ ಬರುವ ಸ್ಥಿರಾಸ್ತಿ ಸ್ವತ್ತನ್ನು ವಸತಿ ಉದ್ದೇಶಕ್ಕಾಗಿ ಪರಿವರ್ತನೆಯಾಗಿರುವ ಒಟ್ಟಾರೆ ವಿಸ್ತೀರ್ಣ 10 ಎಕರೆ 33.4 ಗುಂಟೆಗಳ ಸಂಪೂರ್ಣ ಜಮೀನುಗಳ ವಿವರಗಳನ್ನು ಈ ಕೆಳಗಿನ ಟೇಬಲ್‌ನಲ್ಲಿ ತಿಳಿಸಲಾಗಿದೆ.

ಕ್ರಮ ಸಂಖ್ಯೆ	ಸರ್ವೆ ನಂ	ವಿಸ್ತೀರ್ಣ		ಪೂರ್ವಕ್ಕೆ	ಪಶ್ಚಿಮಕ್ಕೆ	ಉತ್ತರಕ್ಕೆ	ದಕ್ಷಿಣಕ್ಕೆ
		ಎಕರೆ	ಗುಂಟೆ				
1	328/2	03	39	ಸರ್ವೆ ನಂ.331 ಮತ್ತು ಸರ್ವೆ ನಂ.328/1ರ ಸ್ವತ್ತು	ಸರ್ವೆ ನಂ.332/2ರ ಸ್ವತ್ತು	ಸರ್ವೆ ನಂ.328/2ರ ಉಳಿದ ಭಾಗದ ಸ್ವತ್ತು	ಸರ್ವೆ ನಂ.332/2ರ ಸ್ವತ್ತು
2	330	01	18.4	ಸರ್ವೆ ನಂ.395ರ ಸ್ವತ್ತು	ಸರ್ವೆ ನಂ.332/2 ಮತ್ತು 332/3 ರ ಸ್ವತ್ತು	ಸರ್ವೆ ನಂ.330ರ ಉಳಿದ ಭಾಗದ ಸ್ವತ್ತು	ಸರ್ವೆ ನಂ.335ರ ಸ್ವತ್ತು
3	332/2	05	16	ಸರ್ವೆ ನಂ.330ರ ಸ್ವತ್ತು	9 ಮೀಟರ್ ಅಗಲದ ಕೆರೆ ರಸ್ತೆ	ಸರ್ವೆ ನಂ.328/2, ಸರ್ವೆ ನಂ.331 ಮತ್ತು ಸರ್ವೆ ನಂ.332/1ರ ಸ್ವತ್ತು	ಸರ್ವೆ ನಂ.332/3ರ ಸ್ವತ್ತು

ಸಹಿ/–
ಶ್ರೀನಿವಾಸ್ ಬಿ.ಆರ್ ಮತ್ತು ಬ್ರಿಜಿತ ಪ್ರಕಾಶ್, ಪಾಲುದಾರರು
ಡಿಎಸ್‌ಕೆ ಲೀಗಲ್,
ಪ್ರೆಸ್ಟೀಜ್ ಲೋಕ, ನಂ.201, 2ನೇ ಮಹಡಿ, ನಂ.7/1 & 7/7,
ಬ್ರೈಂಟನ್ ರಸ್ತೆ, ಬೆಂಗಳೂರು – 560025, ದೂ. ಸಂ. 080–69548770

ದಿನಾಂಕ: 26.11.2022
ಸ್ಥಳ : ಬೆಂಗಳೂರು

ಹೊಸಕೋಟೆ ಯೋಜನಾ ಪ್ರಾಧಿಕಾರ

ಮಿಷನ್ ಹಾಸ್ಪಿಟಲ್ ರಸ್ತೆ, 1ನೇ ಅಡ್ಡರಸ್ತೆ, ಶ್ರೀ ವೆಂಕಟಾದ್ರಿ ಬಡಾವಣೆ, ಹೊಸಕೋಟೆ–562114,
ಬೆಂಗಳೂರು ಗ್ರಾಮಾಂತರ ಜಿಲ್ಲೆ. ದೂರವಾಣಿ/ಫ್ಯಾಕ್ಸ್: 080–27934470/27935412
E-mail: hosakote.pa@gmail.com URL: www.hoskote-tpa.gov.in

ಸಂಖ್ಯೆ: ಹೊಯೋಪ್ರಾ/ಭೂ.ಪ.ಅ/ಆನ್ ಲೈನ್/ಎಂ.ಪಿ./430 & 432/2022–23
ದಿನಾಂಕ: 24–11–2022

ಪ್ರಕಟಣೆ

ವಿಷಯ: **ಬೆಂಗಳೂರು ಗ್ರಾಮಾಂತರ ಜಿಲ್ಲೆ, ಹೊಸಕೋಟೆ ತಾಲ್ಲೂಕು, ಅನುಗೊಂಡನಹಳ್ಳಿ ಹೋಬಳಿ, ಗುಳ್ಳಕಾಯಿಪುರ ಗ್ರಾಮದ ಸ.ನಂ. 1/2 ರಲ್ಲಿನ 01 ಎಕರೆ 36 1/2 ಗುಂಟೆ ಮತ್ತು ಸ.ನಂ. 1/3 ರಲ್ಲಿನ 01 ಎಕರೆ 36 1/2 ಗುಂಟೆ ಒಟ್ಟು 03 ಎಕರೆ 33 ಗುಂಟೆ ವಿಸ್ತೀರ್ಣದ ಜಮೀನುಗಳಿಗೆ ಕೃಷಿ [ಎಜುಕೇಷನಲ್ ಇನ್ಸ್ಟಿಟ್ಯೂಷನ್ (ಶಾಲೆ / ಕಾಲೇಜು)] ಉದ್ದೇಶಕ್ಕೆ ಭೂ ಪರಿವರ್ತನೆಗೆ ತಾಂತ್ರಿಕ ಅಭಿಪ್ರಾಯ ನೀಡಲು ಕೋರಿರುವ ಬಗ್ಗೆ.**

ಉಲ್ಲೇಖ: **1) ಜಿಲ್ಲಾಧಿಕಾರಿಗಳು, ಬೆಂಗಳೂರು ಗ್ರಾಮಾಂತರ ಜಿಲ್ಲೆ ರವರ ಆನ್ ಲೈನ್ ಎಂ.ಪಿ. ಬೇಸ್ಡ್ ಆನ್‌ಲೈನ್ ಅಫಿಡವಿಟ್ ನಂ. 588307 & 588330, ರೀಕ್ವೆಸ್ಟ್ ಐ.ಡಿ: 417751 & 417763., ದಿ: 09.11.2022. (ಶ್ರೀ ಸಿ. ಮುನಿರೆಡ್ಡಿ ಬಿನ್ ಚಿಕ್ಕ ನಂಜುಂಡ ರೆಡ್ಡಿ ಮತ್ತು ಶ್ರೀ ಎಂ.ಎನ್ ಗೋಪಾಲರೆಡ್ಡಿ ಬಿನ್ ಚಿಕ್ಕನಂಜುಂಡ ರೆಡ್ಡಿ)**
2) ಸರ್ಕಾರದ ಸುತ್ತೋಲೆ ಸಂಖ್ಯೆ: ನಅಇ 237 ಬೆಮಪ್ರಾ 2009, ದಿನಾಂಕ: 19.09.2009.

ಬೆಂಗಳೂರು ಗ್ರಾಮಾಂತರ ಜಿಲ್ಲೆ, ಹೊಸಕೋಟೆ ತಾಲ್ಲೂಕು, ಅನುಗೊಂಡನಹಳ್ಳಿ ಹೋಬಳಿ, ಗುಳ್ಳಕಾಯಿಪುರ ಗ್ರಾಮದ ಸ.ನಂ. 1/2 ರಲ್ಲಿನ 01 ಎಕರೆ 36 1/2 ಗುಂಟೆ ಮತ್ತು ಸ.ನಂ. 1/3 ರಲ್ಲಿನ 01 ಎಕರೆ 36 1/2 ಗುಂಟೆ ಒಟ್ಟು 03 ಎಕರೆ 33 ಗುಂಟೆ ವಿಸ್ತೀರ್ಣದ ಜಮೀನುಗಳಿಗೆ ಕೃಷಿ [ಎಜುಕೇಷನಲ್ ಇನ್ಸ್ಟಿಟ್ಯೂಷನ್ (ಶಾಲೆ / ಕಾಲೇಜು)] ಉದ್ದೇಶಕ್ಕೆ ಭೂ ಪರಿವರ್ತನೆಗೆ ತಾಂತ್ರಿಕ ಅಭಿಪ್ರಾಯ ನೀಡಲು ಉಲ್ಲೇಖ (1) ರ ಪತ್ರದಲ್ಲಿ ಕೋರಲಾಗಿದೆ.

ಹೊಸಕೋಟೆ ಸ್ಥಳೀಯ ಯೋಜನಾ ಪ್ರದೇಶಕ್ಕೆ ಸರ್ಕಾರದಿಂದ ಅನುಮೋದನೆಯಾದ ಮಹಾಯೋಜನೆಯಂತೆ **ಪ್ರಸ್ತಾಪಿತ, ಗುಳ್ಳಕಾಯಿಪುರ ಗ್ರಾಮದ ಸ.ನಂ. 1/2 ರಲ್ಲಿನ 01 ಎಕರೆ 36 1/2 ಗುಂಟೆ ಮತ್ತು ಸ.ನಂ. 1/3 ರಲ್ಲಿನ 01 ಎಕರೆ 36 1/2 ಗುಂಟೆ ಒಟ್ಟು 03 ಎಕರೆ 33 ಗುಂಟೆ ವಿಸ್ತೀರ್ಣದ ಜಮೀನುಗಳನ್ನು ಕೃಷಿ ವಲಯದಲ್ಲಿ ಕಾಯ್ದಿರಿಸಲಾಗಿದೆ.** ಅನುಮೋದಿತ ಮಹಾಯೋಜನೆಯ ವಲಯ ನಿಯಮಾವಳಿಯಂತೆ ಕೃಷಿ ವಲಯದ ವಿಶೇಷ ಸಂದರ್ಭಗಳಲ್ಲಿ ಶೈಕ್ಷಣಿಕ ಉದ್ದೇಶಕ್ಕಾಗಿ ಕಟ್ಟಡದ ಗರಿಷ್ಟ ಕ್ಷೇತ್ರಾವರಿಸುವಿಕೆ ಶೇ 15 ಕ್ಕೆ ಹಾಗೂ ನೆಲ + ಮೊದಲನೇ ಮಹಡಿಗೆ ಮಿತಿಗೊಳಿಸಿ ಅನುಮತಿಸಲು ಸ್ಪೇಸ್ ಸ್ಟಾಂಡರ್ಡ್ಸ್ (Space satandards) ಅನ್ವಯ ವಿವಿಧ ಉದ್ದೇಶದ ಶೈಕ್ಷಣಿಕ ಕಟ್ಟಡಗಳಿಗಾಗಿ ಸಂಬಂಧಪಟ್ಟ ಸಕ್ಷಮ ಪ್ರಾಧಿಕಾರವು ನಿಗದಿಪಡಿಸಿರುವ ಮಾರ್ಗಸೂಚಿಯಂತೆ ಅವಕಾಶ ಕಲ್ಪಿಸಲಾಗಿರುತ್ತದೆ.

ಹಾಗಾಗಿ, ಪ್ರಸ್ತಾಪಿತ ಜಮೀನಿನಲ್ಲಿ ಶೈಕ್ಷಣಿಕ ಕಟ್ಟಡವನ್ನು ಕಟ್ಟಿದಲ್ಲಿ ಅಕ್ಕಪಕ್ಕದ ಜಮೀನಿನ ಮಾಲೀಕರಿಗೆ / ಇತರರಿಗೆ / ಪರಿಸರಕ್ಕೆ ಉಂಟಾಗಬಹುದಾದ ತೊಂದರೆಗಳು ಹಾಗೂ ಇತರೆ ಅಂಶಗಳಿಗೆ ಸಂಬಂಧಿಸಿದಂತೆ ತಮ್ಮ ಸಲಹೆ/ ಆಕ್ಷೇಪಣೆಗಳು ಇದ್ದಲ್ಲಿ ಈ ಪ್ರಕಟಣೆ ನೀಡಿದ ದಿನಾಂಕದಿಂದ **15 ದಿನಗಳ ಒಳಗಾಗಿ** ಲಿಖಿತ ರೂಪದಲ್ಲಿ **ಸದಸ್ಯ ಕಾರ್ಯದರ್ಶಿ, ಹೊಸಕೋಟೆ ಯೋಜನಾ ಪ್ರಾಧಿಕಾರ, ಮಿಷನ್ ಹಾಸ್ಪಿಟಲ್ ರಸ್ತೆ, 1ನೇ ಅಡ್ಡ ರಸ್ತೆ, ಶ್ರೀ ವೆಂಕಟಾದ್ರಿ ಬಡಾವಣೆ, ಹೊಸಕೋಟೆ – 562114, ಬೆಂಗಳೂರು ಗ್ರಾಮಾಂತರ ಜಿಲ್ಲೆ** ರವರಿಗೆ ಖುದ್ದಾಗಿ ಅಥವಾ ಅಂಚೆ ಮೂಲಕ ಸಲ್ಲಿಸಲು ಕೋರಲಾಗಿದೆ. ಅವಧಿ ಮೀರಿದ ನಂತರ ಸ್ವೀಕರಿಸಲಾಗುವ ಸಲಹೆ / ಆಕ್ಷೇಪಣೆಗಳನ್ನು ಪರಿಗಣಿಸಲಾಗುವುದಿಲ್ಲ.

ಸಹಿ/–
ನಗರ ಮತ್ತು ಗ್ರಾಮಾಂತರ ಯೋಜನಾ ಜಂಟಿ ನಿರ್ದೇಶಕರು ಹಾಗೂ ಸದಸ್ಯ ಕಾರ್ಯದರ್ಶಿ, ಹೊಸಕೋಟೆ ಯೋಜನಾ ಪ್ರಾಧಿಕಾರ, ಹೊಸಕೋಟೆ.

ವಾಸಾಸಂಇ/ವಾ.ಪ್ರ/3254/ಅಡ್ವರ್ಟೋರ್/2022–23

ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ

ಟಿ. ಚೌಡಯ್ಯ ರಸ್ತೆ, ಕುಮಾರ ಪಾರ್ಕ್ ಪಶ್ಚಿಮ, ಬೆಂಗಳೂರು - 560 020.

ನಂ: ಬೆಂಅಪ್ರಾ/ನಯೋಸ/CLU-138/1979/2022–23 ದಿನಾಂಕ: 25.11.2022

ಪ್ರಕಟಣೆ

ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ ಕಾಯ್ದೆ 1961ರ ಕಲಂ 14–A ರ ಅಡಿಯಲ್ಲಿ ಈ ಕೆಳಕಂಡ ಅರ್ಜಿದಾರರು ವ್ಯವಸಾಯ ವಲಯದಿಂದ ವಸತಿ ಉಪಯೋಗಕ್ಕಾಗಿ ಭೂಉಪಯೋಗ ಬದಲಾವಣೆ ಕೋರಿ ಅರ್ಜಿ ಸಲ್ಲಿಸಿರುತ್ತಾರೆ. ಭೂಉಪಯೋಗ ಬದಲಾವಣೆಯ ಪ್ರಸ್ತಾವನೆಯ ವಿವರಗಳು ಈ ಕೆಳಕಂಡಂತೆ ಇರುತ್ತದೆ. ಸದರಿ ಭೂಉಪಯೋಗ ಬದಲಾವಣೆ ಪ್ರಸ್ತಾವನೆ ಬಗ್ಗೆ ಯಾವುದೇ ಆಕ್ಷೇಪಣೆಗಳಿದ್ದರೆ, ಈ ಪ್ರಕಟಣೆ ಪ್ರಕಟವಾದ ದಿನಾಂಕದಿಂದ 15 ದಿವಸಗಳೊಳಗಾಗಿ ಆಕ್ಷೇಪಣೆಗಳನ್ನು ಲಿಖಿತವಾಗಿ ನಗರ ಯೋಜಕ ಸದಸ್ಯರು, ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ, ಬೆಂಗಳೂರು ಕಛೇರಿಗೆ ಸಲ್ಲಿಸಲು ತಿಳಿಸಲಾಗಿದೆ. ನಿಗದಿತ ಅವಧಿಯ ನಂತರ ಬರುವ ಯಾವುದೇ ಆಕ್ಷೇಪಣೆಗಳನ್ನು ಪರಿಗಣಿಸುವುದಿಲ್ಲ.

ಕ್ರ. ಸಂ.	ಅರ್ಜಿದಾರರ ಹೆಸರು	ತಾಲ್ಲೂಕು	ಹೋಬಳಿ	ಗ್ರಾಮದ ವಿವರ	ಸರ್ವೆ ನಂ.	ವಿಸ್ತೀರ್ಣ ಎ–ಗು	ಪರಿಷ್ಕೃತ ಮಹಾಯೋಜನೆ 2015ರ ಪ್ರಕಾರ ಭೂಉಪಯೋಗ	ಬದಲಾವಣೆ ಕೋರಿರುವ ಭೂ ಉಪಯೋಗ
1	ಶ್ರೀ ಜಿ. ತೀರ್ಥಕುಮಾರ್,	ದಕ್ಷಿಣ	ಕೆಂಗೇರಿ	ಮಾರ	61/5	1–16	ವ್ಯವಸಾಯ	ವಸತಿ
2	ಚಂದ್ರಶೇಖರ್ ಜಿ ಮತ್ತು			ಗೊಂಡನಹಳ್ಳಿ	61/7	1–14		
3	ಇತರರ ಪರವಾಗಿ				61/16	1–15.5		
4	ಜಿಪಿಎದಾರರಾದ KNS				61/19	1–14		
5	Propworth LLP ಇದರ				61/24	00–10		
6	ನಿರ್ದೇಶಕರಾದ				61/25	0–10		
7	ಕೆ.ಎನ್. ಸುರೇಂದ್ರ				61/26	0–10		
8					61/27	0–15		
9					61/28	0–09		
10					61/33	1–14		
11					71ರ ಪೈಕಿ	01–24		
	ಒಟ್ಟು					**09–31.5**		

ಷರಾ: ಅರ್ಜಿದಾರರು ಪ್ರಶ್ನಿತ ಜಮೀನನ್ನು ವ್ಯವಸಾಯ ವಲಯದಿಂದ ವಸತಿ ಉಪಯೋಗಕ್ಕಾಗಿ ಭೂಉಪಯೋಗ ಬದಲಾವಣೆ ಮಾಡುವುದರಿಂದ ಸದರಿ ಪ್ರದೇಶದ ಸುತ್ತಮುತ್ತಲಿನ ಪ್ರದೇಶಗಳು ವಸತಿ (ವಾಸದ) ಉದ್ದೇಶಕ್ಕೆ ಭೂ ಪರಿವರ್ತನೆಯಾಗಿ ಪ್ರಾಧಿಕಾರದಿಂದ ಅನುಮೋದಿತ ವಸತಿ ಬಡಾವಣೆಗಳು ನಿರ್ಮಾಣಗಳಾಗಿರುತ್ತವೆ. ಈ ಜಮೀನಿನಲ್ಲಿ ವಿನ್ಯಾಸ ಅಭಿವೃದ್ಧಿಪಡಿಸುವುದರಿಂದ ಬಡವರು, ಮಧ್ಯಮ ವರ್ಗದವರಿಗೆ ಯೋಗ್ಯ ಬೆಲೆಯಲ್ಲಿ ನಿವೇಶನಗಳು ಲಭ್ಯವಾಗುತ್ತವೆ. ವಿನ್ಯಾಸ ಅಭಿವೃದ್ಧಿ ಕಾಮಗಾರಿಗಳು ನಡೆಯುವಾಗ ಕೂಲಿ ಕಾರ್ಮಿಕರಿಗೆ ಉದ್ಯೋಗ ದೊರೆಯುತ್ತದೆ. ಈ ವಿನ್ಯಾಸ ಅಭಿವೃದ್ಧಿಯಿಂದ ಸುತ್ತಮುತ್ತಲಿನ ಪ್ರದೇಶ ಅಭಿವೃದ್ಧಿ ಹೊಂದುತ್ತದೆ. ಯೋಜನಾ ಬದ್ಧವಾದ ವಿನ್ಯಾಸ ರಚನೆಯಿಂದ ಉತ್ತಮ ರಸ್ತೆಗಳು, ನಾಗರೀಕ ಸೌಲಭ್ಯದ ಜಾಗಗಳು ಮತ್ತು ಉದ್ಯಾನವನಗಳು ಸಾರ್ವಜನಿಕರ ಉಪಯೋಗಕ್ಕೆ ಲಭ್ಯವಾಗುತ್ತವೆ ಎಂಬ ಸಾರ್ವಜನಿಕ ಹಿತಾಸಕ್ತಿ ಅಂಶ ಅಡಗಿದೆ ಎಂದು ತಿಳಿಸುತ್ತಾ, ಪ್ರಶ್ನಿತ ಜಮೀನುಗಳನ್ನು ‘ವ್ಯವಸಾಯ ವಲಯ’ ದಿಂದ ‘ವಸತಿ ಉಪಯೋಗಕ್ಕೆ’ ಭೂಉಪಯೋಗ ಬದಲಾವಣೆ ಮಾಡಿಕೊಳ್ಳಲು ಇಚ್ಛಿಸಿರುವುದಾಗಿ ತಿಳಿಸಿರುತ್ತಾರೆ.

BDA/PRO/CLU/156/2022-23 ಸಹಿ/– ನಗರ ಯೋಜಕ ಸದಸ್ಯರು, ಬೆಂಅಪ್ರಾ, ಬೆಂಗಳೂರು

ಸಾರ್ವಜನಿಕ ಪ್ರಕಟಣೆ

ನಮ್ಮ ಕಕ್ಷಿದಾರರು ಈ ಕೆಳಕಂಡ ಷೆಡ್ಯೂಲ್‌ನಲ್ಲಿ ಹೆಚ್ಚು ಸ್ಪಷ್ಟವಾಗಿ ವಿವರಿಸಲಾಗಿರುವ ಹಾಗೂ ಇಲ್ಲಿ ಇನ್ನುಮುಂದೆ "**ಷೆಡ್ಯೂಲ್ ಪ್ರಾಪರ್ಟಿ**" ಎನ್ನಲಾಗುವ ಬೇಗೂರು ಗ್ರಾಮ, ಸೂಲಿಬೆಲೆ ಹೋಬಳಿ, ಹೊಸಕೋಟೆ ತಾಲ್ಲೂಕು, ಬೆಂಗಳೂರು ಗ್ರಾಮಾಂತರ ಜಿಲ್ಲೆ ವಿಳಾಸದಲ್ಲಿ ಸ್ಥಿತಗೊಂಡಿರುವ 1) ಸರ್ವೆ ನಂ. 15/7 ವಿಸ್ತೀರ್ಣ ಸುಮಾರು 2.5 ಗುಂಟಾ 2) ಸರ್ವೆ ನಂ. 15/8 ವಿಸ್ತೀರ್ಣ ಸುಮಾರು 2.5 ಗುಂಟಾ ಮತ್ತು ಬೇಗೂರು ಗ್ರಾಮ, ಸೂಲಿಬೆಲೆ ಹೋಬಳಿ, ಬೆಂಗಳೂರು ಗ್ರಾಮಾಂತರ ಜಿಲ್ಲೆ ವಿಳಾಸದಲ್ಲಿ ಸ್ಥಿತಗೊಂಡಿರುವ 3) ಸರ್ವೆ ನಂ. 87/17 (ಹಿಂದಿನ ಸರ್ವೆ ನಂ. 87/5ರ ಭಾಗ) ವಿಸ್ತೀರ್ಣ ಸುಮಾರು 8 ಗುಂಟಾ 4) ಸರ್ವೆ ನಂ. 80/3ಬಿ ವಿಸ್ತೀರ್ಣ ಸುಮಾರು 8.5 ಗುಂಟಾ 5) ಸರ್ವೆ ನಂ. 83/2 ವಿಸ್ತೀರ್ಣ ಸುಮಾರು 10 ಗುಂಟಾ 6) ಸರ್ವೆ ನಂ. 93/3ಬಿ ವಿಸ್ತೀರ್ಣ ಸುಮಾರು 07.05 ಗುಂಟಾ ಮತ್ತು 7) ಸರ್ವೆ ನಂ. 93/8ಎ ವಿಸ್ತೀರ್ಣ ಸುಮಾರು 13 ಗುಂಟಾ ಕ್ಷೇತ್ರಫಲವುಳ್ಳ ಎಲ್ಲಾ ಕೃಷಿ ಜಮೀನು ಸ್ವತ್ತುಗಳನ್ನು, ಸಂಬಂಧಿತ ಸ್ವತ್ತಿನ ಎದುರು ನಮೂದಿಸಲಾಗಿರುವ ಅವುಗಳ ಮಾಲೀಕರಿಂದ (“**ಮಾಲೀಕರು**”) ಖರೀದಿಸಲು ಉತ್ಸುಕರಾಗಿರುತ್ತಾರೆ.

ಸದರಿ ಷೆಡ್ಯೂಲ್ ಪ್ರಾಪರ್ಟಿಗೆ ಸಂಬಂಧಿಸಿದಂತೆ ಅಥವಾ ಪ್ರಾಪರ್ಟಿಯ ಯಾವುದೇ ಭಾಗಕ್ಕೆ ಸಂಬಂಧಿಸಿದಂತೆ ಯಾವುದೇ ವ್ಯಕ್ತಿಗಳು ಯಾವುದೇ ರೀತಿಯ ಅಥವಾ ಸ್ವರೂಪದ ಯಾವುದೇ ಹಕ್ಕು, ಬಾಧ್ಯತೆ, ಹಿತಾಸಕ್ತಿ ಅಥವಾ ಕ್ಲೇಮ್‌ಗಳನ್ನು ಹೊಂದಿದ್ದಲ್ಲಿ ಅಥವಾ ಷೆಡ್ಯೂಲ್ ಪ್ರಾಪರ್ಟಿಯ ವಿರುದ್ಧ ಅಥವಾ ಮಾಲೀಕರ ವಿರುದ್ಧ ಯಾವುದೇ ಕ್ಲೇಮ್ ಅಥವಾ ದಾಖಲಾತಿಗಳನ್ನು ಹೊಂದಿದ್ದಲ್ಲಿ ಅಥವಾ ನಮ್ಮ ಕಕ್ಷಿದಾರರ ವ್ಯವಹಾರಕ್ಕೆ ಆಕ್ಷೇಪಣೆಗಳನ್ನು ಹೊಂದಿದ್ದಲ್ಲಿ, ಅಂತಹವರು ಕಡ್ಡಾಯವಾಗಿ ಸದರಿ ಪ್ರಕಟಣೆಯು ಪ್ರಕಟಗೊಂಡ ದಿನಾಂಕದಿಂದ **ಹದಿನೈದು ದಿನಗಳೊಳಗೆ** (15 ದಿನಗಳು) ಸದರಿ ಷೆಡ್ಯೂಲ್ ಪ್ರಾಪರ್ಟಿಗೆ ಅಥವಾ ಪ್ರಾಪರ್ಟಿಯ ಭಾಗಕ್ಕೆ ಸಂಬಂಧಿತ ತಮ್ಮ ಹಕ್ಕುಗಳನ್ನು ಸಾಬೀತುಪಡಿಸುವ ಎಲ್ಲಾ ದಾಖಲಾತಿ ಆಧಾರ ಪುರಾವೆಗಳ ಸಮೇತ ಈ ಕೆಳಗೆ ಸಹಿ ಹಾಕಿರುವವರಿಗೆ ಲಿಖಿತ ರೂಪದಲ್ಲಿ ತಿಳಿಸತಕ್ಕದ್ದು, ನಿಗದಿತ ಅವಧಿಯ ನಂತರ ನಮ್ಮ ಕಕ್ಷಿದಾರರು, ಸದರಿ ಷೆಡ್ಯೂಲ್ ಪ್ರಾಪರ್ಟಿಗೆ ಸಂಬಂಧಿಸಿದಂತೆ ಯಾವುದೇ ಸ್ವರೂಪದ ಕ್ಲೇಮ್‌ಗಳು ಇರುವುದಿಲ್ಲ ಎಂದು ಪರಿಗಣಿಸಿ ತಮ್ಮ ವಹಿವಾಟನ್ನು ಪೂರ್ಣಗೊಳಿಸಿಕೊಳ್ಳುತ್ತಾರೆ.

ಷೆಡ್ಯೂಲ್

ದಾಸರತಿಮ್ಮನಹಳ್ಳಿ ಗ್ರಾಮ, ಕಸಬಾ ಹೋಬಳಿ, ಹೊಸಕೋಟೆ ತಾಲ್ಲೂಕು, ಬೆಂಗಳೂರು ಗ್ರಾಮಾಂತರ ಜಿಲ್ಲೆ ವಿಳಾಸದಲ್ಲಿ ಸ್ಥಿತಗೊಂಡಿರುವ ಐಟಂ ನಂ. 1 ಮತ್ತು 2 ಹಾಗೂ ಬೇಗೂರು ಗ್ರಾಮ, ಸೂಲಿಬೆಲೆ ಹೋಬಳಿ ಕಸಬಾ ಹೋಬಳಿ, ಹೊಸಕೋಟೆ ತಾಲ್ಲೂಕು, ಬೆಂಗಳೂರು ಗ್ರಾಮಾಂತರ ಜಿಲ್ಲೆ ವಿಳಾಸದಲ್ಲಿ ಸ್ಥಿತಗೊಂಡಿರುವ ಐಟಂ ನಂ. 1 ರಿಂದ 7 ರವರೆಗಿನ, ಒಟ್ಟಾರೆ 1 ಎಕರೆ 12 ಗುಂಟಾ ವಿಸ್ತೀರ್ಣವುಳ್ಳ, ಎಲ್ಲಾ ಕೃಷಿ ಜಮೀನುಗಳ ಭೂಭಾಗಗಳು ಸೇರಿರುತ್ತವೆ ಮತ್ತು ಸರ್ವೆ ನಂಬರ್ ಹಾಗೂ ಚಕ್ಕುಬಂದಿ ವಿವರ ಕೆಳಗಿನಂತಿರುತ್ತದೆ:–

ಐಟಂ ನಂ.	ಸರ್ವೆ ನಂ.	ಮಾಲಿಕರ ಹೆಸರು	ವಾಸ್ತವ ಕ್ಷೇತ್ರಫಲ		ಖರಾಬ್ ವಿಸ್ತೀರ್ಣ		ಪೂರ್ವ	ಪಶ್ಚಿಮ	ಉತ್ತರ	ದಕ್ಷಿಣ
			ಎಕರೆ	ಗುಂಟೆ	ಎಕರೆ	ಗುಂಟೆ				
ದಾಸರತಿಮ್ಮನಹಳ್ಳಿ ಗ್ರಾಮ										
1.	15/7	ಮುನಿಯಪ್ಪ	0	02.5	00	00	ಸರ್ವೆ ನಂ. 15/8	ನಾಲಾ & ಸರ್ವೆ ನಂ. 89/7ಸಿ	ಸರ್ವೆ ನಂ. 15/1	ಸರ್ವೆ ನಂ. 15/4
2.	15/8	ಮುನಿಯಪ್ಪ	0	02.5	00	00	ಬಂಡಿರಸ್ತೆ & ಸರ್ವೆ ನಂ. 16/2	ಸರ್ವೆ ನಂ. 15/7	ಸರ್ವೆ ನಂ. 15/1	ಸರ್ವೆ ನಂ. 15/4
ಬೇಗೂರು ಗ್ರಾಮ										
3.	87/17 (ಹಳೆಯ 87/5)	ಬಿ ಸಿ ಕೆಂಪೇಗೌಡ & ಬಿ ಸಿ ಸುರೇಶ್	0	08	00	00	ಕಾಲುವೆ	ಸರ್ವೆ ನಂ. 87/5	ಸರ್ವೆ ನಂ. 87/10	ಸರ್ವೆ ನಂ. 87/6
4.	80/3ಬಿ	ಡಿ. ನಾರಾಯಣಸ್ವಾಮಿ	0	08.05	00	00	ಸರ್ವೆ ನಂ. 80/3ಎ	ಸರ್ವೆ ನಂ. 80/2ಬಿ	ಸರ್ವೆ ನಂ. 77/7	ಸರ್ವೆ ನಂ. 81/6
5.	83/2	ಡಿ. ನಾರಾಯಣಸ್ವಾಮಿ	0	10	00	00	ಸರ್ವೆ ನಂ. 84/2	ಸರ್ವೆ ನಂ. 83/1ಎ	ಸರ್ವೆ ನಂ. 84/1	ಸರ್ವೆ ನಂ. 84/6
6.	93/3ಬಿ	ವೆಂಕಟರಾಜು ಬಿನ್ ಲೇಟ್ ಚಿಕ್ಕಪ್ಪಯ್ಯ ನಾಗರಾಜು ಬಿನ್ ಲೇಟ್ ಚಿಕ್ಕಪ್ಪಯ್ಯ	0	07.05	00	00	ಸರ್ವೆ ನಂ. 80/1	ಸರ್ವೆ ನಂ. 93/3ಎ	ಸರ್ವೆ ನಂ. 93/11 & 93/12	ಸರ್ವೆ ನಂ. 93/5
7.	93/8ಎ	ಭಾಗ್ಯಮ್ಮ ಕೋಂ. ವೆಂಕಟರಾಜು	0	13	00	00	ಕಾಲುವೆ, ಸರ್ವೆ ನಂ. 84/3, 84/4 & 84/7	ಸರ್ವೆ ನಂ. 93/8ಬಿ	ಸರ್ವೆ ನಂ. 93/7	ಸರ್ವೆ ನಂ. 93/9
		ಒಟ್ಟು	**01**	**12**	**00**	**0.00**				

ಸಹಿ/– (ಕೆ.ಎನ್. ಗೀತಾ)
ಇಂಡಸ್‌ಲಾ
7ನೇ ಅಡ್ಡರಸ್ತೆ, ವಸಂತನಗರ, ಕನ್ನಿಂಗ್‌ಹ್ಯಾಮ್ ರಸ್ತೆ, ಬೆಂಗಳೂರು – 560001, ಫೋನ್ ನಂ.: 91–80–42423000

ಶೇ 5ರಷ್ಟು ಸೇವಾ ಶುಲ್ಕ, ಶೇ 5ರಷ್ಟು ಜಿಎಸ್‌ಟಿ: ಸಾರಿಗೆ ಇಲಾಖೆಯಿಂದ ಅಧಿಸೂಚನೆ

ಓಲಾ, ಉಬರ್: ಪ್ರಯಾಣ ದರ ಹೆಚ್ಚಳ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಆ್ಯಪ್ ಆಧಾರಿತ ಸೇವೆ ಒದಗಿಸುವ ಆಟೊರಿಕ್ಷಾ ದರ ನಿಗದಿಪಡಿಸಿರುವ ರಾಜ್ಯ ಸರ್ಕಾರ, ಪ್ರಯಾಣ ದರಗಳ ಮೇಲೆ ಸೇವಾ ಶುಲ್ಕ ಮತ್ತು ಜಿಎಸ್‌ಟಿ ಸೇರಿ ಶೇ 10ರಷ್ಟು ಹೆಚ್ಚಳ ಮಾಡಿಕೊಳ್ಳಲು ಅವಕಾಶ ನೀಡಿ ಅಧಿಸೂಚನೆ ಹೊರಡಿಸಿದೆ.

ಸಾಮಾನ್ಯ ಆಟೊರಿಕ್ಷಾಗಳಲ್ಲಿ ಕನಿಷ್ಠ ಪ್ರಯಾಣ ದರ(2 ಕಿಲೋ ಮೀಟರ್‌ಗೆ) ₹30 ಇದೆ. ಅದಕ್ಕೆ ಸೇವಾ ಶುಲ್ಕ ಶೇ 5ರಷ್ಟು ಮತ್ತು ಜಿಎಸ್‌ಟಿ ಶೇ 5ರಷ್ಟು ಸೇರಿಕೊಳ್ಳಲಿದೆ. ಅದರಂತೆ ಕನಿಷ್ಠ ದರ ₹33 ಆಗಲಿದೆ. ನಂತರದ ಪ್ರತಿ ಕಿ.ಮೀ.ಗೆ ₹15 ಜತೆಗೆ ಶೇ 10ರಷ್ಟು ಹೆಚ್ಚುವರಿ ದರ ಸೇರುತ್ತದೆ. ಉದಾಹರಣೆಗೆ ಸಾಮಾನ್ಯ ಆಟೊಗಳಲ್ಲಿ ₹45 ಪ್ರಯಾಣ ದರವಾದರೆ, ಆ್ಯಪ್ ಆಧಾರಿತ ಆಟೊಗಳಲ್ಲಿ ₹49.50 ಆಗಲಿದೆ.

ಪರವಾನಗಿಯೇ ಇಲ್ಲ

‘ಆಟೊರಿಕ್ಷಾ ಅಗ್ರಿಗೇಟರ್ ಸೇವೆ ಒದಗಿಸಲು ಚಾಲ್ತಿಯಲ್ಲಿರುವ ಪರವಾನಗಿ ಹೊಂದಿರುವ ಸಂಸ್ಥೆಗಳಿಗೆ ಮಾತ್ರ ಅನ್ವಯಿಸಲಿದೆ ಎಂದು ಅಧಿಸೂಚನೆಯಲ್ಲಿ ತಿಳಿಸಲಾಗಿದೆ. ಸದ್ಯ ಈ ಸೇವೆ ಒದಗಿಸುತ್ತಿರುವ ಯಾವುದೇ ಕಂಪನಿಯೂ ಆಟೊರಿಕ್ಷಾ ಅಗ್ರಿಗೇಟರ್ ಪರವಾನಗಿ ಪಡೆದಿಲ್ಲ. ಈ ಅಧಿಸೂಚನೆ ಯಾರಿಗೆ ಅನ್ವಯವಾಗಲಿದೆ’ ಎಂದು ಕರ್ನಾಟಕ ರಾಜ್ಯ ಟ್ರಾವೆಲ್ಸ್ ಮಾಲೀಕರ ಸಂಘದ ಅಧ್ಯಕ್ಷ ಕೆ. ರಾಧಾಕೃಷ್ಣ ಹೊಳ್ಳ ಪ್ರಶ್ನಿಸಿದ್ದಾರೆ.

‘ಆಟೊರಿಕ್ಷಾ ಸೇವೆಯನ್ನು ಸದ್ಯ ಪ್ರಾದೇಶಿಕ ಸಾರಿಗೆ ಪ್ರಾಧಿಕಾರ(ಆರ್‌ಟಿಎ) ನಿರ್ವಹಿಸುತ್ತಿದೆ. ಇ–ಕಾಮರ್ಸ್ ನಿಯಮದ ಅಡಿಯಲ್ಲಿ ನೋಂದಣಿ ಮಾಡಿಕೊಂಡರೆ ಆರ್‌ಟಿಎ ವ್ಯಾಪ್ತಿಯಿಂದ ಹೊರ ಹೋಗಬೇಕಾಗುತ್ತದೆ. ಇದೆಲ್ಲವೂ ಸಾಧ್ಯವೇ ಎಂಬುದೇ ಪ್ರಶ್ನೆ’ ಎಂದರು.



ಕಾಲಕಾಲಕ್ಕೆ ನಿಗದಿಯಾಗುವ ಆಟೊರಿಕ್ಷಾ ಪ್ರಯಾಣದ ದರ ಮೇಲೆ ಶೇ 10ರಷ್ಟನ್ನು ಮಾತ್ರ ಹೆಚ್ಚಳ ಮಾಡಿಕೊಳ್ಳಲು ಅವಕಾಶ ಇದೆ. ಮೋಟಾರು ವಾಹನಗಳ ಕಾಯ್ದೆ 1988ರ ಕಲಂ 67ರಡಿ ಹೊರಡಿಸಿರುವ ಆದೇಶದ ಪ್ರಕಾರ ಈ ಅವಕಾಶ ಮಾಡಲಾಗಿದೆ. ಅಗ್ರಿಗೇಟರ್ ಸೇವೆ ಒದಗಿಸಲು ಪರವಾನಗಿ ಪಡೆದಿರುವ ಸಂಸ್ಥೆಗಳು ಮಾತ್ರ ಈ ದರ ವಿಧಿಸಬಹುದು ಎಂದು ಆದೇಶದಲ್ಲಿ ತಿಳಿಸಿದೆ.

ಕನಿಷ್ಠ ದರವನ್ನು ₹100 ನಿಗದಿ ಮಾಡಿ ಬೇಕಾಬಿಟ್ಟಿಯಾಗಿ ದರ ಏರಿಳಿತ ಮಾಡುತ್ತಿರುವ ದೂರುಗಳ ಬಂದ ಬಳಿಕ ಇದಕ್ಕೆ ಕಡಿವಾಣ ಹಾಕಲು ಸಾರಿಗೆ ಇಲಾಖೆ ಮುಂದಾಗಿತ್ತು. ಆಗ ಅಗ್ರಿಗೇಟರ್ ಕಂಪನಿಗಳು ಹೈಕೋರ್ಟ್ ಮೊರೆಹೋಗಿದ್ದವು. ಕಂಪನಿಗಳ ಜತೆ ಚರ್ಚಿಸಿ ದರ ನಿಗದಿ ಮಾಡುವಂತೆ ಹೈಕೋರ್ಟ್ ಸೂಚನೆ ನೀಡಿತ್ತು.

ಅಗ್ರಿಗೇಟರ್ ಕಂಪನಿಗಳ ಜತೆ ಎರಡು ಬಾರಿ ನಡೆಸಿದ್ದ ಸಭೆಯಲ್ಲಿ ಒಮ್ಮತ ಮೂಡಿರಲಿಲ್ಲ. ಬೇಡಿಕೆಗೆ ತಕ್ಕಂತೆ ದರ ಪರಿಷ್ಕರಣೆ ಮಾಡಿಕೊಳ್ಳಲು ಅವಕಾಶ ನೀಡಬೇಕು ಎಂದು ಕಂಪನಿಗಳು ಪಟ್ಟುಹಿಡಿದಿದ್ದವು. ಈ ಬೇಡಿಕೆ ತಿರಸ್ಕರಿಸಿ ಶೇ 10ರಷ್ಟು ಮಾತ್ರ ದರ ಹೆಚ್ಚಿಸಿಕೊಳ್ಳಲು ಸಾರಿಗೆ ಇಲಾಖೆ ಅವಕಾಶ ನೀಡಿದೆ. ಈ ಆದೇಶವನ್ನು ಸರ್ಕಾರ ಹೈಕೋರ್ಟ್‌ಗೆ ಸಲ್ಲಿಸಲಿದೆ.

‘ಈ ದರ ಒಪ್ಪಿಗೆಯಾಗದಿದ್ದರೆ ಕಂಪನಿಗಳು ತಮ್ಮ ವಾದ ಮಂಡಿಸಲು ಸಾಧ್ಯತೆ ಇದೆ. ಹೈಕೋರ್ಟ್ ತೆಗೆದುಕೊಳ್ಳುವ ತೀರ್ಮಾನವನ್ನು ಈ ಆದೇಶ ಅವಲಂಭಿಸಿದೆ’ ಎಂದು ಆಟೊರಿಕ್ಷಾ ಚಾಲಕರ ಸಂಘದ ಪ್ರಧಾನ ಕಾರ್ಯದರ್ಶಿ ರುದ್ರಮೂರ್ತಿ ತಿಳಿಸಿದರು.

ರೆಸಿಡೆನ್ಸಿ ರಸ್ತೆ ದಟ್ಟಣೆ: ಬೀಗ ಹಾಕಿ ಪೊಲೀಸರ ಜೊತೆ ವಾಗ್ವಾದ

ಪ್ರಜಾವಾಣಿ ವಾರ್ತೆ

ಬೆಂಗಳೂರು: ರೆಸಿಡೆನ್ಸಿ ರಸ್ತೆಯಲ್ಲಿ ವಾಹನಗಳ ದಟ್ಟಣೆ ಸಮಸ್ಯೆ ಹೆಚ್ಚಾಗಿದ್ದು, ಇದನ್ನು ನಿಯಂತ್ರಿಸಲು ಹೋಗಿದ್ದ ಸಂಚಾರ ಪೊಲೀಸರ ಜೊತೆ ಬಿಷಪ್ ಕಾಟನ್ ಶಾಲೆ ಸಿಬ್ಬಂದಿ ವಾಗ್ವಾದ ನಡೆಸಿರುವ ಘಟನೆ ಶುಕ್ರವಾರ ನಡೆದಿದೆ.

ಶಾಂತಿನಗರ ಜೋಡು ರಸ್ತೆಯ ಮಿಷನ್ ರಸ್ತೆ ಹಾಗೂ ರಿಚ್ಮಂಡ್ ವೃತ್ತಕ್ಕೆ ಹೊಂದಿಕೊಂಡಿರುವ ರೆಸಿಡೆನ್ಸಿ ರಸ್ತೆಯಲ್ಲಿ ಬಿಷಪ್ ಕಾಟನ್ ಬಾಲಕರ ಹಾಗೂ ಬಾಲಕಿಯರ ಪ್ರತ್ಯೇಕ ಶಾಲೆಗಳಿವೆ. ಶಾಲೆಗಳಿಗೆ ಮಕ್ಕಳನ್ನು ಬಿಡಲು ಬರುವ ಪೋಷಕರು ರಸ್ತೆಯಲ್ಲೇ ವಾಹನಗಳನ್ನು ನಿಲ್ಲಿಸುತ್ತಿದ್ದು, ಇದರಿಂದ ವಿಪರೀತ ದಟ್ಟಣೆ ಉಂಟಾಗುತ್ತಿದೆ. ಆಂಬುಲೆನ್ಸ್ ಹಾಗೂ ಇತರೆ ವಾಹನಗಳ ಸಂಚಾರಕ್ಕೆ ತೊಂದರೆಯಾಗುತ್ತಿದೆ. ಈ ಕುರಿತು ‘ಪ್ರಜಾವಾಣಿ’ಯು ಸೆಪ್ಟೆಂಬರ್ 21ರಂದು ‘ಶಾಲಾ ವಲಯ ದಟ್ಟಣೆ ತಾಪತ್ರಯ’ ಶೀರ್ಷಿಕೆಯಡಿ ವರದಿಗಳನ್ನು ಪ್ರಕಟಿಸಿತ್ತು.

‘ಶಾಲೆಯೊಳಗೆ ದೊಡ್ಡ ಮೈದಾನವಿದೆ. ಖಾಸಗಿ ಹಾಗೂ ಪೋಷಕರ ವಾಹನಗಳನ್ನು ಮೈದಾನದೊಳಗೆ ಬಿಡಲು ಶಾಲೆ ಸಿಬ್ಬಂದಿ ಹಿಂದೇಟು ಹಾಕುತ್ತಿದ್ದಾರೆ. ಇದುವೇ ದಟ್ಟಣೆಗೆ ಪ್ರಮುಖ ಕಾರಣ’ ಎಂಬ ಆರೋಪವಿದೆ.

ಪೊಲೀಸರಿಗೇ ಬೆದರಿಕೆ: ರೆಸಿಡೆನ್ಸಿ ರಸ್ತೆಯಲ್ಲಿ ಶುಕ್ರವಾರ ಕರ್ತವ್ಯದಲ್ಲಿದ್ದ ಪೊಲೀಸರು, ‘ಮಕ್ಕಳನ್ನು ಕರೆತರುವ ವಾಹನಗಳಿಗೆ ಮೈದಾನದೊಳಗೆ ಪ್ರವೇಶ ಕಲ್ಪಿಸಿ’ ಎಂದು ಸಿಬ್ಬಂದಿಯನ್ನು ಕೋರಿದರು.

ಅಷ್ಟಕ್ಕೆ ಕೋಪಗೊಂಡ ಸಿಬ್ಬಂದಿ, ಮೈದಾನದ ಪ್ರವೇಶ ದ್ವಾರಗಳನ್ನು ದಿಢೀರ್ ಬಂದ್ ಮಾಡಿದರು. ‘ಮೈದಾನದೊಳಗೆ ವಾಹನ ಬಿಡುವುದಿಲ್ಲ. ನೀವು ಏನು ಮಾಡಿಕೊಳ್ಳುತ್ತೀರಾ ಮಾಡಿಕೊಳ್ಳಿ. ಕಾನೂನಿನ ಪ್ರಕಾರ ನಿಮಗೂ (ಪೊಲೀಸರು) ಶಾಲೆಯೊಳಗೆ ಪ್ರವೇಶವಿಲ್ಲ’ ಎಂದು ಪೊಲೀಸರನ್ನೇ ಬೆದರಿಸಿದರು. ಇನ್‌ಸ್ಪೆಕ್ಟರ್ ಸ್ಥಳಕ್ಕೆ ಬಂದರೂ ಸಿಬ್ಬಂದಿ ಕ್ಯಾರೆ ಎನ್ನಲಿಲ್ಲ.

ಸಿಬ್ಬಂದಿ ವರ್ತನೆ ಬಗ್ಗೆ ಪ್ರತಿಕ್ರಿಯೆ ಪಡೆಯಲು ಶಾಲೆ ಆಡಳಿತ ಮಂಡಳಿ ಸದಸ್ಯರು ಲಭ್ಯರಾಗಲಿಲ್ಲ.

ನೋಟಿಸ್ ಕೊಟ್ಟರೂ ಸುಧಾರಿಸಿಲ್ಲ: ‘ನಗರದ ಪ್ರಮುಖ ರಸ್ತೆಗಳಲ್ಲಿ ಒಂದಾದ ರೆಸಿಡೆನ್ಸಿ ರಸ್ತೆಯಲ್ಲಿ ವಾಹನಗಳ ಸಂಚಾರ ಹೆಚ್ಚು. ಶಾಲೆಗಳ ವರ್ತನೆಯಿಂದ ದಟ್ಟಣೆ ಸಮಸ್ಯೆ ಎದುರಾಗುತ್ತಿದೆ. ಶಾಲೆಯೊಳಗೆ ಜಾಗವಿದ್ದರೂ ಮಕ್ಕಳ ಪೋಷಕರ ವಾಹನಗಳನ್ನು ಒಳಗೆ ಬಿಡುತ್ತಿಲ್ಲ. ಈ ಸಂಬಂಧ ಹಲವು ಬಾರಿ ನೋಟಿಸ್ ನೀಡಿದರೂ ಶಾಲೆಯವರು ಸುಧಾರಿಸಿಲ್ಲ’ ಎಂದು ಪೊಲೀಸ್ ಅಧಿಕಾರಿಯೊಬ್ಬರು ಹೇಳಿದರು.

ರೆಸಿಡೆನ್ಸಿ ರಸ್ತೆಯ ಬಿಷಪ್ ಕಾಟನ್ ಶಾಲೆಯ ಪ್ರವೇಶ ದ್ವಾರವನ್ನು ಶುಕ್ರವಾರ ದಿಢೀರ್ ಬಂದ್ ಮಾಡಿದ ಸಿಬ್ಬಂದಿ, ಅಶೋಕನಗರ ಸಂಚಾರ ಪೊಲೀಸರನ್ನು ರಸ್ತೆಯಲ್ಲೇ ತಡೆದು ನಿಲ್ಲಿಸಿದ್ದರು – ಪ್ರಜಾವಾಣಿ ಚಿತ್ರ

ಗಡಿ ಆಯೋಗಕ್ಕೆ ನ್ಯಾ. ಶಿವರಾಜ ಪಾಟೀಲ ಅಧ್ಯಕ್ಷ

ಬೆಂಗಳೂರು: ಕರ್ನಾಟಕ ಗಡಿ ಮತ್ತು ನದಿಗಳ ರಕ್ಷಣಾ ಆಯೋಗದ ಅಧ್ಯಕ್ಷರಾಗಿ ಸುಪ್ರೀಂಕೋರ್ಟ್‌ನ ನಿವೃತ್ತ ನ್ಯಾಯಮೂರ್ತಿ ಶಿವರಾಜ ವಿ. ಪಾಟೀಲ ಅವರನ್ನು ನೇಮಕ ಮಾಡಲಾಗಿದೆ.



ಈ ಹಿಂದೆ ಆಯೋಗದ ಅಧ್ಯಕ್ಷರಾಗಿದ್ದ ನ್ಯಾಯಮೂರ್ತಿ ಕೆ.ಎಲ್. ಮಂಜುನಾಥ್ ಅವರು ನಿಧನರಾದ ಬಳಿಕ, ಒಂದು ವರ್ಷದಿಂದ ಈ ಹುದ್ದೆ ಖಾಲಿ ಇತ್ತು.

ಬೆಳಗಾವಿ ಗಡಿ ವಿವಾದ ಪರಿಹಾರಕ್ಕೆ ಮಾರ್ಗದರ್ಶನ ನೀಡಲು ಈ ಮೊದಲು ‘ಕರ್ನಾಟಕ–ಮಹಾರಾಷ್ಟ್ರ ಗಡಿ ವಿವಾದ ವಿಶೇಷ ಸಲಹಾ ಸಮಿತಿ’ ರಚಿಸಲಾಗಿತ್ತು. ಇದನ್ನು ವಿಸರ್ಜಿಸಿ ‘ಕರ್ನಾಟಕ ಗಡಿ ರಕ್ಷಣಾ ಆಯೋಗ’ ಎಂದು ಹೆಸರಿಸಲಾಗಿತ್ತು. ಎಚ್.ಡಿ.ಕುಮಾರಸ್ವಾಮಿ ಮುಖ್ಯಮಂತ್ರಿಯಾಗಿದ್ದಾಗ ಈ ಆಯೋಗಕ್ಕೆ ಜಲ ವ್ಯಾಜ್ಯಗಳ ವ್ಯಾಪ್ತಿಯನ್ನು ನೀಡಿ, ಗಡಿ ಮತ್ತು ನದಿಗಳ ರಕ್ಷಣಾ ಆಯೋಗ ಎಂದು ಪುನರ್ ರಚಿಸಲಾಯಿತು.

‘ಹೆಬ್ಬಾಳ ಮೇಲ್ಸೇತುವೆ ವಿಸ್ತರಣೆ ಕಾಮಗಾರಿ ಶೀಘ್ರ ಆರಂಭ’

ಪ್ರಜಾವಾಣಿ ವಾರ್ತೆ

ಬೆಂಗಳೂರು: ಹೆಬ್ಬಾಳ ಮೇಲ್ಸೇತುವೆಯ ವಿಸ್ತರಿತ ಯೋಜನೆ ಕಾಮಗಾರಿ ಶೀಘ್ರವೇ ಆರಂಭವಾಗಲಿದೆ ಎಂದು ಬಿಡಿಎ ಅಧ್ಯಕ್ಷ ಎಸ್.ಆರ್.ವಿಶ್ವನಾಥ್ ತಿಳಿಸಿದರು.

ಬಿಡಿಎ ನೌಕರರ ಸಂಘದ ವತಿಯಿಂದ ಶುಕ್ರವಾರ ಆಯೋಜಿಸಿದ್ದ ಕನ್ನಡ ರಾಜ್ಯೋತ್ಸವ ಕಾರ್ಯಕ್ರಮದಲ್ಲಿ ಅವರು ಮಾತನಾಡಿದರು.

ಅಂತರರಾಷ್ಟ್ರೀಯ ವಿಮಾನ ನಿಲ್ದಾಣದಿಂದ ಬೆಂಗಳೂರು ನಗರಕ್ಕೆ ಬರುವ ವಾಹನಗಳು ಹೆಚ್ಚಾಗಿರುವುದರಿಂದ ಹೆಬ್ಬಾಳ ಮೇಲ್ಸೇತುವೆ ಸುತ್ತಮುತ್ತ ಸಂಚಾರ ದಟ್ಟಣೆ ಹೆಚ್ಚಾಗಿ ತೊಂದರೆ ಉಂಟಾಗುತ್ತಿದೆ. ಈ ಹಿನ್ನೆಲೆಯಲ್ಲಿ ವಿಮಾನನಿಲ್ದಾಣ ಕಡೆಯಿಂದ ನಗರದ ಕಡೆಗೆ ಇರುವ ಮೇಲ್ಸೇತುವೆ ಜೊತೆಗೆ ಇನ್ನೆರಡು ಪಥಗಳನ್ನು ನಿರ್ಮಿಸಲಾಗುತ್ತದೆ ಎಂದರು.

ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಅವರೊಂದಿಗೆ ಚರ್ಚೆ ನಡೆಸಿದ್ದು, ಕೂಡಲೇ ಕಾಮಗಾರಿಯನ್ನು ಆರಂಭಿಸುವಂತೆ ಸೂಚನೆ ನೀಡಿದ್ದಾರೆ. ಹೀಗಾಗಿ ಕಾಮಗಾರಿಯನ್ನು ಸದ್ಯದಲ್ಲೇ ಆರಂಭಿಸಲಾಗುವುದು ಎಂದು ತಿಳಿಸಿದರು.

₹1 ಸಾವಿರ ಕೋಟಿ ಸಂಗ್ರಹ: ಎರಡು ವರ್ಷಗಳ ಹಿಂದೆ ಬಿಡಿಎ ಆರ್ಥಿಕ ಸಂಕಷ್ಟ ಎದುರಿಸುತ್ತಿತ್ತು. ಭೂ ಕಬಳಿಕೆದಾರರಿಂದ ಆಸ್ತಿಯನ್ನು ವಶಪಡಿಸಿಕೊಂಡು, ನಿವೇಶನಗಳನ್ನು ಹರಾಜು ಮಾಡಲಾಗುತ್ತಿದೆ. ಇದರಿಂದ ಪ್ರಸ್ತುತ ಒಂದು ಸಾವಿರ ಕೋಟಿ ರೂಪಾಯಿಗೂ ಹೆಚ್ಚು ಹಣ ಸಂಗ್ರಹವಾಗಿದೆ ಎಂದು ಹೇಳಿದರು.

ಬಿಡಿಎ ನೌಕರರು ಮತ್ತು ಅವರ ಕುಟುಂಬಗಳಿಗೆ ಅನುಕೂಲವಾಗುವಂತೆ ಸಮುದಾಯ ಭವನ ನಿರ್ಮಾಣಕ್ಕೆ ಅನುಮೋದನೆ ನೀಡಲಾಗುತ್ತದೆ ಎಂದು ಭರವಸೆ ನೀಡಿದರು.

ಮಾತೃಭಾಷೆಗೆ ಆದ್ಯತೆ ಇರಲಿ: ‘ಮಾತೃಭಾಷೆಯನ್ನು ಮಕ್ಕಳಿಗೆ ಕಲಿಸುವ ಜವಾಬ್ದಾರಿ ಎಲ್ಲಾ ಪೋಷಕರ ಮೇಲಿದೆ. ನಾವು ನಮ್ಮ ಕನ್ನಡ ಭಾಷೆಯನ್ನು ಮೊದಲು ಕಲಿತು ಸಂಪರ್ಕ ಭಾಷೆಯನ್ನಾಗಿ ಇತರೆ ಭಾಷೆಗಳನ್ನು ಕಲಿಯಲು ಅಡ್ಡಿಯಿಲ್ಲ’ ಎಂದು ರಾಜ್ಯಸಭಾ ಸದಸ್ಯ ಜಗ್ಗೇಶ್ ಹೇಳಿದರು.

ಬಿಡಿಎ ಆಯುಕ್ತ ಜಿ.ಕುಮಾರ ನಾಯಕ ಮಾತನಾಡಿ, ‘ಬಿಡಿಎದಲ್ಲಿ ಸಾರ್ವಜನಿಕರಿಗಾಗಿ ಮಾಡಬೇಕಾದ ಕೆಲಸ ಸಾಕಷ್ಟಿದೆ. ಎಲ್ಲರೂ ಒಗ್ಗಟ್ಟಿನಿಂದ ಕೈಜೋಡಿಸಿ ಕರ್ತವ್ಯ ನಿಭಾಯಿಸಬೇಕು’ ಎಂದು ಕರೆ ನೀಡಿದರು.

ಬಿಡಿಎ ನೌಕರರ ಸಂಘದ ಅಧ್ಯಕ್ಷ ಮಂಜುನಾಥ್, ಪದಾಧಿಕಾರಿಗಳಾದ ಶಿವಶಂಕರ್, ಶ್ರೀನಿವಾಸ್, ಗೋವಿಂದ ರಾಜು, ಅಧಿಕಾರಿಗಳಾದ ಧನಂಜಯ ರೆಡ್ಡಿ, ಶಾಂತರಾಜು, ಶಾಂತರಾಜಣ್ಣ, ಡಾ.ಸೌಜನ್ಯ, ನಂಜುಂಡೇಗೌಡ ಇದ್ದರು. ವಿಶ್ವವಾಣಿ ಫೌಂಡೇಷನ್ ವತಿಯಿಂದ ಬಿಡಿಎ ನೌಕರರು ಮತ್ತು ಅವರ ಕುಟುಂಬದ ಸದಸ್ಯರಿಗೆ ಆರೋಗ್ಯ ತಪಾಸಣೆ ಆಯೋಜಿಸಲಾಗಿತ್ತು.

ಬಿಡಿಎ ನೌಕರರ ಸಂಘದ ವತಿಯಿಂದ ಶುಕ್ರವಾರ ಆಯೋಜಿಸಿದ್ದ ಕನ್ನಡ ರಾಜ್ಯೋತ್ಸವ ಕಾರ್ಯಕ್ರಮವನ್ನು ಬಿಡಿಎ ಅಧ್ಯಕ್ಷ ಎಸ್‌.ಆರ್‌. ವಿಶ್ವನಾಥ್ ಉದ್ಘಾಟಿಸಿದರು. ರಾಜ್ಯಸಭೆ ಸದಸ್ಯ ಜಗ್ಗೇಶ್‌, ಬಿಡಿಎ ಆಯುಕ್ತ ಜಿ.ಕುಮಾರ ನಾಯಕ, ಸಂಘದ ಪದಾಧಿಕಾರಿಗಳು ಇದ್ದರು

ಕಾರ್ಮಿಕ ಮಂಡಳಿ ಗುತ್ತಿಗೆ ನೌಕರ ಬಂಧನ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕಟ್ಟಡ ಕಾರ್ಮಿಕರ ಮಕ್ಕಳ ವಿದ್ಯಾರ್ಥಿವೇತನ ವಂಚನೆ ಪ್ರಕರಣದಲ್ಲಿ ಕಟ್ಟಡ ಮತ್ತು ಇತರೆ ನಿರ್ಮಾಣ ಕಾರ್ಮಿಕರ ಕಲ್ಯಾಣ ಮಂಡಳಿಯ ಗುತ್ತಿಗೆ ನೌಕರ ಮುಜಾಹಿದ್ ಪಾಷಾ ಎಂಬುವವರನ್ನು ತುಮಕೂರು ಕ್ಯಾತ್ಸಂದ್ರ ಠಾಣೆ ಪೊಲೀಸರು ಬಂಧಿಸಿದ್ದಾರೆ.

ಕಾರ್ಮಿಕರ ಕಲ್ಯಾಣ ಮಂಡಳಿಯ ರಾಜ್ಯ ವಿದ್ಯಾರ್ಥಿವೇತನ ಪೋರ್ಟಲ್ (ಎಸ್‌ಎಸ್‌ಪಿ) ವಿಭಾಗದಲ್ಲಿ ಈತ ಕೆಲಸ ಮಾಡುತ್ತಿದ್ದ. ತುಮಕೂರಿನ ಎಚ್‌ಎಂಎಸ್‌ಐಟಿ ಹಾಗೂ ಇತರೆ ಕಾಲೇಜಿನಲ್ಲಿ ವ್ಯಾಸಂಗ ಮಾಡುತ್ತಿರುವ ಕಟ್ಟಡ ನಿರ್ಮಾಣ ಕಾರ್ಮಿಕರ ಮಕ್ಕಳ ಹೆಸರಿನಲ್ಲಿ ನಕಲಿ ದಾಖಲೆ ಸೃಷ್ಟಿಸಿ ವಿದ್ಯಾರ್ಥಿವೇತನ ಮಂಜೂರು ಮಾಡಿಸಿಕೊಂಡು ವಂಚಿಸಲಾಗುತ್ತಿತ್ತು. ಈ ಸಂಬಂಧ ದೂರು ದಾಖಲಾಗಿತ್ತು.

‘100ಕ್ಕೂ ಹೆಚ್ಚು ವಿದ್ಯಾರ್ಥಿಗಳ ಹೆಸರಿನಲ್ಲಿ ವಂಚಿಸಿರುವ ಬಗ್ಗೆ ಮಾಹಿತಿ ಇದೆ’ ಎಂದು ಪೊಲೀಸರು ತಿಳಿಸಿದ್ದಾರೆ.

‘ಮಕ್ಕಳ ವಿದ್ಯಾಭ್ಯಾಸಕ್ಕಾಗಿ ಮಂಡಳಿಯಿಂದ ₹ 3 ಸಾವಿರದಿಂದ ₹ 30 ಸಾವಿರ ವಿದ್ಯಾರ್ಥಿವೇತನ ನೀಡಲಿದೆ. ವಿದ್ಯಾರ್ಥಿಗಳ ಹೆಸರಿನಲ್ಲಿ ನಕಲಿ ದಾಖಲೆ ಸೃಷ್ಟಿಸಿ, ಎಸ್‌ಎಸ್‌ಪಿ ಮೂಲಕ ಅರ್ಜಿ ಸಲ್ಲಿಸಲಾಗುತ್ತಿತ್ತು. ಎಸ್‌ಎಸ್‌ಪಿ ವಿಭಾಗದಲ್ಲಿದ್ದ ಪಾಷಾ, ಪರಿಶೀಲನೆ ನಡೆಸದೇ ಅರ್ಜಿಗಳನ್ನು ವಿಲೇವಾರಿ ಮಾಡುತ್ತಿದ್ದ. ವಿದ್ಯಾರ್ಥಿಗಳ ಖಾತೆಗಳಿಗೆ ಹಣ ಜಮೆ ಆದ ಬಳಿಕ, ಅದೇ ಹಣ ಕಮಿಷನ್ ರೂಪದಲ್ಲಿ ಆರೋಪಿಗಳ ಕೈ ಸೇರುತ್ತಿತ್ತು’ ಎಂದು ತಿಳಿಸಿದ್ದಾರೆ.

‘ಏಕರೂಪ ಸಂಹಿತೆ ಜಾರಿಗೆ ತಯಾರಿ’

ಒಂದನೇ ಪುಟದಿಂದ

‘ಜನರ ಕಲ್ಯಾಣಕ್ಕಾಗಿ ಸಮಾನತೆ ತರುವುದನ್ನು ಪ್ರತಿಪಾದಿಸುವುದು ಮಾತ್ರವಲ್ಲ ಅದನ್ನು ಆಚರಣೆಗೆ ತರಲು ನಾವು ದಿಟ್ಟ ಕ್ರಮ ಕೈಗೊಳ್ಳಲಿದ್ದೇವೆ’ ಎಂದು ಹೇಳಿದರು.

ಏಕರೂಪ ನಾಗರಿಕ ಸಂಹಿತೆ ಜಾರಿಗೆ ಬದ್ಧ ಎಂದು ಕೇಂದ್ರ ಗೃಹ ಸಚಿವ ಅಮಿತ್ ಶಾ ಅವರು ಗುರುವಾರವಷ್ಟೇ ಹೇಳಿದ್ದರು. ಪ್ರಜಾಸತ್ತಾತ್ಮಕವಾದ ಎಲ್ಲ ಪ್ರಕ್ರಿಯೆಗಳನ್ನು ಪಾಲಿಸಿ, ಎಲ್ಲರ ಜೊತೆಗೂ ಚರ್ಚಿಸಿ ಇದನ್ನು ಅನುಷ್ಠಾನಕ್ಕೆ ತರಲಾಗುವುದು ಎಂದಿದ್ದರು.

ಬಿಜೆಪಿ ಆಳ್ವಿಕೆ ಇರುವ ಹಲವು ರಾಜ್ಯಗಳು ಏಕರೂಪ ನಾಗರಿಕ ಸಂಹಿತೆ ಜಾರಿ ಮಾಡುವ ಬಗ್ಗೆ ಚಿಂತನೆ ನಡೆಸಿವೆ. ಕೆಲವು ರಾಜ್ಯಗಳು ಸಂಹಿತೆ ಜಾರಿಗಾಗಿ ಸಮಿತಿಯನ್ನೂ ರಚಿಸಿವೆ. ಏಕರೂಪ ನಾಗರಿಕ ಸಂಹಿತೆ ಜಾರಿಯ ಕುರಿತು ಪರಿಶೀಲಿಸಲು ಉತ್ತರಾಖಂಡ ಸರ್ಕಾರವು ಸಮಿತಿಯೊಂದನ್ನು ರಚಿಸಿದೆ. ಸುಪ್ರೀಂ ಕೋರ್ಟ್‌ನ ನಿವೃತ್ತ ನ್ಯಾಯಮೂರ್ತಿ ರಂಜನಾ ದೇಸಾಯಿ ಅವರು ಈ ಸಮಿತಿಯ ಮುಖ್ಯಸ್ಥರಾಗಿದ್ದಾರೆ. ಏಕರೂಪ ನಾಗರಿಕ ಸಂಹಿತೆ ಜಾರಿಗೆ ಸಂಬಂಧಿಸಿ ಗುಜರಾತ್ ಸರ್ಕಾರವು ಕೂಡ ಸಮಿತಿ ರಚಿಸಿದೆ.

ಎಲ್ಲರಿಗೂ ಒಂದೇ ಕಾನೂನು

ವಿವಾಹ ಮತ್ತು ಉತ್ತರಾಧಿಕಾರಕ್ಕೆ ಸಂಬಂಧಿಸಿದಂತೆ ಎಲ್ಲಾ ಧರ್ಮಗಳಿಗೂ ಒಂದೇ ಕಾನೂನು ಅನ್ವಯ ಮಾಡುವುದೇ ಏಕರೂಪ ನಾಗರಿಕ ಸಂಹಿತೆ. ಸಂವಿಧಾನದ ನಾಲ್ಕನೇ ಭಾಗದಲ್ಲಿ ಬರುವ 44ನೇ ವಿಧಿಯಲ್ಲಿ ಇದನ್ನು ವಿವರಿಸಲಾಗಿದೆ. ದೇಶದ ಎಲ್ಲಾ ನಾಗರಿಕರಿಗೂ ಅನ್ವಯವಾಗುವಂತೆ ಒಂದೇ ಕಾನೂನನ್ನು ರಾಜ್ಯಗಳು ಜಾರಿಗೆ ತರಬೇಕು ಎಂದು ಇದರಲ್ಲಿ ಹೇಳಲಾಗಿದೆ. ಆದರೆ, ಇದು ಕಡ್ಡಾಯವಲ್ಲ. ಏಕೆಂದರೆ 44ನೇ ವಿಧಿಯನ್ನು ‘ರಾಜ್ಯ ನೀತಿ ನಿರ್ದೇಶಕ ತತ್ವ’ಗಳ ಅಡಿಯಲ್ಲಿ ಪಟ್ಟಿ ಮಾಡಲಾಗಿದೆ. ರಾಜ್ಯ ನೀತಿ ನಿರ್ದೇಶಕ ತತ್ವಗಳ ಪಾಲನೆ ಕಡ್ಡಾಯವಲ್ಲ ಎಂದು ಸಂವಿಧಾನದ 37ನೇ ವಿಧಿಯಲ್ಲಿ ಹೇಳಲಾಗಿದೆ. ಈಗ ದೇಶದಲ್ಲಿ ಹಿಂದೂ ವಿವಾಹ ಕಾಯ್ದೆ, ಉತ್ತರಾಧಿಕಾರಿ ಕಾಯ್ದೆ ಮತ್ತು ಮುಸ್ಲಿಂ ವೈಯಕ್ತಿಕ ಕಾನೂನು ಕಾಯ್ದೆ ಜಾರಿಯಲ್ಲಿದೆ. ಏಕರೂಪ ನಾಗರಿಕ ಸಂಹಿತೆ ಜಾರಿಯಾದರೆ, ಈ ಎಲ್ಲಾ ಕಾಯ್ದೆಗಳ ಬದಲಿಗೆ ಒಂದೇ ಕಾನೂನು ಎಲ್ಲರಿಗೂ ಅನ್ವಯವಾಗಲಿದೆ.

ವ್ಹೀಲಿಂಗ್ ಮಾಡಲು ದ್ವಿಚಕ್ರ ವಾಹನ ಕಳವು

ಬೆಂಗಳೂರು: ವ್ಹೀಲಿಂಗ್ ಮಾಡುವುದಕ್ಕಾಗಿ ದ್ವಿಚಕ್ರ ವಾಹನಗಳನ್ನು ಕಳ್ಳತನ ಮಾಡುತ್ತಿದ್ದ ಇಬ್ಬರು ಆರೋಪಿಗಳನ್ನು ನಂದಿನಿ ಲೇಔಟ್ ಠಾಣೆ ಪೊಲೀಸರು ಬಂಧಿಸಿದ್ದಾರೆ.

‘ನೆಲಮಂಗಲದ ಅಮೃತ್ ಗೌಡ (19) ಹಾಗೂ ಶ್ರೀನಿವಾಸ್ (23) ಬಂಧಿತರು. ಇವರಿಂದ ₹ 2 ಲಕ್ಷ ಮೌಲ್ಯದ 4 ದ್ವಿಚಕ್ರ ವಾಹನ ಜಪ್ತಿ ಮಾಡಲಾಗಿದೆ’ ಎಂದು ಪೊಲೀಸರು ಹೇಳಿದರು.

‘ಆರೋಪಿಗಳು, ವ್ಹೀಲಿಂಗ್ ಮಾಡುವ ಉದ್ದೇಶದಿಂದ ದ್ವಿಚಕ್ರ ವಾಹನ ಕದಿಯುತ್ತಿದ್ದರು. ಕೆಲ ದಿನ ವಾಹನಗಳಲ್ಲಿ ವ್ಹೀಲಿಂಗ್ ಮಾಡಿ, ನಂತರ ನಿರ್ಜನ ಪ್ರದೇಶಗಳಲ್ಲಿ ನಿಲ್ಲಿಸುತ್ತಿದ್ದರು’ ಎಂದು ತಿಳಿಸಿದರು.

ಬಸ್‌ಗಳಲ್ಲಿ ಕಳ್ಳತನ: ಇಬ್ಬರ ಬಂಧನ

ಬೆಂಗಳೂರು: ಪ್ರಯಾಣಿಕರ ಸೋಗಿನಲ್ಲಿ ಬಸ್‌ಗಳಲ್ಲಿ ಸಂಚರಿಸಿ ಕಳ್ಳತನ ಮಾಡುತ್ತಿದ್ದ ಇಬ್ಬರು ಆರೋಪಿಗಳನ್ನು ಕಲಾಸಿಪಾಳ್ಯ ಪೊಲೀಸರು ಬಂಧಿಸಿದ್ದಾರೆ.

‘ಅಬ್ದುಲ್ ರಹೀಂಖಾನ್ (27) ಹಾಗೂ ಮಣಿ (21) ಬಂಧಿತರು. ಇವರಿಂದ ₹ 1.20 ಲಕ್ಷ ಮೌಲ್ಯದ ಚಿನ್ನಾಭರಣ, ನಾಲ್ಕು ಮೊಬೈಲ್ ಹಾಗೂ ದ್ವಿಚಕ್ರ ವಾಹನ ಜಪ್ತಿ ಮಾಡಲಾಗಿದೆ’ ಎಂದು ಪೊಲೀಸರು ಹೇಳಿದರು.

‘ಬಸ್‌ಗಳಲ್ಲಿ ಸುತ್ತಾಡುತ್ತಿದ್ದ ಆರೋಪಿಗಳು, ಪ್ರಯಾಣಿಕರ ಗಮನ ಬೇರೆಡೆ ಸೆಳೆದು ಚಿನ್ನಾಭರಣ ಹಾಗೂ ಮೊಬೈಲ್ ಕದಿಯುತ್ತಿದ್ದರು. ತಂಗುದಾಣಗಳಲ್ಲಿ ಇಳಿದು ಪರಾರಿಯಾಗುತ್ತಿದ್ದರು. ಉಪ್ಪಾರಪೇಟೆ, ಕೆಂಗೇರಿ ಠಾಣೆ ವ್ಯಾಪ್ತಿಯಲ್ಲಿ ಆರೋಪಿಗಳು ಕೃತ್ಯ ಎಸಗಿರುವುದು ಗೊತ್ತಾಗಿದೆ’ ಎಂದರು.

ವಿನಯಾ ಪ್ರಸಾದ್ ಮನೆಯಲ್ಲಿ ಕಳ್ಳತನ: ಇಬ್ಬರ ಬಂಧನ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಸಿನಿಮಾ ನಟಿ ವಿನಯಾ ಪ್ರಸಾದ್ ಮನೆಯಲ್ಲಿ ಕಳ್ಳತನ ಮಾಡಿ ಪರಾರಿಯಾಗಿದ್ದ ಇಬ್ಬರು ಆರೋಪಿಗಳನ್ನು ನಂದಿನಿ ಲೇಔಟ್ ಠಾಣೆ ಪೊಲೀಸರು ಬಂಧಿಸಿದ್ದು, 5 ಕಳ್ಳತನ ಪ್ರಕರಣಗಳನ್ನು ಭೇದಿಸಿದ್ದಾರೆ.

‘ಹಾಸನ ಜಿಲ್ಲೆಯ ಚನ್ನರಾಯಪಟ್ಟಣದ ಅಯ್ಯಪ್ಪ ಅಲಿಯಾಸ್ ಮುರುಗೇಶ್ (36) ಹಾಗೂ ರವಿ (26) ಬಂಧಿತರು. ಇವರಿಬ್ಬರು ಠಾಣೆ ವ್ಯಾಪ್ತಿಯ 5 ಕಡೆಗಳಲ್ಲಿ ಕಳ್ಳತನ ಎಸಗಿರುವುದು ತನಿಖೆಯಿಂದ ಗೊತ್ತಾಗಿದೆ. ಆರೋಪಿಗಳಿಂದ ₹ 13.53 ಲಕ್ಷ ಮೌಲ್ಯದ 261 ಗ್ರಾಂ ಚಿನ್ನಾಭರಣ ಹಾಗೂ 500 ಗ್ರಾಂ ಬೆಳ್ಳಿ ಸಾಮಗ್ರಿ ಜಪ್ತಿ ಮಾಡಲಾಗಿದೆ’ ಎಂದು ಪೊಲೀಸರು ಹೇಳಿದರು.

‘ನಂದಿನಿ ಲೇಔಟ್ 4ನೇ ಹಂತದ ರೈಲ್ವೆ ಮೆನ್ಸ್ ಕಾಲೊನಿಯಲ್ಲಿ ಪತಿ ಜೊತೆ ವಿನಯಾ ಪ್ರಸಾದ್ ವಾಸವಿದ್ದಾರೆ. ಕುಟುಂಬದವರೆಲ್ಲ ಅ. 22ರಂದು ಉಡುಪಿಗೆ ಹೋಗಿದ್ದರು. ಅ. 26ರಂದು ಸಂಜೆ ಮನೆಗೆ ವಾಪಸ್ ಬಂದು ನೋಡಿದಾಗ, ವಸ್ತುಗಳು ಚೆಲ್ಲಾಪಿಲ್ಲಿ ಆಗಿ ಬಿದ್ದಿದ್ದವು. ಪರಿಶೀಲಿಸಿದಾಗ ₹ 7 ಸಾವಿರ ನಗದು ಕಳ್ಳತನವಾಗಿದ್ದು ಗೊತ್ತಾಗಿತ್ತು. ಠಾಣೆಗೆ ದೂರು ನೀಡಿದ್ದರು’ ಎಂದರು.

‘ಪ್ರಕರಣದ ತನಿಖೆ ಕೈಗೊಂಡಾಗ ಇಬ್ಬರೂ ಆರೋಪಿಗಳು ಸಿಕ್ಕಿಬಿದ್ದರು. ವಿನಯಾ ಪ್ರಸಾದ್ ಮನೆಯಲ್ಲಿ ಯಾರೂ ಇಲ್ಲದ್ದನ್ನು ಗಮನಿಸಿದ್ದ ಆರೋಪಿಗಳು, ಬಾಗಿಲು ಮೀಟಿ ಒಳನುಗ್ಗಿ ಕಳ್ಳತನ ಮಾಡಿದ್ದರು. ಆದರೆ, ಅವರಿಗೆ ₹ 7 ಸಾವಿರ ಮಾತ್ರ ಸಿಕ್ಕಿತ್ತು’ ಎಂದು ಹೇಳಿದರು.

26 ಪ್ರಕರಣಗಳಲ್ಲಿ ಆರೋಪಿಗಳು: ‘ಬಂಧಿತ ಆರೋಪಿಗಳು, ಅಪರಾಧ ಹಿನ್ನೆಲೆಯುಳ್ಳವರು. ಆರೋಪಿ ಅಯ್ಯಪ್ಪ ವಿರುದ್ಧ 17 ಪ್ರಕರಣ ಹಾಗೂ ರವಿ ವಿರುದ್ಧ 9 ಪ್ರಕರಣಗಳು ವಿವಿಧ ಠಾಣೆಗಳಲ್ಲಿ ದಾಖಲಾಗಿವೆ’ ಎಂದು ಪೊಲೀಸರು ತಿಳಿಸಿದರು.

‘ಚನ್ನರಾಯಪಟ್ಟಣದಿಂದ ಆಗಾಗ ನಗರಕ್ಕೆ ಬರುತ್ತಿದ್ದ ಆರೋಪಿಗಳು, ಬೀಗ ಹಾಕಿರುತ್ತಿದ್ದ ಮನೆಗಳನ್ನು ಗುರುತಿಸಿ ಕಳ್ಳತನ ಮಾಡಿಕೊಂಡು ಪರಾರಿಯಾಗುತ್ತಿದ್ದರು. ಕದ್ದ ವಸ್ತುಗಳನ್ನು ಮಾರಾಟ ಮಾಡಿ, ಬಂದ ಹಣವನ್ನು ಹಂಚಿಕೊಳ್ಳುತ್ತಿದ್ದರು’ ಎಂದರು.

ಬಂಧಿತ ಆರೋಪಿಗಳಿಂದ ಜಪ್ತಿ ಮಾಡಿರುವ ಚಿನ್ನಾಭರಣ ಹಾಗೂ ಬೆಳ್ಳಿ ಸಾಮಗ್ರಿ

ಅಪರಾಧ ಸುದ್ದಿ

ಓಎಲ್‌ಎಕ್ಸ್ ಜಾಲತಾಣದ ಮೂಲಕ ಪರಿಚಯ

ಟೆಸ್ಟ್ ಡ್ರೈವ್ ನೆಪದಲ್ಲಿ ಕಳ್ಳತನ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಓಎಲ್‌ಎಕ್ಸ್ ಜಾಲತಾಣದಲ್ಲಿ ಜಾಹೀರಾತು ನೀಡುತ್ತಿದ್ದ ಮಾಲೀಕರನ್ನು ಪರಿಚಯಿಸಿಕೊಂಡು, ಟೆಸ್ಟ್ ಡ್ರೈವ್ ನೆಪದಲ್ಲಿ ಅವರ ವಾಹನಗಳನ್ನು ಕಳ್ಳತನ ಮಾಡುತ್ತಿದ್ದ ಇಬ್ಬರು ಆರೋಪಿಗಳನ್ನು ಯಲಹಂಕ ಪೊಲೀಸರು ಬಂಧಿಸಿದ್ದಾರೆ.

‘ಡಿ.ಜೆ.ಹಳ್ಳಿಯ ಯಾಸೀನ್ ಬೇಗ್ (22) ಹಾಗೂ ಗೋವಿಂದಪುರದ ಇಮ್ರಾನ್ ಖಾನ್ (24) ಬಂಧಿತರು. ಇವರಿಬ್ಬರೂ ಹಲವು ವರ್ಷಗಳಿಂದ ಕೃತ್ಯ ಎಸಗುತ್ತಿದ್ದರು. ಆರೋಪಿಗಳಿಂದ ₹ 15 ಲಕ್ಷ ಮೌಲ್ಯದ 19 ದ್ವಿಚಕ್ರ ವಾಹನ ಜಪ್ತಿ ಮಾಡಲಾಗಿದೆ’ ಎಂದು ಪೊಲೀಸರು ಹೇಳಿದರು.

‘ದೂರುದಾರ ಮಹಮ್ಮದ್ ನಸೀಫ್ ಎಂಬುವವರು ತಮ್ಮ ದ್ವಿಚಕ್ರ ವಾಹನ ಮಾರಲು ತೀರ್ಮಾನಿಸಿ, ಓಎಲ್‌ಎಕ್ಸ್‌ನಲ್ಲಿ ಜಾಹೀರಾತು ಪೋಸ್ಟ್ ಮಾಡಿದ್ದರು. ಅದನ್ನು ನೋಡಿದ್ದ ಆರೋಪಿಗಳು, ನಸೀಫ್ ಅವರನ್ನು ಸಂಪರ್ಕಿಸಿದ್ದರು.’

‘ನ. 13ರಂದು ದೂರುದಾರರನ್ನು ಭೇಟಿಯಾಗಿದ್ದ ಆರೋಪಿಗಳು, ಟೆಸ್ಟ್ ಡ್ರೈವ್ ಮಾಡುವುದಾಗಿ ಹೇಳಿ ದ್ವಿಚಕ್ರ ವಾಹನದ ಸಮೇತ ಪರಾರಿಯಾಗಿದ್ದರು. ಕೃತ್ಯದ ಬಗ್ಗೆ ನಸೀಫ್ ನೀಡಿದ್ದ ದೂರು ಆಧರಿಸಿ ತನಿಖೆ ಕೈಗೊಂಡಾಗ ಆರೋಪಿಗಳು ಸಿಕ್ಕಿಬಿದ್ದರು’ ಎಂದೂ ತಿಳಿಸಿದರು.

‘ಬಾಣಸವಾಡಿ, ಜೀವನಬಿಮಾನಗರ, ಯಶವಂತಪುರ, ಮಹದೇವಪುರ, ಕೊತ್ತನೂರು, ಇಂದಿರಾನಗರ, ಗೋವಿಂದಪುರ, ವಿ.ವಿ.ಪುರ, ಎಚ್‌ಎಸ್‌ಆರ್ ಲೇಔಟ್, ದೊಡ್ಡಬಳ್ಳಾಪುರ, ನಂದಿಗಿರಿ ಠಾಣೆ ವ್ಯಾಪ್ತಿಯಲ್ಲೂ ಆರೋಪಿಗಳು ದ್ವಿಚಕ್ರವಾಹನಗಳನ್ನು ಕದ್ದಿರುವುದು ತನಿಖೆಯಿಂದ ಗೊತ್ತಾಗಿದೆ’ ಎಂದು ಹೇಳಿದರು.

ಆ್ಯಪ್ ಆಧಾರಿತ ವಾಹನಗಳ ಕಳ್ಳತನ: ‘ಮೊಬೈಲ್ ಆ್ಯಪ್ ಮೂಲಕ ದ್ವಿಚಕ್ರ ವಾಹನ ಬಾಡಿಗೆ ಪಡೆಯುತ್ತಿದ್ದ ಆರೋಪಿಗಳು, ಅವುಗಳನ್ನೂ ಕದ್ದೊಯ್ಯುತ್ತಿದ್ದರು’ ಎಂದು ಪೊಲೀಸರು ತಿಳಿಸಿದರು.

‘ಕದ್ದ ವಾಹನಗಳ ನೋಂದಣಿ ಫಲಕ ಬದಲಾಯಿಸಿ ಮಾರುತ್ತಿದ್ದರು. ಕೆಲ ವಾಹನಗಳ ಬಿಡಿಭಾಗಗಳನ್ನಷ್ಟೇ ಮಾರಾಟ ಮಾಡುತ್ತಿದ್ದರು’ ಎಂ ದರು.

ಬಂಧಿತ ಆರೋಪಿಗಳಿಂದ ಜಪ್ತಿ ಮಾಡಿರುವ ದ್ವಿಚಕ್ರ ವಾಹನಗಳು

ಮನೆಗಳಲ್ಲಿ ಕಳ್ಳತನ: ಆರೋಪಿ ಬಂಧನ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಮನೆಗಳಲ್ಲಿ ಕಳ್ಳತನ ಮಾಡುತ್ತಿದ್ದ ಆರೋಪಿ ಮಂಜುನಾಥ್ ಅಲಿಯಾಸ್ ಮಂಜನನ್ನು (40) ಮಾಗಡಿ ರಸ್ತೆ ಪೊಲೀಸರು ಬಂಧಿಸಿದ್ದಾರೆ.

‘ರಾಜಾಜಿನಗರ ಪ್ರಕಾಶನಗರದ ಮಂಜುನಾಥ್ ಅಪರಾಧ ಹಿನ್ನೆಲೆಯುಳ್ಳವ. ಈತನಿಂದ ₹ 6.20 ಲಕ್ಷ ಮೌಲ್ಯದ ಚಿನ್ನಾಭರಣ, ಐಫೋನ್ ಹಾಗೂ ಗಡಿಯಾರ ಜಪ್ತಿ ಮಾಡಲಾಗಿದೆ’ ಎಂದು ಪೊಲೀಸರು ಹೇಳಿದರು.

‘ನಂದಿನಿ ಲೇಔಟ್, ಮಹಾಲಕ್ಷ್ಮಿ ಲೇಔಟ್, ಆಡುಗೋಡಿ, ಕಲಾಸಿಪಾಳ್ಯ, ಚಾಮರಾಜಪೇಟೆ, ಶ್ರೀರಾಮಪುರ, ಬಾಣಸವಾಡಿ, ಜೆ.ಪಿ.ನಗರ, ಕೊಡಿಗೇಹಳ್ಳಿ, ಹುಳಿಮಾವು ಹಾಗೂ ಯಶವಂತಪುರ ಠಾಣೆ ವ್ಯಾಪ್ತಿಯ ಕೆಲ ಮನೆಗಳಲ್ಲೂ ಆರೋಪಿ ಕಳ್ಳತನ ಮಾಡಿದ್ದ’ ಎಂದು ಪೊಲೀಸರು ತಿಳಿಸಿದರು.

ವಾತಾವರಣದಲ್ಲಿ ತೇವಾಂಶ ಹೆಚ್ಚಳ ● ನಗರದ ವಿವಿಧೆಡೆ 100ರ ಗಡಿ ದಾಟಿದ ಎಕ್ಯುಐ

ನಗರದ ಗಾಳಿ ಗುಣಮಟ್ಟ ಕುಸಿತ

● ವರುಣ ಹೆಗಡೆ

ಬೆಂಗಳೂರು: ಹವಾಮಾನ ವೈಪರೀತ್ಯ ಹಾಗೂ ವಾತಾವರಣದಲ್ಲಿ ತೇವಾಂಶ ಹೆಚ್ಚಳದಿಂದ ದೂಳಿನ ಕಣಗಳು ತಳಮಟ್ಟದಲ್ಲಿಯೇ ಉಳಿಯುತ್ತಿವೆ. ಇದರಿಂದಾಗಿ ಗಾಳಿಯ ಗುಣಮಟ್ಟದ ಸೂಚ್ಯಂಕ (ಎಕ್ಯುಐ) ತಿಂಗಳಿನಿಂದ ಏರುಗತಿ ಪಡೆದಿದೆ. ನಗರದ ವಿವಿಧೆಡೆ ಎಕ್ಯುಐ 100ರ ಗಡಿ ದಾಟಿದೆ.

ದೇಶದ ರಾಜಧಾನಿ ನವದೆಹಲಿಯಲ್ಲಿ ವಾಯುಮಾಲಿನ್ಯ ತೀವ್ರವಾಗಿದ್ದು, ಅಲ್ಲಿ ಎಕ್ಯುಐ 300ರ ಗಡಿ ದಾಟಿದೆ. ಕೆಲವೆಡೆ ಕಳಪೆ ಹಂತಕ್ಕೆ ತಲುಪಿದರೆ, ಇನ್ನು ಕೆಲವೆಡೆ ಪರಿಸ್ಥಿತಿ ಇನ್ನಷ್ಟು ಕೆಟ್ಟ ಸ್ಥಿತಿಗೆ ತಲುಪಿದೆ. ಇಲ್ಲಿಯೂ ತಾಪಮಾನ ಇಳಿಕೆಯಿಂದಾಗಿ ಗಾಳಿಯ ಮುಟ್ಟವು ಉತ್ತಮ ಹಂತದಿಂದ ಸಮಾಧಾನಕಾರ ಹಾಗೂ ಮಧ್ಯಮ ಹಂತ ತಲುಪಿದೆ.

ವಾರದಿಂದ ತಾಪಮಾನದಲ್ಲಿ ಏರಿಳಿತವಾಗುತ್ತಿದೆ. ಗರಿಷ್ಠ ತಾಪಮಾನ 28 ಡಿಗ್ರಿ ಸೆಲ್ಸಿಯಸ್ ಇದ್ದರೆ, ಕನಿಷ್ಠ ತಾಪಮಾನ 14 ಡಿಗ್ರಿ ಸೆಲ್ಸಿಯಸ್‌ವರೆಗೂ ಇಳಿಕೆಯಾಗುತ್ತಿದೆ. ಇದರಿಂದಾಗಿ ದೂಳಿನ ಕಣಗಳನ್ನು ಗಾಳಿ ಹಿಡಿದಿಟ್ಟುಕೊಳ್ಳುತ್ತಿದೆ. ಗಾಳಿಯ ಗುಣಮಟ್ಟದ ಸೂಚ್ಯಂಕದಲ್ಲಿ ವ್ಯತ್ಯಾಸವಾಗುತ್ತಿದೆ. ಬೆಳಿಗ್ಗೆ ಹಾಗೂ ಸಂಜೆಯ ಅವಧಿಯಲ್ಲಿ ವಾತಾವರಣ ಹದಗೆಡುತ್ತಿದೆ. ಗಾಳಿಯಲ್ಲಿನ ದೂಳಿನ ಕಣಗಳು ಉಸಿರಾಟದ ತೊಂದರೆಯಂತಹ ಅನಾರೋಗ್ಯ ಸಮಸ್ಯೆಗೂ ಕಾರಣವಾಗುತ್ತಿದೆ.

ನಾಯಂಡಹಳ್ಳಿ ಮೇಲ್ಸೇತುವೆ ಬಳಿ ಹೊರ ವರ್ತುಲ ರಸ್ತೆಯಲ್ಲಿ ಮಂಜು ಹಾಗೂ ಹೊಗೆ ಆವರಿಸಿರುವುದು – ಪ್ರಜಾವಾಣಿ ಚಿತ್ರ

ಪ್ರಜಾವಾಣಿ ವಿಶೇಷ

ವಾಹನ ಸಂಚಾರವೂ ಹೆಚ್ಚಳ: ಕೋವಿಡ್ ಕಾಣಿಸಿಕೊಂಡ ಬಳಿಕ ಬಾಗಿಲು ಮುಚ್ಚಿ, ಮನೆಯಿಂದಲೇ ಕಾರ್ಯನಿರ್ವಹಣೆಗೆ ಅವಕಾಶ ನೀಡಿದ್ದ ಐಟಿ-ಬಿಟಿ ಕಂಪನಿಗಳು, ಈಗ ವಾರದಲ್ಲಿ ಕೆಲವು ದಿನ ಕಚೇರಿಗೆ ಬರಲು ಸಿಬ್ಬಂದಿಗೆ ಸೂಚಿಸಿವೆ. ಇದರಿಂದಾಗಿ ವಾಹನಗಳ ಸಂಚಾರವೂ ಹೆಚ್ಚಳವಾಗಿದೆ. ತುಮಕೂರು ರಸ್ತೆ, ಮೈಸೂರು ರಸ್ತೆ ಸೇರಿ ಕೆಲವೆಡೆ ವಾಹನ ದಟ್ಟಣೆ ಉಂಟಾಗುತ್ತಿದೆ. ಇದರಿಂದಾಗಿಯೂ ವಾತಾವರಣದಲ್ಲಿನ ಮಲಿನಕಾರಕ ಕಣಗಳು ಹೆಚ್ಚಳವಾಗುತ್ತಿವೆ.

ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿ (ಕೆಎಸ್‌ಪಿಸಿಬಿ) ಪ್ರಕಾರ ಬಿಟಿಎಂ ಲೇಔಟ್, ಜಯನಗರ, ಸಿಲ್ಕ್ ಬೋರ್ಡ್, ಬಾಪೂಜಿ ನಗರ ಹಾಗೂ ಸುತ್ತಮುತ್ತಲಿನ ಪ್ರದೇಶ ಕೆಲವು ಅವಧಿಯಲ್ಲಿ ಗಾಳಿಯ ಗುಣಮಟ್ಟದ ಸೂಚ್ಯಂಕ ನೂರರ ಗಡಿ ದಾಟುತ್ತಿದೆ. ಈ ಪ್ರಮಾಣ ಕಳೆದ ತಿಂಗಳು 100ಕ್ಕಿಂತ ಕಡಿಮೆಯಿತ್ತು. ಈ ತಿಂಗಳು ಕೆಲವು ದಿನ ಮಾಲಿನ್ಯಕಾರಕ ಕಣಗಳು (ಪಿಎಂ)-10 (ಸೂಕ್ಷ್ಮ) ಹಾಗೂ ಪಿಎಂ-2.5 (ಅತಿ ಸೂಕ್ಷ್ಮ) ದೂಳಿನ ಕಣಗಳು ಕಾಣಿಸಿಕೊಳ್ಳುತ್ತಿವೆ.

'ಗಾಳಿಯ ಗುಣಮಟ್ಟ ಹದಗೆಟ್ಟಲ್ಲಿ ಉಸಿರಾಟದ ಸಮಸ್ಯೆ, ತ್ವಚೆಯ ಅಲರ್ಜಿ ಸೇರಿ ವಿವಿಧ ಅನಾರೋಗ್ಯ ಸಮಸ್ಯೆ ಕಾಣಿಸಿಕೊಳ್ಳಲಿವೆ. ಆದ್ದರಿಂದ ಅನಗತ್ಯವಾಗಿ ಹೊರಗಡೆ ಓಡಾಡಬಾರದು' ಎಂದು ಕೆ.ಸಿ. ಜನರಲ್ ಸಾರ್ವಜನಿಕ ಆಸ್ಪತ್ರೆ ವೈದ್ಯಕೀಯ ಅಧೀಕ್ಷಕ ಡಾ. ರಾಧಾಕೃಷ್ಣ ಅವರು ತಿಳಿಸಿದರು.

'ತಳಮಟ್ಟದಲ್ಲೇ ತೇಲಾಡುವ ಕಣಗಳು'

'ಚಳಿಗಾಲದಲ್ಲಿ ತಾಪಮಾನ ಕಡಿಮೆಯಾಗಿ, ತೇವಾಂಶ ಹೆಚ್ಚುವುದರಿಂದ ದೂಳಿನ ಕಣಗಳು ಆಕಾಶಕ್ಕೆ ಹೋಗದೆ, ತಳಮಟ್ಟದಲ್ಲೇ ಗಾಳಿಯಲ್ಲಿ ತೇಲಾಡುತ್ತಿರುತ್ತವೆ. ಜೋರಾದ ಗಾಳಿ ಬೀಸಿದಾಗ ಈ ದೂಳಿನ ಕಣಗಳು ಹರಡಿ, ಹೆಚ್ಚು ವಾಯುಮಾಲಿನ್ಯ ಉಂಟಾಗಲು ಕಾರಣವಾಗುತ್ತವೆ. ಬೇಸಿಗೆಯಲ್ಲಿ ದೂಳಿನ ಕಣಗಳು ಸುಮಾರು 1 ಕಿ.ಮೀ. ಗಿಂತ ಹೆಚ್ಚು ಮೇಲಕ್ಕೆ ಹೋಗುತ್ತವೆ. ಚಳಿಗಾಲದಲ್ಲಿ ಇವು ಅಷ್ಟು ಎತ್ತರ ಹೋಗುವುದಿಲ್ಲ' ಎಂದು ಕೆಎಸ್‌ಪಿಸಿಬಿ ಅಧಿಕಾರಿಯೊಬ್ಬರು ತಿಳಿಸಿದರು.

'ಗಾಳಿಯ ಗುಣಮಟ್ಟದ ಸೂಚ್ಯಂಕವು 50ರ ಒಳಗಡೆಯಿದ್ದಲ್ಲಿ ಆರೋಗ್ಯದ ಮೇಲೆ ನಕಾರಾತ್ಮಕ ಪರಿಣಾಮಗಳು ಕಾಣಿಸಿಕೊಳ್ಳುವುದಿಲ್ಲ. ಎಕ್ಯುಐ 51ರಿಂದ 100ರ ಒಳಗಡೆ ಇದ್ದಲ್ಲಿ ಉಸಿರಾಟದ ಸಮಸ್ಯೆಗಳು ಕಾಣಿಸಿಕೊಳ್ಳುವ ಸಾಧ್ಯತೆ ಇರುತ್ತದೆ. 101ರಿಂದ 200ರ ಗಡಿಯ ನಡುವೆ ಇದ್ದಲ್ಲಿ ಶ್ವಾಸಕೋಶ, ಹೃದಯ ಕಾಯಿಲೆಗಳು ಕೂಡ ಬರುವ ಸಾಧ್ಯತೆ ಇರುತ್ತದೆ' ಎಂದು ಹೇಳಿದರು.

ಗಾಳಿಯ ಗುಣಮಟ್ಟದ ಸೂಚ್ಯಂಕ (ಎಕ್ಯುಐ)

00-50	ಉತ್ತಮ
51-100	ಸಮಾಧಾನಕರ
101-200	ಮಧ್ಯಮ
201-300	ಕಳಪೆ
301-400	ತುಂಬಾ ಕಳಪೆ
401 ಮೇಲ್ಪಟ್ಟು	ತೀವ್ರ

ನಗರದಲ್ಲಿನ ಗಾಳಿಯ ಗುಣಮಟ್ಟದ ಸೂಚ್ಯಂಕ

ಮಾಪನಾ ಕೇಂದ್ರವಿರುವ ಪ್ರದೇಶ	ಎಕ್ಯುಐ
ನಗರದ ರೈಲು ನಿಲ್ದಾಣ	95
ಸಿಲ್ಕ್ ಬೋರ್ಡ್	130
ಜಯನಗರ	101
ಹೊಂಬೇಗೌಡನಗರ	90
ಹೆಬ್ಬಾಳ	91
ಬಾಪೂಜಿ ನಗರ	194
ಬಿಟಿಎಂ ಬಡಾವಣೆ	141

ಸಂಕ್ಷಿಪ್ತ ಸುದ್ದಿ

ರವಿ ಹುಟ್ಟುಹಬ್ಬ: ನಾಳೆ ವಿವಿಧ ಕಾರ್ಯಕ್ರಮ

ಯಲಹಂಕ: ಬ್ಯಾಟರಾಯನಪುರ ವಿಧಾನಸಭಾ ಕ್ಷೇತ್ರದ ಬಿಜೆಪಿ ಮುಖಂಡ ಎ.ರವಿ ಅವರ ಹುಟ್ಟುಹಬ್ಬದ ಅಂಗವಾಗಿ ಎ.ರವಿ ಅಭಿಮಾನಿಗಳ ಬಳಗದ ವತಿಯಿಂದ ವಿವಿಧ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲಾಗಿದೆ ಎಂದು ಕ್ಷೇತ್ರದ ಬಿಜೆಪಿ ಮಾಜಿ ಅಧ್ಯಕ್ಷ ಪಿ.ಕೆ.ರಾಜಗೋಪಾಲ್ ತಿಳಿಸಿದರು.

ಪತ್ರಿಕಾಗೋಷ್ಠಿಯಲ್ಲಿ ಈ ಕುರಿತು ಮಾಹಿತಿನೀಡಿದ ಅವರು, 'ನ. 27ರಂದು (ಭಾನುವಾರ) ಬೆಳಗ್ಗೆ 10 ಗಂಟೆಗೆ ಅಂತರರಾಷ್ಟ್ರೀಯ ವಿಮಾನ ನಿಲ್ದಾಣ ಮುಖ್ಯರಸ್ತೆ, ಹುಣಸಮಾರನಹಳ್ಳಿಯ ಸರ್ಕಾರಿ ಪ್ರಾಥಮಿಕ ಶಾಲೆಯ ಸಮೀಪದ ಮೈದಾನದಲ್ಲಿ ನಡೆಯುವ ಕಾರ್ಯಕ್ರಮಲ್ಲಿ ಐದು ಸಾವಿರ ಮಹಿಳೆಯರಿಗೆ ಬಾಗಿನ ವಿತರಣೆ, ಎರಡು ಸಾವಿರ ಫಲಾನುಭವಿಗಳಿಗೆ ಆಯುಷ್ಮಾನ್ ಭಾರತ್ ಆರೋಗ್ಯ ಕಾರ್ಡ್, ಇ-ಶ್ರಮ್, ಉಜ್ವಲ ಯೋಜನೆ ಮತ್ತು ಕಾರ್ಮಿಕ ಕಾರ್ಡ್ ಸೇರಿ ವಿವಿಧ ಸೌಲಭ್ಯಗಳನ್ನು ವಿತರಿಸಲಾಗುವುದು ಎಂದರು.

ಸಮಾರಂಭದಲ್ಲಿ ಬೇಲಿಮಠದ ಶಿವರುದ್ರ ಸ್ವಾಮೀಜಿ, ವಿಶ್ವ ಒಕ್ಕಲಿಗರ ಮಹಾಸಂಸ್ಥಾನ ಮಠದ ಚಂದ್ರಶೇಖರನಾಥ ಸ್ವಾಮೀಜಿ, ಸಚಿವರಾದ ಆರ್.ಅಶೋಕ, ಮುನಿರತ್ನ, ಗೋಪಾಲಯ್ಯ, ಬೈರತಿ ಬಸವರಾಜ್, ಡಾ.ಕೆ.ಸುಧಾಕರ್, ಶಾಸಕ ಎಸ್.ಆರ್.ವಿಶ್ವನಾಥ್ ಸೇರಿ ಹಲವು ಗಣ್ಯರು ಭಾಗವಹಿಸಲಿದ್ದಾರೆ. ಕಾರ್ಯಕ್ರಮಕ್ಕೆ ಸುಮಾರು 20 ಸಾವಿರ ಜನರು ಆಗಮಿಸುವ ನಿರೀಕ್ಷೆಯಿದೆ ಎಂದು ಮಾಹಿತಿ ನೀಡಿದರು.

ಬಿಜೆಪಿ ಮುಖಂಡರಾದ ಅಶ್ವಥ ನಾರಾಯಣಗೌಡ, ಟಿ.ಪಿ.ಪ್ರಕಾಶ್, ಮುನಿಹನುಮಯ್ಯ, ಬಿ.ಆರ್. ಭುಜೇಂದ್ರ, ಎಂ.ರಾಮಚಂದ್ರ ಅವರೂ ಉಪಸ್ಥಿತರಿದ್ದರು.

ಗಿರಿಜಾ, ಸಮತಾಗೆ ಕವಿ ಪತ್ನಿ ಪುರಸ್ಕಾರ

ಗಿರಿಜಾ ಲಕ್ಷ್ಮಣರಾವ್

ಸಮತಾ ಪಾತ್ರೋಟ

ಬೆಂಗಳೂರು: ಮಂಡ್ಯದ ಕೆ.ಎಸ್. ನರಸಿಂಹಸ್ವಾಮಿ ಟ್ರಸ್ಟ್ ನೀಡುವ 'ನಿನ್ನೊಲುಮೆಯಿಂದಲೆ' ಕವಿ ಪತ್ನಿ ಪುರಸ್ಕಾರಕ್ಕೆ ಗಿರಿಜಾ ಲಕ್ಷ್ಮಣರಾವ್ ಹಾಗೂ ಸಮತಾ ಪಾತ್ರೋಟ ಆಯ್ಕೆಯಾಗಿದ್ದಾರೆ.

ಕಾವ್ಯ ನಿರ್ವಾಣಕ್ಕೆ ಬಾಳಿನುದ್ದಕ್ಕೂ ಸಹಕರಿಸಿದ ಕವಿ ಪತ್ನಿಗೆ ಈ ಪುರಸ್ಕಾರ ನೀಡಲಾಗುತ್ತಿದೆ.

ಗಿರಿಜಾ ಅವರು ಕವಿ ಬಿ.ಆರ್. ಲಕ್ಷ್ಮಣರಾವ್, ಸಮತಾ ಅವರು ಕವಿ ಸತ್ಯಾನಂದ ಪಾತ್ರೋಟ ಅವರ ಪತ್ನಿಯಾಗಿದ್ದಾರೆ.

ಡಿ.10ರಂದು ಸಂಜೆ 4 ಗಂಟೆಗೆ ಬೆಂಗಳೂರಿನ ಗಾಂಧಿನಗರದಲ್ಲಿರುವ ಸಿಎಂಎಸ್ ಬಿಸಿನೆಸ್ ಸ್ಕೂಲ್‌ನಲ್ಲಿ ಪುರಸ್ಕಾರ ಪ್ರದಾನ ಸಮಾರಂಭ ಹಮ್ಮಿಕೊಳ್ಳಲಾಗಿದೆ ಎಂದು ಟ್ರಸ್ಟ್‌ನ ಸಹಾಯಕ ನಿರ್ದೇಶಕರು ತಿಳಿಸಿದ್ದಾರೆ.

ಬೊಮ್ಮನಹಳ್ಳಿಯ ವಿವೇಕಾನಂದ ವೃತ್ತದ ಬಳಿ ಕಾಂಗ್ರೆಸ್ ಕಾರ್ಯಕರ್ತರು ಪ್ರತಿಭಟನೆ ನಡೆಸಿದರು.

ಮತದಾರರ ಪಟ್ಟಿ ಅಕ್ರಮದ ವಿರುದ್ಧ ಕಾಂಗ್ರೆಸ್ ಪ್ರತಿಭಟನೆ

ಬೊಮ್ಮನಹಳ್ಳಿ: ಮತದಾರರ ಪಟ್ಟಿಯಲ್ಲಿ ನೈಜ ಮತದಾರರನ್ನು ಕೈಬಿಟ್ಟಿರುವುದನ್ನು ಖಂಡಿಸಿ ಬೊಮ್ಮನಹಳ್ಳಿಯ ವಿವೇಕಾನಂದ ವೃತ್ತದ ಬಳಿ ಕಾಂಗ್ರೆಸ್ ಕಾರ್ಯಕರ್ತರು ಬುಧವಾರ ಪ್ರತಿಭಟನೆ ನಡೆಸಿದರು.

ಬೊಮ್ಮನಹಳ್ಳಿ ವಿಧಾನಸಭಾ ಕ್ಷೇತ್ರದ ಸುಮಾರು 31 ಸಾವಿರ ಮತದಾರರನ್ನು ಕೈಬಿಡಲಾಗಿದ್ದು, ಕಾಂಗ್ರೆಸ್ ಪಕ್ಷಕ್ಕೆ ಮತ ನೀಡುವ ಅಲ್ಪಸಂಖ್ಯಾತರು ಮತ್ತು ದಲಿತರನ್ನು ಗುರಿಯಾಗಿಸಿ ಪಟ್ಟಿಯಿಂದ ಕೈಬಿಡಲಾಗಿದೆ ಎಂದು ಪ್ರತಿಭಟನಾಕಾರರು ಆರೋಪಿಸಿದರು.

ವಿವೇಕಾನಂದ ವೃತ್ತದಿಂದ ಬಿಬಿಎಂಪಿ ಕಚೇರಿ ಮೆರವಣಿಗೆ ನಡೆಸಿದ ಕಾರ್ಯಕರ್ತರು, ಜಂಟಿ ಆಯುಕ್ತರಿಗೆ ಮನವಿ ನೀಡಿದರು. ಮೆರವಣಿಗೆಯಲ್ಲಿ ತೆರಳಿದ ಪ್ರತಿಭಟನಾಕಾರರನ್ನು ಕಚೇರಿಯ ಒಳಹೋಗದಂತೆ ಪೊಲೀಸರು ಗೇಟ್‌ಗೆ ಬೀಗ ಹಾಕಿ ತಡೆದರು. ಇದಕ್ಕೆ ಆಕ್ಷೇಪಿಸಿದ ಕಾರ್ಯಕರ್ತರು, ಒಳಬಿಡುವಂತೆ ಒತ್ತಾಯಿಸಿದರು. ಕೊನೆಗೆ ಪ್ರಮುಖ ಮುಖಂಡರನ್ನಷ್ಟೇ ಒಳಬಿಟ್ಟರು.

ಪಾಸ್ ವರ್ಡ್ ಸೋರಿಕೆ ಆರೋಪ: 'ಬೊಮ್ಮನಹಳ್ಳಿ ವಿಧಾನಸಭಾ ಕ್ಷೇತ್ರದ ಕಂದಾಯ ನಿರೀಕ್ಷಕರು ಇಲಾಖೆಯ ಪಾಸ್ ವರ್ಡ್ ನ್ನು ಬಿಜೆಪಿಯವರಿಗೆ ನೀಡಿದ್ದು, ಅವರೇ ಮತದಾರರನ್ನು ಪಟ್ಟಿಯಿಂದ ತೆಗೆದಿದ್ದಾರೆ, ಈ ಬಗ್ಗೆ ತನಿಖೆಯಾಗಬೇಕೆಂದು' ಪ್ರತಿಭಟನಾಕಾರರು ಆಗ್ರಹಿಸಿದರು.

ಹೆಚ್‌ಎಸ್‌ಆರ್ ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ವಾಸುದೇವರೆಡ್ಡಿ, ಬೊಮ್ಮನಹಳ್ಳಿ ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ರವೀಂದ್ರ ಮಾತನಾಡಿದರು.

ಬಿಳೇಕಹಳ್ಳಿ ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ಅಶ್ವತ್ಥನಾರಾಯಣ, ಯುವ ಕಾಂಗ್ರೆಸ್ ಮುಖಂಡ ಅನಿಲ್ ರೆಡ್ಡಿ, ಕಾಂಗ್ರೆಸ್ ಮುಖಂಡರಾದ ನಾಗಭೂಷಣ್ ರೆಡ್ಡಿ, ಚಿನ್ಮಯ ವಿದ್ಯಾಸಂಸ್ಥೆ ಮುಖ್ಯಸ್ಥ ವಾಸುದೇವರೆಡ್ಡಿ, ಮಂಗಮ್ಮನಪಾಳ್ಯ ವಾರ್ಡ್ ಮುಖಂಡ ರಾಘವೇಂದ್ರ, ಅಲ್ಪಸಂಖ್ಯಾತ ವಿಭಾಗದ ಮುಖ್ಯಸ್ಥ ಸಯ್ಯದ್ ಸರ್ದಾರ್ ಇದ್ದರು.

ಸಭೆಯಲ್ಲಿ ಹೃದಯಾಘಾತದಿಂದ ಕುಸಿದ ಮಾಜಿ ಶಾಸಕ

ಕಾಂಗ್ರೆಸ್ ಟಿಕೆಟ್ ಆಕಾಂಕ್ಷಿಗಳ ಸಭೆ ಮುಂದಕ್ಕೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಪಕ್ಷದ ಟಿಕೆಟ್ ಆಕಾಂಕ್ಷಿಗಳ ಜತೆ ಸಮಾಲೋಚಿಸಲು ಕಾಂಗ್ರೆಸ್ ನಾಯಕರು ಶುಕ್ರವಾರ ಕರೆದಿದ್ದ ಸಭೆಯಲ್ಲೇ ಹೃದಯಾಘಾತಕ್ಕೊಳಗಾದ ಮಾಜಿ ಶಾಸಕ ಶ್ರೀಶೈಲಪ್ಪ ಬಿದರೂರು, ಚಿಕಿತ್ಸೆಗೆ ಸ್ಪಂದಿಸದೇ ಕೊನೆಯುಸಿರೆಳೆದರು. ಆರಂಭದಲ್ಲೇ ಸಭೆ ಮೊಟಕುಗೊಳಿಸಿದ 'ಕೈ' ನಾಯಕರು, ಭಾನುವಾರ ವರ್ಚ್ಯುಯಲ್ ರೂಪದಲ್ಲಿ ಟಿಕೆಟ್ ಆಕಾಂಕ್ಷಿಗಳ ಜತೆ ಸಮಾಲೋಚನೆ ನಡೆಸಲು ನಿರ್ಧರಿಸಿದರು.

ಟಿಕೆಟ್ ಬಯಸಿ ಅರ್ಜಿ ಸಲ್ಲಿಸಿರುವವರ ಜತೆ ಮತದಾರರ ಮಾಹಿತಿ ಕಳವು ಪ್ರಕರಣ ಸೇರಿದಂತೆ ವಿವಿಧ ವಿಷಯಗಳ ಕುರಿತು ಚರ್ಚಿಸಲು ನಗರದ ವರ್ತೂರಿನ ಸೃಷ್ಟಿ ವಿಲೇಜ್ ರೆಸಾರ್ಟ್‌ನಲ್ಲಿ ಸಭೆ ನಿಗದಿಯಾಗಿತ್ತು. ರೋಣ ಮತ್ತು ಗದಗ ವಿಧಾನಸಭಾ ಕ್ಷೇತ್ರಗಳಲ್ಲಿ ಟಿಕೆಟ್ ಕೋರಿ ಅರ್ಜಿ ಸಲ್ಲಿಸಿದ್ದ ಶ್ರೀಶೈಲಪ್ಪ ಅವರೂ ಸಭೆಗೆ ಬಂದಿದ್ದರು. ಸಭೆಯ ಆರಂಭದಲ್ಲೇ ವಾಂತಿ ಮಾಡಿಕೊಂಡ ಅವರು, ಕುಸಿದು ಬಿದ್ದರು.

ತಕ್ಷಣವೇ ಅವರನ್ನು ಸಮೀಪದ ಮಣಿಪಾಲ್ ಆಸ್ಪತ್ರೆಗೆ ಕರೆದೊಯ್ಯಲಾಯಿತು. ತುರ್ತು ನಿಗಾ ಘಟಕಕ್ಕೆ ದಾಖಲಿಸಿ ಚಿಕಿತ್ಸೆ ಆರಂಭಿಸಲಾಯಿತು. ಆದರೆ, ಚಿಕಿತ್ಸೆಗೆ ಸ್ಪಂದಿಸದೇ ಕೊನೆಯುಸಿರೆಳೆದರು.

ಶ್ರೀಶೈಲಪ್ಪ ಅವರನ್ನು ಆಸ್ಪತ್ರೆಗೆ ಕರೆದೊಯ್ದ ಬಳಿಕ ಎಐಸಿಸಿ ಪ್ರಧಾನ ಕಾರ್ಯದರ್ಶಿ ರಣದೀಪ್ ಸಿಂಗ್ ಸುರ್ಜೇವಾಲ ನೇತೃತ್ವದಲ್ಲಿ ಸಭೆ ಮುಂದುವರಿಸಲು ಸಿದ್ಧತೆ ನಡೆದಿತ್ತು. ಕೆಪಿಸಿಸಿ ಅಧ್ಯಕ್ಷ ಡಿ.ಕೆ. ಶಿವಕುಮಾರ್ ಸೇರಿದಂತೆ ಹಲವು ನಾಯಕರು, ಟಿಕೆಟ್ ಆಕಾಂಕ್ಷಿಗಳು ಸಭಾಂಗಣದಲ್ಲಿದ್ದರು. ಶ್ರೀಶೈಲಪ್ಪ ನಿಧನರಾದ ಸುದ್ದಿ ಕೆಲ ಹೊತ್ತಿನಲ್ಲೇ ಅಲ್ಲಿಗೆ ತಲುಪಿತು. ಮೃತರ ಗೌರವಾರ್ಥ ಒಂದು ನಿಮಿಷ ಮೌನಾಚರಣೆ ನಡೆಸಿ ಸಭೆಯನ್ನು ಮೊಟಕುಗೊಳಿಸಲಾಯಿತು.

ಬಳಿಕ ಸುದ್ದಿಗಾರರ ಜತೆ ಮಾತನಾಡಿದ ಶಿವಕುಮಾರ್, 'ಹಲವು ವಿಷಯಗಳ ಕುರಿತು ಚರ್ಚಿಸಲು ಸಭೆ ಆಯೋಜಿಸಲಾಗಿತ್ತು. ಆದರೆ, ಶ್ರೀಶೈಲಪ್ಪ ಅವರ ನಿಧನದ ಕಾರಣದಿಂದ ಸಭೆ ಮುಂದೂಡಲಾಗಿದೆ. ಇದೇ ಭಾನುವಾರ ಝೂಮ್ ಆ್ಯಪ್ ಮೂಲಕ ಟಿಕೆಟ್ ಆಕಾಂಕ್ಷಿ ಗಳೊಂದಿಗೆ ವರ್ಚ್ಯುಯಲ್ ಸಭೆ ನಡೆಸಲಾಗುವುದು' ಎಂದು ತಿಳಿಸಿದರು.

'ಮತದಾರರ ಪಟ್ಟಿಯನ್ನು ಎಲ್ಲ ಜಿಲ್ಲಾ ಕಾಂಗ್ರೆಸ್ ಸಮಿತಿಗಳಿಗೆ ಕಳುಹಿಸಿಕೊಡಲಾಗುವುದು. ಎಲ್ಲ ಕ್ಷೇತ್ರಗಳಲ್ಲೂ ಮತದಾರರ ಪಟ್ಟಿಯಲ್ಲಿ ಕೈಬಿಟ್ಟಿರುವ ಹೆಸರುಗಳ ಕುರಿತು ಪರಿಶೀಲನೆ ನಡೆಸಬೇಕು. ಅಕ್ರಮವಾಗಿ ಯಾವುದಾದರೂ ಹೆಸರುಗಳನ್ನು ಕೈಬಿಟ್ಟಿದ್ದಲ್ಲಿ ಮತ್ತೆ ಅವರ ಹೆಸರು ಸೇರಿಸಲು ಕ್ರಮ ಕೈಗೊಳ್ಳಬೇಕು ಎಂದು ಸೂಚಿಸಲಾಗಿದೆ' ಎಂದು ಅವರು ಹೇಳಿದರು.

ನಾಳೆಯಿಂದ ಬಿಲ್ಡರ್‌ಗಳ ಸಮಾವೇಶ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಬಿಲ್ಡರ್ಸ್ ಅಸೋಸಿಯೇಷನ್ ಆಫ್ ಇಂಡಿಯಾ ಕರ್ನಾಟಕ ಘಟಕವು ಇದೇ 27 ಹಾಗೂ 28ಕ್ಕೆ ದೇವನಹಳ್ಳಿ ರಸ್ತೆಯಲ್ಲಿರುವ ಕ್ಲಾರ್ಕ್ ಎಕ್ಸೋಟಿಕಾ ರೆಸಾರ್ಟ್ ಮತ್ತು ಸ್ಪಾದಲ್ಲಿ 'ಬಿಲ್ಡರ್ಸ್ ಡೇ' ಕಾರ್ಯಕ್ರಮ ಹಮ್ಮಿಕೊಂಡಿದೆ.

ಇಲ್ಲಿ ಶುಕ್ರವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಘಟಕದ ಮುಖ್ಯಸ್ಥ ಆರ್.ಬಿ. ದಯಾನಂದ, 'ಭಾನುವಾರ ಸಂಜೆ 4 ಗಂಟೆಗೆ ಕಾರ್ಯಕ್ರಮಕ್ಕೆ ಚಾಲನೆ ಸಿಗಲಿದೆ. ಎರಡು ದಿನದ ಕಾರ್ಯಕ್ರಮದಲ್ಲಿ ಸಾಮಾನ್ಯ ಕೌನ್ಸಿಲ್ ಸಭೆಯೂ ನಡೆಯಲಿದೆ. ಬಿಲ್ಡರ್‌ಗಳಾದ ಎಸ್. ಸುರೇಶ್ ಹರಿ ಮತ್ತು ಎಚ್.ಎನ್. ವಿಜಯ ರಾಘವ ರೆಡ್ಡಿ ಅವರಿಗೆ 'ಸರ್.ಎಂ. ವಿಶ್ವೇಶ್ವರಯ್ಯ ಸ್ಮಾರಕ ಪ್ರಶಸ್ತಿ' ನೀಡಿ ಸನ್ಮಾನಿಸಲಾಗುತ್ತದೆ. ಸಿಮೆಂಟ್, ಲೋಹ ಸೇರಿ ಕಟ್ಟಡ ನಿರ್ಮಾಣದ ಅಗತ್ಯ ಸಾಮಗ್ರಿಗಳ ಬೆಲೆ ಹೆಚ್ಚಳದ ಪರಿಣಾಮದ ಬಗ್ಗೆಯೂ ಚರ್ಚೆ ನಡೆಸಲಾಗುತ್ತದೆ' ಎಂದರು.

'ಪ್ರತಿಯೊಬ್ಬರಿಗೂ ಸ್ವಂತ ಮನೆ ಹೊಂದಬೇಕೆಂಬ ಕನಸು ಇರುತ್ತದೆ. ಆದರೆ, ಎಲ್ಲ ಅಗತ್ಯ ವಸ್ತುಗಳ ಬೆಲೆ ಏರಿಕೆಯಿಂದಾಗಿ ಅವರ ಕನಸು ನನಸಾಗದೇ ಉಳಿದಿದೆ. ಸರ್ಕಾರ ಈ ಬಗ್ಗೆ ಗಮನಹರಿಸಬೇಕು. ಸರ್ಕಾರಿ ಕಾಮಗಾರಿಗಳನ್ನು ನಿರ್ವಹಿಸುವ ಗುತ್ತಿಗೆದಾರರಿಗೆ 90 ದಿನಗಳಲ್ಲಿ ಹಣ ಪಾವತಿಸಬೇಕು. ಇಲ್ಲವಾದಲ್ಲಿ ಪ್ರಮಾಣಿತ ದಾಖಲೆಯ ಪ್ರಕಾರ ಗುತ್ತಿಗೆದಾರರಿಗೆ ಬಡ್ಡಿಯನ್ನು ಪಾವತಿಸಬೇಕು' ಎಂದು ಆಗ್ರಹಿಸಿದರು.

ಸುದ್ದಿ 2 ನಿಮಿಷ

ವೀರಶೈವ ಶ್ರೀ ಈಶ್ವರ ಸೇವಾ ಸಮಿತಿ: ವಾರ್ಷಿಕ ಸರ್ವಸದಸ್ಯರ ಸಭೆ ರದ್ದು

ಯಲಹಂಕ: ಉಪನಗರದ ವೀರಶೈವ ಶ್ರೀ ಈಶ್ವರ ಸೇವಾ ಸಮಿತಿಯ 2021-22ನೇ ಸಾಲಿನ ಸಾಮಾನ್ಯ ವಾರ್ಷಿಕ ಸರ್ವಸದಸ್ಯರ ಸಭೆಯನ್ನು ನ್ಯಾಯಾಲಯದ ಆದೇಶದ ಮೇರೆಗೆ ರದ್ದುಗೊಳಿಸಲಾಗಿದೆ.

ನವೆಂಬರ್ 27ರಂದು(ಭಾನುವಾರ) ಸಭೆಯನ್ನು ನಡೆಸಲು ದಿನಾಂಕ ನಿಗದಿಗೊಳಿಸಲಾಗಿತ್ತು. ಆದರೆ ಸಮಿತಿಯ ಬೈಲಾ ಉಲ್ಲಂಘಿಸಿ ಸಭೆ ನಡೆಸಲಾಗುತ್ತಿದೆ ಎಂದು ಸಮಿತಿಯ ಮೂವರು ನಿರ್ದೇಶಕರು ನ್ಯಾಯಾಲಯದ ಮೊರೆಹೋಗಿದ್ದರು. ದೂರನ್ನು ಆಲಿಸಿದ ಬೆಂಗಳೂರು ನಗರ ಪ್ರಧಾನ ಸಿವಿಲ್ ಮತ್ತು ಸೆಷನ್ಸ್ ನ್ಯಾಯಾಲಯ, ಮುಂದಿನ ವಿಚಾರಣೆಯ ದಿನಾಂಕದವರೆಗೆ ಸಭೆ ನಡೆಸದಂತೆ ತಡೆಯಾಜ್ಞೆ ನೀಡಿ ಆದೇಶ ಹೊರಡಿಸಿದೆ.

ಡಿ.6ರಂದು ದಲಿತ ಸಂಘಟನೆಗಳ ಬೃಹತ್ ಐಕ್ಯತಾ ಸಮಾವೇಶ

ಕೆ.ಆರ್.ಪುರ: ಸಂವಿಧಾನ ಮತ್ತು ಪ್ರಜಾಪ್ರಭುತ್ವ ಉಳಿವಿಗಾಗಿ ಡಿ.6ರಂದು ನ್ಯಾಷನಲ್ ಕಾಲೇಜು ಮೈದಾನದಲ್ಲಿ ದಲಿತ ಸಂಘಟನೆಗಳ ಬೃಹತ್ ಐಕ್ಯತಾ ಸಮಾವೇಶವನ್ನು ಹಮ್ಮಿಕೊಳ್ಳಲಾಗಿದೆ ಎಂದು ಭೀಮ್ ರಾವ್ ಅಂಬೇಡ್ಕರ್ ಸಂಘಟನೆಗಳ ಮಹಾ ಒಕ್ಕೂಟ ಅಧ್ಯಕ್ಷ ಬಿ.ಎಂ.ವೆಂಕಟೇಶ್ ತಿಳಿಸಿದರು.

ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಅವರು, 'ಆರ್‌ಎಸ್‌ಎಸ್ ಹಾಗೂ ಬಿಜೆಪಿ ಸಂವಿಧಾನ ಮತ್ತು ಪ್ರಜಾಪ್ರಭುತ್ವದ ವ್ಯವಸ್ಥೆ ಬುಡಮೇಲು ಮಾಡಲು ಹೊರಟಿವೆ. ಇನ್ನೊಂದೆಡೆ ಮೀಸಲಾತಿ ಹೆಚ್ಚಳದ ನಾಟಕ ಮಾಡಿ ಜನರನ್ನು ಮರಳು ಮಾಡುತ್ತಿವೆ' ಎಂದು ಆರೋಪಿಸಿದರು.

ಅಂಬೇಡ್ಕರ್ ಕನಸಿನ ಪ್ರಜಾಪ್ರಭುತ್ವ ಭಾರತವನ್ನು ಉಳಿಸಿಕೊಳ್ಳಬೇಕಿದೆ ಎಂದರು. ಮಹಾ ಒಕ್ಕೂಟದ ಕಾರ್ಯಾಧ್ಯಕ್ಷ ಬೆಳತೂರು ವೆಂಕಟೇಶ್, ಗೌರವ ಅಧ್ಯಕ್ಷ ಬಿ.ಕೃಷ್ಣಪ್ಪ, ಮುಳ್ಳೂರು ಶ್ರೀನಿವಾಸ್, ಉಪಾಧ್ಯಕ್ಷರಾದ ಎ.ರಾಜು, ಸೊಣ್ಣಪ್ಪ, ಪ್ರಧಾನ ಕಾರ್ಯದರ್ಶಿ ಎಂ.ಕೃಷ್ಣಪ್ಪ, ಕ್ರಿಸ್ತುರಾಜ್, ಎಸ್.ವೆಂಕಟೇಶ್, ಖಜಾಂಚಿ ವೆಂಕಟರಾಜು, ಜಂಟಿ ಕಾರ್ಯದರ್ಶಿ ಪಿ.ರಾಜಣ್ಣ, ಆರೋಗ್ಯ ರಾಜ್, ಕಿರಣ್ ಕುಮಾರ್ ಹಾಜರಿದ್ದರು.

ಯಕ್ಷ ಕಲಾವಿದರು

ನಗರದಲ್ಲಿ ಶುಕ್ರವಾರ 'ಸಮಸ್ತರು' ರಂಗ ಸಂಶೋಧನಾ ಸಂಸ್ಥೆ ಆಯೋಜಿಸಿದ್ದ ಕಾರ್ಯಕ್ರಮದಲ್ಲಿ ಸಂಸ್ಥೆಯ ಕಲಾವಿದರು ಮಹಾಕವಿ ಭಾಸನ ಏಕಾಂಕ ನಾಟಕ 'ಕರ್ಣಭಾರ' ಆಧಾರಿತ ಯಕ್ಷಗಾನ ಪ್ರಸಂಗ ಪ್ರದರ್ಶಿಸಿದರು -ಪ್ರಜಾವಾಣಿ ಚಿತ್ರ

ನಗರದಲ್ಲಿ ಇಂದು

ಸಂವಿಧಾನ ದಿನಾಚರಣೆ, ಪ್ರಶಸ್ತಿ ಪ್ರದಾನ: ಉದ್ಘಾಟನೆ: ಪ್ರಿಯಾಂಕ ಖರ್ಗೆ, ಜಿ.ಪಿ. ದೇವರಾಜ್, ಮುಖ್ಯ ಭಾಷಣಕಾರರು: ಶಿವಕುಮಾರ್, ಪುಷ್ಪಾ, ಮುಖ್ಯ ಅತಿಥಿಗಳು: ಜಯಲಕ್ಷ್ಮಿ, ಡಿ. ಶಿವಶಂಕರ್, ದಾಸ್ ಪ್ರಕಾಶ್, ನಾಗರಾಜ್, ಅಧ್ಯಕ್ಷತೆ: ಎಚ್.ಎಲ್. ಲಕ್ಷ್ಮಣ, ಆಯೋಜನೆ: ವಿಶ್ವಜ್ಞಾನಿ ಜನಜಾಗೃತಿ ವೇದಿಕೆ, ಸ್ಥಳ: ಡಾ.ಭೀಮರಾವ್ ಪ್ಯಾಲೆಸ್, ರಾಜಾಜಿನಗರ, ಬೆಳಿಗ್ಗೆ 10

ಗೋಪಾಲಕೃಷ್ಣ ಅಡಿಗರ 30ನೇ ವಾರ್ಷಿಕ ಸ್ಮರಣೆ: ಬಿ.ವಿ. ಕೆದಿಲಾಯ ಅವರ ಆಯ್ದ ವೈಚಾರಿಕ ಲೇಖನಗಳ ಸಂಕಲನ ಲೋಕಾರ್ಪಣೆ, ಉಪಸ್ಥಿತಿ: ಎಚ್.ಆರ್. ಲೀಲಾವತಿ, ಗಾಯಕರು: ಹೇಮಾಪ್ರಸಾದ್, ಮುರಳೀಧರ ನಾವಡ, ಶ್ರೀದೇವಿ ಗರ್ತಿಕೆರೆ, ರಾಜೀವ್ ಅಗಳಿ, ವಿ.ಜಿ. ಅವಿನಾಶ್, ಚಾಂದನಿ ಗರ್ತಿಕೆರೆ, ಆಯೋಜನೆ: ಗಾಂಧಿಬಜಾರ್ ವಿಚಾರ ವೇದಿಕೆ, ಸ್ಥಳ: ರವೀಂದ್ರನಾಥ ಟಾಗೋರ್ ಉದ್ಯಾನ, ಗಾಂಧಿ ಬಜಾರ್ ಮುಖ್ಯ ರಸ್ತೆ, ಬಸವನಗುಡಿ, ಬೆಳಿಗ್ಗೆ 10

ಚಂದ್ರಶೇಖರ ಕಂಬಾರ

ವಿಶ್ವ ಕನ್ನಡಿಗರ ಸಮ್ಮಿಲನ: ಉದ್ಘಾಟನೆ: ಚಂದ್ರಶೇಖರ ಕಂಬಾರ, ವಿಶೇಷ ಆಹ್ವಾನ: ಸಿ. ಸೋಮಶೇಖರ್, ಮಹೇಶ ಜೋಶಿ, ಟಿ.ಎ. ನಾರಾಯಣಗೌಡ, ಅಧ್ಯಕ್ಷತೆ: ಬಿ.ಎನ್. ಜಗದೀಶ್, ಆಯೋಜನೆ: ಜಯ ಕರ್ನಾಟಕ, ಸ್ಥಳ: ಶೇಷ ಮಹಲ್, ಅರಮನೆ ಮೈದಾನ, ಬೆಳಿಗ್ಗೆ 10

ಘಟಿಕೋತ್ಸವ: ಅಧ್ಯಕ್ಷತೆ: ಡಾ.ಸಿ.ಎನ್. ಅಶ್ವತ್ಥನಾರಾಯಣ, ಮುಖ್ಯ ಅತಿಥಿಗಳು: ಪ್ರೊ. ಅಶೋಕ್ ಜುಂಜುನ್‌ವಾಲಾ, ಶಾಲಿನಿ ರಜನೀಶ್, ನಿಸಾರ್ ಅಹಮದ್, ಆಯೋಜನೆ ಹಾಗೂ ಸ್ಥಳ: ಪ್ರೆಸಿಡೆನ್ಸಿ ವಿಶ್ವವಿದ್ಯಾಲಯ, ಯಲಹಂಕ, ಬೆಳಿಗ್ಗೆ 10.30

ವಿವಿಪುರಂ ಹಬ್ಬ: ಉದ್ಘಾಟನೆ: ಸೋಮಣ್ಣ, ಆರ್. ಅಶೋಕ್, ಉದಯ್ ಗರುಡಾಚಾರ್, ಆಯೋಜನೆ: ಚಿಕ್ಕಪೇಟೆ ವಿಧಾನಸಭೆ ಕ್ಷೇತ್ರದ ಶಾಸಕರ ಕಚೇರಿ, ಸ್ಥಳ: ಸಜ್ಜನ್ ರಾವ್ ವೃತ್ತ, ವಿವಿ ಪುರ, ಬೆಳಿಗ್ಗೆ 10.30

ಎಂಬಿಎ ವಿದ್ಯಾರ್ಥಿಗಳಿಗೆ ಪದವಿ ಪ್ರದಾನ: ಮುಖ್ಯ ಅತಿಥಿ: ನ್ಯಾ.ಎಚ್.ಎನ್. ನಾಗಮೋಹನ್ ದಾಸ್, ಅಧ್ಯಕ್ಷತೆ: ಕೆ.ಎಂ. ನಾಗರಾಜ್, ಆಯೋಜನೆ ಹಾಗೂ ಸ್ಥಳ: ಕಮ್ಯೂನಿಟಿ ಇನ್‌ಸ್ಟಿಟ್ಯೂಟ್ ಆಫ್ ಮ್ಯಾನೇಜ್ಮೆಂಟ್ ಸ್ಟಡೀಸ್, ಜಯನಗರ, ಬೆಳಿಗ್ಗೆ 10.30

ಇಂದಿರಾ ರತ್ನ ದತ್ತಿ ಪ್ರಶಸ್ತಿ ಪ್ರದಾನ ಹಾಗೂ ಕವಿಗೋಷ್ಠಿ: ಪ್ರಶಸ್ತಿ ಪ್ರದಾನ: ಶಶಿಕಲಾ ವೀರಯ್ಯಸ್ವಾಮಿ, ಪ್ರಶಸ್ತಿ ಪುರಸ್ಕೃತರು: ಬಿ.ಟಿ. ಲಲಿತಾನಾಯಕ್, ಅಧ್ಯಕ್ಷತೆ: ಎಚ್.ಎಲ್. ಪುಷ್ಪಾ, ಆಯೋಜನೆ: ಕರ್ನಾಟಕ ಲೇಖಕಿಯರ ಸಂಘ, ಸ್ಥಳ: ಕುವೆಂಪು ಸಭಾಂಗಣ, ಕನ್ನಡ ಸಾಹಿತ್ಯ ಪರಿಷತ್ತು, ಚಾಮರಾಜಪೇಟೆ, ಬೆಳಿಗ್ಗೆ 10.30

ಭಾರತ ಸಂವಿಧಾನ ದಿನಾಚರಣೆ: ಮುಖ್ಯ ಅತಿಥಿ: ವಿ.ಸುದೇಶ್, ಅಧ್ಯಕ್ಷತೆ: ಲಿಂಗರಾಜ ಗಾಂಧಿ, ಆಯೋಜನೆ ಹಾಗೂ ಸ್ಥಳ: ಸರ್.ಸಿ.ವಿ. ರಾಮನ್ ಸಭಾಂಗಣ, ಬೆಂಗಳೂರು ವಿಶ್ವವಿದ್ಯಾಲಯ, ಬೆಳಿಗ್ಗೆ 10.30

ವಿಶೇಷ ಉಪನ್ಯಾಸ: 'ಸಂವಿಧಾನದ ಆಶಯಗಳು ಮತ್ತು ನಮ್ಮ ನಡಿಗೆಯ ದಿಕ್ಕು', ಉಪನ್ಯಾಸಕರು: ವೆಂಕಟೇಶ್ ನೆಲ್ಲಕುಂಟೆ, ಅಧ್ಯಕ್ಷತೆ: ಎ.ಎಚ್. ರಾಮರಾವ್, ಮುಖ್ಯ ಅತಿಥಿ: ಪ್ರೊ.ಎಚ್.ಎನ್. ನಾಗರಾಜರೆಡ್ಡಿ, ಉಪಸ್ಥಿತಿ: ಎಂ. ಸತೀಶ್ ಕಾರಂತ್, ಪಿ.ಎಲ್. ರಮೇಶ್, ಆಯೋಜನೆ ಹಾಗೂ ಸ್ಥಳ: ಎಚ್.ಎನ್. ಮಲ್ಟಿಮೀಡಿಯಾ ಹಾಲ್, ನ್ಯಾಷನಲ್ ಕಾಲೇಜು, ಬಸವನಗುಡಿ, ಬೆಳಿಗ್ಗೆ 11

ಬುಡಕಟ್ಟು ಯುವ ವಿನಿಮಯ ಕಾರ್ಯಕ್ರಮ ಸಮಾರೋಪ: ಮುಖ್ಯ ಅತಿಥಿ: ಕೆ.ಸಿ. ನಾರಾಯಣಗೌಡ, ಡಿ.ವಿ. ಸದಾನಂದಗೌಡ, ಅಧ್ಯಕ್ಷತೆ: ರಿಜ್ವಾನ್ ಅರ್ಷದ್, ಉಪಸ್ಥಿತಿ: ಎಂ.ಎನ್. ನಟರಾಜ್, ಆಯೋಜನೆ: ಯುವ ಸಬಲೀಕರಣ ಮತ್ತು ಕ್ರೀಡಾ ಸಚಿವಾಲಯ, ಸ್ಥಳ: ಯವನಿಕ, ನೃಪತುಂಗರಸ್ತೆ, ಬೆಳಿಗ್ಗೆ 11

'ಹಣೆ ಬರಹ' ನಾಟಕ ಪ್ರದರ್ಶನ: ನಿರ್ದೇಶನ: ಘನಶ್ಯಾಮ ಕೆ.ವಿ., ಆಯೋಜನೆ: ವಾಸ್ಪ್ ಥಿಯೇಟರ್, ಸ್ಥಳ: ಕಲಾಗ್ರಾಮ, ಮಲ್ಲತ್ತಹಳ್ಳಿ, ಸಂಜೆ 7.30

ಪ್ರಜಾಪ್ರಭುತ್ವ ಸಮಾನತಾ ಸಮಾವೇಶ: ಸಾನ್ನಿಧ್ಯ: ಜ್ಞಾನಪ್ರಕಾಶ ಸ್ವಾಮೀಜಿ, ಪ್ರಸನ್ನಾನಂದಪುರಿ ಸ್ವಾಮೀಜಿ, ಉದ್ಘಾಟನೆ: ಸತೀಶ ಜಾರಕಿಹೊಳಿ, ಮುಖ್ಯ ಭಾಷಣಕಾರರು: ಬಿ.ಕೆ. ಹರಿಪ್ರಸಾದ್, ಬಿ. ಗೋಪಾಲ್, ಸಿ.ಕೆ. ಮಹೇಶ್, ಜಿ.ಕೆ. ಗೋಕುಲೆ, ಆಯೋಜನೆ: ಕರ್ನಾಟಕ ದಲಿತ ಸಂಘರ್ಷ ಸಮಿತಿ, ಸ್ಥಳ: ಅಂಬೇಡ್ಕರ್ ಭವನ, ಮಿಲ್ಲರ್ಸ್ ರಸ್ತೆ, ಬೆಳಿಗ್ಗೆ 11

'ಸಂವಿಧಾನದ ಆಶಯಗಳು... ಇದುವರೆಗೂ ಈಡೇರಲಿಲ್ಲ ಏಕೆ?' ವಿಚಾರಗೋಷ್ಠಿ: ಉದ್ಘಾಟನೆ: ನ್ಯಾ. ವಿ. ಗೋಪಾಲಗೌಡ, ಅಧ್ಯಕ್ಷತೆ: ಬಿ. ಚನ್ನಕೃಷ್ಣಪ್ಪ, ಪ್ರಾಸ್ತಾವಿಕ ಭಾಷಣ: ಎಸ್.ಆರ್. ಹಿರೇಮಠ, ಆಶಯನುಡಿ: ವೀರಸಂಗಯ್ಯ, ಆಯೋಜನೆ: ಕರ್ನಾಟಕ ದಲಿತ ಸಂಘಟನೆಗಳ ಒಕ್ಕೂಟ, ಸ್ಥಳ: ಶಾಸಕರ ಭವನ 2, ನೆಲ ಮಹಡಿ ಸಭಾಂಗಣ, ಬೆಳಿಗ್ಗೆ 11.30

ಭಾರತೀಯ ಸಂವಿಧಾನ ದಿನ: ಮುಖ್ಯ ಅತಿಥಿ: ನ್ಯಾ.ವಿ. ಗೋಪಾಲ ಗೌಡ, ಗೌರವ ಅತಿಥಿಗಳು: ಆರ್.ವಿ. ವೆಂಕಟೇಶ್, ಪಿ.ಎನ್. ಕಾರ್ತಿಕ್, ಅಧ್ಯಕ್ಷತೆ: ಬಿ. ಚಂದ್ರಶೇಖರ, ಆಯೋಜನೆ: ಯೂತ್ ಯುನೈಟೆಡ್ ಫಾರ್ ಗುಡ್ ಆ್ಯಕ್ಷನ್, ಸ್ಥಳ: ಕುವೆಂಪು ಸಭಾಂಗಣ, ಆರ್.ಸಿ. ಕಾಲೇಜು, ರೇಸ್‌ಕೋರ್ಸ್ ರಸ್ತೆ, ಮಧ್ಯಾಹ್ನ 12.30

ನವಾರಂಭ ಕಲಾ ಪ್ರದರ್ಶನ: ಉದ್ಘಾಟನೆ: ಗೀತಾ ರಾವ್, ರಾಘವೇಂದ್ರ ಎಸ್.ಆರ್., ಆಯೋಜನೆ: ಆರ್ಟ್ ಇಂಡಿಯಾ ಆರ್ಟ್, ಕ್ಯಾನ್ವಾಸ್ ಸ್ಟೋರೀಸ್, ಕಲಾಕೌಶಲ್, ಸ್ಥಳ: ಬೆಂಗಳೂರು ಆರ್ಟ್ ಗ್ಯಾಲರಿ, ಯುವಪಥ, ಜಯನಗರ 4ನೇ ಹಂತ, ಮಧ್ಯಾಹ್ನ 3

ಬಿ.ಆರ್. ಅಂಬೇಡ್ಕರ್ ಅವರ 131ನೇ ಜಯಂತ್ಯುತ್ಸವ: ಉದ್ಘಾಟನೆ: ನಾಗರಾಜ್ ಯಾದವ್, ಅಧ್ಯಕ್ಷತೆ: ಎನ್.ಎಸ್. ನಂದೀಶ್ ರೆಡ್ಡಿ, ವಿಶೇಷ ಭಾಷಣಕಾರರು: ಎನ್. ಮಹೇಶ್, ಆಯೋಜನೆ: ಬೆಂಗಳೂರು ಮಹಾನಗರ ಸಾರಿಗೆ ಸಂಸ್ಥೆ, ಪ.ಜಾತಿ ಮತ್ತು ಪ.ಪಂಗಡ ನೌಕರರ ಕ್ಷೇಮಾಭಿವೃದ್ಧಿ ಸಂಘ, ಸ್ಥಳ: ಕಲಾ ಕುಟೀರ, ಕೆಂಪೇಗೌಡ ಬಸ್ ನಿಲ್ದಾಣ, ಮಧ್ಯಾಹ್ನ 3

ಕನ್ನಡ ಜಾತ್ರೆ: ಮುಖ್ಯ ಅತಿಥಿಗಳು: ಬಿ.ಎಸ್. ರಾಜಶೇಖರಯ್ಯ, ಎಸ್. ಷಡಕ್ಷರಿ, ಉಪಸ್ಥಿತಿ: ಬಿ.ಎಸ್. ನಾಗರಾಜ್, ಸಿ.ಎಂ. ನಾರಾಯಣಸ್ವಾಮಿ, ಅಧ್ಯಕ್ಷತೆ: ಎನ್.ಆರ್. ಹೆಗಡೆ, ಆಯೋಜನೆ: ಅಂತರರಾಷ್ಟ್ರೀಯ ಲಯನ್ಸ್ ಸಂಸ್ಥೆ, ಸ್ಥಳ: ಕೊಂಡಜ್ಜಿ ಬಸಪ್ಪ ಸಭಾಂಗಣ, ಅರಮನೆ ರಸ್ತೆ, ಮಧ್ಯಾಹ್ನ 3

'ಬಿಯಾಂಡರ್ ಎಮರ್ಜೆನ್ಸಿ ಆ್ಯಂಡ್ ಗ್ರೀನ್ ಫ್ಯೂಚರ್ ಸಮ್ಮಿಟ್': ಮುಖ್ಯ ಅತಿಥಿ: ಬಸವರಾಜ ಬೊಮ್ಮಾಯಿ, ಗೌರವ ಅತಿಥಿ: ಡಾ.ಸಿ.ಎನ್. ಅಶ್ವತ್ಥನಾರಾಯಣ, ಉಪನ್ಯಾಸಕರು: ಸುಂದರ್ ರಾಜು, ಕೌಶಿಕ್ ರಾಜು, ಶಹೀಂ ರಹಿಮಾನ್, ಆಯೋಜನೆ ಹಾಗೂ ಸ್ಥಳ: ಐಟ್ರಿಯಾ ವಿಶ್ವವಿದ್ಯಾಲಯ, ಆನಂದನಗರ, ಮಧ್ಯಾಹ್ನ 3

ಯದುವೀರ

ಅಖಿಲ ಭಾರತ ಅಗರಬತ್ತಿ ಉತ್ಪಾದಕರ ಸಂಘದ (ಎಐಎಎಂಎ) ಎಕ್ಸ್‌ಪೊ ಸಮಾರೋಪ: ಅತಿಥಿಗಳು: ಯದುವೀರ ಕೃಷ್ಣದತ್ತ ಚಾಮರಾಜ ಒಡೆಯರ್, ಪಿ.ಸಿ. ಮೋಹನ್, ಸ್ಥಳ: ತ್ರಿಪುರ ವಾಸಿನಿ, ಅರಮನೆ ಮೈದಾನ, ಮಧ್ಯಾಹ್ನ 3

ಊಂಜಲ್ ಸಂಗೀತೋತ್ಸವ: ಸಿ. ರಮೇಶ್, ವಾದ್ಯ ಸಹಕಾರ: ಶಶಿಧರ್, ವೆಂಕಟಸುಬ್ಬು, ಆಯೋಜನೆ: ತಿರುಮಲ ತಿರುಪತಿ ದೇವಸ್ಥಾನಗಳು, ಹಿಂದೂಧರ್ಮ ಪ್ರಚಾರ ಪರಿಷತ್, ಆಯೋಜನೆ: ಶ್ರೀ ವೆಂಕಟೇಶ್ವರ ಸ್ವಾಮಿ ದೇವಸ್ಥಾನ, ವಯ್ಯಾಲಿಕಾವಲ್, ಸಂಜೆ 6

ಕರ್ನಾಟಕ ಶಾಸ್ತ್ರೀಯ ಸಂಗೀತ: ಸೌಮ್ಯ ಆಚಾರ್ಯ, ವಾದ್ಯ ಸಹಕಾರ: ಎಸ್. ಜನಾರ್ದನ್, ಬಿ. ಆರ್. ಶ್ರೀನಿವಾಸ್, ಶ್ರೀಶೈಲನ್, ಆಯೋಜನೆ: ಮಲ್ಲೇಶ್ವರ ಸಂಗೀತ ಸಭಾ, ಸ್ಥಳ: ಶ್ರೀರಾಮ ಮಂದಿರ, ಈಸ್ಟ್ ಪಾರ್ಕ್ ರಸ್ತೆ, ಮಲ್ಲೇಶ್ವರ, ಸಂಜೆ 6.15

ಎಸಿಬಿಯ ಅರ್ಧ ಹುದ್ದೆಗಳು ಲೋಕಾಯುಕ್ತಕ್ಕೆ

ಬೆಂಗಳೂರು: ಭ್ರಷ್ಟಾಚಾರ ನಿಗ್ರಹ ದಳದ (ಎಸಿಬಿ) ಪೊಲೀಸ್ ಮತ್ತು ಆಡಳಿತ ವಿಭಾಗದಲ್ಲಿನ ಒಟ್ಟು ಮಂಜೂರಾದ ಹುದ್ದೆಗಳ ಪೈಕಿ ಅರ್ಧದಷ್ಟನ್ನು ಲೋಕಾಯುಕ್ತಕ್ಕೆ ವರ್ಗಾವಣೆ ಮಾಡಿ ಸಿಬ್ಬಂದಿ ಮತ್ತು ಆಡಳಿತ ಸುಧಾರಣಾ ಇಲಾಖೆ ನವೆಂಬರ್ 19ರಂದು ಆದೇಶ ಹೊರಡಿಸಿದೆ.

ಎಸಿಬಿಯಲ್ಲಿ 121 ಪೊಲೀಸ್ ಅಧಿಕಾರಿಗಳು, 324 ಕಾನ್‌ಸ್ಟೆಬಲ್‌ಗಳು ಮತ್ತು ಆಡಳಿತ ವಿಭಾಗದಲ್ಲಿನ ವಿವಿಧ ವೃಂದದ 79 ಹುದ್ದೆಗಳ ಮಂಜೂರಾತಿ ಇತ್ತು. ಈ ಎಲ್ಲ ಹುದ್ದೆಗಳನ್ನೂ ಲೋಕಾಯುಕ್ತದಲ್ಲಿ ವಿಲೀನಗೊಳಿಸುವಂತೆ ಲೋಕಾಯುಕ್ತ ನ್ಯಾಯಮೂರ್ತಿ ಬಿ.ಎಸ್. ಪಾಟೀಲ ಬೇಡಿಕೆ ಇಟ್ಟಿದ್ದರು. ಈ ಕುರಿತು ರಾಜ್ಯ ಪೊಲೀಸ್ ಮಹಾನಿರ್ದೇಶಕರ ಅಭಿಪ್ರಾಯ ಪಡೆದ ಬಳಿಕ ಹುದ್ದೆಗಳ ಮರುಹಂಚಿಕೆ ಕುರಿತು ಸಿಬ್ಬಂದಿ ಮತ್ತು ಆಡಳಿತ ಸುಧಾರಣಾ ಇಲಾಖೆ ತೀರ್ಮಾನ ಕೈಗೊಂಡಿದೆ.

ಐದು ಎಸ್‌ಪಿ, 18 ಡಿವೈಎಸ್‌ಪಿ, 38 ಪೊಲೀಸ್ ಇನ್‌ಸ್ಪೆಕ್ಟರ್ ಹುದ್ದೆಗಳನ್ನು ಎಸಿಬಿಯಿಂದ ಲೋಕಾಯುಕ್ತಕ್ಕೆ ವರ್ಗಾವಣೆ ಮಾಡಲಾಗಿದೆ. ಎಲ್ಲ ವೃಂದಗಳಲ್ಲಿ ಬಹುತೇಕ ಅರ್ಧದಷ್ಟು ಹುದ್ದೆಗಳನ್ನು ಲೋಕಾಯುಕ್ತಕ್ಕೆ ನೀಡಲಾಗಿದೆ. ಒಟ್ಟು 524 ಹುದ್ದೆಗಳಲ್ಲಿ 266 ಹುದ್ದೆಗಳನ್ನು ಲೋಕಾಯುಕ್ತಕ್ಕೆ ವರ್ಗಾಯಿಸಿ ಆದೇಶ ಹೊರಡಿಸಲಾಗಿದೆ. ಉಳಿದ 258 ಹುದ್ದೆಗಳನ್ನು ಪೊಲೀಸ್ ಇಲಾಖೆಯ ವಶಕ್ಕೆ ನೀಡಿದ್ದು, ಮರು ಸ್ಥಳ ನಿಯುಕ್ತಿ ನೀಡುವಂತೆ ಸೂಚಿಸಲಾಗಿದೆ.

'ಎಸಿಬಿಯಿಂದ ಕಡತಗಳನ್ನು ಪಡೆಯುವ ಪ್ರಕ್ರಿಯೆ ಪ್ರಗತಿಯಲ್ಲಿದೆ. ಲೋಕಾಯುಕ್ತಕ್ಕೆ ಇನ್ನೂ ಹೆಚ್ಚಿನ ಅಧಿಕಾರಿಗಳು, ಸಿಬ್ಬಂದಿ ಬೇಕಿದೆ. ಸಿಬ್ಬಂದಿ ಬಲ ಹೆಚ್ಚಿಸುವ ಕುರಿತು ಪರಿಶೀಲನೆ ನಡೆಸಿ, ಪ್ರಸ್ತಾವ ಸಿದ್ಧಪಡಿಸಲು ಸಮಿತಿಯೊಂದನ್ನು ನೇಮಿಸಿದ್ದೇವೆ. ಸಮಿತಿಯ ವರದಿ ಆಧರಿಸಿ ಸಿಬ್ಬಂದಿ ಬಲ ಹೆಚ್ಚಳಕ್ಕೆ ಸರ್ಕಾರಕ್ಕೆ ಪ್ರಸ್ತಾವ ಸಲ್ಲಿಸಲಾಗುವುದು' ಎಂದು ಲೋಕಾಯುಕ್ತರು ತಿಳಿಸಿದರು.

ಲಾಲ್‌ಬಾಗ್: ಕಿವಿಹಿಂಡಿದ 'ಪ್ರಜಾವಾಣಿ'ಗೆ ಜನಬೆಂಬಲ

'ಜನಸ್ಪಂದನ' ನಡೆಸಿ, ಲಾಲ್‌ಬಾಗ್‌ನಲ್ಲಿನ ಸಮಸ್ಯೆಗಳ ಕುರಿತು ಜನರಿಗೆ ಪರಿಹಾರ ಒದಗಿಸಬಹುದೆಂಬ 'ಪ್ರಜಾವಾಣಿ'ಯ ವಿನಂತಿಗೆ ತೋಟಗಾರಿಕಾ ಸಚಿವ ಮುನಿರತ್ನ ಒಪ್ಪಿಗೆ ನೀಡಲಿಲ್ಲ. ಅಂತಹ ಜನದನಿಗೆ ಪತ್ರಿಕೆಯು ಈ ಮೂಲಕ ವೇದಿಕೆ ಒದಗಿಸಿದೆ.

ನಸ್ಯಕಾಶಿಯಲ್ಲಿನ ಸಮೀಕ್ಷೆ
ಒಳಿತಿನ ನಿರೀಕ್ಷೆ
ಹೂತೋಟ... ಸಮಸ್ಯೆಗಳ ನೋಟ

'ಗದ್ದೆಯಲ್ಲಿ ನಡೆದ ಅನುಭವ'

ಲಾಲ್‌ಬಾಗ್ ಸಮಸ್ಯೆಗೆ ಸರ್ಕಾರದ ಕಿವಿ ಹಿಂಡುವ ಕೆಲಸ ಮಾಡಿರುವ 'ಪ್ರಜಾವಾಣಿ'ಗೆ ಅಭಿನಂದನೆಗಳು. ವೈದ್ಯರ ಸಲಹೆಯಂತೆ ಹಿರಿಯ ನಾಗರಿಕರು ಮಣ್ಣಿನ ಮೇಲೆ ನಡೆದಾಡುವುದು ಸೂಕ್ತವೆಂದು ತಿಳಿದಿದ್ದಾರೆ. ಆದರೆ, ಮಣ್ಣಿನ ಮೇಲೆ ಅಲ್ಲಲ್ಲಿ ನೀರು ನಿಂತು ಮಣ್ಣಿನ ರಸ್ತೆಗಳು ಗದ್ದೆಯಂತೆ ಆಗಿರುವುದು ವಾಯುವಿಹಾರಿಗಳಿಗೆ ತೊಂದರೆಯಾಗುತ್ತಿದೆ. ಜೀವ ಬಿಗಿ ಹಿಡಿದು ನಡೆಯುವ ಪರಿಸ್ಥಿತಿ ಇದೆ. ಲಾಲ್‌ಬಾಗ್‌ನಲ್ಲಿರುವ ಸಮಸ್ಯೆಗಳನ್ನು ಸರ್ಕಾರ ಪರಿಹರಿಸಬೇಕು.

ಎಂ. ಲಕ್ಷ್ಮಿನಾರಾಯಣ, ಬಡವರ ಬಳಗ ಗಾಂಧಿ ಆಶ್ರಮ ಅಧ್ಯಕ್ಷ

'ಕ್ರೇನ್‌ಗಳ ನಿಲುಗಡೆ ತಾಣ'

ಸುಮಾರು 30 ವರ್ಷಗಳಿಂದ ಲಾಲ್‌ಬಾಗ್‌ಗೆ ಹೋಗಿ ಬರುತ್ತಿದ್ದೇನೆ. ಮೊದಲು ನೋಡಿದ ಲಾಲ್‌ಬಾಗ್‌ಗೂ ಈಗಿನ ಉದ್ಯಾನಕ್ಕೂ ವ್ಯತ್ಯಾಸವಿದೆ. ಪೂರ್ವದ ತುದಿಯಲ್ಲಿ ದೊಡ್ಡ ದೊಡ್ಡ ಕ್ರೇನ್‌ಗಳನ್ನು ನಿಲ್ಲಿಸಲಾಗುತ್ತಿದೆ. ಎರಡು ತಿಂಗಳಿಂದ ಅಲ್ಲೇ ನಿಂತಿವೆ. ತೋಟಗಾರಿಕೆ ಅಧಿಕಾರಿಗಳು ನೋಡಿಯೂ ಸುಮ್ಮನಿದ್ದಾರೆ. ಈ ರೀತಿಯ ವಾಹನಗಳ ನಿಲುಗಡೆಗೆ ಅವಕಾಶ ನೀಡಿದರೆ ಜನ ಏನು ಮಾಡಬೇಕು?

ಪುರುಷೋತ್ತಮ ಜಿ.ಸಿ., ಬನಶಂಕರಿ

'ಜನಸ್ಪಂದನಕ್ಕೆ ಕಾಲ ಮಿಂಚಿಲ್ಲ'

ಬೆಂಗಳೂರು ಎಂದರೆ ಲಾಲ್‌ಬಾಗ್, ಲಾಲ್‌ಬಾಗ್ ಎಂದರೆ ಬೆಂಗಳೂರು ಎಂಬುದು ಪ್ರತೀತಿ. ನಾನು ಚಿಕ್ಕವನಾಗಿದ್ದಾಗ ಲಾಲ್‌ಬಾಗ್‌ಗೆ ಹೋಗಿ ಬಂದರೆ ಸ್ವರ್ಗಕ್ಕೆ ಹೋದಷ್ಟು ಸಂತೋಷವಾಗುತ್ತಿತ್ತು. ಆದರೆ, ಇತ್ತೀಚಿನ ದಿನಗಳಲ್ಲಿ ನಿರ್ವಹಣೆ ಮಾಡದೆ ಇರುವುದು ಬೇಸರದ ಸಂಗತಿ. ಜನಸ್ಪಂದನ ನಡೆಸಿ ಸಮಸ್ಯೆಗಳ ಕುರಿತು ಜನರಿಗೆ ಪರಿಹಾರ ಒದಗಿಸಬಹುದು ಎಂಬ ಪ್ರಜಾವಾಣಿಯ ಮನವಿಗೆ ತೋಟಗಾರಿಕೆ ಸಚಿವ ಮುನಿರತ್ನ ಅವರು ಸಮ್ಮತಿ ನೀಡದಿರುವುದು ವಿಷಾದದ ಸಂಗತಿ. ರಾಜಕಾರಣಿಗಳಾದವರಿಗೆ ತಮ್ಮ ಕ್ಷೇತ್ರದ ಬಗ್ಗೆ ವಿವರವಾಗಿ ತಿಳಿದಿರುವುದಿಲ್ಲ. ಜನಸ್ಪಂದನ ಕಾರ್ಯಕ್ರಮ ನಡೆಸಿದ್ದರೆ ಸಮಸ್ಯೆಗಳು ಅರ್ಥವಾಗುತ್ತಿತ್ತು. ಇನ್ನೂ ಕಾಲ ಮಿಂಚಿಲ್ಲ.

ಬೆಸಗರಹಳ್ಳಿ ರವಿ ಪ್ರಸಾದ್, ಮೈಸೂರು

ಪ್ರಜಾವಾಣಿ @75

ಲಾಲ್‌ಬಾಗ್‌ನಲ್ಲಿ ನೀವು ಕಂಡ, ಅನುಭವಿಸಿದ ಸಮಸ್ಯೆಗಳ ಕುರಿತು ಸಂಕ್ಷಿಪ್ತವಾಗಿ ಬರೆದು ನಮಗೆ ವಾಟ್ಸ್‌ಆ್ಯಪ್ ಮಾಡಿ. ಜೊತೆಗೆ ನಿಮ್ಮ ಪೂರ್ಣ ವಿಳಾಸ ಹಾಗೂ ಪಾಸ್‌ಪೋರ್ಟ್ ಅಳತೆಯ ಫೋಟೊವನ್ನು 'ಪ್ರಜಾವಾಣಿ'ಗೆ ಕಳಿಸಿ. ಆಯ್ದ ಅನುಭವಗಳು ಪ್ರಕಟವಾಗಲಿವೆ.

9606038256

ಸಂಕ್ಷಿಪ್ತ ಸುದ್ದಿ

ಪತ್ರಿಕಾ ವಿತರಕನ ಕುಟುಂಬಕ್ಕೆ ₹2 ಲಕ್ಷ ಪರಿಹಾರ

ಬೆಂಗಳೂರು: ಐದು ತಿಂಗಳ ಹಿಂದೆ ಅಪಘಾತದಲ್ಲಿ ಮೃತಪಟ್ಟಿದ್ದ ಶಿವಮೊಗ್ಗ ಜಿಲ್ಲೆ ಸಾಗರದ ಪತ್ರಿಕಾ ವಿತರಕ ಗಣೇಶ್ ಅವರ ಕುಟುಂಬಕ್ಕೆ ಸರ್ಕಾರ ₹ 2 ಲಕ್ಷ ಪರಿಹಾರ ಬಿಡುಗಡೆ ಮಾಡಿದೆ.

ಇದೇ ವರ್ಷದ ಜುಲೈನಲ್ಲಿ ಪತ್ರಿಕೆ ಹಂಚುವ ವೇಳೆ ಸಾರಿಗೆ ಸಂಸ್ಥೆ ಬಸ್ ಡಿಕ್ಕಿ ಹೊಡೆದು ಗಣೇಶ್ ಸ್ಥಳದಲ್ಲೇ ಮೃತಪಟ್ಟಿದ್ದರು. ಮೃತರ ಕುಟುಂಬಕ್ಕೆ ಸೂಕ್ತ ಪರಿಹಾರ ದೊರಕಿಸುವಂತೆ ಕರ್ನಾಟಕ ಕಾರ್ಯನಿರತ ಪತ್ರಕರ್ತರ ಸಂಘ, ವಿತರಕರ ಒಕ್ಕೂಟ ಸರ್ಕಾರಕ್ಕೆ ಮನವಿ ಮಾಡಿದ್ದವು.

'ಪತ್ರಿಕಾ ವಿತರಕರನ್ನು ಅಸಂಘಟಿತ ವಲಯದ ಕಾರ್ಮಿಕರು ಎಂದು ಪರಿಗಣಿಸಿದ ಕಾರ್ಮಿಕ ಇಲಾಖೆ, ಪರಿಹಾರ ನೀಡಲು ಒಪ್ಪಿಗೆ ನೀಡಿತ್ತು. ಸರ್ಕಾರ ಬಿಡುಗಡೆ ಮಾಡಿದ ಹಣ ಗಣೇಶ್ ಅವರ ಕುಟುಂಬಸ್ಥರ ಖಾತೆಗೆ ಜಮೆಯಾಗಿದೆ' ಎಂದು ಪತ್ರಕರ್ತರ ಸಂಘದ ಅಧ್ಯಕ್ಷ ಶಿವಾನಂದ ತಗಡೂರು ಮಾಹಿತಿ ನೀಡಿದ್ದಾರೆ.

ನಟ ದ್ವಾರಕೀಶ್ ಸೇರಿ ಮೂವರಿಗೆ ಗೌರವ ಡಾಕ್ಟರೇಟ್



ದ್ವಾರಕೀಶ್

ಬೆಂಗಳೂರು: ಬೆಂಗಳೂರು ವಿಶ್ವವಿದ್ಯಾಲಯವು ಈ ಬಾರಿ ಮೂವರಿಗೆ ಗೌರವ ಡಾಕ್ಟರೇಟ್ ನೀಡಲು ನಿರ್ಧರಿಸಿದೆ.

ಚಿತ್ರನಟ ಬಿ.ಎಸ್. ದ್ವಾರಕೀಶ್, ಕಲಾವಿದ ಡಾ.ಟಿ. ಅನಿಲ್ ಕುಮಾರ್ ಮತ್ತು ಅಮೆರಿಕದ ಕನ್ನಡ ಕೂಟಗಳ ಸಂಘಟನೆ (ಅಕ್ಕ) ಅಧ್ಯಕ್ಷ ಅಮರನಾಥ್ ಗೌಡ ಅವರಿಗೆ ಗೌರವ ಡಾಕ್ಟರೇಟ್ ಪದವಿ ನೀಡಲು ನಿರ್ಧರಿಸಲಾಗಿದೆ.

ಡಿ.5ರಂದು ನಡೆಯಲಿರುವ ವಿಶ್ವವಿದ್ಯಾಲಯದ 57ನೇ ವಾರ್ಷಿಕ ಘಟಿಕೋತ್ಸವದಲ್ಲಿ ಗೌರವ ಡಾಕ್ಟರೇಟ್ ಪ್ರದಾನ ಮಾಡಲಾಗುವುದು. ಯುಜಿಸಿ ಮುಖ್ಯಸ್ಥ ಪ್ರೊ. ಎಂ. ಜಗದೇಶ್ ಕುಮಾರ್ ಅವರು ಘಟಿಕೋತ್ಸವ ಭಾಷಣ ಮಾಡಲಿದ್ದಾರೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ.

ಸ್ಥಗಿತಗೊಳ್ಳಲಿದೆ ಅಮೆಜಾನ್ ಫುಡ್

ನವದೆಹಲಿ (ರಾಯಿಟರ್ಸ್): ಅಮೆಜಾನ್ ಕಂಪನಿಯು ಬೆಂಗಳೂರಿನಲ್ಲಿ ಪರೀಕ್ಷಾರ್ಥವಾಗಿ ಆರಂಭಿಸಿದ್ದ, ಆಹಾರ ವಸ್ತುಗಳನ್ನು ಮನೆಬಾಗಿಲಿಗೆ ತಲುಪಿಸುವ ಸೇವೆ (ಅಮೆಜಾನ್ ಫುಡ್) ಸ್ಥಗಿತಗೊಳ್ಳಲಿದೆ.

'ನಮ್ಮ ವಾರ್ಷಿಕ ಪರಿಶೀಲನೆಗಳ ಭಾಗವಾಗಿ ನಾವು ಈ ತೀರ್ಮಾನ ಕೈಗೊಂಡಿದ್ದೇವೆ' ಎಂದು ಕಂಪನಿಯ ವಕ್ತಾರರೊಬ್ಬರು ತಿಳಿಸಿದ್ದಾರೆ.

'ಈ ಸೇವೆಯನ್ನು ನಾವು ಹಂತ ಹಂತವಾಗಿ ನಿಲ್ಲಿಸಲಿದ್ದೇವೆ' ಎಂದು ತಿಳಿಸಿದ್ದಾರೆ. ಕಂಪನಿಯು ತನ್ನ 'ಅಮೆಜಾನ್ ಅಕಾಡೆಮಿ'ಯನ್ನು ಸ್ಥಗಿತಗೊಳಿಸುತ್ತಿರುವುದಾಗಿ ಗುರುವಾರ ಹೇಳಿದೆ.

ತ್ಯಾಜ್ಯ ವಿಂಗಡಣೆಯಲ್ಲಿ ಬೆಂಗಳೂರು ವಿಶ್ವವಿದ್ಯಾಲಯ ವಿಫಲ ● ಸಂಸ್ಕರಣೆ – ಪಾಲನೆಯಾಗದ ಸರ್ಕಾರದ ಆದೇಶ

ಕಸ ಸಂಗ್ರಹ ಸ್ಥಗಿತಕ್ಕೆ ಬಿಬಿಎಂಪಿ ನಿರ್ಧಾರ

● ಆರ್. ಮಂಜುನಾಥ್

ಬೆಂಗಳೂರು: ಬೆಂಗಳೂರು ವಿಶ್ವವಿದ್ಯಾಲಯದ ಜ್ಞಾನಭಾರತಿ ತ್ಯಾಜ್ಯ ವಿಂಗಡಣೆ ಮಾಡದ್ದರಿಂದ ಬಿಬಿಎಂಪಿ ಜನವರಿಯಿಂದ ತ್ಯಾಜ್ಯ ಸಂಗ್ರಹವನ್ನು ನಿಲ್ಲಿಸಲಿದೆ.

'ಬೆಂಗಳೂರು ವಿವಿಯ ಎಲ್ಲ ವಿಭಾಗ, ಎಲ್ಲ ವಿದ್ಯಾರ್ಥಿನಿಲಯಗಳಿಂದ ಉತ್ಪತ್ತಿಯಾಗುವ ಘನತ್ಯಾಜ್ಯವನ್ನು ಹಸಿ, ಒಣ, ಜೈವಿಕ ಎಂದು ಪ್ರತ್ಯೇಕವಾಗಿ ವಿಂಗಡಿಸುತ್ತಿಲ್ಲ ಮತ್ತು ತ್ಯಾಜ್ಯ ಸಂಸ್ಕರಣೆಗೆ ಯಾವುದೇ ಕ್ರಮ ಕೈಗೊಳ್ಳದೇ ಇರುವುದರಿಂದ ಘನತ್ಯಾಜ್ಯ ಸಂಗ್ರಹ ಸೇವೆಯನ್ನು ನಿಲ್ಲಿಸುತ್ತೇವೆ' ಎಂದು ರಾಜರಾಜೇಶ್ವರಿನಗರ ವಲಯದ ಜಂಟಿ ಆಯುಕ್ತರು ಬೆಂಗಳೂರು ವಿವಿ ಕುಲಪತಿಯವರಿಗೆ ಪತ್ರ ಬರೆದಿದ್ದಾರೆ.

ಪ್ರಜಾವಾಣಿಯಲ್ಲಿ 'ಜ್ಞಾನಭಾರತಿ ಆವರಣದಲ್ಲಿ ಕಸಕ್ಕೆ ಬೆಂಕಿ' ಶೀರ್ಷಿಕೆಯಡಿ ಅ.28ರಂದು ವರದಿ ಪ್ರಕಟವಾಗಿತ್ತು. ಇದನ್ನೂ ಬಿಬಿಎಂಪಿ ನೋಟಿಸ್‌ನಲ್ಲಿ ನಮೂದಿಸಿದೆ.

ವಿಶ್ವವಿದ್ಯಾಲಯದ ಜ್ಞಾನಭಾರತಿ ಕ್ಯಾಂಪಸ್‌ನಲ್ಲಿ ಘನತ್ಯಾಜ್ಯ ನಿರ್ವಹಣೆ ಮಾಡಲಾಗುತ್ತಿಲ್ಲ. ವಿದ್ಯಾರ್ಥಿನಿಲಯಗಳಲ್ಲಿನ ತ್ಯಾಜ್ಯವನ್ನು ವಿವಿ ಆವರಣದಲ್ಲೇ ಸಂಸ್ಕರಿಸಲು ಸರ್ಕಾರದ ಆದೇಶವಿದ್ದರೂ ಅದನ್ನು ಪಾಲಿಸುತ್ತಿಲ್ಲ. ಈ ಬಗ್ಗೆ ಕ್ರಮ ಕೈಗೊಳ್ಳಿ ಎಂದು 2021ರ ಏಪ್ರಿಲ್‌ನಿಂದಲೂ ಬಿಬಿಎಂಪಿ 'ನೆನಪೋಲೆ'ಗಳನ್ನು ಕಳುಹಿಸುತ್ತಿದೆ.

ಬಿಬಿಎಂಪಿಯ ಪತ್ರಗಳಿಗೆ ವಿಶ್ವವಿದ್ಯಾಲಯದಿಂದ ಈವರೆಗೆಯೂ ಯಾವುದೇ ಉತ್ತರ ಬಂದಿಲ್ಲ. ಆದರೆ ಒಂಬತ್ತು ವಿದ್ಯಾರ್ಥಿನಿಲಯಗಳಿದ್ದು, ಹೆಚ್ಚಿನ ಗಾಡಿಯನ್ನು ಒದಗಿಸಬೇಕು ಎಂದು ಕುಲಸಚಿವರು ಪತ್ರ ಬರೆದಿದ್ದಾರೆ. ಆದರೆ, ಸರ್ಕಾರ ಹಾಗೂ ಬಿಬಿಎಂಪಿ ಸೂಚಿಸಿದಂತೆ ತ್ಯಾಜ್ಯ ಸಂಸ್ಕರಿಸುವ ಘಟಕ ಸ್ಥಾಪನೆ ಬಗ್ಗೆ ಯಾವುದೇ ಮಾಹಿತಿಯನ್ನು ವಿಶ್ವವಿದ್ಯಾಲಯ ಈವರೆಗೂ ನೀಡಿಲ್ಲ.

ವಿವಿ ವಿದ್ಯಾರ್ಥಿನಿಲಯಗಳು, ಎಂಜಿನಿಯರಿಂಗ್, ಸ್ನಾತಕೋತ್ತರ ವಿಭಾಗ ಹಾಗೂ ಆಡಳಿತ ವಿಭಾಗದಿಂದ ಹೆಚ್ಚಿನ ತ್ಯಾಜ್ಯ ಸಂಗ್ರಹವಾಗುತ್ತಿದ್ದು, ಇದು 'ಬೃಹತ್ ಪ್ರಮಾಣದ ತ್ಯಾಜ್ಯ ಉತ್ಪಾದಕ' ವ್ಯಾಪ್ತಿಗೆ ಬರುತ್ತದೆ. ಆದ್ದರಿಂದ ವಿವಿ ಆವರಣದಲ್ಲೇ ತ್ಯಾಜ್ಯ ಸಂಸ್ಕರಿಸಲು, ವಿಲೇವಾರಿ ಮಾಡಲು ಕ್ರಮ ಕೈಗೊಳ್ಳಬೇಕು ಎಂದು 2022ರ ಮಾರ್ಚ್‌ನಲ್ಲಿ ರಾಜರಾಜೇಶ್ವರಿ ವಲಯದ ಜಂಟಿ ಆಯುಕ್ತರು ಸೂಚಿಸಿದ್ದರು. 'ಇದ್ಯಾವುದೂ ಇಂದಿಗೂ ಪಾಲನೆ ಆಗಿಲ್ಲ. ಈ ಎಲ್ಲ ಅಂಶಗಳ ವರದಿ ಆಧಾರದ ಮೇಲೆ ವಿವಿ ಆವರಣದಲ್ಲಿ ಕಸ ಸಂಗ್ರಹಿಸುವುದನ್ನು ನಿಲ್ಲಿಸುತ್ತೇವೆ' ಎಂದು ನೋಟಿಸ್‌ನಲ್ಲಿ ತಿಳಿಸಲಾಗಿದೆ.

ಬೆಂಗಳೂರು ವಿವಿ ನ.21ರಂದು ನಡೆಸಿದ ಸ್ವಚ್ಛತಾ ಅಭಿಯಾನದಲ್ಲಿ ಸಂಗ್ರಹಿಸಿದ ಪ್ರತ್ಯೇಕಿಸದ ಕಸ ಶುಕ್ರವಾರ ಸಂಜೆಯೂ ಆವರಣದಲ್ಲೇ ಇತ್ತು

ಸಿಬ್ಬಂದಿಗೆ ಧಮಕಿ

ಬೆಂಗಳೂರು ವಿಶ್ವವಿದ್ಯಾಲಯದ ವತಿಯಿಂದ ನ.22ರಂದು 'ಸ್ವಚ್ಛತಾ ಅಭಿಯಾನವನ್ನು' ನಡೆಸಲಾಗಿತ್ತು. ಈ ಸಂದರ್ಭದಲ್ಲಿ ಎಲ್ಲ ತ್ಯಾಜ್ಯವನ್ನು ಪ್ಲಾಸ್ಟಿಕ್ ಚೀಲದಲ್ಲಿ ತಂದು ಕಡೆ ಸುರಿಯಲಾಗಿದೆ. ತ್ಯಾಜ್ಯವನ್ನು ವಿಂಗಡಿಸಿಲ್ಲ. ಸ್ಯಾನಿಟರಿ ನ್ಯಾಪ್‌ಕಿನ್ ಸೇರಿ ಹಸಿ, ಒಣ ಮತ್ತು ಜೈವಿಕ ತ್ಯಾಜ್ಯವನ್ನೆಲ್ಲ ಒಟ್ಟುಗೂಡಿಸಿ ರಾಶಿರಾಶಿ ಹಾಕಲಾಗಿದೆ. ಕಸ ವಿಂಗಡಣೆ ಮಾಡಿ ಕೊಡದ ಹೊರತು ತೆಗೆದುಕೊಂಡು ಹೋಗದಿರಲು ಬಿಬಿಎಂಪಿ ತಿಳಿಸಿದೆ. ಈ ಬಗ್ಗೆ ವಿಶ್ವವಿದ್ಯಾಲಯದ ಕುಲಸಚಿವ ಹಾಗೂ ಬಿಬಿಎಂಪಿ ತ್ಯಾಜ್ಯ ವಿಭಾಗದ ಸಿಬ್ಬಂದಿ ನಡುವೆ ಸಾಕಷ್ಟು ಜಟಾಪಟಿಯೂ ನಡೆದಿದೆ. 'ನಾವು ನೀಡಿದ್ದನ್ನು ತೆಗೆದುಕೊಂಡು ಹೋಗಿ... ನಿಮ್ಮ ಮೇಲಿನ ಅಧಿಕಾರಿಗಳಿಗೆ ಹೇಳಿ, ಪಾಠ ಕಲಿಸುತ್ತೇವೆ' ಎಂದು ಕೂಗಾಡಿದ್ದಾರೆ. ಈ ಕಸ ನ.25ರ ಸಂಜೆಯೂ ವಿವಿ ಆವರಣದಲ್ಲೇ ಬಿದ್ದಿತ್ತು.

ಹೊರಗಿನಿಂದ ಕಸ...

ವಿಶ್ವವಿದ್ಯಾಲಯದಲ್ಲಿ ಸ್ವಚ್ಛತೆಗೆ ಆದ್ಯತೆ ನೀಡಲಾಗಿದೆ. ವಿದ್ಯಾರ್ಥಿಗಳು, ಶಿಕ್ಷಕರು, ಸಿಬ್ಬಂದಿ ಸೇರಿ ವಿಶ್ವವಿದ್ಯಾಲಯದ ಆವರಣವನ್ನು ಇತ್ತೀಚೆಗೆ ಸಂಪೂರ್ಣವಾಗಿ ಸ್ವಚ್ಛಗೊಳಿಸಿದ್ದಾರೆ. ಆದರೆ, ಹೊರಗಡೆಯಿಂದ ತಂದು ಆವರಣದಲ್ಲಿ ಕಸ ಎಸೆಯುವವರೇ ಹೆಚ್ಚಾಗಿದ್ದಾರೆ. ಕೆಲವರು ಕಾರಿನಲ್ಲಿ ಆಗಮಿಸಿ ಕಸ ಎಸೆಯುತ್ತಿದ್ದಾರೆ. ಇವರನ್ನು ನಿಯಂತ್ರಿಸುವುದು ಸವಾಲಾಗಿದೆ. ಈ ಬಗ್ಗೆ ನಿಗಾವಹಿಸಿ ನಿಯಂತ್ರಿಸುವಂತೆ ಭದ್ರತಾ ಸಿಬ್ಬಂದಿಗೆ ಸೂಚಿಸಲಾಗಿದೆ. ಜತೆಗೆ, ಬಿಬಿಎಂಪಿ ಸಹಕಾರದೊಂದಿಗೆ ತ್ಯಾಜ್ಯ ಸಂಸ್ಕರಣಾ ಘಟಕ ಸ್ಥಾಪಿಸುವ ಉದ್ದೇಶವಿದೆ.

ಡಾ. ಎಂ.ಎಸ್. ಜಯಕರಶೆಟ್ಟಿ
ಬೆಂಗಳೂರು ವಿಶ್ವವಿದ್ಯಾಲಯದ ಕುಲಪತಿ

ಚುಟುಕು ಸುದ್ದಿ

ಅವಿರೋಧ ಆಯ್ಕೆ

ಯತಿರಾಜು

ಬೆಂಗಳೂರು: ಕರ್ನಾಟಕ ಪತ್ರಕರ್ತರ ಸಹಕಾರ ಸಂಘದ ನೂತನ ಅಧ್ಯಕ್ಷರಾಗಿ ಯತಿರಾಜು ಅವರು ಶುಕ್ರವಾರ ನಡೆದ ಚುನಾವಣೆಯಲ್ಲಿ ಅವಿರೋಧವಾಗಿ ಆಯ್ಕೆಯಾಗಿದ್ದಾರೆ.

ಮೂವರ ನೇಮಕ

ಬೆಂಗಳೂರು: ಮಹಾಲಕ್ಷ್ಮಿಲೇಔಟ್ ವಿಧಾನಸಭಾ ಕ್ಷೇತ್ರ ವ್ಯಾಪ್ತಿಯ ನಂದಿನಿಲೇಔಟ್ ಬ್ಲಾಕ್ ಕಾಂಗ್ರೆಸ್ ಉಪಾಧ್ಯಕ್ಷರಾಗಿ ಕೆ.ಕೆ.ಶೇಖರ್ ಅವರನ್ನು ನೇಮಿಸಲಾಗಿದೆ. ಬೆಂಗಳೂರು ಉತ್ತರ ಜಿಲ್ಲಾ ಕಾಂಗ್ರೆಸ್ ಸಮಿತಿ ಡಿಸಿಸಿ ಸದಸ್ಯರಾಗಿ ಎಂ.ನರಸಿಂಹಯ್ಯ ಹಾಗೂ ಕೆ.ಸುರೇಶ್ ಅವರನ್ನು ನೇಮಿಸಲಾಗಿದೆ ಎಂದು ಪ್ರಕಟಣೆ ತಿಳಿಸಿದೆ.

ತೆರಿಗೆ ವಿನಾಯಿತಿ

ಪುಣೆ (ಪಿಟಿಐ): ₹ 175 ಕೋಟಿಯಷ್ಟು ಆದಾಯ ತೆರಿಗೆ ಪಾವತಿಸುವುದರಿಂದ ಶಿರಡಿಯ ಶ್ರೀಸಾಯಿಬಾಬಾ ದೇವಸ್ಥಾನ ಟ್ರಸ್ಟ್‌ಗೆ ವಿನಾಯಿತಿ ನೀಡಲಾಗಿದೆ.

'ಸುಪ್ರೀಂಕೋರ್ಟ್‌ನ ಆದೇಶದ ಅನ್ವಯ ಆದಾಯ ತೆರಿಗೆ ಇಲಾಖೆ ಈ ಕ್ರಮ ಕೈಗೊಂಡಿದೆ' ಎಂದು ಟ್ರಸ್ಟ್‌ನ ಪ್ರಕಟಣೆ ಶುಕ್ರವಾರ ತಿಳಿಸಿದೆ.

ಚಿತ್ರದುರ್ಗ: ಲೈಂಗಿಕ ಕಿರುಕುಳ ಪ್ರಕರಣ, ಜಾಲತಾಣಗಳಲ್ಲಿ ಆಡಿಯೊ

ಸಂತ್ರಸ್ತೆಯೊಂದಿಗೆ ಸೌಭಾಗ್ಯ ಮಾತುಕತೆ

ಪ್ರಜಾವಾಣಿ ವಾರ್ತೆ

ಚಿತ್ರದುರ್ಗ: ಮುರುಘಾ ಮಠದ ಶಿವಮೂರ್ತಿ ಶರಣರ ವಿರುದ್ಧ ಲೈಂಗಿಕ ಕಿರುಕುಳ ಪ್ರಕರಣ ದಾಖಲಿಸಿದ ಸಂತ್ರಸ್ತ ವಿದ್ಯಾರ್ಥಿನಿಯೊಬ್ಬರೊಂದಿಗೆ ಜಿಲ್ಲಾ ಪಂಚಾಯಿತಿ ಮಾಜಿ ಅಧ್ಯಕ್ಷೆ ಸೌಭಾಗ್ಯ ಬಸವರಾಜನ್ ಮಾತನಾಡಿದ್ದಾರೆ ಎನ್ನಲಾದ ಆಡಿಯೊ ಸಾಮಾಜಿಕ ಜಾಲತಾಣಗಳಲ್ಲಿ ಹರಿದಾಡುತ್ತಿದೆ.

ಬಾಲಮಂದಿರದಿಂದ ಬಿಡುಗಡೆಗೊಂಡು ಪ್ರವಾಸದಲ್ಲಿರುವ ಮೊದಲ ಪ್ರಕರಣದ ಸಂತ್ರಸ್ತ ವಿದ್ಯಾರ್ಥಿನಿಯನ್ನು ಮೊಬೈಲ್ ಫೋನ್ ಮೂಲಕ ಸಂಪರ್ಕಿಸಿದ ಸೌಭಾಗ್ಯ, ಸುಮಾರು 13 ನಿಮಿಷ ಸಂಭಾಷಣೆ ನಡೆಸಿದ್ದಾರೆ. ಜೀವನದಲ್ಲಿ ಜುಗುಪ್ಸೆಗೊಂಡಿರುವ ಬಗ್ಗೆ ವಿದ್ಯಾರ್ಥಿನಿ ನೋವು ತೋಡಿಕೊಂಡಿದ್ದಾಳೆ.

ಶಿವಮೂರ್ತಿ ಶರಣರ ವಿರುದ್ಧ ದೂರು ದಾಖಲಿಸುವಂತೆ ಸಂತ್ರಸ್ತ ವಿದ್ಯಾರ್ಥಿನಿಯರಿಗೆ ಕುಮ್ಮಕ್ಕು ನೀಡಿದ ಆರೋಪ ಸೌಭಾಗ್ಯ ಬಸವರಾಜನ್ ಮೇಲಿದೆ. ಪ್ರಕರಣ ದಾಖಲಾಗುತ್ತಿದ್ದಂತೆ ತಲೆಮರೆಸಿಕೊಂಡಿರುವ ಅವರು ಸಂತ್ರಸ್ತೆಯೊಂದಿಗೆ ಮಾತನಾಡಿದ ಸಂಭಾಷಣೆ ಚರ್ಚೆಗೆ ಗ್ರಾಸವಾಗಿದೆ.

'ನೀನು ಜಾಣೆ, ಬುದ್ಧಿವಂತೆ. ಚಿಕ್ಕ ವಯಸ್ಸಿಗೇ ಎಲ್ಲ ಗೊತ್ತಿದೆ. ಪುಟ್ಟ ಹೃದಯದಲ್ಲಿ ಸಾಕಷ್ಟು ದುಃಖ ತುಂಬಿಕೊಂಡಿದ್ದೀಯ. ವಿದ್ಯಾಭ್ಯಾಸದ ಕಡೆ ಗಮನ ಹರಿಸು. ಎಸ್ಸೆಸ್ಸೆಲ್ಸಿ ಉತ್ತೀರ್ಣಳಾದ ಬಳಿಕ ಇಷ್ಟಪಟ್ಟ ಕಾಲೇಜಿಗೆ ಪ್ರವೇಶ ಕೊಡಿಸುವೆ..' ಎಂದು ಬಾಲಕಿಗೆ ಸೌಭಾಗ್ಯ ಆಶ್ವಾಸನೆ ನೀಡಿರುವುದು ಆಡಿಯೊದಲ್ಲಿದೆ.

'ನೀನು ಸಂತೋಷವಾಗಿರಬೇಕು, ಓದಿ ದೊಡ್ಡವಳಾಗಿ ಜಿಲ್ಲಾಧಿಕಾರಿ ಆಗಬೇಕು ಎಂಬುದು ನಮ್ಮ ಅಪೇಕ್ಷೆ. ಕೊಂಚ ಶ್ರಮ ಹಾಕಿ ಓದಿದರೆ ಖಂಡಿತ ಐಎಎಸ್ ಅಧಿಕಾರಿಯಾಗುತ್ತೀಯ. ಪ್ರವಾಸ ಮುಗಿಸಿ ಚಿತ್ರದುರ್ಗಕ್ಕೆ ಮರಳಿದ ಬಳಿಕ ಸಂಪರ್ಕಿಸು' ಎಂದು ವಿದ್ಯಾರ್ಥಿನಿಗೆ ಸೂಚನೆ ನೀಡಿದ್ದಾರೆ.

ಡಿ.3ರವರೆಗೆ ನ್ಯಾಯಾಂಗ ಬಂಧನ

ಪೋಕ್ಸೊ ಹಾಗೂ ಪರಿಶಿಷ್ಟ ಜಾತಿ, ಪಂಗಡಗಳ ದೌರ್ಜನ್ಯ ತಡೆ ಕಾಯ್ದೆ ಅಡಿ ಬಂಧಿತರಾಗಿರುವ ಮುರುಘಾ ಮಠದ ಶಿವಮೂರ್ತಿ ಶರಣರು ಸೇರಿದಂತೆ ಮೂವರು ಆರೋಪಿಗಳ ನ್ಯಾಯಾಂಗ ಬಂಧನದ ಅವಧಿಯನ್ನು ನ್ಯಾಯಾಲಯ ಡಿ.3ರವರೆಗೆ ವಿಸ್ತರಿಸಿದೆ.

ಆರೋಪಿಗಳ ನ್ಯಾಯಾಂಗ ಬಂಧನದ ಅವಧಿ ಶುಕ್ರವಾರ ಮುಕ್ತಾಯಗೊಂಡಿತ್ತು. ಶಿವಮೂರ್ತಿ ಶರಣರು ಎರಡನೇ ಪ್ರಕರಣದಲ್ಲಿ ಜಾಮೀನು ಕೋರಿ ಸಲ್ಲಿಸಿದ್ದ ಅರ್ಜಿಯ ವಿಚಾರಣೆಯೂ ಶುಕ್ರವಾರ ನಡೆಯಿತು. ಆರೋಪಿ ಪರ ವಕೀಲರು ವಾದ ಮಂಡಿಸಿದ್ದು, ಪ್ರತಿವಾದಕ್ಕೆ ಕಾಲಾವಕಾಶ ನೀಡಿ ವಿಚಾರಣೆಯನ್ನು ನ.28ಕ್ಕೆ ಮುಂದೂಡಲಾಯಿತು. ಪ್ರಕರಣ ದಾಖಲಿಸಲು ಸಂತ್ರಸ್ತ ವಿದ್ಯಾರ್ಥಿನಿಯರಿಗೆ ಕುಮ್ಮಕ್ಕು ನೀಡಿದ ಆರೋಪದಲ್ಲಿ ಬಂಧಿತರಾಗಿರುವ ಮಠದ ಮಾಜಿ ಆಡಳಿತಾಧಿಕಾರಿ ಎಸ್.ಕೆ.ಬಸವರಾಜನ್ ಸಲ್ಲಿಸಿದ ಜಾಮೀನು ಅರ್ಜಿಯ ವಿಚಾರಣೆಯನ್ನು ನ್ಯಾಯಾಲಯ ನ.28ಕ್ಕೆ ಮುಂದೂಡಿದೆ.

ಕಾಫಿ: ದರ ಇಳಿಕೆ 'ಬರೆ'

ಅಕಾಲಿಕ ಮಳೆ ಸಂಕಷ್ಟದ ನಡುವೆ ಬೆಳೆಗಾರರಿಗೆ ಆಘಾತ

● ಆದಿತ್ಯ ಕೆ.ಎ.

ಪ್ರಜಾವಾಣಿ ವಿಶೇಷ

ಬೆಂಗಳೂರು: ಹವಾಮಾನ ವೈಪರೀತ್ಯ ಹಾಗೂ ಕಾರ್ಮಿಕರ ಕೊರತೆಯ ಸಂಕಷ್ಟ ಎದುರಿಸುತ್ತಿರುವ ಕಾಫಿ ಬೆಳೆಗಾರರಿಗೆ ದರ ಇಳಿಕೆಯ ಬರೆ ಬಿದ್ದಿದೆ. ಕಾಫಿ ಫಸಲು ಕೊಯ್ಲಿಗೆ ಬಂದಾಗಲೇ ದರ ಇಳಿದಿರುವುದು ಬೆಳೆಗಾರರಿಗೆ ಆಘಾತ ತಂದಿದೆ.

ಜುಲೈ ಹಾಗೂ ಆಗಸ್ಟ್ ತಿಂಗಳಲ್ಲಿ ಅರೇಬಿಕಾ ಕಾಫಿ ಪಾರ್ಚ್‌ಮೆಂಟ್‌ನ 50 ಕೆ.ಜಿ ಚೀಲಕ್ಕೆ ₹ 17 ಸಾವಿರ ಬೆಲೆಯಿತ್ತು. ಈಗ ಅಷ್ಟೇ ತೂಕದ ಅರೇಬಿಕಾ ಕಾಫಿ ಬೆಲೆಯು ಇದೀಗ ₹ 13,200ಕ್ಕೆ ಕುಸಿದಿದೆ.

ಕೊಡಗು, ಹಾಸನ ಹಾಗೂ ಚಿಕ್ಕಮಗಳೂರು ಭಾಗದಲ್ಲಿ ಕಾಫಿ ಕೊಯ್ಲು ಆರಂಭವಾಗಿದೆ. ಬೆಳೆಗಾರರು ಕೊಯ್ಲು ಮಾಡಿದ ಕಾಫಿಯನ್ನು ಒಣಗಿಸಿ ಮಾರುವ ಸಿದ್ಧತೆಯಲ್ಲಿದ್ದರು. ಈಗ ಬೆಲೆ ಇಳಿಕೆಯಿಂದ ಕಂಗಾಲಾಗಿದ್ದಾರೆ.

ಕಾಫಿ ಬೆಳೆಯುವ ರಾಷ್ಟ್ರಗಳಲ್ಲಿ ಕಾಫಿ ಬೆಳೆ ನೆಲಕಚ್ಚಿದ್ದರಿಂದ ಕೆಲವೇ ತಿಂಗಳ ಹಿಂದೆ ಬೆಲೆ ಗರಿಷ್ಠಮಟ್ಟಕ್ಕೆ ತಲುಪಿತ್ತು. ವಾರ್ಷಿಕ ವಹಿವಾಟು ಹೆಚ್ಚಿತ್ತು. ಈ ಬಾರಿ ವಿಪರೀತ ಮಳೆಯಿಂದ ಬಹುತೇಕ ಕಡೆ ಫಸಲು ಉದುರಿದೆ. ಹಿಂದಿನಷ್ಟು ವಹಿವಾಟು ನಿರೀಕ್ಷಿಸುವಂತಿಲ್ಲ ಎಂದು ಕಾಫಿ ಮಂಡಳಿ ಅಧಿಕಾರಿಗಳು ಹೇಳುತ್ತಾರೆ.

ಕಾಫಿ ರಫ್ತು ಪ್ರಮಾಣ ಏರಿದ್ದರಿಂದಾಗಿ ಕೆಲ ತಿಂಗಳ ಹಿಂದೆ ರೊಬಸ್ಟಾದ ಪಾರ್ಚ್‌ಮೆಂಟ್‌ನ ಬೆಲೆ ₹ 10 ಸಾವಿರದ ಗಡಿದಾಟಿತ್ತು. ಈಗ ರೊಬಸ್ಟಾ ಪಾರ್ಚ್‌ಮೆಂಟ್, ಚೆರಿ ಮಾದರಿ ಕಾಫಿ ದರವೂ ಇಳಿಕೆಯಾಗಿದೆ. ಡಿಸೆಂಬರ್ ವೇಳೆಗೆ ಮತ್ತಷ್ಟು ಕುಸಿಯಲಿದೆ ಎಂದು ಖರೀದಿದಾರರು ಹೆದರಿಸುತ್ತಿದ್ದಾರೆ ಎನ್ನುತ್ತಾರೆ ಬೆಳೆಗಾರರು.

'ಖರೀದಿದಾರರಿಂದ ಮೋಸ'

'ಬ್ರೆಜಿಲ್‌ನಲ್ಲಿ ಉತ್ತಮ ಮಳೆ ಆಗಿದ್ದಕ್ಕೆ ಭಾರತದಲ್ಲಿ ಕಾಫಿ ಧಾರಣೆ ಕುಸಿಯುತ್ತಿದೆ ಎಂದು ಖರೀದಿದಾರರು ವಾದಿಸುತ್ತಿದ್ದಾರೆ. ಅಲ್ಲಿ ಈಗ ಮಳೆ ಸುರಿದಿದ್ದರೆ ಮುಂದಿನ ವರ್ಷದ ಫಸಲಿಗೆ ಅನುಕೂಲ. ಬ್ರೆಜಿಲ್‌ನಲ್ಲಿ ಸುರಿದ ಮಳೆಗೂ ದೇಶದಲ್ಲಿ ದರ ಇಳಿಕೆಗೆ ಸಂಬಂಧ ಇಲ್ಲ. ಮುಕ್ತ ಮಾರುಕಟ್ಟೆಯಲ್ಲಿ ಕಾಫಿ ಮಾರಾಟ ನಡೆಯುತ್ತಿದೆ. ಸ್ಥಳೀಯ ಖರೀದಿದಾರರು ಹಾಗೂ ಕಾಫಿ ಕ್ಯೂರಿಂಗ್ ಮಾಲೀಕರೇ ದರ ಇಳಿಸಿ ಮೋಸ ಎಸಗುತ್ತಿದ್ದಾರೆ' ಎಂದು 'ಪ್ರಜಾವಾಣಿ' ಜೊತೆ ಮಾತನಾಡಿದ ಕಾಫಿ ಮಂಡಳಿ ಮಾಜಿ ಉಪಾಧ್ಯಕ್ಷ ಡಾ.ಸಣ್ಣುವಂಡ ಕಾವೇರಪ್ಪ ತಿಳಿಸಿದರು.

ಮುರುಘಾ ಶರಣರ ಪ್ರಕರಣ: 'ಒಡನಾಡಿ' ಸಂಸ್ಥೆಯ ಪರಶುರಾಂ ಆರೋಪ

ಹಿಂದೆ ಸರಿಯಲು ₹ 3 ಕೋಟಿ ಆಮಿಷ

ಪ್ರಜಾವಾಣಿ ವಾರ್ತೆ

ಮೈಸೂರು: 'ಬಾಲಕಿಯರ ಮೇಲೆ ಚಿತ್ರದುರ್ಗದ ಮುರುಘಾ ಮಠದ ಶಿವಮೂರ್ತಿ ಶರಣರ ಲೈಂಗಿಕ ದೌರ್ಜನ್ಯದ ಆರೋಪ ಪ್ರಕರಣದಲ್ಲಿ ಹಿಂದೆ ಸರಿಯುವಂತೆ ಹೇಳಿ ನಮಗೆ ₹ 3 ಕೋಟಿ ಆಮಿಷ ಒಡ್ಡಲಾಗಿತ್ತು. ಸ್ವಾಮೀಜಿ ಅವರನ್ನು ಬಿಟ್ಟು ಬಿಡಿ ಎಂದು ಮಂತ್ರಿ ಮಹೋದಯರೊಬ್ಬರು ಹೇಳಿದ್ದರು' ಎಂದು ಒಡನಾಡಿ ಸಂಸ್ಥೆ ನಿರ್ದೇಶಕ ಎಂ.ಎಲ್.ಪರಶುರಾಂ ಆರೋಪಿಸಿದರು.

ಇಲ್ಲಿನ ಮಹಾರಾಣಿ ವಿಜ್ಞಾನ ಕಾಲೇಜಿನಲ್ಲಿ ಶುಕ್ರವಾರ 'ವಿದ್ಯಾರ್ಥಿಪದಾಧಿಕಾರಿಗಳ ಅಭಿವಿನ್ಯಾಸ' ಕಾರ್ಯಕ್ರಮದಲ್ಲಿ ಮಾತನಾಡಿ, 'ಸಂತ್ರಸ್ತ ಮಕ್ಕಳು ಗೋಳೋ ಎಂದು ಒಂದೆಡೆ ಅಳುತ್ತಿದ್ದರೆ, ಇನ್ನೊಂದೆಡೆ ಹಣದ ಆಮಿಷವನ್ನು ಮುಂದೊಡ್ಡಲಾಗಿತ್ತು. ನಾಚಿಕೆ ಇಲ್ಲದ ನಾಯಕರೊಬ್ಬರು ಸ್ವಾಮೀಜಿ ಪರವಾಗಿ ಮನವಿ ಮಾಡಿದ್ದರು' ಎಂದರು.

'3 ರಿಂದ 16 ವರ್ಷದವರೆಗಿನ, ಸುಮಾರು 23 ಹೆಣ್ಣು ಮಕ್ಕಳ ಮೇಲೆ ಮುರುಘಾ ಸ್ವಾಮೀಜಿ ಲೈಂಗಿಕ ದೌರ್ಜನ್ಯ ಎಸಗಿದ್ದರು. 25 ವರ್ಷಗಳಿಂದ ಇಂತಹ ಕೃತ್ಯ ಎಸಗಿದ್ದಾರೆ. ಚಿಕ್ಕ ಹೆಣ್ಣು ಮಗುವೊಂದು ಕಷ್ಟ ಹೇಳಿಕೊಂಡು, ನಮ್ಮ ಬಳಿಗೆ ಬಂದು, ಸ್ವಾಮೀಜಿ ಕಚ್ಚಿದ್ದ ತನ್ನ ಎದೆಭಾಗವನ್ನು ತೋರಿದಾಗ, ತಂದೆ ಸ್ಥಾನದಲ್ಲಿ ನಿಂತು ಮೌನ ವಹಿಸುವುದಾದರೂ ಹೇಗೆ? ಸತ್ಯ– ನ್ಯಾಯಕ್ಕಾಗಿ ಮಕ್ಕಳ ಪರ ಜೀವ ಇರುವವರೆಗೂ ಹೋರಾಡುತ್ತೇವೆ' ಎಂದರು.

'ಒಡನಾಡಿ'ಯ ತನಿಖೆಗೆ ಮನವಿ

ಶಿವಮೂರ್ತಿ ಶರಣರ ವಿರುದ್ಧ ಷಡ್ಯಂತ್ರ ನಡೆಸಿದ ಪ್ರಕರಣದಲ್ಲಿ ಮೈಸೂರಿನ 'ಒಡನಾಡಿ' ಸೇವಾ ಸಂಸ್ಥೆ ಹಾಗೂ ಅದರ ನಿರ್ದೇಶಕರನ್ನು ತನಿಖೆಗೆ ಒಳಪಡಿಸಬೇಕು ಎಂದು ಮುರುಘಾ ಮಠದ ಸಲಹಾ ಸಮಿತಿ ಸದಸ್ಯ ಜಿತೇಂದ್ರ ಹುಲಿಕುಂಟೆ ಒತ್ತಾಯಿಸಿದ್ದಾರೆ.

ಷಡ್ಯಂತ್ರಕ್ಕೆ ಸಂಬಂಧಿಸಿದಂತೆ ಮಠದ ವತಿಯಿಂದ ದಾಖಲಿಸಿದ ಪ್ರಕರಣದಲ್ಲಿ 'ಒಡನಾಡಿ' ಸಂಸ್ಥೆಯನ್ನು ಮೂರನೇ ಆರೋಪಿಯಾಗಿ ಹೆಸರಿಸಲಾಗಿದೆ. ಸಂಸ್ಥೆಯ ನಿರ್ದೇಶಕರಾದ ಕೆ.ವಿ.ಸ್ಟ್ಯಾನ್ಲಿ ಹಾಗೂ ಎಂ.ಎಲ್. ಪರಶುರಾಮ್ ಅವರನ್ನು ಪೊಲೀಸರು ವಿಚಾರಣೆಗೆ ಒಳಪಡಿಸಬೇಕು ಎಂದು ಕಾನೂನು ಮತ್ತು ಸುವ್ಯವಸ್ಥೆ ವಿಭಾಗದ ಎಡಿಜಿಪಿ ಅಲೋಕ್‌ಕುಮಾರ್ ಅವರಿಗೆ ನೀಡಿದ ಮನವಿಯಲ್ಲಿ ಕೋರಿಕೊಂಡಿದ್ದಾರೆ.

ಹಾಸ್ಟೆಲ್‌ನ 40 ವಿದ್ಯಾರ್ಥಿಗಳ ಮೇಲೆ ಹಲ್ಲೆ

ಕುಡಿದ ಮತ್ತಿನಲ್ಲಿ ಶಾಲಾ ಕಾರ್ಯದರ್ಶಿ ಪುತ್ರನಿಂದ ಕೃತ್ಯ

ಪ್ರಜಾವಾಣಿ ವಾರ್ತೆ

ತುಮಕೂರು: ತಾಲ್ಲೂಕಿನ ಮಲ್ಲಸಂದ್ರದ ವಿಶ್ವಭಾರತಿ ವಸತಿ ಶಾಲೆಯ ವಿದ್ಯಾರ್ಥಿಗಳ ಮೇಲೆ ಅದೇ ಶಾಲೆಯ ಕಾರ್ಯದರ್ಶಿ ಎನ್. ಮೂರ್ತಿ ಅವರ ಪುತ್ರ ಭರತ್ ಹಲ್ಲೆ ನಡೆಸಿದ್ದಾರೆ. ಹಾಸ್ಟೆಲ್ ನಲ್ಲಿರುವ ವಿದ್ಯಾರ್ಥಿಗಳು ರಾತ್ರಿ ವೇಳೆ ಬೇಗ ಮಲಗಿದ್ದರು ಎಂಬ ಕಾರಣಕ್ಕೆ ಹಲ್ಲೆ ಮಾಡಲಾಗಿದೆ.

ರಾತ್ರಿ 10 ಗಂಟೆ ಸಮಯದಲ್ಲಿ ಸುಮಾರು 40 ವಿದ್ಯಾರ್ಥಿಗಳನ್ನು ಸಾಲಾಗಿ ನಿಲ್ಲಿಸಿ ಬೆಲ್ಟ್, ದೊಣ್ಣೆಯಿಂದ ಹೊಡೆದಿದ್ದಾರೆ. ದಮ್ಮಯ್ಯ ಮತ್ತೊಮ್ಮೆ ಈ ರೀತಿ ಮಾಡುವುದಿಲ್ಲ ಎಂದು ವಿದ್ಯಾರ್ಥಿಗಳು ಬೇಡಿಕೊಂಡು, ಕಾಲಿಗೆ ಬಿದ್ದರೂ ಬಿಟ್ಟಿಲ್ಲ. ಮರ್ಮಾಂಗದ ಮೇಲೂ ಹೊಡೆದಿದ್ದಾರೆ. ಗಾಯಗೊಂಡ ವಿದ್ಯಾರ್ಥಿಗಳಿಗೆ ಆಡಳಿತ ಮಂಡಳಿಯವರು ಚಿಕಿತ್ಸೆಯನ್ನೂ ಕೊಡಿಸಿಲ್ಲ.

ನ. 21ರಂದು ಈ ಘಟನೆ ನಡೆದಿದ್ದು, ನಾಲ್ಕು ದಿನಗಳ ನಂತರ ಪೋಷಕರಿಗೆ ಗೊತ್ತಾಗಿದೆ. ನ. 24 ರಂದು (ಗುರುವಾರ) ಶಾಲೆಗೆ ಬಂದ ಪೋಷಕರು ಮಕ್ಕಳ ಮೇಲೆ ನಡೆದಿರುವ ಹಲ್ಲೆ ನೋಡಿ ಆತಂಕಗೊಂಡಿದ್ದಾರೆ.

ಹಲ್ಲೆ ದೃಢ: ಡಿಡಿಪಿಐ

'ವಿಷಯ ತಿಳಿಯುತ್ತಿದ್ದಂತೆ ಸ್ಥಳಕ್ಕೆ ತೆರಳಿ ಪರಿಶೀಲಿಸಿದ್ದು, ವಿದ್ಯಾರ್ಥಿಗಳ ಮೇಲೆ ಹಲ್ಲೆ ನಡೆಸಿರುವುದು ದೃಢಪಟ್ಟಿದೆ. ತಕ್ಷಣ ಪೊಲೀಸ್ ಠಾಣೆಯಲ್ಲಿ ದೂರು ದಾಖಲಿಸಲಾಗಿದೆ. ಇದು ಅನುದಾನಿತ ಶಾಲೆಯಾಗಿದ್ದು, ಹಾಸ್ಟೆಲ್‌ಗೆ ಸಮಾಜ ಕಲ್ಯಾಣ ಇಲಾಖೆಯು ಅನುದಾನ ನೀಡುತ್ತಿದೆ' ಎಂದು ಡಿಡಿಪಿಐ ಸಿ. ನಂಜಯ್ಯ ಸ್ಪಷ್ಟಪಡಿಸಿದರು.

ಯುವತಿ ಜೊತೆಗಿದ್ದ ಯುವಕನಿಗೆ ಹಲ್ಲೆ

ಮಂಗಳೂರು: ಹಿಂದೂ ಯುವತಿಯ ಜೊತೆಗೆ ಪ್ರಯಣಿಸುತ್ತಿದ್ದ ಮುಸ್ಲಿಂ ಯುವಕನಿಗೆ ಸಂಘಪರಿವಾರದ ಸಂಘಟನೆಯ ಕಾರ್ಯಕರ್ತರು ನಗರದ ನಂತೂರು ಜಂಕ್ಷನ್ ಬಳಿ ಗುರುವಾರ ಸಂಜೆ ಹಲ್ಲೆ ನಡೆಸಿದ್ದು, ಈ ಬಗ್ಗೆ ಕದ್ರಿ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಹಲ್ಲೆಗೊಳಗಾದ ಯುವಕನನ್ನು ಕಾರ್ಕಳ ತಾಲ್ಲೂಕಿನ ಖಾಸಗಿ ಕಾಲೇಜಿನ ವಿದ್ಯಾರ್ಥಿ ಸೈಯದ್ ರಶೀಮ್ ಉಮರ್ (20) ಎಂದು ಗುರುತಿಸಲಾಗಿದೆ.

ಕಾರ್ಕಳ-ನಿಟ್ಟೆ ಮಾರ್ಗವಾಗಿ ಮಂಗಳೂರಿಗೆ ಬರುತ್ತಿದ್ದ ಬಸ್‌ನಲ್ಲಿ ರಶೀಮ್, ಯುವತಿ ಜೊತೆ ಪ್ರಯಾಣಿಸುತ್ತಿದ್ದರು.

'ನಂತೂರು ಜಂಕ್ಷನ್‌ನಲ್ಲಿ ನಾಲ್ಕೈದು ಯುವಕರು ಬಸ್ಸಿನೊಳಗೆ ನುಗ್ಗಿ ಏಕಾಏಕಿಯಾಗಿ ಅವಾಚ್ಯ ಶಬ್ದಗಳಿಂದ ಬೈದರು. ಬಸ್‌ನಿಂದ ಕೆಳಗೆ ಇಳಿಸಿ ದೊಣ್ಣೆ ಮತ್ತು ಬೆತ್ತದಿಂದ ಹಲ್ಲೆ ನಡೆಸಿದರು. ಈ ವಿಷಯ ಯಾರಿಗಾದರೂ ಹೇಳಿದರೆ ಜೀವ ಸಹಿತ ಬಿಡುವುದಿಲ್ಲ ಎಂದು ಬೆದರಿಕೆ ಹಾಕಿದರು' ಎಂದು ಸೈಯದ್ ದೂರಿನಲ್ಲಿ ತಿಳಿಸಿದ್ದಾರೆ.

ಈ ಘಟನೆ ಕುರಿತ ಟ್ವೀಟ್ ಒಂದಕ್ಕೆ ಪ್ರತಿಕ್ರಿಯಿಸಿರುವ ಎಡಿಜಿಪಿ (ಕಾನೂನು ಸುವ್ಯವಸ್ಥೆ) ಅಲೋಕ್ ಕುಮಾರ್, 'ಈ ಘಟನೆಗೆ ಸಂಬಂಧಿಸಿ ಕ್ರಮಕೈಗೊಳ್ಳಲಾಗುತ್ತಿದೆ' ಎಂದು ತಿಳಿಸಿದ್ದಾರೆ.

ಚಿತ್ರಾವಳಿ

ಎಂ.ಎಸ್. ರಾಮಯ್ಯ ತಾಂತ್ರಿಕ ವಿಶ್ವವಿದ್ಯಾಲಯ ತನ್ನ ವಜ್ರಮಹೋತ್ಸವದ ಪ್ರಯುಕ್ತ ನಗರದಲ್ಲಿ ಶುಕ್ರವಾರ ಆಯೋಜಿಸಿದ ರಾಷ್ಟ್ರಮಟ್ಟದ ಹ್ಯಾಕಥಾನ್‌ನಲ್ಲಿ ಅಮೆರಿಕದ ಎಂಟರ್‌ಪ್ರೈಸ್ ಕಂಪ್ಯೂಟಿಂಗ್ ಸಲ್ಯೂಷನ್ಸ್‌ನ ಉಪಾಧ್ಯಕ್ಷ ಕೇನ್ ಹೆನ್ರಿ ಅವರನ್ನು ವಿಶ್ವವಿದ್ಯಾಲಯದ ಉಪಾಧ್ಯಕ್ಷ ಎಂ.ಆರ್. ಸೀತಾರಾಮ್ ಸನ್ಮಾನಿಸಿದರು.

ಮಾಗಡಿ ರಸ್ತೆಯ ಕೆಂಗುಂಟೆಯಲ್ಲಿ ಹಮ್ಮಿಕೊಂಡಿದ್ದ 6ನೇ ರಾಜ್ಯಮಟ್ಟದ ಮಾನವ ಸಂಪನ್ಮೂಲ ಕನ್ನಡ ಸಮ್ಮೇಳನದಲ್ಲಿ ಮಾನವ ಸಂಪನ್ಮೂಲ ಕ್ಷೇತ್ರದಲ್ಲಿ ಸಾಧನೆ ಮಾಡಿದ ಸಾಧಕರನ್ನು ಚಿತ್ರ ನಿರ್ದೇಶಕ ಟಿ.ಎಸ್. ನಾಗಾಭರಣ ಸನ್ಮಾನಿಸಿದರು. ಸಮ್ಮೇಳನದ ಅಧ್ಯಕ್ಷ ಕವಿ ಎಚ್.ಎಸ್. ವೆಂಕಟೇಶ್ ಮೂರ್ತಿ, ಹೈಕೋರ್ಟ್ ಹಿರಿಯ ವಕೀಲ ಎಚ್.ಎಸ್.ಮೂರ್ತಿ, ನಿರಾತಂಕ ಸೇವಾ ಸಂಸ್ಥೆಯ ಎಂ.ಎಚ್.ರಮೇಶ್ ಮತ್ತಿತರರು ಇದ್ದಾರೆ.

ದೇವಸ್ಥಾನದ ಕೊಠಡಿಯಲ್ಲಿ ಬೆಂಕಿ ಅವಘಡ

ಅರ್ಚಕ ನಾಗರಾಜಯ್ಯ ಸಾವಿನಲ್ಲಿ ಅನುಮಾನ: ಮುಂದುವರಿದ ತನಿಖೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಜಯನಗರ 4ನೇ ಹಂತದಲ್ಲಿರುವ ಶ್ರೀ ವರಸಿದ್ಧಿ ವಿನಾಯಕ ದೇವಸ್ಥಾನದ ಕೊಠಡಿಯಲ್ಲಿ ಬೆಂಕಿ ಅವಘಡ ಸಂಭವಿಸಿದ್ದು, ತೀವ್ರ ಗಾಯಗೊಂಡಿದ್ದ ದೇವಸ್ಥಾನದ ಅರ್ಚಕ ಸಿ. ನಾಗರಾಜಯ್ಯ (61) ಎಂಬುವವರು ಚಿಕಿತ್ಸೆಗೆ ಸ್ಪಂದಿಸದೇ ಆಸ್ಪತ್ರೆಯಲ್ಲಿ ಮೃತಪಟ್ಟಿದ್ದಾರೆ.

'ನಾಗರಾಜಯ್ಯ ಅವರು 35 ವರ್ಷಗಳಿಂದ ಅರ್ಚಕರಾಗಿ ಕೆಲಸ ಮಾಡುತ್ತಿದ್ದರು. ನ. 18ರಂದು ದೇವಸ್ಥಾನಕ್ಕೆ ಬೇಕಾಗಿದ್ದ ಪ್ರಸಾದ ಸಿದ್ಧಪಡಿಸುವ ಸಂದರ್ಭದಲ್ಲಿ ಬೆಂಕಿ ಹೊತ್ತಿಕೊಂಡಿತ್ತು. ಅವಘಡದಲ್ಲಿ ಗಾಯಗೊಂಡಿದ್ದ ನಾಗರಾಜಯ್ಯ ಅವರನ್ನು ಸೇಂಟ್ ಜಾನ್ಸ್ ಆಸ್ಪತ್ರೆಗೆ ದಾಖಲಿಸಲಾಗಿತ್ತು. ಅವರು ನ. 23ರಂದು ಬೆಳಿಗ್ಗೆ ತೀರಿಕೊಂಡಿದ್ದಾರೆ' ಎಂದು ಜಯನಗರ ಪೊಲೀಸರು ಹೇಳಿದರು.

ನಾಗರಾಜಯ್ಯ

'ನಾಗರಾಜಯ್ಯ ಸಾವಿನ ಬಗ್ಗೆ ಪ್ರಕರಣ ದಾಖಲಿಸಿಕೊಂಡು, ಎಲ್ಲ ಆಯಾಮಗಳಲ್ಲಿ ತನಿಖೆ ಮುಂದುವರಿಸಲಾಗಿದೆ. ಇದು ಅನುಮಾನಾಸ್ಪದ ಸಾವು ಎಂದೂ ಕೆಲವರು ಆರೋಪಿಸುತ್ತಿದ್ದಾರೆ. ಅವಘಡ ಆಕಸ್ಮಿಕವೋ ಅಥವಾ ಬೇರೆ ಏನಾದರೂ ಕಾರಣವಿದೆಯೋ ಎಂಬುದು ತನಿಖೆಯಿಂದ ಗೊತ್ತಾಗಬೇಕಿದೆ' ಎಂದು ತಿಳಿಸಿದರು.

ಅಡುಗೆ ಅನಿಲ ಸೋರಿಕೆಯಿಂದ ಬೆಂಕಿ: 'ದೇವಸ್ಥಾನದ ಒಳಭಾಗದಲ್ಲೇ ಕೊಠಡಿ ಇದೆ. ಕೊಠಡಿಗೆ ಹೋಗಿದ್ದ ನಾಗರಾಜಯ್ಯ, ಪ್ರಸಾದ ತಯಾರಿಸಲು ಸಿದ್ಧರಾಗಿದ್ದರು. ಅಡುಗೆ ಅನಿಲ ಸಿಲಿಂಡರ್ ಆನ್ ಮಾಡಿದ್ದರು. ಆದರೆ, ಅಕ್ಕ-ಪಕ್ಕದಲ್ಲಿ ಲೈಟರ್ ಹಾಗೂ ಬೆಂಕಿಪೊಟ್ಟಣ ಇರಲಿಲ್ಲ. ಅದಕ್ಕಾಗಿ ಹುಡುಕಾಟ ಆರಂಭಿಸಿದ್ದರು' ಎಂದು ಪೊಲೀಸರು ಹೇಳಿದರು.

'ಕೆಲ ನಿಮಿಷಗಳ ನಂತರ ಸಿಕ್ಕ ಬೆಂಕಿ ಪೊಟ್ಟಣದಲ್ಲಿದ್ದ ಕಡ್ಡಿಯನ್ನು ಗೀರಿದ್ದರು. ಅದಕ್ಕೂ ಮುನ್ನವೇ ಕೊಠಡಿಯಲ್ಲಿ ಅಡುಗೆ ಅನಿಲ ಸೋರಿಕೆಯಾಗಿತ್ತು. ಕಡ್ಡಿ ಗೀರುತ್ತಿದ್ದಂತೆ ಬೆಂಕಿ ಹೊತ್ತಿಕೊಂಡು ಉರಿಯಲಾರಂಭಿಸಿತ್ತು. ನಾಗರಾಜಯ್ಯ ಅವರ ಮೈಗೂ ಬೆಂಕಿ ಹೊತ್ತಿಕೊಂಡಿತ್ತು. ರಕ್ಷಣೆಗಾಗಿ ಚೀರಾಡಿದ್ದರು.'

'ಸಹಾಯಕ್ಕೆ ಹೋಗಿದ್ದ ಬಸವರಾಜ್ ಹಾಗೂ ರವಿ ಎಂಬುವವರು ನಾಗರಾಜಯ್ಯ ಅವರನ್ನು ಕೊಠಡಿಯಿಂದ ಹೊರಗೆ ತಂದು ಸಮೀಪದ ಆಸ್ಪತ್ರೆಗೆ ಕರೆದೊಯ್ದಿದ್ದರು. ಅಲ್ಲಿಂದ, ಹೆಚ್ಚಿನ ಚಿಕಿತ್ಸೆಗಾಗಿ ಸೇಂಟ್ ಜಾನ್ಸ್ ಆಸ್ಪತ್ರೆಗೆ ಸ್ಥಳಾಂತರಿಸಲಾಗಿತ್ತು' ಎಂದು ಪೊಲೀಸರು ತಿಳಿಸಿದರು.

ಎನ್‌ಐಎಗೆ ಹಸ್ತಾಂತರಿಸಿ ಕೇಂದ್ರ ಗೃಹ ಇಲಾಖೆ ಆದೇಶ

ಪ್ರಜಾವಾಣಿ ವಾರ್ತೆ

ಮಂಗಳೂರು: ನಗರದ ಗರೋಡಿಯಲ್ಲಿ ನ.19ರಂದು ಆಟೊರಿಕ್ಷಾದಲ್ಲಿ ಕುಕ್ಕರ್ ಬಾಂಬ್ ಸ್ಫೋಟಗೊಂಡ ಪ್ರಕರಣದ ತನಿಖೆಯನ್ನು ಕೈಗೆತ್ತಿಕೊಳ್ಳುವಂತೆ ಕೇಂದ್ರ ಸರ್ಕಾರವು ರಾಷ್ಟ್ರೀಯ ತನಿಖಾ ಸಂಸ್ಥೆಗೆ (ಎನ್‌ಐಎ) ಸೂಚಿಸಿದೆ.

ಕೇಂದ್ರ ಗೃಹಸಚಿವಾಲಯದ ಭಯೋತ್ಪಾದನೆ ಹಾಗೂ ಉಗ್ರಗಾಮಿ ಚಟುವಟಿಕೆ ಪ್ರತಿರೋಧ ವಿಭಾಗವು ಈ ಕುರಿತು ಬುಧವಾರ (ನ.23) ಆದೇಶ ಹೊರಡಿಸಿದೆ.

'ಕುಕ್ಕರ್ ಬಾಂಬ್ ಸ್ಫೋಟದ ಬಗ್ಗೆ ಆಟೊರಿಕ್ಷಾ ಚಾಲಕ ಕೆ.ಪುರುಷೋತ್ತಮ ಪೂಜಾರಿ ನೀಡಿದ ದೂರಿನ ಆಧಾರದಲ್ಲಿ ಮಂಗಳೂರಿನ ಕಂಕನಾಡಿ ಪೊಲೀಸ್ ಠಾಣೆಯಲ್ಲಿ 1908ರ ಸ್ಫೋಟಕ ಸಾಮಗ್ರಿಗಳ ಕಾಯ್ದೆ, ಭಾರತೀಯ ದಂಡ ಸಂಹಿತೆಯ (ಐಪಿಸಿ) ಸೆಕ್ಷನ್ 120 ಬಿ ಮತ್ತು 307ರ ಅಡಿ ಎಫ್‌ಐಆರ್ ದಾಖಲಾಗಿದೆ.

'ರಾಷ್ಟ್ರೀಯ ತನಿಖಾ ಸಂಸ್ಥೆಯೇ ಇದರ ತನಿಖೆ ನಡೆಸುವ ಅಗತ್ಯ ಇದೆ. ಹಾಗಾಗಿ ಈ ಪ್ರಕರಣದ ತನಿಖೆಯನ್ನು ಎನ್‌ಐಎ ಕೈಗೆತ್ತಿಕೊಳ್ಳಬೇಕು' ಎಂದು ಆದೇಶದಲ್ಲಿ ತಿಳಿಸಲಾಗಿದೆ.

ಎಸ್ಪಿಗೆ ಪತ್ರ ಬರೆದ ಭದ್ರಾವತಿಯ ಯುವಕ

'ಮದುವೆ ಮಾಡಿಕೊಳ್ಳಲು ಹುಡುಗಿ ಹುಡುಕಿಕೊಡಿ'

ಪ್ರಜಾವಾಣಿ ವಾರ್ತೆ

ಶಿವಮೊಗ್ಗ: ಮದುವೆ ಮಾಡಿಕೊಳ್ಳಲು ಹುಡುಗಿ ಹುಡುಕಿಕೊಡುವಂತೆ ಭದ್ರಾವತಿಯ ನಿವಾಸಿ ಒ.ಎಸ್.ಪ್ರವೀಣ್ ಶಿವಮೊಗ್ಗ ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿಗೆ ಮನವಿ ಸಲ್ಲಿಸಿದ್ದಾರೆ.

ಮೂಲತಃ ಆಂಧ್ರಪ್ರದೇಶದ ಮಡಕಶಿರಾದ ನಿವಾಸಿ ಪ್ರವೀಣ್ ಪೋಷಕರು ಕೆಲಸದ ನಿಮಿತ್ತ ಭದ್ರಾವತಿಯಲ್ಲಿ ನೆಲೆಸಿದ್ದಾರೆ. ಪ್ರವೀಣ್ 'ತಾನು ಈ ಹಿಂದೆ ಬೆಂಗಳೂರಿನ ಸಾಫ್ಟ್‌ವೇರ್ ಹಾಗೂ ಚಿಟ್ಸ್ ಕಂಪನಿಗಳಲ್ಲಿ ಕೆಲಸ ಮಾಡಿರುವೆ. ಸದ್ಯ ಭದ್ರಾವತಿಯಲ್ಲಿರುವ ಜಮೀನಿನಲ್ಲಿ ವ್ಯವಸಾಯ ಮಾಡುತ್ತಿರುವೆ' ಎಂದು ಮನವಿ ಪತ್ರದಲ್ಲಿ ತಿಳಿಸಿದ್ದು, ವಿದ್ಯಾರ್ಹತೆ ನಮೂದಿಸಿಲ್ಲ.



ಪತ್ರದಲ್ಲಿ ತಮ್ಮ ಜಾತಿ, ವಿಳಾಸ ಉಲ್ಲೇಖಿಸಿರುವ ಯುವಕ, 'ನಾನು ವಧು ಅನ್ವೇಷಣೆಯಲ್ಲಿ ತೊಡಗಿದ್ದೆ. ಯಾರೂ ಸರಿಹೋಗದ ಆಗದ ಕಾರಣ ನೀವೇ ಹುಡುಗಿ ಹುಡುಕಿಕೊಡಬೇಕು' ಎಂದು ಕೇಳಿದ್ದಾರೆ. ತಮ್ಮ ಬಗ್ಗೆ ಮಾಹಿತಿ ಪಡೆಯಲು ಭದ್ರಾವತಿ ನಗರಸಭೆ ಸದಸ್ಯರೊಬ್ಬರ ಹೆಸರು ಉಲ್ಲೇಖಿಸಿದ್ದಾರೆ.

'ಈ ವಿಚಾರ ನಮ್ಮ ಇಲಾಖೆಗೆ ಸಂಬಂಧಿಸಿದ್ದಲ್ಲ ಎಂಬ ಹಿಂಬರಹ ಸಂಬಂಧಿಸಿದ ವ್ಯಕ್ತಿಗೆ ಕೊಟ್ಟಿದ್ದೇವೆ. ಪತ್ರ ಬರೆದ ವ್ಯಕ್ತಿ ಮಾನಸಿಕ ಅಸ್ವಸ್ಥನೇ ಇಲ್ಲವೇ ಕೀಟಲೆ ಮಾಡಲು ಈ ರೀತಿ ಬರೆದಿದ್ದಾರೆಯೇ ಎಂದು ಪರಿಶೀಲಿಸಲು ಸಂಬಂಧಿಸಿದ ಪೊಲೀಸ್ ಠಾಣೆಗೆ ಸೂಚಿಸಿದ್ದೇನೆ. ದುರುದ್ದೇಶದಿಂದ ಆ ರೀತಿ ಬರೆದಿದ್ದರೆ ಕಾನೂನು ಕ್ರಮ ಕೈಗೊಳ್ಳಲಾಗುವುದು' ಎಂದು ಎಸ್ಪಿ ಜಿ.ಕೆ.ಮಿಥುನ್‌ಕುಮಾರ್ 'ಪ್ರಜಾವಾಣಿ'ಗೆ ತಿಳಿಸಿದರು.

ಬೆಲ್ಜಿಯಂ ಯುವತಿ–ಹಂಪಿ ಯುವಕನ ಸಪ್ತಪದಿ

ಹೊಸಪೇಟೆ (ವಿಜಯನಗರ): ಬೆಲ್ಜಿಯಂ ದೇಶದ ಯುವತಿ ಕೆಮಿಲ್ ಹಾಗೂ ಸ್ಥಳೀಯ ಆಟೊ ಚಾಲಕ, ಪ್ರವಾಸಿ ಮಾರ್ಗದರ್ಶಿ (ಗೈಡ್) ಅನಂತರಾಜು ಅವರ ಮದುವೆ ಇಲ್ಲಿನ ಹಂಪಿ ವಿರೂಪಾಕ್ಷೇಶ್ವರ ದೇವಸ್ಥಾನದಲ್ಲಿ ಶುಕ್ರವಾರ ಹಿಂದೂ ಸಂಪ್ರದಾಯದಂತೆ ನೆರವೇರಿತು.

ವಿರೂಪಾಕ್ಷನ ಸನ್ನಿಧಿಯಲ್ಲಿ ಶುಕ್ರವಾರ ಬೆಳಿಗ್ಗೆ ಕುಂಭಲಗ್ನದಲ್ಲಿ ಶಾಸ್ತ್ರೋಕ್ತವಾಗಿ ಇಬ್ಬರು ಸಪ್ತಪದಿ ತುಳಿದರು. ವಧು-ವರರ ಕುಟುಂಬದವರು, ಸಂಬಂಧಿಕರು, ಪ್ರವಾಸಿ ಮಾರ್ಗದರ್ಶಿಗಳು ಉಪಸ್ಥಿತರಿದ್ದರು. ವಿದೇಶಿ ಯುವತಿಯೊಂದಿಗೆ ಹಂಪಿ ಜನತಾ ಕಾಲೊನಿ ಯುವಕ ವಿವಾಹವಾಗುತ್ತಿರುವುದನ್ನು ಪ್ರವಾಸಿಗರು ಕೂಡ ಕೆಲಹೊತ್ತು ನಿಂತು ಕಣ್ತುಂಬಿಕೊಂಡರು.

ಗುರುವಾರ ಇಬ್ಬರ ನಿಶ್ಚಿತಾರ್ಥವಾಗಿತ್ತು. ಕೆಮಿಲ್ ಅವರು ಐದು ವರ್ಷಗಳ ಹಿಂದೆ ಹಂಪಿ ವೀಕ್ಷಣೆಗೆ ಬಂದಿದ್ದರು. ಆಗ ಅನಂತರಾಜು ಅವರ ಪರಿಚಯವಾಗಿತ್ತು. ಕೆಮಿಲ್ ಅವರು ಬೆಲ್ಜಿಯಂಕ್ಕೆ ಹಿಂತಿರುಗಿದ ನಂತರವೂ ಇಬ್ಬರು ಸಂಪರ್ಕದಲ್ಲಿದ್ದರು. ಪರಿಚಯ, ಸ್ನೇಹಕ್ಕೆ ತಿರುಗಿ ಅನಂತರ ಇಬ್ಬರ ನಡುವೆ ಪ್ರೇಮಾಂಕುರವಾಗಿದೆ. ಹಿಂದೂ ಸಂಸ್ಕೃತಿ, ಸಂಪ್ರದಾಯ, ಆಚರಣೆ, ಧಾರ್ಮಿಕ ನಂಬಿಕೆ, ಕೌಟುಂಬಿಕ ಪದ್ಧತಿಗೆ ಯುವತಿ ಮಾರು ಹೋಗಿದ್ದರು. ಇಬ್ಬರ ಕುಟುಂಬದವರು ಮದುವೆಗೆ ಒಪ್ಪಿಗೆ ಸೂಚಿಸಿದ್ದರಿಂದ ದಾಂಪತ್ಯ ಜೀವನಕ್ಕೆ ಕಾಲಿರಿಸಿದರು.

ಅನಂತರಾಜು ಹಾಗೂ ಕೆಮಿಲ್ ಅವರು ಶುಕ್ರವಾರ ಮದುವೆಯಾದರು

ಕೆಪಿಟಿಸಿಎಲ್: ಮತ್ತೊಬ್ಬನ ಬಂಧನ

ಬೆಳಗಾವಿ: ಕೆಪಿಟಿಸಿಎಲ್ ಕಿರಿಯ ಸಹಾಯಕರ ನೇಮಕಾತಿ ಪರೀಕ್ಷೆಯಲ್ಲಿ ಅಕ್ರಮ ಎಸಗಿದ ಆರೋಪದಡಿ ಮತ್ತೊಬ್ಬ ಆರೋಪಿಯನ್ನು ಶುಕ್ರವಾರ ಬಂಧಿಸಲಾಗಿದೆ. ಇದರೊಂದಿಗೆ ಬಂಧಿತರ ಸಂಖ್ಯೆ 34ಕ್ಕೆ ಏರಿದೆ.



ಬಾಳೇಶ ಕೆಂಚಪ್ಪ

ಮೂಡಲಗಿ ತಾಲ್ಲೂಕಿನ ರಾಜಾಪುರದ ಬಾಳೇಶ ಕೆಂಚಪ್ಪ ಕಟ್ಟಿಕಾರ್ (26) ಬಂಧಿತ. ಪ್ರಕರಣ ಬೆಳಕಿಗೆ ಬಂದಾಗಿನಿಂದ ತಲೆಮರೆಸಿಕೊಂಡಿದ್ದ. ಇದೇ ಪ್ರಕರಣದಲ್ಲಿ ಆರೋಪಿತರಾದ ಸಂಜೀವ್ ಭಂಡಾರಿ, ಮಂಜುನಾಥ ಮಾಳಿ ಮತ್ತು ಶ್ರೀಧರ ಕಟ್ಟಿಕಾರ ಇವರೊಂದಿಗೆ ಸೇರಿ ಎಲೆಕ್ಟ್ರಾನಿಕ್ ಉಪಕರಣಗಳನ್ನು ಅಭ್ಯರ್ಥಿಗಳಿಗೆ ಪೂರೈಸಿದ್ದ ಎಂದು ತನಿಖಾಧಿಕಾರಿ, ಗೋಕಾಕ ಡಿವೈಎಸ್‌ಪಿ ವೀರೇಶ ತಿ. ದೊಡಮನಿ ತಿಳಿಸಿದ್ದಾರೆ.

ಕರ್ನಾಟಕ– ಮಹಾರಾಷ್ಟ್ರ ಗಡಿ ವಿವಾದ: ರಾಜ್ಯದ ಕೆಎಸ್‌ಆರ್‌ಟಿಸಿ ಬಸ್‌ಗಳಿಗೆ ಮಸಿ ಬಳಿದ ಮರಾಠಿಗರು

ಗಡಿಯಲ್ಲಿ ತ್ವೇಷಮಯ ವಾತಾವರಣ

ಪ್ರಜಾವಾಣಿ ವಾರ್ತೆ

ಮಹಾರಾಷ್ಟ್ರದ ಪುಣೆ ನಗರದಲ್ಲಿ ಶುಕ್ರವಾರ ಕರ್ನಾಟಕ ರಾಜ್ಯ ಸಾರಿಗೆ ಸಂಸ್ಥೆಯ ಬಸ್‌ವೊಂದಕ್ಕೆ ಯುವಕರು ಮಸಿ ಬಳಿದರು

ಬೆಳಗಾವಿ: ಕರ್ನಾಟಕ– ಮಹಾರಾಷ್ಟ್ರ ಗಡಿ ವಿವಾದ ಮತ್ತೆ ಮುನ್ನೆಲೆಗೆ ಬಂದಿದ್ದು, ಗಡಿ ಭಾಗದಲ್ಲಿ ತ್ವೇಷಮಯ ವಾತಾವರಣ ನಿರ್ಮಾಣವಾಗಿದೆ.

ಮಹಾರಾಷ್ಟ್ರದ ವಿವಿಧ ನಗರಗಳಲ್ಲಿ ವಾಯವ್ಯ ಕರ್ನಾಟಕ ರಸ್ತೆ ಸಾರಿಗೆ ಸಂಸ್ಥೆಯ ಹಲವು ಬಸ್‌ಗಳಿಗೆ ಯುವಕರು ಶುಕ್ರವಾರ ಕಪ್ಪು ಮಸಿ ಬಳಿದಿದ್ದಾರೆ. ಬಸ್‌ಗಳ ಮೇಲೆ 'ಜೈ ಮಹಾರಾಷ್ಟ್ರ' ಎಂದು ಬರೆದು, ಕೇಸರಿ ಧ್ವಜಗಳನ್ನು ಬಸ್‌ಗಳಿಗೆ ಕಟ್ಟಿ ಕರ್ನಾಟಕ ವಿರುದ್ಧ ಘೋಷಣೆ ಮೊಳಗಿಸಿದ್ದಾರೆ.

ಕೊಲ್ಹಾಪುರ, ಪುಣೆ, ಔರಂಗಾಬಾದ್ ಸೇರಿದಂತೆ ವಿವಿಧೆಡೆ ರಾಜ್ಯದ ಬಸ್‌ಗಳನ್ನು ತಡೆದ ಶಿವಸೇನೆ, ಅಖಿಲ ಮಹಾರಾಷ್ಟ್ರ ಮಹಾಸಂಘದ ಕಾರ್ಯಕರ್ತರು ತೀವ್ರ ಪ್ರತಿಭಟನೆ ನಡೆಸಿದ್ದಾರೆ.

ಕರ್ನಾಟಕದ ಬಸ್‌ಗಳು ಮಹಾರಾಷ್ಟ್ರ ಪ್ರವೇಶ ನಿಲ್ಲಿಸುವಂತೆ ಘೋಷಣೆ ಕೂಗಿದ್ದಾರೆ.

ಕೊಲ್ಹಾಪುರದಲ್ಲಿ ಶಿವಸೇನೆಯ ಜಿಲ್ಲಾ ಘಟಕದ ಮುಖಂಡರು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಅವರ ಪ್ರತಿಕೃತಿಯ ಅಣಕು ಶವಯಾತ್ರೆ ನಡೆಸಿದ್ದಾರೆ. ರಸ್ತೆ ಮಧ್ಯೆ ಪ್ರತಿಕೃತಿ ದಹನ ಮಾಡಿ, ಧಿಕ್ಕಾರ ಕೂಗಿದ್ದಾರೆ.

'ಜತ್ತ, ಅಕ್ಕಲಕೋಟ, ಸೊಲ್ಲಾಪುರ ಕರ್ನಾಟಕದ ಪ್ರದೇಶ ಎಂದು ಮುಖ್ಯಮಂತ್ರಿ ಬೊಮ್ಮಾಯಿ ಹೇಳಿದ್ದಾರೆ. ಕಳ್ಳನೇ ತಿರುಗಿ ಬೊಬ್ಬೆ ಹೊಡೆದ ರೀತಿಯಲ್ಲಿ ಅವರು ಮಾತನಾಡಿದ್ದಾರೆ' ಎಂದು ಶಿವಸೇನೆ ಉದ್ಧವ್ ಠಾಕ್ರೆ ಬಣದ ಕೊಲ್ಹಾಪುರ ಜಿಲ್ಲಾ ಘಟಕದ ಅಧ್ಯಕ್ಷ ವಿಜಯ್ ದೇವಣೆ ಆಕ್ರೋಶ ಹೊರಹಾಕಿದ್ದಾರೆ.

ಇದೇ ವಿಚಾರವಾಗಿ ಪ್ರತಿ ಹೇಳಿಕೆ ನೀಡಿದ ಜತ್ತ ತಾಲ್ಲೂಕಿನ ಕೆಲವು ಕನ್ನಡಿಗರು, 'ಜತ್ತ ತಾಲ್ಲೂಕಿನ 44 ಹಳ್ಳಿಗಳು ಕರ್ನಾಟಕಕ್ಕೆ ಸೇರಬೇಕೆಂದು ಹೇಳಿದ್ದು ನಮಗೆ ಹರ್ಷ ತಂದಿದೆ. ಕರ್ನಾಟಕದ ಮುಖ್ಯಮಂತ್ರಿಗೆ ಧನ್ಯವಾದ' ಎಂಬ ಹೇಳಿಕೆಯ ವಿಡಿಯೊ ಹರಿಬಿಟ್ಟಿದ್ದಾರೆ.

> **ಕರ್ನಾಟಕ– ಮಹಾರಾಷ್ಟ್ರ ಗಡಿಯಲ್ಲಿ ವಾತಾವರಣ ಹತೋಟಿಯಲ್ಲಿದೆ. ಯಾವುದೇ ಅಹಿತಕರ ಘಟನೆ ನಡೆಯದಂತೆ ಮುಂಜಾಗ್ರತಾ ಕ್ರಮ ವಹಿಸಿದ್ದೇವೆ**
>
> **ಡಾ.ಸಂಜೀವ ಪಾಟೀಲ,** ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ, ಬೆಳಗಾವಿ

ಮಹಾರಾಷ್ಟ್ರ ಬಸ್‌ಗಳಿಗೆ ಮಸಿ ಬಳಿದು ಪ್ರತಿಭಟನೆ

ಅಫಜಲಪುರ (ಕಲಬುರಗಿ ಜಿಲ್ಲೆ): ಬೆಳಗಾವಿ ಗಡಿ ವಿವಾದಕ್ಕೆ ಸಂಬಂಧಿಸಿದಂತೆ ಮಹಾರಾಷ್ಟ್ರದಲ್ಲಿ ಕರ್ನಾಟಕದ ಬಸ್‌ಗಳಿಗೆ ಮಸಿ ಬಳಿದಿದ್ದನ್ನು ಖಂಡಿಸಿ ತಾಲ್ಲೂಕಿನ ಬಳೂರ್ಗಿ ಗ್ರಾಮದ ಬಳಿಯಿರುವ ರಾಷ್ಟ್ರೀಯ ಹೆದ್ದಾರಿಯಲ್ಲಿ ಶುಕ್ರವಾರ ಕರ್ನಾಟಕ ನವ ನಿರ್ಮಾಣ ಸೇನೆ ಸಂಘಟನೆಯ ಕಾರ್ಯಕರ್ತರು ಪ್ರತಿಭಟನೆ ನಡೆಸಿದರು.

ಮಹಾರಾಷ್ಟ್ರದ ಅಕ್ಕಲಕೋಟದಿಂದ ಅಫಜಲಪುರಕ್ಕೆ ಬರುತ್ತಿದ್ದ ಬಸ್ ತಡೆದು, ಅದಕ್ಕೆ ಮಸಿ ಬಳಿದ ಕಾರ್ಯಕರ್ತರು, 'ಕರ್ನಾಟಕದ ಬಸ್‌ಗಳಿಗೆ ಮಸಿ ಬಳಿದಿದ್ದು ಖಂಡನೀಯ. ನಾವು ಸಹಿಸುವುದಿಲ್ಲ' ಎಂದರು.

ಸಂಘಟನೆಯ ಜಿಲ್ಲಾ ಘಟಕದ ಅಧ್ಯಕ್ಷ ರವೀಂದ್ರ ಜಮಾದಾರ ಮಾತನಾಡಿ,'ಬೆಳಗಾವಿ ಕರ್ನಾಟಕಕ್ಕೆ ಸೇರಿದೆ. ಹಿಡಿ ಮಣ್ಣು ಸಹ ಮಹಾರಾಷ್ಟ್ರಕ್ಕೆ ನೀಡುವುದಿಲ್ಲ. ಸೊಲ್ಲಾಪುರ, ಅಕ್ಕಲಕೋಟ, ಜತ್ತ ನಗರಗಳು ಕರ್ನಾಟಕಕ್ಕೆ ಸೇರಿವೆ. ಅವುಗಳನ್ನು ಪಡೆಯುತ್ತೇವೆ. ಯಾವುದೇ ಕಾರಣಕ್ಕೂ ಬೆಳಗಾವಿ ಜಿಲ್ಲೆಯನ್ನು ಬಿಟ್ಟು ಕೊಡುವುದಿಲ್ಲ' ಎಂದರು.

ಕಲಬುರಗಿ ಜಿಲ್ಲೆ ಅಫಜಲಪುರ ಬಳಿಯ ಬಳೂರ್ಗಿ ಬಳಿ ಕರ್ನಾಟಕ ನವ ನಿರ್ಮಾಣ ಸೇನೆ ಕಾರ್ಯಕರ್ತರು ಮಹಾರಾಷ್ಟ್ರದ ಬಸ್ ತಡೆದು ಪ್ರತಿಭಟನೆ ನಡೆಸಿದರು

300ಕ್ಕೂ ಹೆಚ್ಚು ಬಸ್‌ಗಳ ಸಂಚಾರ ದಿಢೀರ್ ಸ್ಥಗಿತ

ಬೆಳಗಾವಿ: ಕರ್ನಾಟಕ– ಮಹಾರಾಷ್ಟ್ರ ಗಡಿ ಪ್ರದೇಶದಲ್ಲಿ ತ್ವೇಷಮಯ ವಾತಾವರಣ ನಿರ್ಮಾಣವಾದ ಹಿನ್ನೆಲೆಯಲ್ಲಿ, ಮಹಾರಾಷ್ಟ್ರದಿಂದ ರಾಜ್ಯಕ್ಕೆ ಬರಬೇಕಾದ 300ಕ್ಕೂ ಹೆಚ್ಚು ಬಸ್‌ಗಳನ್ನು ಮಹಾರಾಷ್ಟ್ರ ಸಾರಿಗೆ ಸಂಸ್ಥೆ ಸ್ಥಗಿತಗೊಳಿಸಿದೆ.

ಆದರೆ, ಕರ್ನಾಟಕದಿಂದ ಮಹಾರಾಷ್ಟ್ರಕ್ಕೆ ಸಂಚರಿಸುವ ಬಸ್‌ಗಳನ್ನು ಶುಕ್ರವಾರ ಮಧ್ಯಾಹ್ನ ಎರಡು ತಾಸು ಮಾತ್ರ ನಿಲ್ಲಿಸಲಾಗಿತ್ತು. ಸಂಜೆಯಿಂದ ಎಲ್ಲ ಬಸ್‌ಗಳು ಕೊಲ್ಹಾಪುರ ನಗರದ ಹೊರವಲಯದಿಂದಲೇ ಸಂಚರಿಸುತ್ತಿವೆ ಎಂದು ವಾಯವ್ಯ ಕರ್ನಾಟಕ ರಸ್ತೆ ಸಾರಿಗೆ ಸಂಸ್ಥೆಯ ವಿಭಾಗೀಯ ಸಂಚಾರಿ ಅಧಿಕಾರಿ ಕೆ.ಕೆ.ಲಮಾಣಿ 'ಪ್ರಜಾವಾಣಿ'ಗೆ ತಿಳಿಸಿದರು.



ಸುದ್ದಿ 2 ನಿಮಿಷ

ಸಿಇಟಿ: ಎರಡನೇ ಸೀಟು ಹಂಚಿಕೆಯ ವೇಳಾಪಟ್ಟಿ ಪ್ರಕಟ

ಬೆಂಗಳೂರು: ಎಂಜಿನಿಯರಿಂಗ್ ಸೇರಿದಂತೆ ವಿವಿಧ ವೃತ್ತಿಪರ ಕೋರ್ಸ್‌ಗಳ ಪ್ರವೇಶಕ್ಕೆ, ಮುಂದುವರಿದ ಸೀಟುಗಳ ಎರಡನೇ ಹಂಚಿಕೆಯ ವೇಳಾಪಟ್ಟಿಯನ್ನು ಕರ್ನಾಟಕ ಪರೀಕ್ಷಾ ಪ್ರಾಧಿಕಾರ ಶುಕ್ರವಾರ ಪ್ರಕಟಿಸಿದೆ.

ನ. 26ರಂದು ಸೀಟು ಹಂಚಿಕೆ ಮತ್ತು ಶುಲ್ಕದ ವಿವರ ಪ್ರಕಟಿಸಲಾಗುವುದು. 28ರ ಒಳಗೆ ಅಭ್ಯರ್ಥಿಗಳು ಸೀಟು ಆಯ್ಕೆ ಮಾಡಿಕೊಳ್ಳಬಹುದು. 29ರಂದು ಸೀಟು ಹಂಚಿಕೆಯ ವಿವರ ಪ್ರಕಟಿಸಲಾಗುವುದು. 30ರ ಒಳಗೆ ಶುಲ್ಕ ಪಾವತಿಸಿ, ಆಯ್ಕೆ ಮಾಡಿಕೊಂಡ ಕಾಲೇಜಿಗೆ ಪ್ರವೇಶ ಪಡೆಯಬೇಕು.

ರ್‍ಯಾಂಕಿಂಗ್ ಪಡೆದು ಇದುವರೆಗೂ ದಾಖಲೆಗಳ ಪರಿಶೀಲನೆಗೆ ಹಾಜರಾಗದಿರುವ ಅಭ್ಯರ್ಥಿಗಳು ಎರಡನೇ ಸುತ್ತಿನ ಸೀಟು ಹಂಚಿಕೆಗೆ ಅರ್ಹತೆ ಪಡೆಯಲು ನ.26ರ ಬೆಳಿಗ್ಗೆ 11ಕ್ಕೆ ಮಲ್ಲೇಶ್ವರದ ಕೆಇಎ ಕಚೇರಿಗೆ ಮೂಲ ದಾಖಲೆಗಳು ಹಾಗೂ ನಕಲು ಪ್ರತಿಗಳೊಂದಿಗೆ ಹಾಜರಾಗಬಹುದು.

ದ್ವಿತೀಯ ಪಿಯು ಪೂರಕ ಪರೀಕ್ಷೆಯಲ್ಲಿ ತೇರ್ಗಡೆಯಾದ ಅಭ್ಯರ್ಥಿ ಗಳಿಗೆ ಸರ್ಕಾರದ ನಿರ್ದೇಶನದಂತೆ ರ್‍ಯಾಂಕಿಂಗ್ ನೀಡಲಾಗುವುದು. ಎರಡನೇ ಸುತ್ತಿನ ಸೀಟು ಹಂಚಿಕೆಯ ನಂತರ ಉಳಿಯುವ ಸೀಟುಗಳನ್ನು ಅವರಿಗೆ ಹಂಚಿಕೆ ಮಾಡಲಾಗುವುದು ಎಂದು ಕರ್ನಾಟಕ ಪರೀಕ್ಷಾ ಪ್ರಾಧಿಕಾರ ಹೇಳಿದೆ.

ಮಹದೇವಪುರ: ಪರಿಶಿಷ್ಟರಿಗೆ ಕ್ಷೌರ

ಶ್ರೀರಂಗಪಟ್ಟಣ (ಮಂಡ್ಯ): 'ಪರಿಶಿಷ್ಟರಿಗೆ ಕ್ಷೌರ ಮಾಡುತ್ತಿಲ್ಲ' ಎಂಬ ದೂರಿನ ಅನ್ವಯ, ತಾಲ್ಲೂಕಿನ ಮಹದೇವಪುರಕ್ಕೆ ಬುಧವಾರ ತೆರಳಿದ ತಹಶೀಲ್ದಾರ್ ಮತ್ತು ಪೊಲೀಸರು ಕ್ಷೌರಿಕರ ಮನವೊಲಿಸಿ ಕ್ಷೌರ ಮಾಡಲು ಒಪ್ಪಿಸಿದರು. ನ.6ರಿಂದ ಮುಚ್ಚಿದ್ದ ಎಲ್ಲ 10 ಅಂಗಡಿಗಳನ್ನು ಮಾಲೀಕರು ತೆರೆದರು.

'ಜಾತಿಯ ಕಾರಣಕ್ಕೆ ಕ್ಷೌರ ಮಾಡುವುದಿಲ್ಲವೆಂದರೆ ಕ್ರಮ ಜರುಗಿಸಬೇಕಾಗುತ್ತದೆ. ಅಂಗಡಿಗಳ ಪರವಾನಗಿಯೂ ರದ್ದಾಗುತ್ತದೆ. ಅಸ್ಪೃಶ್ಯತೆ ಆಚರಿಸಿದರೆ ಜೈಲು ಶಿಕ್ಷೆ ಅನುಭವಿಸಬೇಕಾಗುತ್ತದೆ' ಎಂದು ತಹಶೀಲ್ದಾರ್ ಶ್ವೇತಾ ಎನ್.ರವೀಂದ್ರ ಎಚ್ಚರಿಕೆ ನೀಡಿದರು.

ಅವರಿಗೆ ಪ್ರತಿಕ್ರಿಯಿಸಿದ ಕ್ಷೌರಿಕರು, 'ಪಕ್ಕದ ಊರುಗಳ ಪರಿಶಿಷ್ಟರಿಗೆ ಹಲವು ವರ್ಷಗಳಿಂದ ಕ್ಷೌರ ಮಾಡುತ್ತಿದ್ದೇವೆ. ಆದರೆ, ಮಹದೇವಪುರದ ಅದೇ ಸಮುದಾಯದ ಕೆಲವರು 'ಜಾತಿ ನಿಂದನೆ ಮಾಡಿದ್ದಾರೆ' ಎಂದು ನಮ್ಮ ವಿರುದ್ಧವೇ ಪೊಲೀಸರಿಗೆ ಸುಳ್ಳು ದೂರು ನೀಡಿದ್ದಾರೆ. ಅಂಥವರಿಗೆ ಕ್ಷೌರ ಮಾಡಲು ಮನಸ್ಸು ಬರುತ್ತದೆಯೇ?' ಎಂದು ಪ್ರಶ್ನಿಸಿದರು.

ಎರಡೂ ಕಡೆಯ ಮುಖಂಡರೊಂದಿಗೆ ಮಾತನಾಡಿದ ತಹಶೀಲ್ದಾರ್, 'ಹಳೆಯದನ್ನು ಮರೆತು ಸ್ನೇಹ, ವಿಶ್ವಾಸದಿಂದ ಇರಬೇಕು' ಎಂದರು. 'ಮತ್ತೆ ನಿರಾಕರಿಸಿದರೆ ಕಠಿಣ ಕ್ರಮ ಜರುಗಿಸಲಾಗುತ್ತದೆ' ಎಂದು ಡಿವೈಎಸ್ಪಿ ಸಂದೇಶಕುಮಾರ್ ಸ್ಪಷ್ಟಪಡಿಸಿದರು.

'ಪರಿಶಿಷ್ಟರಿಗೆ ಕ್ಷೌರ ನಿರಾಕರಣೆ, ಮುಚ್ಚಿದ ಅಂಗಡಿಗಳು' ವರದಿಯು 'ಪ್ರಜಾವಾಣಿ'ಯ ನ.25ರ ಸಂಚಿಕೆಯಲ್ಲಿ ಮುಖಪುಟದಲ್ಲಿ ಪ್ರಕಟವಾಗಿತ್ತು.

ರಾಜ್ಯದ ಒಂದಿಂಚೂ ಜಾಗ ಬಿಟ್ಟುಕೊಡೆವು: ಮುಖ್ಯಮಂತ್ರಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ರಾಜ್ಯದ ಗಡಿ ರಕ್ಷಣೆಗೆ ಸರ್ಕಾರ ಶಕ್ತಿ ಮೀರಿ ಶ್ರಮಿಸಲಿದೆ. ಎಂತಹ ಸ್ಥಿತಿಯಲ್ಲೂ ಒಂದಿಂಚೂ ಜಾಗ ಬಿಟ್ಟುಕೊಡುವುದಿಲ್ಲ' ಎಂದು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಶುಕ್ರವಾರ ಹೇಳಿದರು.

ಸುದ್ದಿಗಾರರ ಜತೆ ಮಾತನಾಡಿದ ಅವರು, 'ನ್ಯಾಯ ನಮ್ಮ ಕಡೆ ಇದೆ. ಎರಡೂ ರಾಜ್ಯಗಳ ಮಧ್ಯೆ ಶಾಂತಿ ರಕ್ಷಣೆಗೆ ಮಹಾರಾಷ್ಟ್ರ ಸರ್ಕಾರ ತುರ್ತಾಗಿ ಕ್ರಮ ಕೈಗೊಳ್ಳಬೇಕು' ಎಂದು ಆಗ್ರಹಿಸಿದರು.

ಭಾರತ ರಾಜ್ಯಗಳ ಒಕ್ಕೂಟ. ಪ್ರತಿ ರಾಜ್ಯಕ್ಕೂ ತನ್ನದೇ ಆದ ಹಕ್ಕುಗಳಿವೆ. ನೆಲ, ಜಲ, ಗಡಿ ಸಮಸ್ಯೆಗಳು ಎದುರಾದಾಗ ಕಾನೂನಿನ ಅನ್ವಯ ನಡೆದುಕೊಳ್ಳಬೇಕು. ಕಾನೂನು ಸುವ್ಯವಸ್ಥೆ ಕಾಪಾಡುವುದು ಆಯಾ ರಾಜ್ಯಗಳ ಕರ್ತವ್ಯ. ನೆರೆಯ ರಾಜ್ಯಗಳು ಶಾಂತಿ ಕಾಯ್ದುಕೊಳ್ಳಬೇಕು ಎಂದರು.

'ಮರುವಿಂಗಡಣಾ ಕಾಯ್ದೆಯಡಿ ನೀಡಲಾದ ಹಕ್ಕುಗಳ ವ್ಯಾಪ್ತಿಯಲ್ಲೇ ಕರ್ನಾಟಕ ಕಾರ್ಯನಿರ್ವಹಿಸುತ್ತಿದೆ. ಮಹಾರಾಷ್ಟ್ರ 2004ರಲ್ಲಿ ಪ್ರಕರಣ ದಾಖಲಿಸಿತ್ತು. ನಾವು ನ್ಯಾಯಾಲಯದಲ್ಲಿ ಹೋರಾಡುತ್ತಿದ್ದೇವೆ. ಕಾನೂನು ಹೋರಾಟಕ್ಕೆ ಮೊದಲ ಆದ್ಯತೆ. ಸುಪ್ರೀಂ ಕೋರ್ಟ್‌ನಲ್ಲಿ ಪ್ರಕರಣವಿದೆ. ತೀರ್ಪಿಗೆ ಕಾಯಬೇಕು' ಎಂದು ಹೇಳಿದರು.

ಶಿವಮೊಗ್ಗದಲ್ಲಿ ಸುದ್ದಿಗಾರರ ಜತೆ ಮಾತನಾಡಿದ ಬೊಮ್ಮಾಯಿ, 'ಸುಪ್ರೀಂ ಕೋರ್ಟ್‌ನಲ್ಲಿರುವ ಪ್ರಕರಣದಲ್ಲಿ ರಾಜ್ಯದ ಪರ ಬಹಳ ಗಟ್ಟಿಯಾದ ಕಾನೂನು ನೆಲೆಗಟ್ಟಿದೆ. ಸಂವಿಧಾನದ ಕಲಂ 3ರಲ್ಲೂ ಅದನ್ನೇ ಹೇಳಲಾಗಿದೆ. 2004 ರಲ್ಲಿ ಪ್ರಕರಣ ದಾಖಲು ಮಾಡಿದಾಗಿನಿಂದ ಈವರೆಗೆ ಪ್ರಕರಣವನ್ನು ಪರಿಗಣಿಸಬೇಕೆ ಎಂಬ ಬಗ್ಗೆಯೇ ತೀರ್ಮಾನವಾಗಿಲ್ಲ. ಪ್ರಕರಣವನ್ನು ಪರಿಗಣಿಸಬಾರದು ಎಂದು ಈಗಾಗಲೇ ಸುಪ್ರೀಂಕೋರ್ಟ್‌ನಲ್ಲಿ ನಾವು ವಾದವನ್ನು ಮಂಡಿಸಿದ್ದೇವೆ. ಅದನ್ನೇ ಪ್ರಬಲವಾಗಿ ವಾದಿಸಲಾಗುವುದು' ಎಂದರು.

ಬೊಮ್ಮಾಯಿ ಪ್ರಶ್ನಿಸಲು ಶಿಂದೆಗೆ ಧೈರ್ಯ ಇಲ್ಲ: ಉದ್ಧವ್ ಠಾಕ್ರೆ

ಮುಂಬೈ (ಪಿಟಿಐ): ಗಡಿ ವಿವಾದಕ್ಕೆ ಸಂಬಂಧಿಸಿ ರಾಜಕೀಯ ತಿಕ್ಕಾಟ ಹೆಚ್ಚುತ್ತಿರುವಂತೆಯೇ, ಮಹಾರಾಷ್ಟ್ರ ಮುಖ್ಯಮಂತ್ರಿ ಏಕನಾಥ ಶಿಂದೆ ವಿರುದ್ಧ ಶಿವಸೇನಾ (ಉದ್ಧವ್ ಬಾಳಾ ಠಾಕ್ರೆ ಬಣ) ಮುಖ್ಯಸ್ಥ ಉದ್ಧವ್ ಠಾಕ್ರೆ ವಾಗ್ದಾಳಿ ನಡೆಸಿದ್ದಾರೆ.

'ರಾಜ್ಯದ ಕೆಲ ಗ್ರಾಮಗಳು ಕರ್ನಾಟಕದೊಂದಿಗೆ ವಿಲೀನಗೊಳ್ಳಲು ಬಯಸಿದ್ದವು ಎಂದು ಹೇಳಿರುವ ಕರ್ನಾಟಕ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ವಿರುದ್ಧ ಮಾತನಾಡಲು ಮುಖ್ಯಮಂತ್ರಿ ಏಕನಾಥ ಶಿಂದೆಗೆ ಧೈರ್ಯ ಇಲ್ಲ' ಎಂದು ಅವರು ಕುಟುಕಿದ್ದಾರೆ.

'ಮಹಾರಾಷ್ಟ್ರದ ಕೆಲ ಗ್ರಾಮಗಳು ರಾಜ್ಯಕ್ಕೆ ಸೇರಬೇಕು ಎಂಬುದಾಗಿ ಕರ್ನಾಟಕ ಮುಖ್ಯಮಂತ್ರಿ ಸುಲಭವಾಗಿ ಹೇಳಿಕೆ ನೀಡುತ್ತಿರುವುದರಿಂದಲೇ ನಾವು ಅವರ ವಿರುದ್ಧ ಧ್ವನಿ ಎತ್ತಲು ಧೈರ್ಯ ಕಳೆದುಕೊಂಡಿದ್ದೇವೆಯೇ' ಎಂದು ಪ್ರಶ್ನಿಸುವ ಮೂಲಕ ಉದ್ಧವ್ ಅವರು ಶಿಂದೆ ವಿರುದ್ಧ ಹರಿಹಾಯ್ದಿದ್ದಾರೆ.

'ಈ ವಿಷಯಕ್ಕೆ ಸಂಬಂಧಿಸಿ ಕರ್ನಾಟಕ ಮುಖ್ಯಮಂತ್ರಿಗೆ ದೆಹಲಿ ನಾಯಕರ ಆಶೀರ್ವಾದ ಇದೆಯೇ?. ಕೇಂದ್ರ ಸರ್ಕಾರಕ್ಕೂ ಇದೇ ಬೇಕಾಗಿದೆಯೇ? ಎಂದು ಅವರು ಕೇಳಿದ್ದಾರೆ.

ನಿಪ್ಪಾಣಿ, ಬೆಳಗಾವಿ ಬಿಟ್ಟುಕೊಟ್ಟರೆ, ಕೆಲ ಪ್ರದೇಶ ಕೊಡಲು ಯೋಚಿಸಬಹುದು: ಶರದ್ ಪವಾರ್

ಶರದ್ ಪವಾರ್

ಮುಂಬೈ (ಪಿಟಿಐ): ಗಡಿ ವಿವಾದಕ್ಕೆ ಸಂಬಂಧಿಸಿ ಪ್ರತಿಕ್ರಿಯಿಸಿರುವ ಎನ್‌ಸಿಪಿ ವರಿಷ್ಠ ಶರದ್ ಪವಾರ್, 'ನಿಪ್ಪಾಣಿ, ಬೆಳಗಾವಿ ಸೇರಿದಂತೆ ಕೆಲ ಊರುಗಳನ್ನು ಬಿಟ್ಟು ಕೊಡಲು ಕರ್ನಾಟಕ ಒಪ್ಪಿದರೆ, ಅದಕ್ಕೆ ಪ್ರತಿಯಾಗಿ ಕೆಲ ಪ್ರದೇಶಗಳನ್ನು ಬಿಟ್ಟು ಕೊಡುವ ಬಗ್ಗೆ ನಾವೂ ಯೋಚಿಸಬಹುದು' ಎಂದು ಹೇಳಿದ್ದಾರೆ.

'ಕರ್ನಾಟಕ ಮತ್ತು ಮಹಾರಾಷ್ಟ್ರ ನಡುವಿನ ಗಡಿ ವಿವಾದದಿಂದ ಬಿಜೆಪಿ ಪಲಾಯನ ಮಾಡಲು ಸಾಧ್ಯವಿಲ್ಲ' ಎಂದೂ ಅವರು ಪ್ರತಿಪಾದಿಸಿದರು.

ವಿರೋಧ ಪಕ್ಷಗಳ ಈ ಟೀಕೆಗಳಿಗೆ ತಿರುಗೇಟು ನೀಡಿರುವ ಉಪಮುಖ್ಯಮಂತ್ರಿ ದೇವೇಂದ್ರ ಫಡಣವೀಸ್, 'ಬಿಜೆಪಿಗಿಂತಲೂ ಹೆಚ್ಚಿನ ಅವಧಿಗೆ ಕಾಂಗ್ರೆಸ್ ಪಕ್ಷವೇ ರಾಜ್ಯದಲ್ಲಿ ಅಧಿಕಾರದಲ್ಲಿತ್ತು. ಆದಾಗ್ಯೂ, ಆ ಪಕ್ಷ ವಿವಾದವನ್ನು ಬಗೆಹರಿಸಲಿಲ್ಲ' ಎಂದಿದ್ದಾರೆ.

'ಈ ವಿವಾದ ಈಗ ಕೋರ್ಟ್‌ನಲ್ಲಿದೆ' ಎಂದ ಅವರು, 'ಮಹಾರಾಷ್ಟ್ರದ ಒಂದು ಹಳ್ಳಿ ಕೂಡ ಕರ್ನಾಟಕಕ್ಕೆ ಹೋಗುವುದಿಲ್ಲ ಎಂದು ಪ್ರತಿಕ್ರಿಯಿಸಿದರು.

ಕರ್ನಾಟಕ ಸರ್ಕಾರ – ಕೃಷಿ ಮಾರಾಟ ಇಲಾಖೆ

ಕೃಷಿ ಉತ್ಪನ್ನ ಮಾರುಕಟ್ಟೆ ಸಮಿತಿ, ಭದ್ರಾವತಿ

ಟೆಂಡರ್ ಪ್ರಕಟಣೆ ಸಂಖ್ಯೆ:ಕೃ.ಉ.ಮಾ.ಸ:ಭ:594 /2022–23 ದಿನಾಂಕ: 14–11–2022

ಸಂಕ್ಷಿಪ್ತ ಟೆಂಡರ್ ಪ್ರಕಟಣೆ

(ಕರ್ನಾಟಕ ಸರ್ಕಾರದ. ಈ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮುಖಾಂತರ)

ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳಲ್ಲಿ ಪಾರದರ್ಶಕತೆ ಅಧ್ಯಾದ್ದೇಶ 1999–2000 ಪ್ರಕಾರ ಆಕ್ಟ್ 2000 ನಿಯಮದಂತೆ ಮತ್ತು ಇತ್ತೀಚಿನ ತಿದ್ದುಪಡಿ ಆದೇಶಗಳನ್ವಯ Standard Tender Document KW-4 ಪ್ರಕಾರ ಈ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮುಖಾಂತರ ಟೆಂಡರ್‌ನ್ನು ಆಹ್ವಾನಿಸಲಾಗಿದೆ. ಅರ್ಹ ಟೆಂಡರ್‌ದಾರರು ಈ–ಪ್ರೊಕ್ಯೂರ್‌ಮೆಂಟ್–ಪೋರ್ಟಲ್ http://eproc.karnataka.gov.in ಮುಖಾಂತರ ಟೆಂಡರ್‌ನಲ್ಲಿ ಭಾಗವಹಿಸಬಹುದು.

ಟೆಂಡರ್‌ನ ವಿವರಗಳು ಈ ಕೆಳಕಂಡಂತೆ ಇರುತ್ತದೆ.

ಕ್ರಸಂ. 1. ಕಾಮಗಾರಿಯ ಹೆಸರು: ಭದ್ರಾವತಿ ಕೃಷಿ ಉತ್ಪನ್ನ ಮಾರುಕಟ್ಟೆ ಸಮಿತಿವತಿಯಿಂದ 2022–23 ನೇ ಸಾಲಿನ ವಾರ್ಷಿಕ ಐಟಂ ಕ್ರಿಯಾ ಯೋಜನೆಯಡಿ ಮುಖ್ಯ ಮಾರುಕಟ್ಟೆ ಪ್ರಾಂಗಣದಲ್ಲಿರುವ 3,4 ಮತ್ತು 4ಎ ಅಡ್ಡ ರಸ್ತೆಗಳಿಗೆ ಡಾಂಬರೀಕರಣ ಸಿ.ಸಿ. ಚರಂಡಿ ನಿರ್ಮಾಣ ಮತ್ತು ಬಿ ಮುಖ್ಯ ರಸ್ತೆಗೆ ಸಿ.ಸಿ ರಸ್ತೆ ಕಾಮಗಾರಿ. **ಟೆಂಡರ್ ಮಾದರಿ:** ಐಟಂವಾರು ಇ–ಟೆಂಡರ್ (ಕೆ.ಡಬ್ಲ್ಯೂ–4) **ಟೆಂಡರ್ ಮೊತ್ತ (ರೂ.ಗಳಲ್ಲಿ):** 127.00 ಲಕ್ಷಗಳು **ಇಎಂಡಿ (ರೂ.ಗಳಲ್ಲಿ):** 2,00,000–00 **ಪೂರ್ಣಗೊಳಿಸುವ ಅವಧಿ (ಮಳೆಗಾಲ ಹೊರತುಪಡಿಸಿ):** 05 ತಿಂಗಳು (ಮಳೆಗಾಲ ಹೊರತುಪಡಿಸಿ) **ಗುತ್ತಿಗೆದಾರರ ಅರ್ಹತೆ:** ಲೋಕೋಪಯೋಗಿ ಇಲಾಖೆ, ನೊಂದಾಯಿತ 3ನೇ ದರ್ಜೆ ಮತ್ತು ಮೇಲ್ಪಟ್ಟು **ಟೆಂಡರ್ ಫಾರಂ ಬೆಲೆ:** ಇ–ಗೌರ್ನೆನ್ಸ್ ರಂತೆ

ಮೇಲ್ಕಂಡ ಕಾಮಗಾರಿಯ ಟೆಂಡರ್ ಡಾಕುಮೆಂಟ್‌ಗಳನ್ನು ಈ–ಪೋರ್ಟಲ್‌ನಲ್ಲಿ ದಿನಾಂಕ: 21–11–2022 ರಿಂದ 06.12.2022 ಸಂಜೆ 4.00 ಗಂಟೆವರೆಗೆ ಡೌನ್ ಲೋಡ್ ಮಾಡಿಕೊಳ್ಳಬಹುದು.

ಟೆಂಡರ್ ಬಿಡ್‌ಗಳನ್ನು ಈ ಪೋರ್ಟಲ್‌ನಲ್ಲಿ ಸಲ್ಲಿಸುವ ಕೊನೆಯ ದಿನಾಂಕ : 06–12–2022 ರಂದು ಅಪರಾಹ್ನ 4.30 ಗಂಟೆವರೆಗೆ.

ಸದರಿ ಟೆಂಡರ್‌ಗೆ ಸಂಬಂಧಪಟ್ಟಂತೆ ಪೂರ್ವಭಾವಿ ಸಭೆಯನ್ನು ದಿನಾಂಕ: 01.12.2022 ರಂದು ಕಾರ್ಯದರ್ಶಿಗಳ ಕಛೇರಿಯಲ್ಲಿ ಅಪರಾಹ್ನ 4.30 ಗಂಟೆಗೆ ನಡೆಸಲಾಗುವುದು.

ಗುತ್ತಿಗೆದಾರರು ಈ ಪೋರ್ಟಲ್ ಮುಖಾಂತರ ಸಲ್ಲಿಸಿದ ಟೆಂಡರ್‌ನ ತಾಂತ್ರಿಕ ಬಿಡ್‌ಗಳನ್ನು ಮಾತ್ರ ದಿನಾಂಕ: 07.12.2022 ರ ಅಪರಾಹ್ನ 5.00 ಗಂಟೆಗೆ ಕಾರ್ಯದರ್ಶಿಯವರ ಕಛೇರಿಯಲ್ಲಿ ತೆರೆಯಲಾಗುವುದು.

ತಾಂತ್ರಿಕ ಬಿಡ್‌ನಲ್ಲಿ ಅರ್ಹತೆ ಹೊಂದಿದ ಅರ್ಹ ಗುತ್ತಿಗೆದಾರರ, ಆರ್ಥಿಕ ಬಿಡ್‌ಗಳನ್ನು ತಾಂತ್ರಿಕ ಬಿಡ್‌ಗಳು ಅನುಮೋದನೆಯಾದ ನಂತರ ತೆರೆಯಲಾಗುವುದು. ಟೆಂಡರ್ ಅಪ್ ಲೋಡಿಂಗ್‌ಗೆ ಸಂಬಂಧಿಸಿದಂತೆ ಈ ಪೋರ್ಟಲ್ ಸಹಾಯಕ ದೂರವಾಣಿ 080–22485867 ಅಥವಾ 080–25501216 ಇವರನ್ನು ಸಂಪರ್ಕಿಬಹುದು. ಹೆಚ್ಚಿನ ವಿವರಗಳಿಗೆ www.eproc.karnataka.gov.in ವೆಬ್‌ಸೈಟ್‌ನಲ್ಲಿ ಮತ್ತು ಕಾರ್ಯದರ್ಶಿ ಕೃ.ಉ.ಮಾ.ಸ ಭದ್ರಾವತಿ/ಸಹಾಯಕ ಕಾರ್ಯಪಾಲಕ ಇಂಜಿನಿಯರ್ ನಂ. 3, ಉಪ ವಿಭಾಗ, ಮಾ.ಅ.ಯೋ, ಶಿವಮೊಗ್ಗ ಈ ಕಛೇರಿಯಲ್ಲಿ ಪಡೆಯಬಹುದು.

ಸಹಿ/– ಮಹೇಶ್.ಬಿ. ಕಾರ್ಯದರ್ಶಿ (ಪ್ರ) ಕೃಉಮಾಸ, ಭದ್ರಾವತಿ.

ಸಹಿ/– ಪ್ರದೀಪ್ ಆರ್, ಅಧ್ಯಕ್ಷರು ಕೃಉಮಾಸ, ಭದ್ರಾವತಿ.

ವಾ.ಸಾ.ಸಂ.ಇ/ಎಂಸಿಎ/ಶಿ/156/11/22–23/1325

ಮತದಾರರ ಸಮೀಕ್ಷೆಗೆ 500 ಸಿಬ್ಬಂದಿ

ಒಂದನೇ ಪುಟದಿಂದ

'500 ಸಿಬ್ಬಂದಿಯ ತಂಡ ಕಟ್ಟಿದ್ದ ಆರೋಪಿಗಳು, ಮಹದೇವಪುರ, ಚಿಕ್ಕಪೇಟೆ ಹಾಗೂ ಇತರೆ ವಿಧಾನ ಸಭಾ ಕ್ಷೇತ್ರದಲ್ಲಿ ಸಮೀಕ್ಷೆ ನಡೆಸಲು ಸೂಚಿಸಿದ್ದರು. ಆಯಾ ಕ್ಷೇತ್ರದಲ್ಲಿ ಬಾಡಿಗೆಗೆ ಕಟ್ಟಡ ಪಡೆದು, ಸಿಬ್ಬಂದಿ ಕುಳಿತುಕೊಳ್ಳಲು ವ್ಯವಸ್ಥೆ ಮಾಡಲಾಗಿತ್ತು. ಅದುವೇ ಚಿಲುಮೆ ಸಂಸ್ಥೆಯ ಶಾಖೆಯೂ ಆಗಿತ್ತು. ಅಂಥ ಶಾಖೆಗಳ ಮೇಲೂ ದಾಳಿ ಮಾಡಿ, ದಾಖಲೆಗಳನ್ನು ಈಗಾಗಲೇ ಜಪ್ತಿ ಮಾಡಲಾಗಿದೆ' ಎಂದು ಮೂಲಗಳು ತಿಳಿಸಿವೆ.

ಕೋಟಿ ಕೋಟಿ ಸಂಪಾದನೆ: 'ಆರೋಪಿ ಚಿಲುಮೆ ಸಂಸ್ಥೆ ಕೆಲಸಗಳಿಂದಲೇ ಕೋಟಿ ಕೋಟಿ ಸಂಪಾದನೆ ಮಾಡಿದ್ದಾನೆ. ದತ್ತಾಂಶ ಮಾರಾಟ, ಇತರೆ ಸೇವೆಗಳ ಮೂಲಕ ಹಣ ಗಳಿಸಿರುವುದಾಗಿ ಆರೋಪಿ ತಪ್ಪೊಪ್ಪಿಕೊಳ್ಳುತ್ತಿದ್ದಾನೆ. ಸಂಬಂಧಿತ ದಾಖಲೆಗಳಿಗಾಗಿ ಹುಡುಕಾಟ ಮುಂದುವರಿಸಲಾಗಿದೆ' ಎಂದು ಮೂಲಗಳು ಹೇಳಿವೆ.

'ರಾಜಕೀಯ ಪ್ರಚಾರ, ಕಾರ್ಯಕ್ರಮಕ್ಕೆ ಜನರ ಪೂರೈಕೆ'

'ರಾಜಕಾರಣಿಗಳ ಜೊತೆ ಒಡನಾಟ ಹೊಂದಿದ್ದ ರವಿಕುಮಾರ್, ಚುನಾವಣೆ ನಿರ್ವಹಣೆ ಹೆಸರಿನಲ್ಲಿ ಹಲವು ಸೇವೆಗಳನ್ನು ನೀಡುತ್ತಿದ್ದ. ಚುನಾವಣೆ ವೇಳೆ ಮನೆ ಮನೆ ಪ್ರಚಾರ, ರಾಜಕೀಯ ಕಾರ್ಯಕ್ರಮಗಳಿಗೆ ಜನರನ್ನು ಕಳುಹಿಸುವ ಕೆಲಸವನ್ನೂ ಮಾಡುತ್ತಿದ್ದ. ಇದಕ್ಕಾಗಿ ಸಂಬಂಧಪಟ್ಟ ರಾಜಕಾರಣಿಯಿಂದ ಲಕ್ಷ ಲಕ್ಷ ಹಣ ಪಡೆಯುತ್ತಿದ್ದ' ಎಂದು ಮೂಲಗಳು ಹೇಳಿವೆ. 'ರಾಜಕಾರಣಿಗಳಿಂದ ಹಣ ಪಡೆದಿರುವ ಬಗ್ಗೆ ಹೇಳಿಕೆ ನೀಡುತ್ತಿದ್ದಾನೆ. ಯಾವೆಲ್ಲ ರಾಜಕಾರಣಿ ಹಣ ನೀಡಿದ್ದರೆಂಬುದನ್ನು ದಾಖಲೆ ಸಮೇತ ಪತ್ತೆ ಮಾಡಲಾಗುತ್ತಿದೆ' ಎಂದಿವೆ.

ಮೆಚ್ಚುವ ಪಕ್ಷದ ಮಾಹಿತಿ ಸಂಗ್ರಹ

'ಬಿಬಿಎಂಪಿ ಅಧಿಕಾರಿಗಳು ನೇಮಿಸಿರುವ ಮತಗಟ್ಟೆ ಅಧಿಕಾರಿ (ಬಿಎಲ್‌ಒ) ಎಂಬುದಾಗಿ ಹೇಳಿ ಮನೆಗಳಿಗೆ ತೆರಳುತ್ತಿದ್ದ ಸಿಬ್ಬಂದಿ, ಮತದಾರರ ಹೆಸರು, ವಿಳಾಸ, ಜಾತಿ, ಉಪಜಾತಿ, ಕುಟುಂಬಸ್ಥರ ಮಾಹಿತಿ, ಮೊಬೈಲ್ ಸಂಖ್ಯೆ, ಬೆಂಬಲಿಸುವ ಪಕ್ಷ, ನೆಚ್ಚಿನ ರಾಜಕೀಯ ನಾಯಕ... ಹೀಗೆ ಹಲವು ಮಾಹಿತಿ ಪಡೆದಿದ್ದರು. ಅದನ್ನೇ ಆ್ಯಪ್‌ನಲ್ಲಿ ದಾಖಲಿಸಿದ್ದರು' ಎಂದು ಪೊಲೀಸ್ ಮೂಲಗಳು ಹೇಳಿವೆ.

ಇಬ್ಬರು 'ಐಎಎಸ್' ಅಮಾನತು

ಒಂದನೇ ಪುಟದಿಂದ

ಈ ಮೂರೂ ಕ್ಷೇತ್ರಗಳಲ್ಲಿ ಮತದಾರರ ಪಟ್ಟಿಗೆ ಸೇರಿಸಿರುವ ಹೆಸರುಗಳು ಮತ್ತು ಕೈಬಿಡಲಾಗಿರುವ ಹೆಸರುಗಳ ಸಂಪೂರ್ಣ ವಿವರಗಳನ್ನು ನೋಂದಾಯಿತ ರಾಜಕೀಯ ಪಕ್ಷಗಳ ಜತೆ ಹಂಚಿಕೊಳ್ಳಲಾಗುವುದು. ಆ ಪಟ್ಟಿಯನ್ನು ಪರಿಶೀಲಿಸಿ ದೂರು ಮತ್ತು ಆಕ್ಷೇಪಣೆ ಸಲ್ಲಿಸಲು ಅವಕಾಶವಿರುತ್ತದೆ. ಮತದಾರರ ಪಟ್ಟಿ ಪರಿಷ್ಕರಣೆಯಲ್ಲಿ ನೋಂದಾಯಿತ ರಾಜಕೀಯ ಪಕ್ಷಗಳು ಸಕ್ರಿಯವಾಗಿ ಪಾಲ್ಗೊಳ್ಳುವಂತೆ ಕ್ರಮ ಕೈಗೊಳ್ಳಬೇಕು ಎಂದು ಸೂಚಿಸಿದೆ.

ಪರಿಷ್ಕರಣಾ ಅವಧಿ ವಿಸ್ತರಣೆ: ಎಲ್ಲ ಕ್ಷೇತ್ರಗಳಲ್ಲೂ ಮತದಾರರ ಪಟ್ಟಿಯ ವಿಶೇಷ ಪರಿಷ್ಕರಣಾ ಅಭಿಯಾನದ ಡಿಸೆಂಬರ್ 9ಕ್ಕೆ ಕೊನೆಗೊಳ್ಳಲಿದೆ. ಆದರೆ, ಶಿವಾಜಿನಗರ, ಚಿಕ್ಕಪೇಟೆ ಮತ್ತು ಮಹದೇವಪುರ ವಿಧಾನಸಭಾ ಕ್ಷೇತ್ರಗಳಲ್ಲಿ ಡಿ.24ರವರೆಗೂ ವಿಶೇಷ ಪರಿಷ್ಕರಣಾ ಅಭಿಯಾನ ನಡೆಸುವಂತೆ ಆಯೋಗ ಆದೇಶಿಸಿದೆ.

ಈ ಆದೇಶಗಳ ಸಂಪೂರ್ಣ ಅನುಷ್ಠಾನದ ಜವಾಬ್ದಾರಿಯನ್ನು ರಾಜ್ಯದ ಮುಖ್ಯ ಚುನಾವಣಾಧಿಕಾರಿ ಖುದ್ದಾಗಿ ನಿರ್ವಹಿಸಬೇಕು ಎಂದು ಆಯೋಗವು ಸೂಚಿಸಿದೆ.

ಮತದಾರರ ಪಟ್ಟಿ ಪರಿಷ್ಕರಣೆಯನ್ನು ಸಂಪೂರ್ಣವಾಗಿ ಪಾರದರ್ಶಕವಾಗಿ ನಡೆಸಲಾಗುವುದು. ಈ ವಿಚಾರದಲ್ಲಿ ನೀತಿ, ನಿಯಮಗಳ ಉಲ್ಲಂಘನೆಯನ್ನು ಆಯೋಗ ಕಿಂಚಿತ್ತೂ ಸಹಿಸುವುದಿಲ್ಲ ಎಂದು ಎಚ್ಚರಿಸಿದೆ.

ವೀಕ್ಷಕರ ನೇಮಕ

ಬಿಬಿಎಂಪಿ ವ್ಯಾಪ್ತಿಯಲ್ಲಿನ ಮತದಾರರ ಪಟ್ಟಿ ಪರಿಷ್ಕರಣೆ ಪ್ರಕ್ರಿಯೆಗೂ ವೀಕ್ಷಕರನ್ನಾಗಿ ಐಎಎಸ್ ಅಧಿಕಾರಿಗಳನ್ನು ನೇಮಿಸಲಾಗಿದೆ.

ಬಿಬಿಎಂಪಿ ಕೇಂದ್ರ ವಲಯಕ್ಕೆ ಉಜ್ವಲ್ ಘೋಷ್, ಉತ್ತರ ವಲಯಕ್ಕೆ ರಾಮಚಂದ್ರನ್ ಆರ್., ದಕ್ಷಿಣ ವಲಯಕ್ಕೆ ಪಿ.ರಾಜೇಂದ್ರ ಚೋಳನ್, ಬೆಂಗಳೂರು ನಗರ ಜಿಲ್ಲೆಯ ವ್ಯಾಪ್ತಿಗೆ ಡಾ.ಎನ್.ಮಂಜುಳಾ ಅವರನ್ನು ವೀಕ್ಷಕರಾಗಿ ಕೇಂದ್ರ ಚುನಾವಣಾ ಆಯೋಗ ನೇಮಿಸಿದೆ. ಇವರು ಶಿವಾಜಿನಗರ, ಚಿಕ್ಕಪೇಟೆ ಮತ್ತು ಮಹದೇವಪುರ ಕ್ಷೇತ್ರಗಳನ್ನು ಹೊರತುಪಡಿಸಿ ಆಯಾ ವಲಯದ ಎಲ್ಲ ಕ್ಷೇತ್ರಗಳ ಮತದಾರರ ಪಟ್ಟಿ ಪರಿಷ್ಕರಣೆಗೆ ನಿಗಾವಹಿಸಬೇಕು ಎಂದು ತಿಳಿಸಿದೆ.

ಬಿಸ್ವಾಸ್‌ಗೆ ಇನ್ನಷ್ಟು ಹೊಣೆ

ಮತದಾರರ ಪಟ್ಟಿ ಪರಿಷ್ಕರಣೆಯಲ್ಲಿನ ಅಕ್ರಮಗಳ ಕುರಿತು ವಿಚಾರಣೆ ನಡೆಸುತ್ತಿರುವ ಬೆಂಗಳೂರು ಪ್ರಾದೇಶಿಕ ಆಯುಕ್ತ ಅಮ್ಲಾನ್ ಆದಿತ್ಯ ಬಿಸ್ವಾಸ್ ಅವರಿಗೆ ಬಿಬಿಎಂಪಿ ವ್ಯಾಪ್ತಿಯಲ್ಲಿನ ಮತದಾರರ ಪಟ್ಟಿ ಪರಿಷ್ಕರಣೆಯ ಸಮಗ್ರ ಮೇಲುಸ್ತುವಾರಿಯ ಜವಾಬ್ದಾರಿಯನ್ನೂ ನೀಡಿ ಕೇಂದ್ರ ಚುನಾವಣಾ ಆಯೋಗ ಆದೇಶ ಹೊರಡಿಸಿದೆ.

ಈ ಕೆಲಸಕ್ಕೆ ಅವರು ಮುಖ್ಯ ಚುನಾವಣಾಧಿಕಾರಿಯ ಒಪ್ಪಿಗೆಯೊಂದಿಗೆ ಯಾವುದೇ ಅಧಿಕಾರಿಗಳನ್ನು ನೇಮಕ ಮಾಡಿಕೊಳ್ಳುವ ಅಧಿಕಾರ ನೀಡಲಾಗಿದೆ. ಮತದಾರರ ಪಟ್ಟಿ ಪರಿಷ್ಕರಣೆಯಲ್ಲಿನ ಅಕ್ರಮದ ಕುರಿತು ನಡೆಸುತ್ತಿರುವ ವಿಚಾರಣೆಯನ್ನು ತ್ವರಿತವಾಗಿ ಪೂರ್ಣಗೊಳಿಸುವಂತೆಯೂ ಆಯೋಗ ಸೂಚಿಸಿದೆ.

ದುರ್ಬಳಕೆ ತಡೆಗೆ ಕಟ್ಟಪ್ಪಣೆ

ಮತದಾರರ ಪಟ್ಟಿ ಪರಿಷ್ಕರಣೆಯಲ್ಲಿನ ಅಕ್ರಮ ಹಾಗೂ ಮಾಹಿತಿ ಕಳವು ಆರೋಪಕ್ಕೆ ಸಂಬಂಧಿಸಿ ಮೂರು ಕ್ರಿಮಿನಲ್ ಪ್ರಕರಣಗಳನ್ನು ದಾಖಲಿಸಿ, ತನಿಖೆ ನಡೆಸಲಾಗುತ್ತಿದೆ.

ಮತದಾರರ ಪಟ್ಟಿಗೆ ಸಂಬಂಧಿಸಿ ಸಂಗ್ರಹಿಸಿರುವ ಮಾಹಿತಿಗಳನ್ನು ನೇರ ಅಥವಾ ಪರೋಕ್ಷವಾಗಿ ದುರ್ಬಳಕೆ ಮಾಡಿಕೊಳ್ಳಲು ಅವಕಾಶ ದೊರೆಯದಂತೆ ಅಧಿಕಾರಿಗಳು ಬಿಗಿ ಕ್ರಮಗಳನ್ನು ಕೈಗೊಳ್ಳಬೇಕು ಎಂದು ಕೇಂದ್ರ ಚುನಾವಣಾ ಆಯೋಗ ಕಟ್ಟಪ್ಪಣೆ ಮಾಡಿದೆ.

ಯಾರೇ ಇರಲಿ ಒಬ್ಬರಿಗೆ ಒಂದೇ ಟಿಕೆಟ್: ಡಿಕೆಶಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ವಿಧಾನಸಭೆ ಚುನಾವಣೆಯಲ್ಲಿ ಒಬ್ಬರಿಗೆ ಒಂದೇ ಟಿಕೆಟ್' ಎಂದು ಕೆಪಿಸಿಸಿ ಅಧ್ಯಕ್ಷ ಡಿ.ಕೆ. ಶಿವಕುಮಾರ್ ಹೇಳಿದರು.

ಸುದ್ದಿಗಾರರ ಜತೆ ಶುಕ್ರವಾರ ಮಾತನಾಡಿದ ಅವರು,'ಅಭ್ಯರ್ಥಿಗಳು ಯಾರೇ ಆಗಿರಲಿ; ಎಲ್ಲರಿಗೂ ಈ ನಿಯಮ ಅನ್ವಯವಾಗಲಿದೆ. ಎಲ್ಲರೂ ಒಗ್ಗಟ್ಟಿನಿಂದ ಕೆಲಸ ಮಾಡಬೇಕು. ಇಲ್ಲಿ ವ್ಯಕ್ತಿ ಮುಖ್ಯವಲ್ಲ, ಪಕ್ಷ ಮುಖ್ಯ. ಪಕ್ಷ ಮೊದಲು ಅಧಿಕಾರಕ್ಕೆ ಬರಬೇಕು. ಆಗಷ್ಟೇ ಎಲ್ಲರಿಗೂ ಅಧಿಕಾರ ಸಿಗುತ್ತದೆ' ಎಂದರು.

ಮಾಹಿತಿ ಕಳವಿನಲ್ಲಿ ಕೇಂದ್ರವೂ ಶಾಮೀಲು: ಸುರ್ಜೇವಾಲಾ

ಬೆಂಗಳೂರು: 'ಮತದಾರರ ಮಾಹಿತಿ ಕಳವಿನಲ್ಲಿ ಪ್ರಧಾನಿ ನರೇಂದ್ರ ಮೋದಿ ನೇತೃತ್ವದ ಕೇಂದ್ರ ಸರ್ಕಾರ ನೇರವಾಗಿ ಭಾಗಿಯಾಗಿದೆ' ಎಂದು ರಾಜ್ಯ ಕಾಂಗ್ರೆಸ್ ಉಸ್ತುವಾರಿ, ಎಐಸಿಸಿ ಪ್ರಧಾನ ಕಾರ್ಯದರ್ಶಿ ರಣದೀಪ್ ಸಿಂಗ್ ಸುರ್ಜೇವಾಲಾ ಶುಕ್ರವಾರ ಆರೋಪಿಸಿದರು.

ಸುದ್ದಿಗಾರರ ಜತೆ ಮಾತನಾಡಿದ ಅವರು, 'ಈ ಪ್ರಕರಣದ ಪ್ರಮುಖ ಆರೋಪಿಯಾಗಿರುವ ಚಿಲುಮೆ ಸಂಸ್ಥೆಯ ಮುಖ್ಯಸ್ಥ ರವಿಕುಮಾರ್ ಮತ್ತು ಅವರ ಆಪ್ತರ ಬ್ಯಾಂಕ್ ಖಾತೆಗಳಿಗೆ ಕೇಂದ್ರ ಸರ್ಕಾರದ ಸಿಟಿಜನ್ ಸರ್ವಿಸ್ ಸೆಂಟರ್ ಬ್ಯಾಂಕ್ ಖಾತೆಯಿಂದ ಹಣ ವರ್ಗಾವಣೆಯಾಗಿದೆ. ಈ ಹಗರಣ ಬೃಹದಾಕಾರವಾಗಿದ್ದು, ಮತದಾರರ ಮಾಹಿತಿ ಕಳವಿನ ಜತೆಗೆ ತೆರಿಗೆ ಹಣವನ್ನೂ ಲೂಟಿ ಹೊಡೆದಿದ್ದಾರೆ' ಎಂದರು.

ರವಿಕುಮಾರ್ ಅವರ ಗ್ರಾಮದ ಹಲವು ವ್ಯಕ್ತಿಗಳ ಬ್ಯಾಂಕ್ ಖಾತೆಗಳಿಗೂ ಕೇಂದ್ರ ಸರ್ಕಾರದ ಸಂಸ್ಥೆಯಿಂದ ಹಣ ವರ್ಗಾವಣೆ ಆಗಿದೆ. ಈ ಕುರಿತು ತನಿಖೆ ನಡೆಯಬೇಕು. ಸತ್ಯಾಂಶ ಬಯಲಿಗೆಳೆಯಲು ಹೈಕೋರ್ಟ್ ಮುಖ್ಯ ನ್ಯಾಯಮೂರ್ತಿಯವರ ಮೇಲುಸ್ತುವಾರಿಯಲ್ಲೇ ತನಿಖೆ ನಡೆಸಬೇಕು ಎಂದು ಅವರು ಆಗ್ರಹಿಸಿದರು.

'ಬಸವರಾಜ ಬೊಮ್ಮಾಯಿ ಅವರೇ ಮತದಾರರ ಮಾಹಿತಿ ಕಳವು ಹಗರಣದ 'ಕಿಂಗ್ ಪಿನ್'. ಈ ವಿಷಯದಲ್ಲಿ ಸಾರ್ವಜನಿಕರು ಮತ್ತು ಮಾಧ್ಯಮಗಳು ಕೇಳುತ್ತಿರುವ ಪ್ರಶ್ನೆಗಳಿಗೆ ಅವರು ಉತ್ತರ ನೀಡುತ್ತಿಲ್ಲ' ಎಂದು ದೂರಿದರು.

ಕೆಪಿಸಿಸಿ ಅಧ್ಯಕ್ಷ ಡಿ.ಕೆ.ಶಿವಕುಮಾರ್ ಅವರು, 'ಮತದಾರರ ಮಾಹಿತಿ ಕಳವು ಹಾಗೂ ದುರ್ಬಳಕೆ ಕುರಿತು ಕೇಂದ್ರ ಚುನಾವಣಾ ಆಯೋಗಕ್ಕೆ ದೂರು ನೀಡಿದ್ದೇವೆ. ಸಮಗ್ರ ತನಿಖೆ ನಡೆಸಬೇಕು' ಎಂದು ಆಗ್ರಹಿಸಿದರು.

'ಕೇಂದ್ರ ಸರ್ಕಾರದ ಸಂಸ್ಥೆಯೊಂದರಿಂದ ಪ್ರಕರಣದ ಕಿಂಗ್ ಪಿನ್‌ಗಳಿಗೆ ಸಾಕಷ್ಟು ಹಣ ಹೋಗಿದೆ. ಅದು ಬೇರೆಯವರ ಹೆಸರಿಗೆ ವರ್ಗಾವಣೆಯಾಗಿದೆ. ಈ ಬಗ್ಗೆ ಸಂಪೂರ್ಣ ತನಿಖೆಯಾಗಬೇಕು. ಈ ಹಣವನ್ನು ಯಾರು? ಯಾವ ಕಾರಣಕ್ಕೆ? ಯಾರಿಗೆ? ವರ್ಗಾವಣೆ ಮಾಡಿದ್ದಾರೆ ಎಂಬುದು ಬಯಲಾಗಬೇಕು' ಎಂದು ಅವರು ಒತ್ತಾಯಿಸಿದರು.

ಕಿತ್ತೂರು ತಹಶೀಲ್ದಾರ್ ಲೋಕಾಯುಕ್ತ ಬಲೆಗೆ

ಬೆಳಗಾವಿ: ಹತ್ತು ಎಕರೆ ಜಮೀನಿಗೆ ಸಂಬಂಧಿಸಿದಂತೆ ಖಾತೆಯೊಂದರ ಬದಲಾವಣೆಗೆ ₹5 ಲಕ್ಷ ಲಂಚಕ್ಕೆ ಬೇಡಿಕೆ ಇಟ್ಟಿದ್ದ ಕಿತ್ತೂರು ತಹಶೀಲ್ದಾರ್ ಹಾಗೂ ಗುಮಾಸ್ತ ಶುಕ್ರವಾರ ₹ 2 ಲಕ್ಷ ಲಂಚ ಪಡೆಯುವಾಗ ಲೋಕಾಯುಕ್ತ ಪೊಲೀಸರ ಬಲೆಗೆ ಬಿದ್ದಿದ್ದಾರೆ.

ತಹಶೀಲ್ದಾರ್ ಸೋಮಲಿಂಗಪ್ಪ ಹಲಗಿ ಹಾಗೂ ಗುಮಾಸ್ತ ಪ್ರಸನ್ನ ಜಿ. ಆರೋಪಿಗಳಾಗಿದ್ದು ಬೆಳಗಾವಿ ಲೋಕಾಯುಕ್ತ ಪೊಲೀಸರು ಪ್ರಕರಣ ದಾಖಲಿಸಿಕೊಂಡಿದ್ದಾರೆ.

ಕಿತ್ತೂರು ತಾಲ್ಲೂಕಿನ ಖೋದನಾಪುರ ಗ್ರಾಮದ ರಾಜೇಂದ್ರ ಬಾಪುಸಾಹೇಬ ಇನಾಮದಾರ ಎಂಬುವವರು ತಮ್ಮ ತಂದೆ ಬಾಪುಸಾಹೇಬ್ ಇನಾಮದಾರ ಅವರ ಹೆಸರಿನಲ್ಲಿದ್ದ ಜಮೀನಿನನ್ನು ತಮ್ಮ ಹೆಸರಿಗೆ ಖಾತಾ ಬದಲಾವಣೆ ಮಾಡಿಕೊಳ್ಳಲು ಅರ್ಜಿ ಸಲ್ಲಿಸಿದ್ದರು. ಇದಕ್ಕೆ ₹5 ಲಕ್ಷ ಲಂಚದ ಬೇಡಿಕೆ ಇಟ್ಟಿದ್ದರು ಎನ್ನಲಾಗಿದ್ದು ಈ ಬಗ್ಗೆ ಲೋಕಾಯುಕ್ತ ಪೊಲೀಸರಿಗೆ ರಾಜೇಂದ್ರ ದೂರು ನೀಡಿದ್ದರು.

ನಿಧನ ವಾರ್ತೆ

ಮಾಜಿ ಶಾಸಕ ಶ್ರೀಶೈಲಪ್ಪ ಬಿದರೂರ



ಗದಗ: ರೋಣ ಹಾಗೂ ಗದಗ ವಿಧಾನಸಭಾ ಕ್ಷೇತ್ರದ ಮಾಜಿ ಶಾಸಕ ಶ್ರೀಶೈಲಪ್ಪ ಬಿದರೂರ (60) ಹೃದಯಾಘಾತದಿಂದ ಬೆಂಗಳೂರಿನಲ್ಲಿ ಶುಕ್ರವಾರ ನಿಧನರಾದರು. ಅವರಿಗೆ ಪತ್ನಿ ಮಹೇಶ್ವರಿ ಬಿದರೂರ, ಪುತ್ರರಾದ ವಿಕ್ರಂ ಹಾಗೂ ಅಕ್ಷಯ್ ಇದ್ದಾರೆ.

ಕೃಷಿ ಕುಟುಂಬ ಹಿನ್ನಲೆಯಿಂದ ಬಂದಿದ್ದ ಶ್ರೀಶೈಲಪ್ಪ ಬಿದರೂರ ಸೂಡಿ ಮಂಡಲ ಪಂಚಾಯ್ತಿ ಪ್ರಧಾನರಾಗಿ ರಾಜಕೀಯ ಜೀವನ ಆರಂಭಿಸಿದ್ದರು. 1994ರಲ್ಲಿ ರೋಣ ವಿಧಾನಸಭಾ ಕ್ಷೇತ್ರದಿಂದ ಜನತಾ ದಳದಿಂದ ಗೆದ್ದಿದ್ದ ಅವರು, 1999ರಲ್ಲಿ ನಡೆದ ಚುನಾವಣೆಯಲ್ಲಿ ಪರಾಭವಗೊಂಡಿದ್ದರು. 2008ರಲ್ಲಿ ಗದಗ ವಿಧಾನಸಭಾ ಕ್ಷೇತ್ರದಿಂದ ಬಿಜೆಪಿಯಿಂದ ಗೆಲುವು ಸಾಧಿಸಿದ್ದರು. 2018ರ ಚುನಾವಣೆಯಲ್ಲಿ ಗದಗ ಕ್ಷೇತ್ರದಿಂದ ಬಿಜೆಪಿಯಿಂದ ಸ್ಪರ್ಧಿಸಲು ಬಯಸಿದ್ದ ಅವರಿಗೆ ಪಕ್ಷ ಟಿಕೆಟ್ ನೀಡಿರಲಿಲ್ಲ. ಬಳಿಕ ಅವರು, ಕಾಂಗ್ರೆಸ್ ಸೇರಿದ್ದರು.

ಅಂತ್ಯಕ್ರಿಯೆ ಇಂದು: ಅವರ ಮೃತದೇಹ ಗದಗಕ್ಕೆ ಶನಿವಾರ ಬೆಳಿಗ್ಗೆ 5ಕ್ಕೆ ಬರಲಿದ್ದು, ಗದಗ ಪಬ್ಲಿಕ್ ಸ್ಕೂಲ್ ಆವರಣದಲ್ಲಿ ಅಂತಿಮ ದರ್ಶನಕ್ಕೆ ಅವಕಾಶ ಕಲ್ಪಿಸಲಾಗಿದೆ. ಅಂತ್ಯಕ್ರಿಯೆ ಗಜೇಂದ್ರಗಡ ತಾಲ್ಲೂಕಿನ ಸೂಡಿ ಗ್ರಾಮದಲ್ಲಿ ನಡೆಯಲಿದೆ.

ಸಂಕಲ್ಪ ಸಮಾವೇಶ: ಕೇಂದ್ರದ ವಿರುದ್ಧ ಬಂಜಗೆರೆ ಆಕ್ಷೇಪ

ಸಂವಿಧಾನ ಮಹತ್ವ ಕುಂದಿಸುವ ಯತ್ನ

ಪ್ರಜಾವಾಣಿ ವಾರ್ತೆ

ಸಮಾವೇಶದಲ್ಲಿ ಹೋರಾಟದ ಹಾಡುಗಳ ಪುಸ್ತಕವನ್ನು ದಸಂಸ ಸಂಸ್ಥಾಪಕ ಸದಸ್ಯ ಶ್ರೀಧರ ಕಲಿವೀರ್ ಬಿಡುಗಡೆ ಮಾಡಿದರು. ದಸಂಸ (ಭೀಮವಾದ) ರಾಜ್ಯ ಸಂಚಾಲಕ ಎಂ.ಸಿ.ನಾರಾಯಣ, ಮಾನವ ಬಂಧುತ್ವ ವೇದಿಕೆ ರಾಜ್ಯ ಸಂಚಾಲಕ ರವೀಂದ್ರ ನಾಯ್ಕರ್, ಜ್ಞಾನಪ್ರಕಾಶ ಸ್ವಾಮೀಜಿ, ದಸಂಸ (ಭೀಮವಾದ) ರಾಜ್ಯಸಂಚಾಲಕ ಪರಶುರಾಮ ನೀಲನಾಯಕ್, ಬಂಜಗೆರೆ ಜಯಪ್ರಕಾಶ್ ಇದ್ದರು –ಪ್ರಜಾವಾಣಿ ಚಿತ್ರ

ಬೆಂಗಳೂರು: 'ವೇದ ಕಾಲದಲ್ಲೇ ಪ್ರಜಾಪ್ರಭುತ್ವ ಇತ್ತು ಎಂಬ ಸುಳ್ಳು ಹರಡುವ ಮೂಲಕ ಅಂಬೇಡ್ಕರ್ ಮತ್ತು ಸಂವಿಧಾನದ ಮಹತ್ವ ಕುಂದಿಸುವ ಪ್ರಯತ್ನ ನಡೆಯುತ್ತಿದೆ' ಎಂದು ಲೇಖಕ ಬಂಜಗೆರೆ ಜಯಪ್ರಕಾಶ್ ಕಳವಳ ವ್ಯಕ್ತಪಡಿಸಿದರು.

ಸಂವಿಧಾನ ಸಮರ್ಪಣಾ ದಿನದ ಅಂಗವಾಗಿ ಕರ್ನಾಟಕ ದಲಿತ ಸಂಘರ್ಷ ಸಮಿತಿ (ಭೀಮವಾದ) ಶುಕ್ರವಾರ ಆಯೋಜಿಸಿದ್ದ 'ಸಂಕಲ್ಪ ಸಮಾವೇಶ'ವನ್ನು ಉದ್ಘಾಟಿಸಿ ಅವರು ಮಾತನಾಡಿದರು.

'ಸಂವಿಧಾನ ದಿನ ಆಚರಿಸಲು ಪೂರಕವಾಗಿ ಪರಿಕಲ್ಪನಾ ಟಿಪ್ಪಣಿಯನ್ನು ಭಾರತೀಯ ಇತಿಹಾಸ ಸಂಶೋಧನಾ ಪರಿಷತ್ (ಐಸಿಎಚ್‌ಆರ್) ಮೂಲಕ ಕೇಂದ್ರ ಸರ್ಕಾರ ಬಿಡುಗಡೆ ಮಾಡಿಸಿದೆ. ಎಲ್ಲಾ ಶಾಲಾ–ಕಾಲೇಜುಗಳಿಗೆ ಕಳುಹಿಸಲಾಗಿದೆ. ವೇದ ಕಾಲದಲ್ಲೇ ಪ್ರಜಾಪ್ರಭುತ್ವ ಇತ್ತು. ಪ್ರಪಂಚದಲ್ಲಿ ಪ್ರಜಾಪ್ರಭುತ್ವಕ್ಕೆ ಭಾರತವೇ ಜನನಿ, ಭಗವದ್ಗೀತೆ ಪ್ರತಿ ವ್ಯಕ್ತಿಗೂ ಘನತೆ ಕೊಟ್ಟಿದೆ. ಅದು ಮಹಾಗ್ರಂಥ ಎಂದು ಬರೆಯಲಾಗಿದೆ' ಎಂದು ವಿವರಿಸಿದರು.

'ವೇದಗಳ ಕಾಲದಲ್ಲಿ ಇದ್ದ ಗಣತಂತ್ರದಲ್ಲಿ ದಾಸರು, ಗುಲಾಮರಿಗೆ ಪಾಲ್ಗೊಳ್ಳಲು ಅವಕಾಶ ಇರಲಿಲ್ಲ. ಆದ್ದರಿಂದ ಅದನ್ನು ಕುಲಾದಿಪತ್ಯ ಗಣತಂತ್ರ ಎಂದೇ ಕರೆಯುತ್ತೇವೆ. 1950ರ ಜನವರಿಗೆ 26ರಂದು ಸಂವಿಧಾನ ಜಾರಿ ಬಳಿಕವೇ ನಿಜವಾದ ಪ್ರಜಾಪ್ರಭುತ್ವ ರೂಪುಗೊಂಡಿದೆ. ವೇದಗಳ ಕಾಲದಲ್ಲೇ ಪ್ರಜಾಪ್ರಭುತ್ವ ಇದ್ದಿದ್ದರೆ ಹೊಸ ಸಂವಿಧಾನ ಬರೆಯಬೇಕಾದ ಅನಿವಾರ್ಯತೆ ಇರುತ್ತಿತ್ತೆ' ಎಂದು ಪ್ರಶ್ನಿಸಿದರು.

ಮೈಸೂರಿನ ಉರಿಲಿಂಗಪೆದ್ದಿ ಮಠದ ಜ್ಞಾನಪ್ರಕಾಶ ಸ್ವಾಮೀಜಿ ಅವರು, 'ಹೀಗೇ ಸುಳ್ಳುಗಳನ್ನು ಹರಡುವ ಮೂಲಕ ಕೆಂಪುಕೋಟೆಯನ್ನು ಸುಳ್ಳಿನ ಕೋಟೆ ಮಾಡಲು ಸರ್ಕಾರ ಹೊರಟಿದೆ. ಶೋಷಿತರು ಸ್ವಾಭಿಮಾನದಿಂದ ಬದುಕುತ್ತಿರುವುದನ್ನು ಸಹಿಸದವರು ಅಸ್ಥಿರಗೊಳಿಸಲು ಪ್ರಯತ್ನಿಸುತ್ತಲೇ ಇದ್ದಾರೆ. ಈಗ ಸಂವಿಧಾನಕ್ಕೆ ರಣಹದ್ದುಗಳ ಕಾಟ ಹೆಚ್ಚಿದೆ. ಸಂವಿಧಾನ ಕಾಪಾಡಿಕೊಳ್ಳಲು ಭೀಮವಾದ ಗಟ್ಟಿಗೊಳ್ಳಬೇಕಿದೆ' ಎಂದು ಹೇಳಿದರು.

'ಸೂಚನಾ ಪತ್ರ ಹರಿದು ಪ್ರತಿಭಟನೆ ಇಂದು'

ಸಂವಿಧಾನ ಸಮರ್ಪಣಾ ದಿನವನ್ನು ಭಾರತ –ಲೋಕತಂತ್ರದ ಜನನಿ ಎಂಬ ಹೆಸರಿನಲ್ಲಿ ಆಚರಿಸಲು ಹೊರಡಿಸಿರುವ ಸೂಚನಾ ಪತ್ರವನ್ನು ಹರಿದು ಪ್ರತಿಭಟನೆ ನಡೆಸಲು ದಲಿತ ಸಂಘರ್ಷ ಸಮಿತಿಗಳ ಐಕ್ಯ ಹೋರಾಟ ಚಾಲನಾ ಸಮಿತಿ ಕರೆ ನೀಡಿದೆ.

'ಭಾರತ –ಲೋಕತಂತ್ರದ ಜನನಿ ಎಂಬ ಹೆಸರಿನಲ್ಲಿ ದೇಶದಾದ್ಯಂತ ಆಚರಿಸಬೇಕೆಂದು ಸೂಚನೆ ಹೊರಡಿಸಿದೆ. ಈ ಸೂಚನೆಯಲ್ಲಿ ಎಲ್ಲಿಯೂ ಅಂಬೇಡ್ಕರ್ ಅವರನ್ನು ಸ್ಮರಿಸಿಲ್ಲ. ಪ್ರಜಾಪ್ರಭುತ್ವ ಕಲ್ಪನೆಯ ಮೂಲವನ್ನು ಅಂಬೇಡ್ಕರ್ ಅವರು ಬೌದ್ಧ ಧಮ್ಮದಲ್ಲಿ ಕಂಡಿದ್ದರು. ಕೇಂದ್ರದ ಟಿಪ್ಪಣಿಯಲ್ಲಿ ಬುದ್ಧನ ಹೆಸರನ್ನೇ ಪ್ರಸ್ತಾಪಿಸಿಲ್ಲ. ಇದನ್ನು ಖಂಡಿಸಿ ಸೂಚನಾ ಪತ್ರವನ್ನು ಹರಿದು ಸ್ವಾತಂತ್ರ್ಯ ಉದ್ಯಾನದಲ್ಲಿ ಶನಿವಾರ ಬೆಳಿಗ್ಗೆ 11 ಗಂಟೆಗೆ ಪ್ರತಿಭಟಿಸಲಾಗುವುದು' ಎಂದು ತಿಳಿಸಿದೆ.

ವೇದಕಾಲದಿಂದಲೂ ಭಾರತ ಪ್ರಜಾತಂತ್ರದ ತೊಟ್ಟಿಲು: ಐಸಿಎಚ್‌ಆರ್ ವಿವರಣೆ

'ಭಾರತದಲ್ಲಿ ಸಹಸ್ರಾರು ವರ್ಷಗಳ ಹಿಂದೆಯೇ 'ಲೋಕತಂತ್ರ'ದ ಮೌಲ್ಯಗಳಿಗೆ ಒತ್ತು ನೀಡಲಾಗಿತ್ತು. ಒಳ್ಳೆಯ ಆಡಳಿತ, ಜನರ ಕಲ್ಯಾಣ ಎಂಬ ಆದರ್ಶ ರೂಪತಳೆದಿದ್ದೇ ಭಾರತದಲ್ಲಿ ಎಂದರೆ ತಪ್ಪಾಗದು. ಹೀಗಾಗಿಯೇ ಭಾರತ ಹಾಗೂ ಇಲ್ಲಿದ್ದ 'ಲೋಕತಂತ್ರ' ವ್ಯವಸ್ಥೆ ಶತಮಾನಗಳ ಹಿಂದೆಯೇ ಜಗತ್ತಿನೆಲ್ಲೆಡೆ ತನ್ನ ಪ್ರಭಾವ ಬೀರಿವೆ. ಇವು ಜಗತ್ತಿನ ಅನೇಕ ನಾಗರಿಕತೆಗಳ ಸಮ್ಮಿಲನಕ್ಕೂ ಕಾರಣವಾಗಿವೆ...'

ಇದು, ಭಾರತೀಯ ಸಂವಿಧಾನ ದಿನದ ಪ್ರಯುಕ್ತ ಭಾರತೀಯ ಇತಿಹಾಸ ಮತ್ತು ಅನುಸಂಧಾನ ಪರಿಷತ್ (ಐಸಿಎಚ್‌ಆರ್) ಹೊರಡಿಸಿದ ಸುತ್ತೋಲೆಯಲ್ಲಿರುವ ಒಂದು ಹೊಸ ವ್ಯಾಖ್ಯಾನ.

'ಪ್ರಜಾತಂತ್ರ', 'ಜನತಂತ್ರ' ಹಾಗೂ 'ಲೋಕತಂತ್ರ'ದ ನಡುವೆ ಸಾಕಷ್ಟು ವ್ಯತ್ಯಾಸ ಇದೆ. ಪ್ರಜಾತಂತ್ರ ಎಂಬುದು ಇಂಗ್ಲಿಷ್ ಪದ 'ಡೆಮಾಕ್ರಸಿ'ಯ ಯಥಾವತ್ತಾದ ಅನುವಾದ. ಇದು ರಾಜಕೀಯ ವ್ಯವಸ್ಥೆಯೊಂದನ್ನು ಸೂಚಿಸುತ್ತದೆ. ಇನ್ನು, 'ಜನತಂತ್ರ' ಎಂಬುದು ಜನರು ಹಾಗೂ ಆಡಳಿತ ನಡೆಸುವವರನ್ನು ಒಳಗೊಂಡಿರುವ ವ್ಯವಸ್ಥೆ. ಲೋಕತಂತ್ರ ಎಂಬುದು ಸಮುದಾಯಗಳ ಕಲ್ಯಾಣದ ಉದ್ದೇಶವನ್ನು ಹೊಂದಿರುವ ಸಮುದಾಯ ಆಡಳಿತ ವ್ಯವಸ್ಥೆ ಎಂದಾಗುತ್ತದೆ. ಈ ಹಿನ್ನೆಲೆಯಲ್ಲಿ ಅವಲೋಕಿಸಿದಾಗ 'ಲೋಕ' ಹಾಗೂ 'ತಂತ್ರ' ಎಂಬ ಪದಗಳು ಸಾಂಕೇತಿಕವಾಗಿ ಮಾತ್ರವಲ್ಲ, ಅವು ಒಂದಕ್ಕೊಂದು ಪೂರಕವಾಗಿಯೂ ಇವೆ ಎಂದು ಹೇಳಬಹುದು ಎಂದು ತಿಳಿಸಲಾಗಿದೆ.

'ಡೆಮಾಕ್ರಸಿ' ಎಂಬ ವ್ಯವಸ್ಥೆಗೆ ಮೂರು ಆಯಾಮಗಳಿವೆ. ಮೊದಲನೆದಾಗಿ, ಈ ವ್ಯವಸ್ಥೆಯಲ್ಲಿ ಆಡಳಿತ ನಡೆಸುವವರು ಮಿತಿಗಳನ್ನು ಹೊಂದಿರುತ್ತಾರೆ. ಎರಡನೆದಾಗಿ ಅವರು ಉತ್ತರದಾಯಿ ಆಗಿರುತ್ತಾರೆ ಹಾಗೂ ಮೂರನೆದಾಗಿ ಆಡಳಿತದಲ್ಲಿ ನೇರವಾಗಿ ಅಥವಾ ಪರೋಕ್ಷವಾಗಿ ಜನರ ಪಾಲ್ಗೊಳ್ಳುವಿಕೆ ಇರುತ್ತದೆ.

ಭಾರತಕ್ಕೆ ಪ್ರಜಾತಂತ್ರ ವ್ಯವಸ್ಥೆ ಹೊಸದೇನಲ್ಲ. ವೇದಗಳ ಕಾಲದಿಂದ ಹಿಡಿದು ಕಾಲಕಾಲಕ್ಕೆ ಈ ವ್ಯವಸ್ಥೆ ವಿಕಾಸ ಹೊಂದಿರುವುದನ್ನು ಕಾಣಬಹುದು. ಪುರಾತತ್ವಶಾಸ್ತ್ರ, ಸಾಹಿತ್ಯ, ನಾಣ್ಯಶಾಸ್ತ್ರ, ಶಾಸನಗಳು, ಭಕ್ತಿ ಚಳವಳಿಯನ್ನು ಅವಲೋಕಿಸಿದಾಗ ಈ ಮಾತಿಗೆ ಪುಷ್ಟಿ ಹಾಗೂ ಪುರಾವೆಗಳು ಸಿಗುತ್ತವೆ ಎಂದು ಪ್ರತಿಪಾದಿಸಲಾಗಿದೆ.

ವೇದಗಳು ಒಟ್ಟಾಗಿ ಬಾಳುವುದನ್ನು, ಸೌಹಾರ್ದದಿಂದ ಇರುವುದನ್ನು ಹೇಳುತ್ತವೆ. ಅದೇ, ಉಪನಿಷತ್ತುಗಳು ಏಕತೆ, ಎಲ್ಲ ಜೀವಿಗಳಿಗೂ ಜೀವಿಸುವ ಹಕ್ಕು ಇದೆ ಎಂದು ಸಾರುತ್ತವೆ. ಇನ್ನು, ಭಗವದ್ಗೀತೆಯು ಜ್ಞಾನ, ನಂಬಿಕೆ, ಕ್ರಿಯೆಗಳ ಬಗ್ಗೆ ಒತ್ತು ನೀಡುತ್ತದೆ.

ಇಂಥ ಎಲ್ಲ ಮೌಲ್ಯಗಳನ್ನು ಮೈಗೂಡಿಸಿಕೊಂಡಿರುವ ಭಾರತ ತನ್ನ ಬಹುತ್ವದಿಂದಾಗಿ ಜಗತ್ತಿನ ಗಮನ ಸೆಳೆಯುತ್ತಿದೆ. ಇದು ವಿಶ್ವದ ಅತಿದೊಡ್ಡ ಪ್ರಜಾಪ್ರಭುತ್ವ ರಾಷ್ಟ್ರವೂ ಆಗಿದೆ. ವೇದಗಳ ಕಾಲದಿಂದಲೂ ಈ ದೇಶದ ಜನರು ಅಳವಡಿಸಿಕೊಂಡಿರುವ 'ಲೋಕತಾಂತ್ರಿಕ ಪರಂಪರೆ'ಯೇ ಇದಕ್ಕೆ ಕಾರಣ ಎಂದು ತಿಳಿಸಲಾಗಿದೆ.

ಮತ್ತೆ 15,000 ಶಿಕ್ಷಕರ ನೇಮಕ: ಸಿ.ಎಂ ಬೊಮ್ಮಾಯಿ

ಶಿವಮೊಗ್ಗ: 'ಸರ್ಕಾರಿ ಶಾಲೆಗಳಿಗೆ ಮತ್ತೆ 15,000 ಶಿಕ್ಷಕರನ್ನು ನೇಮಕಾತಿ ಮಾಡಿಕೊಳ್ಳುವ ಪ್ರಕ್ರಿಯೆಯನ್ನು ಶೀಘ್ರ ಆರಂಭಿಸಲಿದ್ದೇವೆ' ಎಂದು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಹೇಳಿದರು.

ಶುಕ್ರವಾರ ಇಲ್ಲಿ ಆರಂಭವಾದ ಬಿಜೆಪಿಯ ರಾಜ್ಯ ಪದಾಧಿಕಾರಿಗಳ ಹಾಗೂ ಕಾರ್ಯಕಾರಿಣಿ ಸಮಿತಿ ಸದಸ್ಯರ ಮೂರು ದಿನಗಳ ಪ್ರಶಿಕ್ಷಣ ವರ್ಗದ ಉದ್ಘಾಟನಾ ಸಮಾರಂಭದಲ್ಲಿ ಅವರು ಮಾತನಾಡಿದರು.

ಡಾ.ಬಿ.ಆರ್. ಅಂಬೇಡ್ಕರ್ ಹೆಸರಲ್ಲಿ 100, ಕನಕದಾಸರ ಹೆಸರಿನಲ್ಲಿ 50 ಹಾಸ್ಟೆಲ್ ತೆರೆಯಲು ಸಿದ್ಧತೆ ನಡೆದಿದೆ. 100 ಪ್ರಾಥಮಿಕ ಆರೋಗ್ಯ ಕೇಂದ್ರಗಳನ್ನು ತಲಾ ₹ 10 ಕೋಟಿ ವೆಚ್ಚದಲ್ಲಿ ಮೇಲ್ದರ್ಜೆಗೆ ಏರಿಸಲಾಗುವುದು ಎಂದು ಅವರು ಹೇಳಿದರು.

'ಪುಣ್ಯಕೋಟಿ ಯೋಜನೆಗೆ ದೇಣಿಗೆ ನೀಡಲು ಸರ್ಕಾರಿ ನೌಕರರ ಸಂಘದವರು ಸ್ವಯಂ ಪ್ರೇರಿತವಾಗಿ ಮುಂದೆ ಬಂದಿದ್ದಾರೆ. ದೇಣಿಗೆ ನೀಡಲು ಇಷ್ಟವಿಲ್ಲದವರನ್ನು ಒತ್ತಾಯಿಸಿಲ್ಲ' ಎಂದರು.

ಸಮಾಜದ ಎಲ್ಲರಿಗೂ ಶಿಕ್ಷಣ, ಇದು ಕೇಂಬ್ರಿಡ್ಜ್ ಮಹಾ ವಿದ್ಯಾಲಯಗಳ ಹೆಬ್ಬಯಕೆ: ಡಿ.ಕೆ .ಮೋಹನ್ ಬಾಬು

ಕೇಂಬ್ರಿಡ್ಜ್ ವಿದ್ಯಾಸಂಸ್ಥೆಯು ಸಮಾಜಮುಖಿ ಸಂಸ್ಥೆಯಾಗಿದ್ದು ಅತ್ಯುತ್ತಮ ಆಧುನಿಕ ಶಿಕ್ಷಣ ಸೌಲಭ್ಯಗಳನ್ನ ಹೊಂದಿದೆ, ಹಲವಾರು ಪ್ರತಿಷ್ಠಿತ ಕಂಪನಿಗಳೊಂದಿಗೆ ಒಪ್ಪಂದ ಮಾಡಿಕೊಂಡಿದ್ದು ಕಾಲೇಜಿನ ವಿದ್ಯಾರ್ಥಿಗಳಿಗೆ ಉದ್ಯೋಗ ಕೊಡಿಸುವ ಕೆಲಸ ಮಾಡುತ್ತಿದೆ, ವಿದ್ಯಾರ್ಥಿಗಳಿಗೆ ಕೌಶಲ್ಯ ತರಬೇತಿಯೊಂದಿಗೆ, ಇಂದಿನ ಔದ್ಯಮಿಕ ಕ್ಷೇತ್ರಕ್ಕೆ ಅಗತ್ಯವಿರುವ ಎಲ್ಲಾ ನೈಪುಣ್ಯತೆಯನ್ನ ನೀಡಿ ಕಳುಹಿಸುತ್ತಿದೆ. ಸಂಸ್ಥೆ ತನ್ನದೆ ಉದ್ಯೋಗ ತರಬೇತಿ ಕೇಂದ್ರವನ್ನ ಹೊಂದಿದ್ದು ಉದ್ಯಮಿಗಳಾಗ ಬಯಸುವ ವಿದ್ಯಾರ್ಥಿಗಳಿಗೆ ಅಗತ್ಯವಾದ ಸಲಹೆ, ಸೂಚನೆಗಳನ್ನ ನೀಡಲಾಗುತ್ತಿದೆ. ಸಂಸ್ಥೆಯು ಬೇಡಿಕೆಯಿರುವ, ಉದ್ಯಮಕ್ಕೆ ಅಗತ್ಯವಿರುವ ಕೋರ್ಸ್‌ಗಳನ್ನು ಹೊಂದಿದೆ ಎಂದು ಮಾಜಿ ಮುಖ್ಯಮಂತ್ರಿಗಳಾದ ಸಿದ್ದರಾಮಯ್ಯ ಕೆ.ಆರ್. ಪುರಂನ ಕೇಂಬ್ರಿಡ್ಜ್ ತಾಂತ್ರಿಕ ಮಹಾವಿದ್ಯಾಲಯದಲ್ಲಿ ಪ್ರಥಮ ಇಂಜನಿಯರ್ ತರಗತಿಗಳ ಆರಂಭ ಹಾಗೂ ಸುಸ್ಸಜ್ಜಿತ ಸಾವಿರ ಆಸನಗಳ ನೂತನ ಸಭಾಂಗಣವನ್ನು ಉದ್ಘಾಟಿಸಿ ಮಾತನಾಡಿದರು.

ಮತ್ತೊಬ್ಬ ಅತಿಥಿ ಟಿ.ಸಿ.ಎಸ್ ಸಂಸ್ಥೆಯ ಉಪಾಧ್ಯಕ್ಷರು ಹಾಗೂ ಜಾಗತಿಕ ಮುಖ್ಯಸ್ಥರಾದ ಶ್ರೀ ಇ.ಎಸ್. ಚಕ್ರವರ್ತಿಯವರು ಮಾತನಾಡಿ,ವಿದ್ಯಾರ್ಥಿಗಳು ತಾವು ಕಲಿಯ ಬಯಸುವ ಕೋರ್ಸ್‌ಗಳ ಪ್ರಾಮುಖ್ಯತೆಯನ್ನ ಅರಿತು ಅಭ್ಯಾಸಿಸಬೇಕೆಂದು ಕರೆ ನೀಡಿದರು. ವಿದ್ಯೆಯು ವಿದ್ಯಾರ್ಥಿಗಳಲ್ಲಿ ಆತ್ಮಸ್ಥೈರ್ಯ ಹೆಚ್ಚಿಸುತ್ತದೆ, ವಿದ್ಯಾರ್ಥಿಗಳು ತಾವು ಕಲಿತ ಸಂಸ್ಥೆಗೆ, ನಾಡಿಗೆ, ದೇಶಕ್ಕೆ ಕೀರ್ತಿ ತರಬೇಕೆಂದು ಎಂದರು. ವಿದ್ಯಾರ್ಥಿಗಳು ಕೇವಲ ಪಠ್ಯಪುಸ್ತಕಗಳನ್ನ ಅಭ್ಯಾಸಿಸುವುದರ ಜೊತೆ ಕೌಶಲ್ಯಗಳನ್ನ, ವಿದೇಶಿ ಭಾಷೆಗಳನ್ನ,ಸಮಸ್ಯೆಗಳನ್ನ ಪರಿಹರಿಸುವ ವಿಧಾನ ಹಾಗೂ ಭಾಷ ಸಂವಹನವನ್ನ ಅಭಿವೃದ್ಧಿ ಪಡಿಸಿಕೊಳ್ಳಬೇಕೆಂದು ಸೂಚಿಸಿದರು.

ಕೇಂಬ್ರಿಡ್ಜ್ ವಿದ್ಯಾಸಂಸ್ಥೆಗಳ ಅಧ್ಯಕ್ಷರಾದ ಡಿ.ಕೆ.ಮೋಹನ್ ಮಾತನಾಡುತ್ತಾ, ನಮ್ಮ ವಿದ್ಯಾಸಂಸ್ಥೆಗಳು ಅತ್ಯುತ್ತಮ ಗುಣಮಟ್ಟದ ಶಿಕ್ಷಣವನ್ನು ನೀಡುತ್ತಿದ್ದು, ಇಲ್ಲಿನ ವಿದ್ಯಾರ್ಥಿಗಳನ್ನ ಜಾಗತಿಕ ಮಟ್ಟದಲ್ಲಿ ಸ್ಪರ್ಧಿಸುವಂತೆ ತಯಾರುಮಾಡುವುದು ಸಂಸ್ಥೆಯ ಗುರಿಯಾಗಿದೆ ಎಂದು ಹೇಳಿದರು. ಸಂಸ್ಥೆಗೆ ಅತ್ಯುತ್ತಮ ಸಭಾಂಗಣದ ಅವಶ್ಯಕತೆಯಿತ್ತು ಹಾಗೂ ಇದು ನಮ್ಮ ಬಹುದಿನದ ಕನಸಾಗಿತ್ತು ಇಂದು ಅದನ್ನ ಮಾಜಿ ಮುಖ್ಯಮಂತ್ರಿಗಳಾದ ಶ್ರೀ ಸಿದ್ದರಾಮಯ್ಯ ಅವರಿಂದ ಉದ್ಘಾಟನೆಗೊಂಡಿದ್ದು ನಮಗೆ ಇನ್ನಷ್ಟು ಸಂತಸ ತಂದಿದೆ ಎಂದರು, ಕಾರ್ಯಕ್ರಮಕ್ಕೆ ಇತರೆ ಗಣ್ಯರಾದ ಹೊಸಕೋಟೆ ಶಾಸಕರಾದ ಶ್ರೀ ಶರತ್ ಬಚ್ಚೆಗೌಡರು, ಕೇಂಬ್ರಿಡ್ಜ್ ಸಮೂಹ ಸಂಸ್ಥೆಗಳ ಕಾರ್ಯನಿರ್ವಾಹಕ ಅಧಿಕಾರಿಯಾದ ಶ್ರೀ ನಿತಿನ್ ಮೋಹನ್, ಕೇಂಬ್ರಿಡ್ಜ್ ತಾಂತ್ರಿಕ ಮಹಾವಿದ್ಯಾಲಯದ ಪ್ರಾಚಾರ್ಯ ರಾದ ಡಾ.ಜಿ, ಇಂದುಮತಿ ರವರು ವೇದಿಕೆಯಲ್ಲಿ ಉಪಸ್ಥಿತರಿದ್ದರು.

ಕಾರ್ಯಕ್ರಮದಲ್ಲಿ ಸಿದ್ದರಾಮಯ್ಯ, ಡಿ.ಕೆ. ಮೋಹನ್‌ಬಾಬು, ಶರತ್ ಬಚ್ಚೇಗೌಡ

ಕೇಂಬ್ರಿಡ್ಜ್ ಸಂಸ್ಥೆ ಹಾಗೂ ಸಂಸ್ಥಾಪಕರ ಹೆಜ್ಜೆಗುರುತುಗಳತ್ತ ಇಣುಕು ನೋಟ..

ಪ್ರಸ್ತುತಿ: ಪಿ.ವಿ. ಬ್ರ್ಯಾಂಡ್ ಸ್ಪಾಟ್

ಡಿ.ಕೆ ಮೋಹನ್ ಬಾಬು ಅವರು ಸಿವಿಲ್ ಇಂಜಿನಿಯರ್ ಪದವಿದರರು, ಆದರೆ ಅವರ ತುಡಿತವಿದ್ದು ಬೃಹತ್ ಕಟ್ಟಡ ನಿರ್ಮಾಣದಲಲ್ಲ! ಬದಲಿಗೆ ಸಮಾಜದ ಸಮಗ್ರ ಬದಲಾವಣೆ ಶಿಕ್ಷಣದಿಂದ ಸಾದ್ಯ ಎಂದು ಅಂದೇ ಕನಸಿದ್ದರು, ಶಿಕ್ಷಣದಿಂದ ಗಟ್ಟಿ ತಳಪಾಯವಿರುವ ಸುಂದರ ಸಮಾಜವನ್ನ ನಿರ್ಮಿಸಬಹುದೆಂದು ಆಶಿಸಿ ಬರೀ ಕನಸು ಕಾಣದೇ ಅದನ್ನು ಕಾರ್ಯಗತಗೊಳಿಸಬೇಕೆಂದು ನಿರ್ಧರಿಸಿದ್ದರು.

ಆರಂಭಿಕ ದಿನಗಳು

1989 ರಲ್ಲಿ ಇಂಜನಿಯರಿಂಗ್ ಮುಗಿಸಿದ ಡಿ.ಕೆ.ಮೋಹನ್ ಬಾಬು ಸಿವಿಲ್ ಗುತ್ತಿಗೆದಾರರಾಗಿ ತಮ್ಮ ವೃತ್ತಿ ಜೀವನವನ್ನ ಆರಂಭಿಸಿದರು. ಹಲವು ಕಾಮಗಾರಿಗಳನ್ನ ಯಶಸ್ವಿಯಾಗಿ ಮುಗಿಸಿದ್ದರು, ಅಂತೆಯ ರಾಜಕೀಯ ನಂಟು ವಿದ್ಯಾರ್ಥಿ ದೆಸೆಯಲ್ಲೆ ಬೆಸದಿತ್ತು ಹಾಗಾಗಿ ಮೋಹನ್ NSUI ಜಿಲ್ಲಾಘಟಕದ ಅಧ್ಯಕ್ಷರಾಗಿದ್ದರು, ಅದರ ಪ್ರಭಾವ 1996 ಕೆ.ಆರ್ ಪುರಂ ನಗರಸಭೆಯ ಸದಸ್ಯರಾಗಿ ಆಯ್ಕೆಗೊಂಡು ವಾರ್ಡಿನ ಏಳಿಗೆಗೆ ದುಡಿದರು, ವಾರ್ಡಿನ ಜನರ ಪ್ರೀತಿ ವಿಶ್ವಾಸ 2000ರ ಹೊತ್ತಿಗೆ ಕೆ.ಆರ್ ಪುರಂ ನಗರಸಭೆಯ ಅಧ್ಯಕ್ಷರಾಗಲು ಕಾರಣವಾಯಿತು. ನಗರಸಭೆಯ ಅಧ್ಯಕ್ಷರಾಗಿ ವಾರ್ಡುಗಳ ಸಮಗ್ರ ಅಭಿವೃದ್ದಿಗೆ ಕಂಕಣ ತೊಟ್ಟು ಅದರಲ್ಲಿ ಯಶಸ್ವಿಯೂ ಆದರು.

ಅಂಗನವಾಡಿ, ಸರ್ಕಾರಿ ಶಾಲೆಗಳಲ್ಲಿ ಶೌಚಾಲಯಗಳ ನಿರ್ಮಾಣ, ಕೆ.ಆರ್ ಪುರಂನಲ್ಲಿ ಬಸ್ ಟಿಕೆಟ್ ಕೌಂಟರ್ ಸೇರಿದಂತೆ 27 ಕಟ್ಟಡಗಳ ನಿರ್ಮಾಣ ಹಾಗೂ ರಾಜಕಾಲುವೆಗಳ ಪುನರ್ ನಿರ್ಮಾಣಕ್ಕೆ ಕಾರಣವಾಯಿತು.

2006 ಮಹಾನಗರ ಪಾಲಿಕೆಯಾದ ನಗರಸಭೆ, ಶಿಕ್ಷಣ ಕ್ಷೇತ್ರದತ್ತ ನಡೆದ ಮೋಹನ್

ಹಿಂದುಳಿದವರಿಗೆ, ಸಮಾಜದಲ್ಲಿ ಕಡೆಗಣಿಸಲ್ಪಟ್ಟ ಸಮುದಾಯಗಳಿಗೆ ಶಿಕ್ಷಣ ನೀಡಿದರೆ ಸಮಾಜ ಸುಶಿಕ್ಷಿತವಾಗಿ, ಅಭಿವೃದ್ಧಿಯ ಪಥದತ್ತ ಸಾಗುತ್ತದೆ ಎಂದು ಮನಗಂಡಿದ್ದ ಮೋಹನ್ ಅದರ ಅನುಷ್ಠಾನದತ್ತ ಸಾಗಿದರು. ಹಾಗಾಗಿಯೆ ಆರಂಭಿಕವಾಗಿ ಪ್ರಾಥಮಿಕ ಶಿಕ್ಷಣ ಕ್ಷೇತ್ರದಲ್ಲಿ ಆರಂಭವಾಯಿತು.

ಭಾರತೀಯ ವಿದ್ಯಾನಿಕೇತನ್ ಸಂಸ್ಥೆಯ ಅಧ್ಯಕ್ಷರಾದರು, ಇದು ವೇಣುಗೋಪಾಲ ಟ್ರಸ್ಟ್ ಅಡಿ ಬರುತ್ತದೆ. ಸೌಲಭ್ಯವಿಲ್ಲದ ವಿದ್ಯಾರ್ಥಿಗಳಿಗೆ ಉಚಿತ ವಿದ್ಯಾಭ್ಯಾಸವನ್ನು ನೀಡುವ ಟ್ರಸ್ಟ್ ಇದಾಗಿದ್ದು ಸುಮಾರು 4000 ವಿದ್ಯಾರ್ಥಿಗಳು ಇಲ್ಲಿ ಉಚಿತ ಶಿಕ್ಷಣ ಪಡೆಯುತ್ತಾರೆ.

ಇಲ್ಲಿ ಕನ್ನಡ ಮಾಧ್ಯಮ ಮತ್ತು ಇಂಗ್ಲಿಷ್ ಎರಡರಲ್ಲೂ ಬೋಧಿಸಲಾಗುತ್ತದೆ, ತಂದೆಯವರಾದ ಕೃಷ್ಣಪ್ಪ ರವರು ಸ್ಥಾಪಿಸಿದ ಟ್ರಸ್ಟ್ ಮುಖೇನ ಸರ್ಕಾರ ನೀಡುವ ಅಲ್ಪ ಅನುದಾನ ಸಾಕಾಗದೆ ಮಕ್ಕಳಿಗೆ ಊಟ ವಸತಿ ಶಿಕ್ಷಣ ನೀಡಲು ತೊಂದರೆಗೆ ಸಿಲುಕಿ ಮನೆಯ ಒಡವೆಗಳನ್ನ ಮಾರಿ ಶಾಲೆಯನ್ನ ನಡೆಸಿದ್ದ ಕಷ್ಟದ ದಿನಗಳು ಇದ್ದವು, ಆದರೆ ಯಾವುದಕ್ಕೂ ಅಂಜದೇ ಶಾಲೆಯನ್ನ ನಡೆಸಿದ ಕೀರ್ತಿ ಇವರಿಗೆ ಸಲ್ಲಬೇಕು. ಆ ದಿನಗಳಲ್ಲಿ ಸರ್ಕಾರಿ ಪ್ರೌಢಶಾಲೆಯಲ್ಲಿ ಹೆಣ್ಣು ಮಕ್ಕಳಿಗೆ ಪ್ರವೇಶವಿಲ್ಲದ ಕಾರಣ ಸ್ವತ: ಹೆಣ್ಣು ಮಕ್ಕಳಿಗಾಗಿಯೆ ಹೈಸ್ಕೂಲ್ ತೆರೆದು ಹೆಣ್ಣು ಮಕ್ಕಳಿಗೆ ಶಿಕ್ಷಣ ನೀಡಿದ್ದನ್ನ ಮೋಹನ್ ಇಂದಿಗೂ ನೆನಪಿಸಿಕೊಳ್ಳುತ್ತಾರೆ ಹೀಗೆ ಆರಂಭಗೊಂಡ ಶಿಕ್ಷಣ ಸಂಸ್ಥೆ ಮುಂದೆ ಕೇಂಬ್ರಿಡ್ಜ್ ವಿದ್ಯಾಲಯ ತಲೆ ಎತ್ತಲು ಕಾರಣವಾಯಿತು.

ಕೇಂಬ್ರಿಡ್ಜ್ ಸಂಸ್ಥೆಯಲ್ಲಿ ಎಲ್ಲಾ ವರ್ಗದ ಬಡ ಮತ್ತು ಮದ್ಯಮ ವರ್ಗದ ಮಕ್ಕಳಿಗೆ ಆದ್ಯತೆ ನೀಡುತ್ತ ಬೋಧನೆ ಹಾಗೂ ಕ್ಯಾಂಪಸ್‌ನ ಶುಚಿತ್ವಕ್ಕೆ ಒತ್ತು ನೀಡುವ ಗುರಿಯನ್ನ ಹೊಂದಿ ಅದನ್ನ ಅನುಷ್ಠಾನಕ್ಕೆ ತರುವಲ್ಲಿ ಯಶಸ್ಸನ್ನ ಕಂಡಿದ್ದಾರೆ.

ಪರಿಸರ ಕಾಳಜಿಯನ್ನ ಹೊಂದಿರುವ ಇವರು ಕೇಂಬ್ರಿಡ್ಜ್ ಇನ್ಸಟಿ ಟ್ಯೂಟ್ ಆಫ್ ಟೆಕ್ನಾಲಜಿಯಲ್ಲಿ, ಶೂನ್ಯ ತಾಜ್ಯಗಳ ಕ್ಯಾಂಪಸ್ ಎಂಬ ಘೋಸಿಸಲಾಗಿದೆ. ತ್ಯಾಜ್ಯಗಳನ್ನ ಹೇಗೆ ಬೇರ್ಪಡಿಸಬೇಕು ಮತ್ತು ಒಣತಾಜ್ಯಗಳನ್ನ ಹೇಗೆ ಬಳಸಬೇಕು ಎಂಬೀತ್ಯಾದಿ ವಿವರಗಳನ್ನ ತಿಳಿಸಿ ಅದನ್ನ ಅನುಷ್ಠಾನಗೊಳಿಸುವಲ್ಲಿ ಯಶಸ್ವಿಯಾದರು. ಈ ಮೂಲಕ ಪ್ಲಾಸ್ಟಿಕ್‌ನ ಎಲ್ಲಾ ಬಳಸುವ ವಸ್ತುಗಳನ್ನ ಕ್ಯಾಂಪಸ್ನಲ್ಲಿ ನಿಷೇಧಿಸಲಾಗಿದೆ.

ಬಡ ಅಶಕ್ತ ಜನರಿಗೆ ಅವಶ್ಯ ಆರೋಗ್ಯ ಚಿಕಿತ್ಸೆ ಪರಿಕರ ವ್ಯವಸ್ಥೆ

ಆರೋಗ್ಯ ಎಲ್ಲರಿಗೂ ಸಿಗವಂತಾಗಬೇಕೆಂಬ ಆಶಯದೊಂದಿಗೆ ಕೆ.ಆರ್ ಪುರಂ ಕ್ಷೇತ್ರದ ಬಡ ಹಾಗೂ ಅಶಕ್ತ ನಾಗರೀಕರಿಗೆ ಆರೋಗ್ಯ ತಪಾಸಣೆ, ಕಣ್ಣಿನ ಚಿಕಿತ್ಸೆ ಹಾಗೂ ಔಷಧಿಗಳ ವಿತರಣೆಯನ್ನ ಹಮ್ಮಿತೊಂಡು 875 ಹಿರಿಯ ನಾಗರಿಕರಿಗೆ ತಪಾಸಣೆ ಹಾಗೂ ಕನ್ನಡಕಗಳನ್ನ ನೀಡಲಾಗಿದೆ.

20ಉಚಿತ ನೇತ್ರಚಿಕಿತ್ಸೆಯನ್ನ ಮಾಡುವುದರ ಜೊತೆ 700 ಯೂನಿಟ್ ರಕ್ತವನ್ನು ಸಂಗ್ರಹಿಸಲಾಗಿದೆ.

ಮೋಹನ್ ರವರ ಕ್ರೀಡೆ ಹಾಗೂ ಸಾಂಸ್ಕೃತಿಕ ಚಟುವಟಿಕೆಗಳತ್ತ!

ವಿದ್ಯಾರ್ಥಿ ದಿಸೆಯಲ್ಲಿ ಕ್ರಿಕೆಟ್‌ನಲ್ಲಿ ವೇಗದ ಬೌಲರಾಗಿ ಲೀಗ್‌ನಲ್ಲಿ ಆಡಿದ್ದರು ಈಗ ಬಿಡುವಿನ ವೇಳೆ ಬ್ಯಾಡ್ಮಿಂಟನ್ ಆಡುತ್ತಾರೆ, ವೇಣುಗೋಪಾಲ ಸ್ವಾಮಿ ಟ್ರಸ್ಟ್ ಅಧ್ಯಕ್ಷರಾಗಿ ಕುಟುಂಬದ ಹಣದಿಂದಲೇ ದೇವಸ್ಥಾನದ ಅಭಿವೃದ್ಧಿಯಲ್ಲಿ ತೊಡಗಿದ್ದಾರೆ. ಹಾಗೆ ಸಮಯ ಸಿಕ್ಕಾಗ ತಮ್ಮ ತೆಂಗಿನ ತೋಟದಲ್ಲಿ ಕೃಷಿಯಲ್ಲಿ ತೊಡಗುವುದು ತೆಂಗಿನ ಮರದ ಕೆಳಗೆ ವಿಶ್ರಾಂತಿ ಪಡೆಯುವುದು ಇವರಿಗೆ ಅಚ್ಚುಮೆಚ್ಚು, ದಂಪತಿಗೆ ಒಬ್ಬ ಮಗ ಮಗಳಿದ್ದು ಇಬ್ಬರು ತಂದೆಯಂತೆ ಶಿಕ್ಷಣ ಕ್ಷೇತ್ರ ಪ್ರವೇಶಿಸಿದ್ದಾರೆ ❖

ಸಮಾಜ ಕಲ್ಯಾಣ ಇಲಾಖೆ

ಸ್ವಾತಂತ್ರ್ಯದ ಅಮೃತ ಮಹೋತ್ಸವ



ಶ್ರೀ ಬಸವರಾಜ ಎಸ್. ಬೊಮ್ಮಾಯಿ
ಸನ್ಮಾನ್ಯ ಮುಖ್ಯಮಂತ್ರಿಗಳು

ಸಂವಿಧಾನ ದಿನಾಚರಣೆ

ಪ್ರಯುಕ್ತ

ಡಾ. ಬಿ.ಆರ್. ಅಂಬೇಡ್ಕರ್‌ರವರ ಪ್ರತಿಮೆಗೆ ಪುಷ್ಪಾರ್ಚನೆ

ಹಾಗೂ

ಸಮಾಜ ಕಲ್ಯಾಣ ಇಲಾಖೆಯಿಂದ ಮುದ್ರಿಸಿರುವ

'ಭಾರತದ ಸಂವಿಧಾನ'

ದ್ವಿಭಾಷಾ ಮಹಾಗ್ರಂಥದ ಪ್ರತಿಗಳ ಬಿಡುಗಡೆ

ಸನ್ಮಾನ್ಯ ಮುಖ್ಯಮಂತ್ರಿಗಳಾದ
ಶ್ರೀ ಬಸವರಾಜ ಎಸ್. ಬೊಮ್ಮಾಯಿರವರಿಂದ

ಶ್ರೀ ಕೋಟ ಶ್ರೀನಿವಾಸ ಪೂಜಾರಿ
ಮಾನ್ಯ ಸಮಾಜ ಕಲ್ಯಾಣ ಮತ್ತು ಹಿಂದುಳಿದ ವರ್ಗಗಳ ಕಲ್ಯಾಣ ಸಚಿವರು

ದಿನಾಂಕ: 26–11–2022, ಶನಿವಾರ ಬೆಳಗ್ಗೆ 10:30 ಗಂಟೆ

ಸ್ಥಳ: ವಿಧಾನ ಸೌಧದ ಮುಂಭಾಗ (ಪೂರ್ವ ದ್ವಾರ), ಬೆಂಗಳೂರು

ಮಾನ್ಯ ಸಮಾಜ ಕಲ್ಯಾಣ ಹಾಗೂ ಹಿಂದುಳಿದ ವರ್ಗಗಳ ಕಲ್ಯಾಣ ಸಚಿವರಾದ ಶ್ರೀ ಕೋಟ ಶ್ರೀನಿವಾಸ ಪೂಜಾರಿ ಅವರು ಇಲಾಖಾ ಕಾರ್ಯಕ್ರಮದಲ್ಲಿ ಪಾಲ್ಗೊಂಡಿರುವುದು.

ಸರ್ಕಾರದ ಕಾರ್ಯದರ್ಶಿಗಳು
ಸಮಾಜ ಕಲ್ಯಾಣ ಇಲಾಖೆ

ಸರ್ಕಾರದ ಕಾರ್ಯದರ್ಶಿಗಳು
ಸಿಬ್ಬಂದಿ ಮತ್ತು ಆಡಳಿತ ಸುಧಾರಣಾ ಇಲಾಖೆ

"ನಮ್ಮ ವೈವಿಧ್ಯಮಯ ಸಂಸ್ಕೃತಿಯ ಶ್ರೇಷ್ಠ ಪರಂಪರೆಯನ್ನು ಗೌರವಿಸುವುದು ಮತ್ತು ರಕ್ಷಿಸುವುದು"
– ಪ್ರತಿಯೊಬ್ಬ ಭಾರತೀಯನ ಸಂವಿಧಾನಬದ್ಧ ಮೂಲಭೂತ ಕರ್ತವ್ಯ

ವಿ.ಸೂ.: ಕೋವಿಡ್-19 ನಿಯಮಗಳನ್ನು ಪಾಲಿಸುವುದು

ವಿಶ್ವೇಶ್ವರಯ್ಯ ತಾಂತ್ರಿಕ ವಿಶ್ವವಿದ್ಯಾಲಯ

(ವಿಟಿಯು ಅಧಿನಿಯಮ 1994"ರ ಅಡಿಯಲ್ಲಿ ಕರ್ನಾಟಕ ಸರ್ಕಾರದಿಂದ ಸ್ಥಾಪಿತವಾದ ರಾಜ್ಯ ವಿಶ್ವವಿದ್ಯಾಲಯ)
'ಜ್ಞಾನ ಸಂಗಮ', ಬೆಳಗಾವಿ -590018, ಕರ್ನಾಟಕ

VISVESVARAYA TECHNOLOGICAL UNIVERSITY
(A State University of Government of Karnataka Established as per the VTU Act, 1994)
'Jnana Sangama', Belagavi – 590018, Karnataka



ಶ್ರೀ ಬಸವರಾಜ ಎಸ್ ಬೊಮ್ಮಾಯಿ
ಸನ್ಮಾನ್ಯ ಮುಖ್ಯಮಂತ್ರಿಗಳು

ಎನ್‌ಇಪಿ – 2020 ನೂತನ ತಾಂತ್ರಿಕ ಶಿಕ್ಷಣ ಪಠ್ಯಕ್ರಮ

ಐ.ಟಿ. ಕೋರ್ಸ್‌ಗೆ ಸೇರದ ವಿದ್ಯಾರ್ಥಿಗಳು ಕೂಡ **ಕಂಪ್ಯೂಟರ್ ಸೈನ್ಸ್** ಮತ್ತು ಸಂಬಂಧಿತ ಕೋರ್ಸ್‌ಗಳಲ್ಲಿ **ಹೆಚ್ಚುವರಿ ಪದವಿ** (ಮೈನರ್ ಡಿಗ್ರಿ) ಪಡೆಯಬಹುದು.

ನೂತನ ರಾಷ್ಟ್ರೀಯ ಶಿಕ್ಷಣ ನೀತಿ (2020)ಯ ಆಶೋತ್ತರಗಳಿಗೆ ಪೂರಕವಾಗಿ ವಿನ್ಯಾಸಗೊಳಿಸಿದ ಮತ್ತು ಉದ್ದಿಮೆಗಳ ಅಗತ್ಯಕ್ಕೆ ಅನುಸಾರವಾಗಿ ರೂಪಿಸಿದ ಎಂಜಿನಿಯರಿಂಗ್ ಶಿಕ್ಷಣದ ಹೊಸ ಪಠ್ಯಕ್ರಮ (2022 ಸ್ಕೀಮ್)

(ವಿವಿಧ ಎಂಜಿನಿಯರಿಂಗ್ ಕೋರ್ಸ್‌ಗಳ ನಡುವೆ ಈಗ ಯಾವುದೇ ನಿರ್ಬಂಧಗಳು ಇಲ್ಲ)

ವಿಟಿಯುನ 2022ರ ಸ್ಕೀಮ್‌ನ ವಿಶಿಷ್ಟ ಲಕ್ಷಣಗಳು

- ಆಯ್ಕೆಯ ಅವಕಾಶ, ಬಹುಶಿಸ್ತೀಯ, ಅಂತರ ಶಿಸ್ತೀಯ ಮತ್ತು ವಿದ್ಯಾರ್ಥಿ ಕೇಂದ್ರಿತ
- ಮೂಲಭೂತ ಜ್ಞಾನ ಕೇಂದ್ರಿತ ವಿಭಾಗ ವಿಶೇಷಗಳು
- ಅನುಭವ ಕೇಂದ್ರಿತ ಶಿಕ್ಷಣಕ್ಕೆ ಒತ್ತು. ಪ್ರಾಜೆಕ್ಟ್ ಆಧಾರಿತ ಕಲಿಕೆ, ಸೃಜನಶೀಲತೆ ಮತ್ತು ನಾವೀನ್ಯತೆ
- ಉದ್ಯಮ ನಿರ್ದೇಶಿತ ಮತ್ತು ಕೌಶಲ ಕಲಿಕೆಗೆ ಒತ್ತು ನೀಡುವ ಪಠ್ಯಕ್ರಮ
- ಐ.ಟಿ. ಕೋರ್ಸ್‌ಗೆ ಸೇರದ ವಿದ್ಯಾರ್ಥಿಗಳು ಕೂಡ ಕಂಪ್ಯೂಟರ್ ಸೈನ್ಸ್ ಮತ್ತು ಸಂಬಂಧಿತ ಕೋರ್ಸ್ ಗಳಲ್ಲಿ ಹೆಚ್ಚುವರಿ ಪದವಿ (ಮೈನರ್ ಡಿಗ್ರಿ) ಪಡೆಯಬಹುದು.

ಉದ್ಯೋಗಾವಕಾಶ ವೃದ್ಧಿಗೆ ಮತ್ತು ಉದ್ಯಮಿ ಯಾಗುವ ಆಸಕ್ತಿಗೆ ಹಾಗೂ ಅಪೇಕ್ಷಿತ ಕೌಶಲಗಳ ಅಗತ್ಯಕ್ಕೆ ಅನುಸಾರವಾಗಿ ಐಚ್ಛಿಕ ವಿಷಯಗಳನ್ನು ಆಯ್ಕೆ ಮಾಡಿಕೊಳ್ಳಲು ಅವಕಾಶ

ಕಂಪ್ಯೂಟರ್ ಕಲಿಕೆಯ ಬೆಂಬಲದೊಂದಿಗೆ ಎಂಜಿನಿಯರಿಂಗ್ ಪ್ರಧಾನ ಕೋರ್ಸ್‌ಗಳ (ಕೋರ್ ಬ್ರಾಂಚ್) ವಿದ್ಯಾರ್ಥಿಗಳನ್ನು ಉದ್ಯಮಗಳ ಅಗತ್ಯಕ್ಕೆ ತಕ್ಕಂತೆ ಸನ್ನದ್ಧಗೊಳಿಸಲು ಈ ಪಠ್ಯಕ್ರಮವನ್ನು ರೂಪಿಸಲಾಗಿದೆ.

ಐ.ಟಿ. ಕೋರ್ಸ್‌ಗಳಿಗೆ ಹೊರತಾದ ವಿದ್ಯಾರ್ಥಿಗಳಿಗೆ ಸುವರ್ಣ ಅವಕಾಶ

ಐ.ಟಿ.ಯೇತರ ಕೋರ್ಸ್ ಗಳ (ಮೆಕ್ಯಾನಿಕಲ್, ಸಿವಿಲ್, ಎಲೆಕ್ಟ್ರಿಕಲ್ ಮತ್ತು ಸಂಬಂಧಿತ ಶಾಖೆಗಳು) ವಿದ್ಯಾರ್ಥಿಗಳು ಐ.ಟಿ. ವಿಷಯಗಳನ್ನು ಕಲಿತು ಬಹು ವಲಯಗಳಲ್ಲಿ ನೌಕರಿ ಗಳಿಸಲು ಅನುವು ಮಾಡಿಕೊಡುತ್ತದೆ (ಮೊದಲ ವರ್ಷದಲ್ಲಿಯೇ ಈ ವಿದ್ಯಾರ್ಥಿಗಳು ಐ.ಟಿ ಆಧಾರಿತ ಎರಡು ವಿಷಯಗಳನ್ನು ಆಯ್ಕೆ ಮಾಡಿಕೊಳ್ಳಬಹುದು)

ಭೂಮಿಕಾ

ಮಹಿಳೆಯ ಆಪ್ತ ಸಂಗಾತಿ

ಹೆತ್ತವರೇ ವರ ಹುಡುಕಿ, ಲಕ್ಷಗಟ್ಟಲೆ ಖರ್ಚು ಮಾಡಿ ಮದುವೆ ಮಾಡಿಕೊಟ್ಟ ನಂತರವೂ ಹೆಣ್ಣು ಮಕ್ಕಳು ಗಂಡನ ಮನೆಯಲ್ಲಿ ಕೊಲೆಯಾಗುತ್ತಿರುವ ಉದಾಹರಣೆಗಳಿವೆ. ಕುಟುಂಬ ಮರ್ಯಾದೆಯ ಹೆಸರಲ್ಲಿ ಹೆತ್ತವರಿಂದಲೇ ಹತ್ಯೆಯಾಗುತ್ತಿರುವುದು ವರದಿಯಾಗುತ್ತಿವೆ. ಹಾಗಿರುವಾಗ ಲಿವ್‌ಇನ್ ಸಂಬಂಧಗಳಿಂದ ಹೆಣ್ಣು ಮಕ್ಕಳ ವಿರುದ್ಧದ ಅಪರಾಧಗಳು ಹೆಚ್ಚುತ್ತಿವೆ ಎಂದು ದೂಷಿಸುವುದು ಅತಾರ್ಕಿಕ...

ಸಹಜೀವನ ಸಂಬಂಧ 'ನೋಟ' ಬದಲಾಗಲಿ..!

ಅರ್ಪಣಾ ಎಚ್.ಎಸ್.

ಪಾಶ್ಚಾತ್ಯ ದೇಶಗಳಲ್ಲಿರುವ ವ್ಯಕ್ತಿ ಕೇಂದ್ರಿತ ಸಮಾಜಗಳಿಗಿಂತ ಭಿನ್ನವಾಗಿ ಭಾರತದಲ್ಲಿರುವುದು ಕುಟುಂಬ ಅಥವಾ ಸಮುದಾಯ ಕೇಂದ್ರಿತ ಸಮಾಜ. ಈ ವ್ಯವಸ್ಥೆಯಲ್ಲಿ ವ್ಯಕ್ತಿಯ ಒಳಿತಿಗಿಂತ ಮೊದಲು ಕುಟುಂಬದ, ಸಮುದಾಯದ ಮತ್ತು ಸಮಾಜದ ಒಳಿತು ಮುಖ್ಯ ಎಂದು ಪರಿಗಣಿಸಲಾಗುತ್ತದೆ. ಅದಕ್ಕೆ ತಕ್ಕಂತೆ ಇದು ಸಮಾಜದ ಕಟ್ಟುಪಾಡು, ರೀತಿ ರಿವಾಜು, ಅದು ಒಪ್ಪಿರುವ ಮೌಲ್ಯವ್ಯವಸ್ಥೆಗೆ ಹೊಂದಿಕೊಂಡು ನಡೆಯುವ ವ್ಯವಸ್ಥೆಯಾಗಿದೆ. ಭಾರತದಲ್ಲಿ ಎಲ್ಲರನ್ನೂ ಕಾಡುವ 'ನಾಲ್ಕು ಜನ ಏನಂತಾರೆ?' ಅನ್ನುವ ಭಯದ ಮೂಲ ಇರುವುದು ಇಲ್ಲೇ.

ಸಹಜವಾಗಿಯೇ ಇಂತಹ ಸಮಾಜಗಳಲ್ಲಿ ವ್ಯಕ್ತಿ ಸ್ವಾತಂತ್ರ್ಯಕ್ಕೆ ಹೆಚ್ಚಿನ ಸ್ಥಾನವಿಲ್ಲ. ಹೀಗಾಗಿ, ಮದುವೆಯೂ ಸೇರಿದಂತೆ ತೀರಾ ವೈಯಕ್ತಿಕವಾದ ಹಲವು ನಿರ್ಧಾರಗಳನ್ನು ಕುಟುಂಬ ಮತ್ತು ಸಮಾಜವನ್ನು ದೃಷ್ಟಿಯಲ್ಲಿಟ್ಟುಕೊಂಡು ತೆಗೆದುಕೊಳ್ಳಲಾಗುತ್ತದೆ. ಕಾಲ ಬದಲಾದಂತೆ ಮದುವೆಯ ವಿಷಯದಲ್ಲಿ ಗಂಡು-ಹೆಣ್ಣಿನ ಒಪ್ಪಿಗೆ ಮಹತ್ವ ಪಡೆಯುತ್ತಾ ಹೋಗಿದೆಯಾದರೂ, ಅದಕ್ಕೆ ಸಮಾಜ ಮುದ್ರೆ ಒತ್ತುವುದು ಅಷ್ಟೇ ಮುಖ್ಯವಾಗಿಯೇ ಉಳಿದಿದೆ. ಹೀಗಾಗಿ, ಭಾರತೀಯ ಸಮಾಜ ಒಂದು ಚೌಕಟ್ಟಿನಲ್ಲಿ (ಒಂದೇ ಧರ್ಮ, ಒಂದೇ ಜಾತಿ, ಸಮಾನ ಅಂತಸ್ತು... ಹೀಗೆ) ಪ್ರೇಮ ವಿವಾಹಗಳನ್ನು ಒಪ್ಪಿಕೊಳ್ಳಲು ಆರಂಭಿಸಿದ್ದರೂ ಅದರ ಪರಿಕಲ್ಪನೆ, ಅರೇಂಜ್ಡ್ ಮದುವೆಗಳೇ ಇಲ್ಲದ ಪಾಶ್ಚಾತ್ಯ ಸಂಸ್ಕೃತಿಯಲ್ಲಿರುವುದಕ್ಕಿಂತ ತೀರಾ ಭಿನ್ನವಾಗಿದೆ.

ತೀರಾ ಇತ್ತೀಚಿನವರೆಗೂ ನಮ್ಮಲ್ಲಿ ಗಂಡು ಹೆಣ್ಣಿನ ನಡುವಿನ ಯಾವುದೇ ರೀತಿಯ ಆಕರ್ಷಣೆಯು, ಜೊತೆಯಾಗಿ ಕಾಫಿ ಕುಡಿಯುವ ಅಥವಾ ಐಸ್ಕ್ರೀಂ ತಿನ್ನುವ ಹಂತ ತಲುಪಿತೆಂದರೆ ಅದು ವಿವಾಹದಲ್ಲೇ ಪರ್ಯಾವಸನವಾಗಬೇಕೆಂಬುದು ಅಲಿಖಿತ ನಿಯಮವಾಗಿತ್ತು. ಈಗಲೂ, ಕೆಲ ಕಾಲ ಜೊತೆಗೆ ಸುತ್ತಿ ಯಾವುದೇ ಕಾರಣಕ್ಕೆ ಯಾರೇ ಒಬ್ಬರು ಮದುವೆಗೆ ನಿರಾಕರಿಸಿದಲ್ಲಿ ಅದು ವಂಚನೆಯೆಂದೇ ನಮ್ಮಲ್ಲಿ ಪರಿಗಣಿತವಾಗುತ್ತದೆ. ಪಾಶ್ಚಾತ್ಯ ಸಮಾಜದಲ್ಲಿರುವಂತೆ ಮೊದಲಿಗೆ ಡೇಟಿಂಗ್, ನಂತರ ಬಾಯ್ ಫ್ರೆಂಡ್, ಗರ್ಲ್ ಫ್ರೆಂಡ್ ಸ್ಥಾನಮಾನ, ನಂತರ ಪ್ರೇಮ ನಿವೇದನೆ, ಬಳಿಕ ಕೆಲ ಕಾಲ ಲಿವ್-ಇನ್ ರಿಲೇಷನ್‌ಷಿಪ್... ಈ ಎಲ್ಲಾ ಹಂತಗಳನ್ನು ಯಶಸ್ವಿಯಾಗಿ ದಾಟಿದ ಮೇಲೂ ಒಬ್ಬರು ಪ್ರಪೋಸ್ ಮಾಡಿದಾಗ ಮತ್ತೊಬ್ಬರಿಗೆ ವಿವಾಹವನ್ನು ನಿರಾಕರಿಸುವ ಹಕ್ಕು ಇದ್ದೇ ಇದೆ ಎಂಬಂತಹ ಸ್ಪಷ್ಟತೆ ನಮ್ಮ ಇಂಡಿಯನೈಸ್ಡ್ ಪ್ರೇಮಗಳಲ್ಲಿ ಇಲ್ಲ.

ಆದರೆ, ವ್ಯಕ್ತಿ ಸ್ವಾತಂತ್ರ್ಯವನ್ನು ಹೆಚ್ಚಾಗಿ ಬಯಸುವ ನಮ್ಮ ಈಗಿನ ಯುವ ಜನಾಂಗ ಇಂಥ ಒಂದು ಹಂತ ಹಂತವಾದ ವ್ಯವಸ್ಥೆಯತ್ತ ಇತ್ತೀಚೆಗೆ ಒಲವು ತೋರುತ್ತಿದೆ. ಇದರಿಂದಾಗಿ, ಲಿವ್-ಇನ್ ರಿಲೇಷನ್ಶಿಪ್‌ಗಳ (ಸಹಜೀವನ ಸಂಬಂಧ) ಸಂಖ್ಯೆಯೂ ಹೆಚ್ಚುತ್ತಿದೆ. ಹಾಗಂತ ಇದಕ್ಕೆ ಕುಟುಂಬದ ಅಥವಾ ಸಮಾಜದ ಒಪ್ಪಿಗೆ ಸಿಗುತ್ತಿದೆ ಎಂದೇನಲ್ಲ. ದೂರದೂರುಗಳಲ್ಲಿ ಉದ್ಯೋಗದಲ್ಲಿರುವ ಹಲವರು ಲಿವ್ -ಇನ್ ಸಂಬಂಧದಲ್ಲಿದ್ದರೂ ಬಹುತೇಕ ಅದನ್ನು ಕುಟುಂಬದಿಂದ ಮುಚ್ಚಿಟ್ಟಿರುತ್ತಾರೆ. ದಂಪತಿ ಎಂದು ಸುಳ್ಳು ಹೇಳಿ ಬಾಡಿಗೆ ಪಡೆದು ಸಮಾಜದಿಂದಲೂ ಮುಚ್ಚಿಟ್ಟಿರುತ್ತಾರೆ. ಅದಕ್ಕೆ ಕಾರಣ, ಇಂತಹ ವಿವಾಹವಿಲ್ಲದ ಸಹಜೀವನವನ್ನು ಸಮಾಜ ನೋಡುವ ರೀತಿ ಮತ್ತು ನಡೆಸಿಕೊಳ್ಳುವ ರೀತಿ.

ವಿಚ್ಛೇದನಗಳೆಂದರೆ ಈಗಲೂ ಬೆಚ್ಚಿಬೀಳುವ ಭಾರತೀಯ ಸಮಾಜಕ್ಕೆ ಲಿವ್-ಇನ್ ಸಂಬಂಧಗಳು ವರವಾಗಬಲ್ಲದು ಮತ್ತು ಭಾರತದಲ್ಲಿ ಏರುತ್ತಿರುವ ವಿಚ್ಛೇದನಗಳ ಸಂಖ್ಯೆಗೂ ಪರಿಹಾರವಾಗಬಲ್ಲದು ಎಂಬ ನಿಟ್ಟಿನಲ್ಲಿ ಯೋಚಿಸಿದ್ದೀರಾ? ನಮ್ಮ ಸಮಾಜ ಈಗ ಒಂದು ವಿಚಿತ್ರ ಘಟ್ಟದಲ್ಲಿದೆ. ಪುರುಷ ಪ್ರಧಾನ ವ್ಯವಸ್ಥೆಗೆ ಒಗ್ಗಿಕೊಂಡಿದ್ದ ಹೆಣ್ಣು ಇದುವರೆಗೂ ಇಷ್ಟವಿಲ್ಲದಿದ್ದರೂ, ಕಷ್ಟವಾದರೂ, ಎಂತಹ ಮಾನಸಿಕ ದೈಹಿಕ ಹಿಂಸೆ ಇದ್ದರೂ ಸಹಿಸಿಕೊಂಡು ಹೋಗುತ್ತಿದ್ದಳೇ ಹೊರತು, ವಿಚ್ಛೇದನದ ಬಗ್ಗೆ ಯೋಚಿಸುತ್ತಿದ್ದದ್ದು ತೀರಾ ಕಡಿಮೆ. ಈಗ ದೊರಕಿರುವ ಆರ್ಥಿಕ ಸ್ವಾವಲಂಬನೆ, ಶಿಕ್ಷಣದಿಂದಾಗಿ ಏನೇ ಆದರೂ ಹೊಂದಿಕೊಂಡು ಹೋಗಬೇಕೆಂದು ಮೊದಲು ಕಲಿಸಿಕೊಡಲಾಗಿದ್ದ ಮನಸ್ಥಿತಿಯಿಂದ ಹೆಣ್ಣು ಹೊರಬಂದು ತನ್ನದೇ ಸ್ವಂತ ನಿರ್ಧಾರಗಳನ್ನು ತೆಗೆದುಕೊಳ್ಳಬಲ್ಲ ಹಂತ ತಲುಪಿದ್ದಾಳೆ. ಹೀಗಾಗಿ, ಕುಟುಂಬ ನಿರ್ಧರಿಸಿದ ವೈವಾಹಿಕ ಸಂಬಂಧಗಳಲ್ಲಷ್ಟೇ ಅಲ್ಲ, ಪ್ರೇಮ ವಿವಾಹಗಳಲ್ಲೂ ಹೊಂದಾಣಿಕೆಯ ಕೊರತೆ ಉಂಟಾದಾಗ ಅದು ವಿಚ್ಛೇದನದಲ್ಲಿ ಕೊನೆಯಾಗುತ್ತಿದೆ.



ಪ್ರೇಮಿಸುವಾಗ ಎಲ್ಲವೂ ಚಂದವೆನಿಸಿದರೂ, ಜೊತೆಯಾಗಿ ಕಳೆಯುವ ಎರಡು ಮೂರು ಗಂಟೆಗಳು ಮಧುರವೆನಿಸಿದರೂ, ಒಟ್ಟಿಗೆ ಬಾಳಿದಾಗ ಹಲವು ಕುಂದು ಕೊರತೆಗಳು, ಸಮಸ್ಯೆಗಳು ಎದುರಾಗಬಹುದು. ಮದುವೆಯಂತಹ ಮಹತ್ವದ ನಿರ್ಧಾರ ತೆಗೆದುಕೊಳ್ಳುವ ಮೊದಲು ಇಬ್ಬರ ನಡುವಿನ ಹೊಂದಾಣಿಕೆಯನ್ನು ಪರೀಕ್ಷಿಸುವುದು ಉತ್ತಮ. ಬ್ರೇಕ್‌ಅಪ್ ಆದರೆ ಅದು ಹೃದಯಗಳನ್ನು ಒಡೆಯುತ್ತದೆಯೇ ಹೊರತು ಬೇರೆ ರೀತಿಯ ಪ್ರಾಕ್ಟಿಕಲ್ ಸಮಸ್ಯೆಗಳನ್ನು ತಂದೊಡ್ಡುವುದಿಲ್ಲ ಎಂದು ಯೋಚಿಸುವವರ ಸಂಖ್ಯೆ ಹೆಚ್ಚುತ್ತಿದೆ.

ಭಾರತದಲ್ಲಿ ವಿಚ್ಛೇದನ ಪ್ರಮಾಣ ಶೇ 1.1 ರಷ್ಟಿದ್ದು, ಈಗಲೂ ಅತೀ ಕಡಿಮೆ ವಿಚ್ಛೇದನಗಳಾಗುವ ದೇಶ ಎನಿಸಿಕೊಡಿದೆ. ಆದರೂ ಇತ್ತೀಚಿನ ವರ್ಷಗಳಲ್ಲಿ ವಿಚ್ಛೇದನಗಳ ಸಂಖ್ಯೆ ಶೇ 50 ರಿಂದ ಶೇ 60 ರಷ್ಟು ಹೆಚ್ಚುತ್ತಿದೆ. ವಿಚ್ಛೇದನಗಳು ತಂದೊಡ್ಡುವ ಕಾನೂನು ಸಮರ, ವಿಚ್ಛೇದಿತರು ಎಂಬ ಹಣೆಪಟ್ಟಿ, ಮಕ್ಕಳಿದ್ದರಂತೂ ಅದು ಪುಟ್ಟ ಮನಸ್ಸುಗಳ ಮೇಲೆ ಬೀರುವ ಪರಿಣಾಮ ಇವೆಲ್ಲವನ್ನೂ ಯೋಚಿಸಿದಾಗ ಹಲವರಿಗೆ ಮದುವೆಗೂ ಮೊದಲು ಲಿವ್-ಇನ್ ನಂತಹ ಒಂದು ಟ್ರಯಲ್ ನಡೆಸಿದರೆ ಅದು ಭವಿಷ್ಯದಲ್ಲಿ ಎದುರಾಗಬಹುದಾದ ದೊಡ್ಡ ತೊಂದರೆಗಳನ್ನು ತಡೆಯಬಲ್ಲದು ಎನಿಸುವುದರಲ್ಲಿ ತಪ್ಪಿಲ್ಲ. ಇಷ್ಟೇ ಅಲ್ಲದೆ, ದೊಡ್ಡ ದೊಡ್ಡ ಮೆಟ್ರೊ ನಗರಗಳಲ್ಲಿ ಇದು ಆರ್ಥಿಕ ಅನುಕೂಲದ ಜೊತೆಗೆ ಆ ವಯಸ್ಸಿನಲ್ಲಿ ದೇಹ ಮತ್ತು ಮನಸ್ಸು ಬಯಸುವುದನ್ನು ಒಂದು ಕಮಿಟೆಡ್ ಸಂಬಂಧದೊಳಗೆ (ಹೆಚ್ಚು ಜವಾಬ್ದಾರಿಗಳಿಲ್ಲದಂತೆ) ಸಿಗುವಂತೆ ಮಾಡುತ್ತದೆ.

ಇತ್ತೀಚಿನ ಶ್ರದ್ಧಾ ವಾಲಕರ್ ಪ್ರಕರಣದ ನಂತರ ಲಿವ್-ಇನ್ ಸಂಬಂಧಗಳ ಔಚಿತ್ಯ ಮತ್ತು ಸುರಕ್ಷತೆಯ ಬಗ್ಗೆ ಮತ್ತೆ ಚರ್ಚೆ ಆರಂಭವಾಗಿದೆ. ಇಂತಹ ಒಂದು ಅಮಾನುಷ ಕೃತ್ಯಕ್ಕೆ ಲಿವ್-ಇನ್ ಸಂಬಂಧಗಳನ್ನು, ಸಂತ್ರಸ್ತಳನ್ನೂ ಹೊಣೆಯಾಗಿಸಲಾಗುತ್ತಿದೆ. ಹೆತ್ತವರೇ ವರ ಹುಡುಕಿ, ಲಕ್ಷಗಟ್ಟಲೆ ಖರ್ಚು ಮಾಡಿ, ಹಣ, ಆಸ್ತಿ, ಬಂಗಾರ ಸುರಿದು ಮದುವೆ ಮಾಡಿಕೊಟ್ಟ ನಂತರವೂ ಹೆಣ್ಣುಗಳು ಗಂಡನ ಮನೆಯಲ್ಲಿ ಕೊಲೆಯಾಗುತ್ತಿರುವಂತಹ ಉದಾಹರಣೆಗಳಿವೆ. ಕುಟುಂಬ ಮರ್ಯಾದೆಯ ಹೆಸರಲ್ಲಿ ಹೆತ್ತವರಿಂದಲೇ ಹತ್ಯೆಯಾಗುತ್ತಿರುವುದನ್ನು ಕೇಳುತ್ತಿದ್ದೇವೆ. ಈ ಎರಡೂ ರೀತಿಯ ಪ್ರಕರಣಗಳ ಸಂಖ್ಯೆ ಹೋಲಿಕೆಯಲ್ಲಿ ಅತೀ ದೊಡ್ಡದಾಗಿದೆ. ಹೀಗಿರುವಾಗ ಲಿವ್‌ಇನ್ ಸಂಬಂಧಗಳಿಂದ ಹೆಣ್ಣು ಮಕ್ಕಳ ವಿರುದ್ಧದ ಅಪರಾಧಗಳು ಹೆಚ್ಚುತ್ತಿವೆ ಎಂದು ದೂಷಿಸುವುದು ಅತಾರ್ಕಿಕ.

ಹಾಗಂತ ಲಿವ್‌ಇನ್ ಸಂಬಂಧಗಳಲ್ಲಿ ಸಮಸ್ಯೆಗಳೇ ಇಲ್ಲವೆಂದೇನು ಅರ್ಥವಲ್ಲ. ದೈಹಿಕ ಹಿಂಸೆ ಅನುಭವಿಸುತ್ತಿದ್ದರೂ, ಸಂಬಂಧಗಳು ಅನಿವಾರ್ಯ ಬಂಧನಗಳಾಗದಿರಲಿ ಎಂಬ ಕಾರಣಕ್ಕಾಗಿಯೇ ಇರುವ ಲಿವ್-ಇನ್ ಸಂಬಂಧದಿಂದ ಹೊರಬರಲು ಶ್ರದ್ಧಾ ಹಿಂಜರಿದಿದ್ದು ಏಕೆ? ಸಮಾಜದ ಅಂಜಿಕೆಯೇ? ಕುಟುಂಬ ತೊರೆದು ಬಂದವಳಿಗೆ ಎಲ್ಲೂ ಬೆಂಬಲ ಸಿಗಲಾರದೆಂಬ ಭಯವೇ? ಪ್ರಾಯುಶಃ ಸಮಾಜ ಇಂತಹ ಸಹಜೀವನವನ್ನು ಕೀಳು ದೃಷ್ಟಿಯಿಂದ ನೋಡದೇ ಇದ್ದರೆ, ಲಿವ್‌ಇನ್ ಸಂಬಂಧಗಳು ಸೋತಾಗ ಅದನ್ನು ಆಯ್ದುಕೊಂಡವರನ್ನು ಕಟಕಟೆಯಲ್ಲಿ ನಿಲ್ಲಿಸದೇ ಹೋದರೆ ಶ್ರದ್ಧಾ ವಾಲಕರ್ ನಂತಹ ಹೆಣ್ಣುಗಳಿಗೆ ಅವುಗಳಿಂದ ಹೊರಬರುವ ಧೈರ್ಯ ಸಿಗುತ್ತದೇನೋ.

(ಲೇಖಕಿ ಕಥೆಗಾರ್ತಿ)

ಮುಖದಲ್ಲಿ ಕೂದಲು ಪರಿಹಾರ ಏನು?

1. ಮುಖದಲ್ಲಿ ಅತಿ ಹೆಚ್ಚಾಗಿ ಕೂದಲು ಬೆಳವಣಿಗೆ ಆಗಿದೆ. ಹುಡುಗಿಯಾದ ಕಾರಣ ನನಗೆ ಮುಜುಗರ ಉಂಟಾಗಿ ಮಾನಸಿಕ ಒತ್ತಡ ಹೆಚ್ಚಾಗಿದೆ. ಇದಕ್ಕೆ ಏನಾದರೂ ಪರಿಹಾರವಿದೆಯೇ?

ಹೆಸರು ಊರು ತಿಳಿಸಿಲ್ಲ.

ಸ್ಪಂದನ

ಡಾ. ವೀಣಾ ಎಸ್. ಭಟ್

ನೀವು ನಿಮ್ಮ ವಯಸ್ಸನ್ನು ಕೂಡಾ ತಿಳಿಸಿಲ್ಲ. ನಿಮಗೆ ವಿವಾಹವಾಗಿದೆಯೇ ಎಂದೂ ತಿಳಿಸಿಲ್ಲ. ಆದರೆ ಯಾವುದೇ ವಯಸ್ಸಿನಲ್ಲಿ ಅತೀ ಹೆಚ್ಚಾಗಿ ಮುಖದಲ್ಲಿ ಕೂದಲು ಇರುವುದು ನೀವು ಹೇಳಿದ ಹಾಗೇ ಮುಜುಗರದ ಸಮಸ್ಯೆಯೇ ಸರಿ. ಅದರಲ್ಲೂ ಹದಿವಯಸ್ಸಿನವರಲ್ಲಿ ಶಾಲೆಕಾಲೇಜಿಗೆ ಹೋಗುವವರಲ್ಲಂತೂ ಹಲವು ಸಹಪಾಠಿಗಳಿಂದ ನಿಂದನೆಗೊಳಗಾಗುತ್ತಾ ಇದರಿಂದ ಆತ್ಮವಿಶ್ವಾಸವೇ ಕಡಿಮೆಯಾಗಿಬಿಡುತ್ತದೆ. ನಿಮಗೆ ಹೆಚ್ಚು ಹೆಚ್ಚು ಕೂದಲು ಇರುವುದು ಶೇ 95 ರಷ್ಟು ಸಂದರ್ಭಗಳಲ್ಲಿ ಪಾಲಿಸಿಸ್ಟಿಕ್ ಓವರಿಯನ್ ಡಿಸೀಸ್‌ನ(ಪಿ.ಸಿ.ಓ.ಡಿ) ಭಾಗವಾಗಿರಬಹುದು. ನಿಮಗೆ ಪಿ.ಸಿ.ಓ.ಡಿ ಇದ್ದಲ್ಲಿ ಕೂದಲು ಹೆಚ್ಚಿರುವುದರ ಜೊತೆಗೆ ಋತುಚಕ್ರದಲ್ಲಿ ಏರುಪೇರು ಉಂಟಾಗಿರಬಹುದು ಮತ್ತು ಮೊಡವೆಯೂ ಕೆಲವರಲ್ಲಿ ಹೆಚ್ಚಿರಬಹುದು.

ಕೆಲವು ಮಹಿಳೆಯರಲ್ಲಿ ಮುಖ ಹಾಗೂ ಎದೆಯಭಾಗ, ಬೆನ್ನಿನಭಾಗ, ಕಾಲಿನಭಾಗಗಳಲ್ಲಿ ಕೂದಲು ಹೆಚ್ಚು ಇರುತ್ತದೆ. ಇದಕ್ಕೆ ಕಾರಣ ಅವರಲ್ಲಿ ಆಂಡ್ರೋಜನ್ ಹಾರ್ಮೋನು(ಪುರುಷರಲ್ಲಿನ ಮುಖ್ಯ ಹಾರ್ಮೋನು) ಹೆಚ್ಚಳವಾಗಿರುವುದು. ಉಳಿದಂತೆ ಶೇ 5 ರಿಂದ10ರಷ್ಟು ಮಹಿಳೆಯರಲ್ಲಿ ಅಧಿಕ ಕೂದಲು ಸಹಜವಾಗಿಯೇ ಇರಬಹುದು. ಆ ಬಗ್ಗೆ ವಿಶೇಷವಾಗಿ ಚಿಂತಿಸುವುದು ಬೇಡ. ಆದರೆ ನಿಮಗೆ ಆಂಡ್ರೋಜನ್ ಹಾರ್ಮೋನು ಹೆಚ್ಚಳದಿಂದ ಮುಖದಲ್ಲಿ ನಿಮಗೆ ಕೂದಲು ಹೆಚ್ಚಾಗಿರುವ ಸಾಧ್ಯತೆ ಇದೆ. ಯಾವುದಕ್ಕೂ ನೀವು ಹತ್ತಿರದಲ್ಲಿರುವ ಸ್ತ್ರೀರೋಗ ತಜ್ಞರಲ್ಲಿ ಸರಿಯಾಗಿ ತಪಾಸಣೆ ಮಾಡಿಸಿಕೊಳ್ಳಿ.

ಯಾಕೆಂದರೆ ಕೂದಲು ಹೆಚ್ಚಿದ್ದರೆ ಅದು ಕೇವಲ ಸೌಂದರ್ಯದ ಸಮಸ್ಯೆ ಅಷ್ಟೇ ಆಗಿರದೇ ಜೊತೆಗೆ ಪಿ.ಸಿ.ಓ.ಡಿ. ಸಮಸ್ಯೆಯ ಭಾಗವಾಗಿದ್ದರೆ ಅದರಿಂದ ಮುಂದೆ ಮದುವೆಯಾದ ನಂತರ ಬಂಜೆತನದ ಸಮಸ್ಯೆಯೂ ಕಾಡಬಹುದು. ಜೊತೆಗೆ ಟೈಪ್-2 ಮಧುಮೇಹ ಬೇಗನೆಬರಬಹುದು. ಹೃದಯದ ತೊಂದರೆಗಳು, ಏರುರಕ್ತದೊತ್ತಡ ಇತ್ಯಾದಿಗಳಿಗೆ ಸಿಲುಕಿಕೊಳ್ಳಬಹುದು. ಆದ್ದರಿಂದ ಪಿ.ಸಿ.ಓ.ಡಿ. ಚಿಕಿತ್ಸೆಯಲ್ಲಿ ಜೀವನಶೈಲಿ ಬದಲಾವಣೆಯೇ ಬಹಳ ಮುಖ್ಯ ಚಿಕಿತ್ಸೆ.

ಅದರಲ್ಲೂ ಪಿ.ಸಿ.ಓ.ಡಿ. ಸಮಸ್ಯೆಗೆ ಮುಖ್ಯಕಾರಣವಾದ ಇನ್ಸೂಲಿನ್ ಪ್ರತಿರೋಧತೆಯನ್ನು ಕಡಿಮೆಮಾಡಲು ನೀವು ಸಾಧ್ಯವಾದಷ್ಟು ಹೆಚ್ಚು ಪ್ರೋಟಿನ್‌ಯುಕ್ತ, ಹೆಚ್ಚು ಹೆಚ್ಚು ಸೊಪ್ಪು, ತರಕಾರಿಯನ್ನೊಳಗೊಂಡ ಆಹಾರ ಸೇವಿಸಬೇಕು. ಜೊತೆಗೆ ಹೈನುಪದಾರ್ಥಗಳು, ಜಂಕ್‌ಫುಡ್‌ಗಳನ್ನು ಕಡಿಮೆ ಸೇವಿಸಬೇಕು. ನಿತ್ಯ ಕನಿಷ್ಠ ಒಂದು ಗಂಟೆಯಾದರೂ ಉತ್ತಮ ದೈಹಿಕಶ್ರಮವಾಗುವಂತಹ ವ್ಯಾಯಾಮ ಮಾಡಬೇಕು. ಪ್ರತಿ ನಿತ್ಯ 6 ರಿಂದ 8 ತಾಸು ನಿದ್ದೆ ಅಗತ್ಯ. ವೈದ್ಯರ ಸಲಹೆಮೇರೆ ಸೂಕ್ತ ಚಿಕಿತ್ಸೆ ಪಡೆದುಕೊಂಡರೆ ಪಿ.ಸಿ.ಓ.ಡಿ ಸಮಸ್ಯೆಯನ್ನು ನಿರ್ವಹಣೆ ಮಾಡಬಹುದು. ಹೆಚ್ಚಿಗೆ ಕೂದಲು ನಿರ್ಮೂಲನೆ/ನಿರ್ವಹಣೆಗೆ ವ್ಯಾಕ್ಸಿಂಗ್, ಶೇವಿಂಗ್ ಅಷ್ಟೇ ಚಿಕಿತ್ಸೆಯಲ್ಲ. ಈಗ ಎಲೆಕ್ಟ್ರಾಲಿಸಿಸ್ ಚಿಕಿತ್ಸೆ, ಲೇಸರ್ ಚಿಕಿತ್ಸೆ ಹೀಗೆ ಹಲವು ರೀತಿಯಲ್ಲಿ ಚಿಕಿತ್ಸೆಗಳು ಲಭ್ಯವಿವೆ. ಈ ಬಗ್ಗೆ ಸೂಕ್ತ ತಜ್ಞರನ್ನ ಭೇಟಿಮಾಡಿ ಮಾಹಿತಿ ಪಡೆಯಿರಿ.

ಯಾವುದೇ ವಯಸ್ಸಿನಲ್ಲೂ ಹೆಚ್ಚಿಗೆ ಕೂದಲಿರುವುದು ಒಂದು ರೀತಿಯ ಹಿಂಸೆಯೇ ಸರಿ. ಜೊತೆಗೆ ಇದು ಮುಂದೆ ಹಲವು ಸಮಸ್ಯೆಗಳಿಗೆ ಎಡೆಮಾಡಿಕೊಡಬಹುದು. ಹಾಗಾಗಿ ನಿರ್ಲಕ್ಷಿಸದೇ ತಜ್ಞವೈದ್ಯರನ್ನು ಸಂಪರ್ಕಿಸಿ ಸೂಕ್ತ ಚಿಕಿತ್ಸೆ ಪಡೆದುಕೊಳ್ಳಿ. ನಿಮಗೆ ಬೊಜ್ಜಿದ್ದರೆ ತೂಕ ಕಡಿಮೆಮಾಡಿಕೊಳ್ಳಿ. ನಿರ್ಲಕ್ಷ್ಯ ಮಾಡಬೇಡಿ.

2. ನಾನು ನಾಲ್ಕು ತಿಂಗಳ ಗರ್ಭಿಣಿ. ಅನಾಮಲಿ ಟೆಸ್ಟ್‌ನಲ್ಲಿ VDRL reactive ಬಂತು. ಅದಕ್ಕೆ ಡಾಕ್ಟರ್ 6 ಪೆನ್ಸಿಲಿನ್ ಇಂಜೆಕ್ಷನ್ ತೆಗೆದುಕೊಳ್ಳುವುದಕ್ಕೆ ಹೇಳಿದ್ದಾರೆ. ಆದರೆ VDRL reactive ನಿಂದ ಗರ್ಭದಲ್ಲಿರುವ ಮಗುವಿಗೆ ಏನಾದರೂ ತೊಂದರೆ ಆಗುತ್ತದೆಯೇ ?

ಹೆಸರು ಊರು ತಿಳಿಸಿಲ್ಲ.

ನಿಮಗೆ ಮಾಡಿರುವ VDRL reactive ಪರೀಕ್ಷೆ, 'ಸಿಫಿಲಿಸ್' ಎಂಬ ಲೈಂಗಿಕ ಕಾಯಿಲೆ ಪತ್ತೆಗಾಗಿ ನಡೆಸುವ ಸ್ಕ್ರೀನಿಂಗ್ ಪರೀಕ್ಷೆ. ಈ ಪರೀಕ್ಷೆಯ ಫಲಿತಾಂಶ ಪಾಸಿಟಿವ್‌ಬಂದಿದ್ದರೆ ಇದನ್ನು ಎಫ್.ಟಿ.ಎ.ಬಿ.ಎಸ್ (FTA-ABS) ಎಂಬ ಮತ್ತೊಂದು ಪರೀಕ್ಷೆಯಿಂದ ಸಾಬೀತುಪಡಿಸಿಕೊಂಡು ವೈದ್ಯರ ಸಲಹೆ ಮೇರೆಗೆ ಬೆಂಜಾತೀನ್ ಪೆನ್ಸಿಲಿನ್ ಇಂಜೆಕ್ಷನ್ ತೆಗೆದುಕೊಂಡಾಗ, ಈ ಸೋಂಕು ಸಂಪೂರ್ಣ ಗುಣವಾಗುತ್ತದೆ. ತುಂಬಾ ಹಿಂದಿನಿಂದಲೂ ಇರುವ ಲೈಂಗಿಕ ರೋಗವಾದ 'ಸಿಫಿಲಿಸ್' ಸೋಂಕು ಪರಸ್ಪರ ಲೈಂಗಿಕ ಸಂಪರ್ಕದಿಂದ ಬರುವಂತದ್ದು. ಟ್ರೀಪನಿಮಾ ಪ್ಯಾಲಿಡಂ ಎನ್ನುವ ರೋಗಾಣು ಈ ರೋಗಕ್ಕೆ ಕಾರಣ. ಗರ್ಭಿಣಿಯರಿದ್ದಾಗ ಈ ರೋಗ ತಗಲಿದರೆ ಗರ್ಭಪಾತ ಉಂಟಾಗಬಹುದು. ಇಲ್ಲವೇ ಹುಟ್ಟುವಾಗಲೇ ಹೊಟ್ಟೆಯೊಳಗೆ ಮಗು ಸತ್ತು ಹುಟ್ಟಬಹುದು. ಆದ್ದರಿಂದ ವೈದ್ಯರ ಸಲಹೆಯ ಮೇರೆಗೆ ಪತಿ ಪತ್ನಿಯರಿಬ್ಬರೂ ಸೂಕ್ತಚಿಕಿತ್ಸೆ ತೆಗೆದುಕೊಂಡರೆ ಮುಂದಾಗುವ ಅಪಾಯದಿಂದ ಪಾರಾಗಬಹುದು. ಗರ್ಭಿಣಿಯಾಗುವುದಕ್ಕಿಂತ ಮುಂಚೆಯೇ ಅಥವಾ ಗರ್ಭಿಣಿಯಾದ 3 ತಿಂಗಳೊಳಗೆ ಕಾಯಿಲೆ ಪತ್ತೆಹಚ್ಚಿ ಸೂಕ್ತಚಿಕಿತ್ಸೆ ಪಡೆದುಕೊಂಡರೆ ಗರ್ಭದಲ್ಲಿರುವ ಮಗುವನ್ನು ಕಾಪಾಡಬಹುದು. ನೀವು ಯಾವುದಕ್ಕೂ ವೈದ್ಯರನ್ನು ಸಂಪರ್ಕಿಸಿ.

ಸ್ಪಂದನ:

ಮುಟ್ಟು, ಗರ್ಭಧಾರಣೆ, ಋತುಬಂಧ, ಹಾರ್ಮೋನ್ ಮುಂತಾದ ಸಮಸ್ಯೆಗಳ ಬಗ್ಗೆ ಪ್ರಶ್ನೆಗಳನ್ನು ನಮಗೆ ಕಳುಹಿಸಬಹುದು. ನಿಮ್ಮ ಪ್ರಶ್ನೆಗಳಿಗೆ ಪ್ರಸೂತಿ ಮತ್ತು ಸ್ತ್ರೀರೋಗತಜ್ಞೆ ಡಾ.ವೀಣಾ ಎಸ್. ಭಟ್ ಅವರು ಉತ್ತರಿಸಲಿದ್ದಾರೆ. ಪ್ರಶ್ನೆಗಳನ್ನು bhoomika@prajavani.co.inಗೆ ಕಳುಹಿಸಬಹುದು



ಸೌಂದರ್ಯ

ಅಧರದ ಆರೈಕೆ

ಚಳಿಯ ತೀವ್ರತೆಗೆ ತೇವಾಂಶ ಕಡಿಮೆಯಾಗಿ ತುಟಿಗಳಲ್ಲಿ ಬಿರುಕು ಮೂಡುವುದು ಸಹಜ. ಅಂದದ ಮುಖಕ್ಕೆ ಅಧರದ ಆರೈಕೆಯು ಮುಖ್ಯ. ಚಳಿಗಾಲದಲ್ಲಿ ತುಟಿಗಳು ಒಡೆಯದಂತೆ ತಡೆಯಲು ಕೆಲವು ಮನೆಮದ್ದುಗಳನ್ನು ಅನುಸರಿಸಬಹುದು.

ಜೇನುತುಪ್ಪ: ತುಟಿಗಳ ಕೋಮಲತೆಯನ್ನು ಕಾಯ್ದುಕೊಳ್ಳಲು ಜೇನುತುಪ್ಪವನ್ನು ತುಟಿಗಳಿಗೆ ಹಚ್ಚಿ. ನಂತರ ಬೆರಳಿನಿಂದ ವೃತ್ತಾಕಾರವಾಗಿ ಮಸಾಜ್ ಮಾಡಿ. ತಣ್ಣೀರಿನಿಂದ ತುಟಿಗಳನ್ನು ತೊಳೆಯಿರಿ. ಇದು ತುಟಿಗಳನ್ನು ಮೃದುವಾಗಿ ಇಡಲು ಸಹಕರಿಸುತ್ತದೆ. ವಾರದಲ್ಲಿ ಕನಿಷ್ಠ ಎರಡು ಬಾರಿಯಾದರೂ ಜೇನುತುಪ್ಪದಿಂದ ಮಸಾಜ್ ಮಾಡಿ.

ಜೇನುಮೇಣದ ಮುಲಾಮು: ನೂರು ಗ್ರಾಂ ಜೇನುಮೇಣ ಕರಗಿಸಿ, ಅದಕ್ಕೆ 10 ಎಂ.ಎಲ್ ಕೊಬ್ಬರಿ ಎಣ್ಣೆ, 10 ಎಂ.ಎಲ್ ಬಾದಾಮಿ ತೈಲ ಬೆರೆಸಿ, ಮುಲಾಮು ರೀತಿ ತಯಾರಿಸಿಕೊಳ್ಳಿ. ಅದನ್ನು ನಿತ್ಯ ತುಟಿಗೆ ಮಸಾಜ್ ಮಾಡಿಕೊಳ್ಳಬಹುದು. ಅಂಗೈ ಮತ್ತು ಅಂಗಾಲಿಗೂ ಹಚ್ಚಿಕೊಳ್ಳಬಹುದು. ದೀರ್ಘಕಾಲ ಇಟ್ಟು ಬಳಸಬಹುದು. ಈ ಮುಲಾಮಿನ ಪ್ರಮಾಣ ಹೆಚ್ಚಿಗೆ ಬೇಕೆಂದರೆ, ಜೇನು ಮೇಣವನ್ನು ಹೆಚ್ಚಿಸಿ, ಅಷ್ಟೇ ಪ್ರಮಾಣದಲ್ಲಿ ಕೊಬ್ಬರಿ ಎಣ್ಣೆ, ಬಾದಾಮಿ ಎಣ್ಣೆಯನ್ನು ಹೆಚ್ಚು ಮಾಡಿ, ಮಿಶ್ರಮಾಡಿಕೊಂಡರೆ ಸಾಕು.

ಹಣ್ಣಿನ ತಿರುಳು: ಬಾಳೆ ಹಣ್ಣು, ಪಪ್ಪಾಯ ಹಣ್ಣಿನ ತುಂಡುಗಳನ್ನು ಚೆನ್ನಾಗಿ ತೆಳು ಮಾಡಿ, ಅದನ್ನು ನಿತ್ಯ ತುಟಿಗೆ ಲೇಪಿಸಿಕೊಂಡರೆ, ಮೃದುವಾಗುತ್ತದೆ. ತುಟಿ ಒಡೆಯುವುದು ತಪ್ಪುತ್ತದೆ.

ಬೆಂಡೆಕಾಯಿ ಮಿಶ್ರಣ : ಬೆಂಡೆಕಾಯಿ ರುಬ್ಬಿ, ಕೊಬ್ಬರಿ ಎಣ್ಣೆ ಅಥವಾ ಬಾದಾಮಿ ಎಣ್ಣೆ ಬೆರೆಸಿ ತುಟಿಗೆ ಲೇಪಿಸಿಕೊಳ್ಳಬಹುದು. ಇದನ್ನು ತಾಜಾವಾಗಿ ತಯಾರಿಸಿಕೊಂಡೇ ಲೇಪಿಸಿಕೊಳ್ಳಬೇಕು.

ಕೊಬ್ಬರಿ ಎಣ್ಣೆ: ಬಿರುಕು ಬಿಟ್ಟ ಹಿಮ್ಮಡಿಗಳಿಗೆ ಕೊಬ್ಬರಿ ಎಣ್ಣೆ ಬಳಸುತ್ತೇವೆ. ಹಾಗೆಯೇ ತುಟಿಗಳಿಗೂ ಇದನ್ನು ಹಚ್ಚಬಹುದು. ಇದರಿಂದ ತುಟಿಗಳ ತೇವಾಂಶ ಉಳಿಯುತ್ತದೆ. ಆಗಾಗ್ಗೆ ಕೊಬ್ಬರಿ ಎಣ್ಣೆಯನ್ನು ತುಟಿಗಳಿಗೆ ಹಚ್ಚಿಕೊಳ್ಳುವ ರೂಢಿ ಮಾಡಿಕೊಳ್ಳಿ.

(ಪೂರಕ ಮಾಹಿತಿ: ಡಾ. ವಸುಂಧರಾ ಭೂಪತಿ, ಆಯುರ್ವೇದ ವೈದ್ಯೆ)

ದೇಸಿ ಅಕ್ಕಿ ತಳಿಗಳ ಖಾದ್ಯ ವೈವಿಧ್ಯ

ಕಣ್ಮರೆಯಾಗಿರುವ ಕೆಲವು ದೇಸಿ ಅಕ್ಕಿಯ ತಳಿಗಳು ಒಮ್ಮೊಮ್ಮೆ ಕೃಷಿ ಮೇಳದಲ್ಲೋ, ಆಹಾರ ಪ್ರದರ್ಶನದಲ್ಲೋ ಕಾಣಿಸುತ್ತವೆ. ಔಷಧೀಯ ಗುಣವಿರುವ ಇಂಥ ತಳಿಯ ಅಕ್ಕಿಗಳಿಂದ ರುಚಿಕಟ್ಟಾದ, ವೈವಿಧ್ಯಮಯ ಸಸ್ಯಾಹಾರ ಮತ್ತು ಮಾಂಸಹಾರಗಳನ್ನು ತಯಾರಿಸಬಹುದು.

ರುಚಿಕಟ್ಟಾದ ಯಾವ ಖಾದ್ಯಗಳನ್ನು ತಯಾರಿಸಬಹುದು ಎಂದು ಗ್ರೀನ್ ಪೀಸ್ ಇಂಡಿಯಾ ಸಂಸ್ಥೆಯ ಬಾಣಸಿಗರಾದ ರುತ್ವಿಕ್ ಅಜಿತ್ ಖಾಸ್ನಿಸ್ ಮತ್ತು ವಿಕಾಸ್ ಪಿ ಮಾನೆ ತೋರಿಸಿಕೊಟ್ಟಿದ್ದಾರೆ. ಅವುಗಳ ರೆಸಿಪಿಗಳನ್ನು ಶ್ರೀನಿಧಿ ಅಡಿಗ ಅವರು ಇಲ್ಲಿ ಪರಿಚಯಿಸಿದ್ದಾರೆ.

ಇನ್ನಷ್ಟು ದೇಸಿ ತಳಿ ಅಕ್ಕಿಗಳ ರೆಸಿಪಿಗಳು ಮುಂದಿನವಾರದ 'ನಳಪಾಕ'ದಲ್ಲಿ...

ನಳಪಾಕ

ಮುಲ್ಲಂಕಿಮಾ ಅಕ್ಕಿಯ ಮಶ್ರೂಮ್ ರಿಸೊಟ್ಟೊ

ಸುವಾಸನೆಭರಿತ ಬಿಳಿಬಣ್ಣದ ದಪ್ಪ ಅಕ್ಕಿ ಮುಲ್ಲಂಕಿಮಾ ಹೆಚ್ಚಾಗಿ ಕೇರಳದ ವಯನಾಡಿನಲ್ಲಿ ಸಿಗುತ್ತದೆ. ಇದು, ಪಾಯಸ, ಘೀ ರೈಸ್, ಇಟಾಲಿಯನ್ ರೆಸೆಟ್ಟೋ, ಚೈನೀಸ್ ಫ್ರೈಡ್ ರೈಸ್‌ಗಳಿಗೆ ಉತ್ತಮವಾಗಿ ಹೊಂದಿಕೊಳ್ಳುತ್ತದೆ. ಮಲ್‌ಬಾರ್ ಬಿರಿಯಾನಿಗೆ ಇದು ಹೇಳಿ ಮಾಡಿಸಿದ ಅಕ್ಕಿ. ಇದರಲ್ಲಿ ಹೆಚ್ಚಿನ ವಿಟಮಿನ್ ಎ ಅಂಶವಿರುವುದರಿಂದ ಮಕ್ಕಳಿಗೆ ಒಳ್ಳೆಯದು .

ಬೇಕಾಗುವ ಪದಾರ್ಥಗಳು
4 ರಿಂದ 6 ಕಪ್ ವಿವಿಧ ವಿಧದ ತರಕಾರಿಗಳ ಸ್ಟಾಕ್ ಅಥವಾ ರಸ, ಎರಡು ಚಮಚ ಬೆಣ್ಣೆ, ಎರಡು ಕಪ್ ಬಟನ್ ಮಶ್ರೂಮ್ (ಸ್ವಚ್ಛಗೊಳಿಸಿ, ಅರ್ಧದಿಂದ ಒಂದು -ಇಂಚಿನ ತುಂಡುಗಳಾಗಿ ಕತ್ತರಿಸಿ ಇಟ್ಟುಕೊಳ್ಳಿ), ಕಾಲು ಕಪ್ ಸಣ್ಣಗೆ ಹೆಚ್ಚಿದ ಈರುಳ್ಳಿ, 5-6 ಬೆಳ್ಳುಳ್ಳಿಯ ಎಸಳು, ಒಂದು ಕಪ್ ಪಾಲ್ ತೊಂಡಿ ಅಥವಾ ಮುಲ್ಲಂಕಿಮಾ ಅಕ್ಕಿ, ಅರ್ಧ ಕಪ್ ಡ್ರೈ ಬಿಳಿ ವೈನ್, 1/3 ಕಪ್ ತಾಜಾ ಚೀಸ್, ಕೋಷರ್ ಉಪ್ಪು ಮತ್ತು ತಾಜಾ ಕರಿಮೆಣಸಿನ ಪುಡಿ, 2 ಚಮಚ ತಾಜಾ ಈರುಳ್ಳಿ ಸೊಪ್ಪು (ಸ್ಪ್ರಿಂಗ್ ಆನಿಯನ್)

ಮಾಡುವ ವಿಧಾನ:
ಒಂದು ಪಾನ್‌ನಲ್ಲಿ ಬೆಣ್ಣೆಯನ್ನು ಕರಗಿಸಿ. ಹೆಚ್ಚಿದ ಬೆಳ್ಳುಳ್ಳಿ, ಈರುಳ್ಳಿ ಸೇರಿಸಿ, ಹುರಿಯಬೇಕು. ಅದು ಸ್ವಲ್ಪ ಬಾಡಿದ ನಂತರ ಅಣಬೆಗಳನ್ನು ಸೇರಿಸಿ, 5 ನಿಮಿಷಗಳ ಕಾಲ ಹುರಿಯಬೇಕು. ಇದಕ್ಕೆ ಮುಲ್ಲಂಕಿಮಾ ಅಕ್ಕಿಯನ್ನು ಸೇರಿಸಿ, ಎಲ್ಲವೂ ಚೆನ್ನಾಗಿ ಬೆರೆಯುವಂತೆ ಸೌಟಿನಲ್ಲಿ ಆಗಾಗ ಮಗುಚುತ್ತಿರಬೇಕು. ಈಗ ಈ ಮಿಶ್ರಣಕ್ಕೆ ಬಿಳಿ ವೈನ್ ಸೇರಿಸಿ ಚೆನ್ನಾಗಿ ಕುದಿಸಬೇಕು. ನಂತರ ತೆಗೆದುಕೊಂಡಿರುವ ಅರ್ಧದಷ್ಟು ಭಾಗ ತರಕಾರಿ ರಸವನ್ನು ಈ ಮಿಶ್ರಣಕ್ಕೆ ಸೇರಿಸಿ, ಅನ್ನ ತಳಕ್ಕೆ ಹಿಡಿದುಕೊಳ್ಳದಂತೆ ಆಗಾಗ ಮಗುಚುತ್ತಾ ಇರಬೇಕು. ಈ ರಸವನ್ನು ಅನ್ನವು ಸರಿಯಾಗಿ ಹೀರಿಕೊಂಡ ನಂತರ ಇನ್ನುಳಿದ ತರಕಾರಿ ರಸ ಸೇರಿಸಬೇಕು. ಇದನ್ನು ಅನ್ನವು ಹೀರಿಕೊಳ್ಳುವವರೆಗೂ ತಿರುವಬೇಕು. ಇದು 25 ನಿಮಿಷಗಳನ್ನು ತೆಗೆದುಕೊಳ್ಳುತ್ತದೆ. ಅಕ್ಕಿ ಯನ್ನುತುಂಬಾ ಬೇಯಿಸಬಾರದು.

ಇದಕ್ಕೆ ತಾಜಾ ಪನೀರ್ ಬೆರೆಸಿ ಮತ್ತು ರುಚಿಗೆ ತಕ್ಕಷ್ಟು ಉಪ್ಪು ಮತ್ತು ಮೆಣಸು ಸೇರಿಸಿ. ಕತ್ತರಿಸಿದ ತಾಜಾ ಈರುಳ್ಳಿ ಸೊಪ್ಪಿನೊಂದಿಗೆ ಅಲಂಕರಿಸಿ ಮತ್ತು ಬಡಿಸಿ.

ಕಪ್ಪು ಅಕ್ಕಿ ಪಾಯಸ

ವಿಟಮಿನ್ ಇ ಅಂಶ ಹೊಂದಿರುವ ಕಪ್ಪು ಅಕ್ಕಿ ಚರ್ಮ ಮತ್ತು ಕೂದಲಿಗೆ ಉತ್ತಮ. ಇದು ರಕ್ತದೊತ್ತಡವನ್ನು ಸಮಸ್ಥಿತಿಯಲ್ಲಿಡುತ್ತದೆ. ಹೃದಯ ಸಂಬಂಧಿ ಸಮಸ್ಯೆ ಇರುವವರಿಗೆ ಹಾಗು ಮಧುಮೇಹಿಗಳಿಗೆ ಉತ್ತಮ ಆಹಾರ.

ಬೇಕಾಗುವ ಪದಾರ್ಥಗಳು:
ಒಂದು ಕಪ್ ಕಪ್ಪು ಅಕ್ಕಿ, ಎರಡೂವರೆ ಕಪ್ ನೀರು, ಒಂದು ಲೀಟರ್ ಕೆನೆಭರಿತ ಹಾಲು, ನಾಲ್ಕು ಚಮಚ ಬೆಲ್ಲದ ಪುಡಿ ಅಥವಾ ರುಚಿಗೆ ತಕ್ಕಂತೆ, ಒಂದು ಚಮಚ ಏಲಕ್ಕಿ ಪುಡಿ, 10 ಗ್ರಾಂ ಬಾದಾಮಿ, 10 ಗ್ರಾಂ ಗೋಡಂಬಿ, 10 ಗ್ರಾಂ ಒಣ ದ್ರಾಕ್ಷಿ, ಒಂದು ಚಮದ ಹಸುವಿನ ತುಪ್ಪ.

ಮಾಡುವ ವಿಧಾನ: ಬಾಣಲೆಯಲ್ಲಿ ತುಪ್ಪ ಹಾಕಿ ಬಾದಾಮಿ, ಗೋಡಂಬಿ ಮತ್ತು ಒಣದ್ರಾಕ್ಷಿಗಳನ್ನು ಹುರಿದು ಇಟ್ಟುಕೊಳ್ಳಿ. ಒಂದು ಕಪ್ ಕಪ್ಪು ಅಕ್ಕಿಯನ್ನು ಎರಡೂವರೆ ಕಪ್ ನೀರಿನಲ್ಲಿ 15 ನಿಮಿಷ ನೆನೆಸಿ ಮತ್ತು ಅಕ್ಕಿಯನ್ನು ಪ್ರೆಶರ್ ಕುಕ್ಕರ್‌ನಲ್ಲಿ ಬೇಯಿಸುವಾಗ ನೆನೆಸಲು ಬಳಸಿದ ನೀರನ್ನು ಬಳಸಿ. ದೊಡ್ಡ ಉರಿಯಲ್ಲಿ ಒಂದು ವಿಶಲ್, ಸಣ್ಣ ಉರಿಯಲ್ಲಿ ಒಂದು ವಿಶಲ್ ಬರುವವರೆಗೆ ಬೇಯಿಸಿ. ಮತ್ತೊಂದು ಪ್ಯಾನ್‌ಗೆ ಹಾಲನ್ನು ಹಾಕಿ ಅದನ್ನು ಮಧ್ಯಮ ಉರಿಯಲ್ಲಿ ಕಾಯಿಸಿ. ಹಾಲು ಬಿಸಿಯಾಗುತ್ತಿದ್ದಂತೆ ಬೆಲ್ಲದ ಪುಡಿಯನ್ನು ಸೇರಿಸಿ ಮತ್ತು ನಿಧಾನವಾಗಿ ಕುದಿಸಬೇಕು. ಹಾಲಿಗೆ ಈಗಾಗಲೇ ಬೇಯಿಸಿಕೊಂಡ ಅನ್ನ (ಅದರಲ್ಲಿ ಗಂಜಿಯ/ತೆಳಿ ಅಂಶ ಇದ್ದರೆ ಅದನ್ನೂ ಸೇರಿಸಿ), ಒಣ ಹಣ್ಣುಗಳು ಮತ್ತು ಏಲಕ್ಕಿ ಪುಡಿಯನ್ನು ಸೇರಿಸಿ ಮತ್ತು ಮಧ್ಯಮ ಉರಿಯಲ್ಲಿ ಕುದಿಸಿ. ಒಂದು ಸೌಟಿನಲ್ಲಿ ಈ ಮಿಶ್ರಣವನ್ನು ಆಗಾಗ ಕಲಕುತ್ತಿರಿ. ಹಾಲು ಕುದಿಯುತ್ತಿದ್ದಂತೆ ಈ ಮಿಶ್ರಣ ದಪ್ಪವಾಗಲು ಆರಂಭಿಸುತ್ತದೆ.

ಸ್ವಲ್ಪ ಗಟ್ಟಿಯಾಗಿ ಪಾಯಸದ ಹದಕ್ಕೆ ಬಂದು, ಈ ಮಿಶ್ರಣದ ಬಣ್ಣವು ಚಾಕೊಲೇಟ್ ಬಣ್ಣಕ್ಕೆ ಬದಲಾದ ನಂತರ ಅದನ್ನು ನೀವು ಸ್ಟವ್‌ನಿಂದ ಇಳಿಸಬಹುದು.

ಪಾಯಸ ತಣ್ಣಗಾದ ಮೇಲೆ ಕೆಲವು ಗಂಟೆಗಳ ಕಾಲ ಫ್ರಿಡ್ಜ್‌ನಲ್ಲಿ ಇರಿಸಿದರೆ ರುಚಿಗಳು ಸರಿಯಾಗಿ ಹೊಂದಿಕೆ ಆಗುತ್ತವೆ. ಸವಿ ರುಚಿ ಪಾಯಸ ಸೇವನೆಗೆ ಸಿದ್ಧ.

ಉಕ್ರೇನ್‌ಗೆ ಬೆಂಬಲ ನಿಲ್ಲದು: ನ್ಯಾಟೊ

ಬ್ರಸೆಲ್ಸ್/ಕೀವ್/ಮಾಸ್ಕೊ (ಎಪಿ/ಎಎಫ್‌ಪಿ): 'ಉಕ್ರೇನ್‌ಗೆ ಎಲ್ಲ ರೀತಿಯ ನೆರವು ಮುಂದುವರಿಯಲಿದೆ. ಇದರಲ್ಲಿ ಹಿಂದೆ ಸರಿಯುವ ಪ್ರಶ್ನೆಯೇ ಇಲ್ಲ' ಎಂದು ನ್ಯಾಟೊ ಪ್ರಧಾನ ಕಾರ್ಯದರ್ಶಿ ಜೆನ್ಸ್ ಸ್ಟೊಲ್ಟೆನ್ ಬರ್ಗ್ ಶುಕ್ರವಾರ ಹೇಳಿದರು.

ರೊಮಾನಿಯಾದಲ್ಲಿ ಮುಂದಿನ ವಾರ ನಡೆಯಲಿರುವ ನ್ಯಾಟೊ ವಿದೇಶಾಂಗ ಸಚಿವರ ಸಭೆ ಹಿನ್ನೆಲೆಯಲ್ಲಿ ವರದಿಗಾರರೊಂದಿಗೆ ಮಾತನಾಡಿದ ಅವರು 'ರಷ್ಯಾ ವಿರುದ್ಧ ಉಕ್ರೇನ್‌ಗೆ ಸ್ವರಕ್ಷಣೆ ಸಾಧ್ಯವಾಗುವವರೆಗೆ, ಪಶ್ಚಿಮದ ರಾಷ್ಟ್ರಗಳ ಮಾನದಂಡದಂತೆ ಸೇನೆಯನ್ನು ಆಧುನೀಕರಿಸಿಕೊಳ್ಳಲು ಉಕ್ರೇನ್‌ಗೆ ನ್ಯಾಟೊ ನೆರವಾಗಲಿದೆ' ಎಂದರು.

'ನ್ಯಾಟೊ ಒಂದು ಸಂಘಟನೆಯಾಗಿ ಉಕ್ರೇನ್‌ಗೆ ಶಸ್ತ್ರಾಸ್ತ್ರ ಪೂರೈಸುವುದಿಲ್ಲ. ಸದಸ್ಯ ರಾಷ್ಟ್ರಗಳು ಪ್ರತ್ಯೇಕ ಅಥವಾ ಗುಂಪಾಗಿ ವಾಯು ರಕ್ಷಣಾ ಕ್ಷಿಪಣಿ ವ್ಯವಸ್ಥೆ ಮತ್ತು ಶಸ್ತ್ರಾಸ್ತ್ರ ಪೂರೈಸಲು ಒತ್ತಾಯಿಸುವೆ' ಎಂದು ಅವರು ತಿಳಿಸಿದರು.

ಕೆರ್ಸಾನ್ ಮೇಲೆ ಕ್ಷಿಪಣಿಗಳ ಮಳೆ: ಉಕ್ರೇನ್ ಮರು ವಶಪಡಿಸಿಕೊಂಡ ಕೆರ್ಸಾನ್ ನಗರದ ಮೇಲೆ ರಷ್ಯಾ ಕ್ಷಿಪಣಿಗಳ ಮಳೆ ಸುರಿಸುತ್ತಿದೆ. ಗುರುವಾರ 17 ಬಾರಿ ಶೆಲ್ ದಾಳಿ ನಡೆಸಿತ್ತು. ಶುಕ್ರವಾರ ಕ್ಷಿಪಣಿ ದಾಳಿ ತೀವ್ರಗೊಂಡಿದ್ದು, ನಾಲ್ವರು ನಾಗರಿಕರು ಮೃತಪಟ್ಟಿದ್ದಾರೆ ಎಂದು ಕೆರ್ಸಾನ್ ಸೇನಾ ಆಡಳಿತ ಹಳಿದೆ.

ಕೀವ್ ನಗರದ ಶೇ 50ರಷ್ಟು ಪ್ರದೇಶಗಳಲ್ಲಿ ವಿದ್ಯುತ್ ಪೂರೈಕೆ ಮರುಸ್ಥಾಪನೆಯಾಗಿಲ್ಲ.

ಯೋಧರ ಅಮ್ಮಂದಿರ ನೋವು ಆಲಿಸಿದ ಪುಟಿನ್: 'ಉಕ್ರೇನ್ ಸಂಘರ್ಷದಲ್ಲಿ ರಷ್ಯಾದ ಭವಿಷ್ಯಕ್ಕಾಗಿ ಹುತಾತ್ಮರಾದ ಯೋಧರ ತಾಯಂದಿರ, ಕುಟುಂಬದ ನೋವನ್ನು ಇಡೀ ರಾಷ್ಟ್ರ ಮತ್ತು ರಾಷ್ಟ್ರದ ನಾಯಕತ್ವ ಹಂಚಿಕೊಳ್ಳುತ್ತದೆ' ಎಂದು ಅಧ್ಯಕ್ಷ ವ್ಲಾಡಿಮಿರ್ ಪುಟಿನ್ ಶುಕ್ರವಾರ ಸಾಂತ್ವನ ಹೇಳಿದರು.

ಸೈನಿಕರ ಕುಟುಂಬಗಳಿಂದ ಹೆಚ್ಚುತ್ತಿರುವ ಆಕ್ರೋಶದ ಮಧ್ಯೆ ಮಾಸ್ಕೊದ ತಮ್ಮ ನಿವಾಸದ ಬಳಿ ಅವರು ಯೋಧರ ತಾಯಂದಿರ ಜತೆ ಮಾತನಾಡಿದರು.

'ನೀವು ಕಳೆದುಕೊಂಡ ಮಗನ ಜಾಗ ತುಂಬಲು ಯಾರಿಗೂ ಸಾಧ್ಯವಿಲ್ಲ. ನಿಮಗೆ ಔಪಚಾರಿಕ ಸಂತಾಪದ ಮಾತು ಹೇಳಲು ನನ್ನಲ್ಲಿ ಧೈರ್ಯವಿಲ್ಲ' ಎಂದು ಪುಟಿನ್ ಹೇಳಿದರು.

26/11 ಕೃತ್ಯ: ವಿಶ್ವಸಂಸ್ಥೆ ಭದ್ರತಾ ಮಂಡಳಿಯಲ್ಲಿ ಚೀನಾ ವಿರುದ್ಧ ಆರೋಪ

ಉಗ್ರರ ನಿರ್ಬಂಧಕ್ಕೆ ರಾಜಕೀಯ ತಡೆ

ವಿಶ್ವಸಂಸ್ಥೆ (ಪಿಟಿಐ): ಮುಂಬೈನ 26/11ರ ಉಗ್ರರ ದಾಳಿ ಪ್ರಕರಣದ ಅಪರಾಧಿಗಳು ಹಾಗೂ ಅವರಿಗೆ ನೆರವಾದವರಿಗೆ ನಿರ್ಬಂಧ ಹೇರುವ ಭಾರತದ ಯತ್ನಕ್ಕೆ 'ರಾಜಕೀಯ ಕಾರಣಗಳಿಗೆ' ತಡೆಯೊಡ್ಡಲಾಗಿದೆ ಎಂದು ಭಾರತ ಪ್ರತಿಪಾದಿಸಿದೆ.

ಪಾಕ್ ಮೂಲದ ಉಗ್ರರ ಸಂಘಟನೆಗಳನ್ನು ಕಪ್ಪುಪಟ್ಟಿಗೆ ಸೇರಿಸುವ ಭಾರತದ ಕ್ರಮಕ್ಕೆ ತಡೆಯೊಡ್ಡುವ ಚೀನಾದ ಪುನರಾವರ್ತಿತ ಪ್ರಯತ್ನವನ್ನು ಉಲ್ಲೇಖಿಸಿ ವಿಶ್ವಸಂಸ್ಥೆಯ ಭಾರತದ ಶಾಶ್ವತ ಪ್ರತಿನಿಧಿ, ರಾಯಭಾರಿ ರುಚಿರಾ ಕಾಂಬೋಜ್ ಈ ಮಾತು ಹೇಳಿದರು.

ಭಯೋತ್ಪಾದನೆ ಈಗಲೂ ಅಂತರರಾಷ್ಟ್ರೀಯ ಶಾಂತಿ ಮತ್ತು ಭದ್ರತೆಗೆ ದೊಡ್ಡ ಬೆದರಿಕೆಯಾಗಿದೆ. ಐಎಸ್ ಮತ್ತು ಅಲ್‌ಖೈದಾ ಮತ್ತು ಅದರ ಸಹಭಾಗಿ ಗುಂಪುಗಳು ಮುಖ್ಯವಾಗಿ ಏಷ್ಯಾ ಮತ್ತು ಆಫ್ರಿಕಾ ಖಂಡದಲ್ಲಿ ನಾಗರಿಕರು ಹಾಗೂ ಭದ್ರತಾ ಪಡೆಗಳನ್ನು ಗುರಿಯಾಗಿಸಿಕೊಂಡು ಕಾರ್ಯಾಚರಣೆ ನಡೆಸುತ್ತಿವೆ ಎಂದು ಆರೋಪ ಮಾಡಿದರು.

'2008ರ ನವೆಂಬರ್‌ನಲ್ಲಿ ಪಾಕಿಸ್ತಾನದಿಂದ ಜಲಮಾರ್ಗದಲ್ಲಿ ಬಂದ 10 ಉಗ್ರರು ಮುಂಬೈ ಮೇಲೆ ನಡೆಸಿದ ದಾಳಿಯನ್ನು ನಾವು ಮರೆಯುವುದಿಲ್ಲ' ಎಂದರು. ಮುಂಬೈ ದಾಳಿಗೆ 14 ವರ್ಷ ತುಂಬುತ್ತಿರುವ ಸಂದರ್ಭ ರುಚಿರಾ ಅವರು ಈ ಮಾತು ಹೇಳಿದ್ದಾರೆ.

ಭಯೋತ್ಪಾದನೆ ನಿಗ್ರಹ ಕುರಿತು 15 ರಾಷ್ಟ್ರಗಳಿರುವ ವಿಶ್ವಸಂಸ್ಥೆಯ ಭದ್ರತಾ ಮಂಡಳಿಯು ವಿವಿಧ ಉಪಸಮಿತಿಗಳ ಅಧ್ಯಕ್ಷರಿಂದ ವಿವರಣೆ ಪಡೆಯಿತು. ಅಲ್‌ಖೈದಾ ನಿರ್ಬಂಧ ಸಮಿತಿ ಮತ್ತು ಸಾಮೂಹಿಕ ವಿನಾಶದ ಶಸ್ತ್ರಾಸ್ತ್ರಗಳ ಪ್ರಸರಣ ನಿರ್ಬಂಧಗಳ ಸಮಿತಿ ವಿವರಣೆ ನೀಡಿದವು. ಭಯೋತ್ಪಾದನಾ ನಿಗ್ರಹ ಸಮಿತಿ ಅಧ್ಯಕ್ಷತೆಯನ್ನು ಭಾರತ ವಹಿಸಿದ್ದು, ರಾಯಭಾರಿ ಈ ಕುರಿತು ವಿವರಣೆ ನೀಡಿದರು.

'ನನ್ನ ಸ್ಥಿತಿ ಯಾರಿಗೂ ಬಾರದಿರಲಿ'

ಜೆರುಸಲೇಂ (ಪಿಟಿಐ): ಮುಂಬೈ ದಾಳಿ ಕೃತ್ಯದಲ್ಲಿ ಪಾಲಕರನ್ನು ಕಳೆದುಕೊಂಡಿದ್ದ ಇಸ್ರೇಲ್‌ನ ನಿವಾಸಿ, ಈಗ 16 ವರ್ಷದ ಮೊಶೇ ಹೋಲ್ಟ್‌ಜ್‌ಬರ್ಗ್, 'ತಾನು ಅನುಭವಿಸಿದ್ದನ್ನು ಬೇರೆ ಯಾರೂ ಅನುಭವಿಸುವುದು ಬೇಡ' ಎಂದಿದ್ದಾರೆ.

'ಭಯೋತ್ಪಾದನೆ ಎದುರಿಸಲು ಮಾರ್ಗಗಳನ್ನು ಹುಡುಕುವಂತೆ' ಅಂತಾರಾಷ್ಟ್ರೀಯ ಸಮುದಾಯಕ್ಕೆ ಮನವಿ ಮಾಡಿದ್ದಾರೆ. 26/11ರ ದಾಳಿ ನಡೆದಾಗ ಮೊಶೆ 2 ವರ್ಷದ ಮಗು. ಪಾಲಕರಾದ ರಬ್ಬಿ ಗೇಬ್ರಿಯಲ್ ಮತ್ತು ರಿವ್ಕಾ ಹೋಲ್ಟ್‌ಜ್‌ಬರ್ಗ್ ದಾಳಿಯಲ್ಲಿ ಮೃತಪಟ್ಟಿದ್ದರು.

ಸಂಕ್ಷಿಪ್ತ ಸುದ್ದಿ

49 ಮಂದಿಗೆ ಮರಣದಂಡನೆ

ಅಲ್ಜೀರಿಯಾ (ಎಪಿ): ಕಾಳ್ಗಿಚ್ಚಿಗೆ ಕಾರಣಕರ್ತ ಎಂಬ ಶಂಕೆಯಿಂದ ಕಲಾವಿದ ಕಲಾವಿದ ಜಮೆಲ್ ಬೆನ್ ಇಸ್ಮಾಯಿಲ್ ಮೇಲೆ ಗುಂಪು ಹಲ್ಲೆ ನಡೆಸಿ, ಅವರನ್ನು ಹತ್ಯೆ ಮಾಡಿದ್ದ ಪ್ರಕರಣದಲ್ಲಿ ಒಟ್ಟು 49 ಆರೋಪಿಗಳಿಗೆ ಅಲ್ಜೀರಿಯಾದ ಕೋರ್ಟ್ ಗುರುವಾರ ಮರಣದಂಡನೆ ವಿಧಿಸಿದೆ.

ಅಲ್ಲದೆ 38 ಮಂದಿಗೆ ಎರಡರಿಂದ 12 ವರ್ಷದವರೆಗೆ ಸಜೆ ವಿಧಿಸಿದೆ.

2021ರಲ್ಲಿ ಕಬೈಲಿ ಪ್ರಾಂತ್ಯದಲ್ಲಿ ಕಾಡ್ಗಿಚ್ಚು ಕಾಣಿಸಿಕೊಂಡಾಗ, ಬೆಂಕಿ ನಂದಿಸಲು ಧಾವಿಸಿದ್ದ ಯೋಧರು ಒಳಗೊಂಡಂತೆ 90 ಜನರು ಮೃತಪಟ್ಟಿದ್ದರು.

ಚೀನಾ: 10 ಸಾವು

ಬೀಜಿಂಗ್ (ಪಿಟಿಐ): ಚೀನಾದ ಷಿನ್‌ಜಿಯಾಂಗ್ ಪ್ರದೇಶದ ವಸತಿ ಸಮುಚ್ಚಯದಲ್ಲಿ ಗುರುವಾರ ರಾತ್ರಿ ಸಂಭವಿಸಿದ ಅಗ್ನಿ ಅವಘಡದಲ್ಲಿ 10 ಮಂದಿ ಮೃತಪಟ್ಟಿದ್ದು, 9 ಮಂದಿ ಗಾಯಗೊಂಡಿದ್ದಾರೆ.

ಉರುಮ್ಕಿ ವಲಯದ ಟಿಯಾಂಶನ್ ಜಿಲ್ಲೆಯಲ್ಲಿ ಅವಘಡ ಸಂಭವಿಸಿದೆ. ಶಾರ್ಟ್ ಸರ್ಕೀಟ್ ಕಾರಣ ಎನ್ನಲಾಗಿದೆ.

ಪಿವಿ ಬ್ರ್ಯಾಂಡ್ ಸ್ಪಾಟ್
ಪತ್ರಿಕೆಯಲ್ಲಿ ಪ್ರಕಟವಾಗುತ್ತಿರುವ ಪಿವಿ ಬ್ರ್ಯಾಂಡ್ ಸ್ಪಾಟ್ ಪ್ರಸ್ತುತಿಯ ಲೇಖನ ಸಿದ್ಧಪಡಿಸುವಲ್ಲಿ ನಮ್ಮ ಪತ್ರಕರ್ತರ ಯಾವುದೇ ಪಾತ್ರ ಇರುವುದಿಲ್ಲ. ಸಂಸ್ಥೆಯ ಜಾಹೀರಾತು ಮತ್ತು ಬ್ರ್ಯಾಂಡ್ ವಿಭಾಗಗಳ ಪ್ರಸ್ತುತಿಯಾಗಿರುವ 'ಪಿವಿ ಬ್ರ್ಯಾಂಡ್ ಸ್ಪಾಟ್'ನ ಮಾಹಿತಿಯನ್ನು (ಕಂಟೆಂಟ್) ಓದುಗರು ಜಾಹೀರಾತು ಎಂದೇ ಭಾವಿಸಬಹುದು.

ಕರ್ನಾಟಕ ಸರ್ಕಾರ
ಕಾರ್ಯನಿರ್ವಾಹಕ ಇಂಜನೀಯರರು, ಲೋಕೋಪಯೋಗಿ ಇಲಾಖೆ ವಿಭಾಗ, ಹಾವೇರಿ
ಈ ಕಛೇರಿ ಗುತ್ತಿಗೆ ಪ್ರಕಟಣೆ ಸಂ.033/ಪಿಬಿ/ಗುತ್ತಿಗೆ/8443/2022–23/6239/ ದಿನಾಂಕ : 24–11–2022

ಇ–ಟೆಂಡರ್ ಪ್ರಕಟಣೆ

ದಿನಾಂಕ:24–11–2022ರಂದು ಇ-ಪ್ರಕ್ಯೂರ್‌ಮೆಂಟ್ ಮೂಲಕ, ಕಾಮಗಾರಿಗಳ ಇಂಡೆಂಟ್ ಸಂಖ್ಯೆ 159644, 159467, 159468 ಮತ್ತು 159469ರ ಕಾಮಗಾರಿಗಳಿಗೆ ಗುತ್ತಿಗೆ ಪ್ರಕಟಣೆಯನ್ನು ನೀಡಲಾಗಿದ್ದು, ಇ-ಪ್ರಕ್ಯೂರ್‌ಮೆಂಟ್ ಮೂಲಕ ಗುತ್ತಿಗೆ ಪತ್ರಗಳನ್ನು ಸಲ್ಲಿಸುವ ಕೊನೆಯ ದಿನಾಂಕ: **05–12–2022** (ಮಧ್ಯಾಹ್ನ 4.00 ಗಂಟೆಯವರೆಗೆ ಮಾತ್ರ) ವನ್ನು ನಿಗದಿಪಡಿಸಲಾಗಿರುತ್ತದೆ. ಹೆಚ್ಚಿನ ವಿವರಗಳಿಗಾಗಿ ಹಾಗೂ ಬದಲಾವಣೆಗಳಿದ್ದಲ್ಲಿ ಇಲಾಖೆಯ ವೆಬ್‌ಸೈಟ್ **http://www.eproc.karnataka.gov.in** ನ್ನು ಸಂಪರ್ಕಿಸಲು ಕೋರಲಾಗಿದೆ.

ಸಹಿ/– (ಕೆ.ರಮೇಶ) ಕಾರ್ಯನಿರ್ವಾಹಕ ಇಂಜನೀಯರರು, ಲೋಕೋಪಯೋಗಿ ಇಲಾಖೆ ವಿಭಾಗ, ಹಾವೇರಿ.
ವಾಸಾಸಂಇ/ಹಾವೇರಿ/ಎಂಸಿಎ/385/2022–23

ಕರ್ನಾಟಕ ಸರಕಾರ
ಜಿಲ್ಲಾಧಿಕಾರಿಗಳ ಕಾರ್ಯಾಲಯ ಬೆಳಗಾವಿ
ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆ, ಬೆಳಗಾವಿ.
ಸಂ:ಬಿಸಿಎಂ/ರಾವಸುಅ/ಸಿಆರ್–15/2022–23 ದಿನಾಂಕ:24/11/2022

ಟೆಂಡರ್ ಪ್ರಕಟಣೆ (ಇ–ಪ್ರೊಕ್ಯೂರ್‌ಮೆಂಟ್ ಮೂಲಕ)

ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆ ಬೆಳಗಾವಿ ಜಿಲ್ಲೆಯ ಆಧೀನದಲ್ಲಿ ಬರುವ ವಿದ್ಯಾರ್ಥಿನಿಲಯಗಳಿಗೆ ಮೂಲಭೂತ ಸೌಕರ್ಯಗಳಾದ ವಾಟರ್ ಪ್ಯೂರಿಫೈರ್‌ಗಳನ್ನು 2022–23ನೇ ಸಾಲಿಗೆ ಪೂರೈಸುವ ಏಜೆನ್ಸಿಗಳನ್ನು ಒಂದು ವರ್ಷದ ಮಟ್ಟಿಗೆ ಅಥವಾ ಮುಂದಿನ ಆದೇಶದ ವರೆಗೆ ಆಯ್ಕೆ ಮಾಡುವುದಕ್ಕಾಗಿ ಇ–ಪ್ರೊಕ್ಯೂರಮೆಂಟ್ ಮೂಲಕ ಟೆಂಡರ್ ಕರೆಯಲಾಗಿದ್ದು, ಆಸಕ್ತ ಅರ್ಜಿದಾರರು ಅರ್ಜಿ ಸಲ್ಲಿಸಲು ಕೊನೆಯ ದಿನಾಂಕ:26/12/2022 ವಾಗಿರುತ್ತದೆ. ವಿವರವನ್ನು ಇಲಾಖೆಯ ವೆಬ್‌ಸೈಟ್:– https://eproc.karnataka.gov.in ನಲ್ಲಿ ಪಡೆಯಬಹುದಾಗಿದೆ.
ಹೆಚ್ಚಿನ ವಿವರಗಳಿಗಾಗಿ ಕಛೇರಿಯ ದೂರವಾಣಿ ಸಂಖ್ಯೆ: 0831–2407221 ನ್ನು ಸಂಪರ್ಕಿಸಬಹುದು.
ಸ್ಥಳ: ಬೆಳಗಾವಿ
ದಿನಾಂಕ:24/11/2022

ಸಹಿ/–ಜಿಲ್ಲಾ ಅಧಿಕಾರಿಗಳು ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆ ಬೆಳಗಾವಿ.
ಸಹಿ/–ಜಿಲ್ಲಾಧಿಕಾರಿಗಳು ಬೆಳಗಾವಿ ಜಿಲ್ಲೆ, ಬೆಳಗಾವಿ.
DIPR/BGM/RO-NO-1258/MCA/2022-23

ಕರ್ನಾಟಕ ಸರ್ಕಾರ – ಅರಣ್ಯ ಇಲಾಖೆ
ಉಪ ಅರಣ್ಯ ಸಂರಕ್ಷಣಾಧಿಕಾರಿಗಳ ಕಚೇರಿ, ಭದ್ರಾವತಿ ವಿಭಾಗ, ಲೊಯರ್ ಹುತ್ತಾ, ಭದ್ರಾವತಿ –577301
Phone : 08282-266355 Fax: 08282 -266647
Email:dcfbdvt@yahoo.in
ಸ:ಎ2:ಬಿಯುಡಿ:"E-Tender"–ಸಿ.ಆರ್–26–22–23–15. Dt:22.11.2022.

2022–23ನೇ ಸಾಲಿನಲ್ಲಿ ಭದ್ರಾವತಿ ಅರಣ್ಯ ವಿಭಾಗದ ಉಂಬ್ಳೆಬೈಲು ವಲಯ ವ್ಯಾಪ್ತಿಯಲ್ಲಿ ಕೆಳಕಂಡ ಕಾಮಗಾರಿಗಳನ್ನು ನಿರ್ವಹಿಸಲು ಇ–ಪ್ರಕ್ಯೂರ್‌ಮೆಂಟ್ ಪೋರ್ಟಲ್ ಮುಖಾಂತರ ಅಲ್ಪಾವಧಿ ಕಾಲ್–2 ಟೆಂಡರ್ ಆಹ್ವಾನಿಸಲಾಗಿದ್ದು, ಟೆಂಡರ್ ನಿಬಂಧನೆ ಹಾಗೂ ಹೆಚ್ಚಿನ ಮಾಹಿತಿಗಾಗಿ ಕಛೇರಿಯ ವೇಳೆಯಲ್ಲಿ ಈ ಕಛೇರಿಯನ್ನು ಸಂಪರ್ಕಿಸಬಹುದಾಗಿರುತ್ತದೆ. ಹಾಗೂ ಟೆಂಡರ್ ಕುರಿತು ವಿವರಗಳನ್ನು ಅಧಿಕೃತ ವೆಬ್‌ಸೈಟ್ www.eproc.karnataka.gov.in ಮೂಲಕ ಪಡೆದುಕೊಳ್ಳಬಹುದಾಗಿರುತ್ತದೆ.

1. ಕ್ಷೀಣಿಸಿದ ಅರಣ್ಯ ಪ್ರದೇಶದ ಪರಿಸರ ಮರುಸ್ಥಾಪನೆ. *) ಟೆಂಡರ್ ಸಲ್ಲಿಸಲು ಕೊನೆಯ ದಿನಾಂಕಟ 29–11–2022 04.30ವರೆಗೆ *) ತಾಂತ್ರಿಕ ಬಿಡ್ಡು ತೆರೆಯುವ ದಿನಾಂಕ: 01–12–2022 *) ಆರ್ಥಿಕ ಬಿಡ್ಡು ತೆರೆಯುವ ದಿನಾಂಕ: 01–12–2022 ತಾಂತ್ರಿಕ ಬಿಡ್ಡು ಅಂಗೀಕರಿಸಿದ ನಂತರ.

ಸಹಿ/– (ಶಿವಶರಣಯ್ಯ ಕ.ಅ.ಸೇ)
ಉಪ ಅರಣ್ಯ ಸಂರಕ್ಷಣಾಧಿಕಾರಿ, ಭದ್ರಾವತಿ ವಿಭಾಗ, ಭದ್ರಾವತಿ.
ವಾ.ಸಾ.ಸಂ.ಇ/ಎಂಸಿಎ/ಶಿ/162/11/22–23/1336

ಕರ್ನಾಟಕ ಸರ್ಕಾರ
ಕರ್ನಾಟಕ ವೈದ್ಯಕೀಯ ವಿಜ್ಞಾನ ಸಂಸ್ಥೆ, ಹುಬ್ಬಳ್ಳಿ
ನಿರ್ದೇಶಕರ ಕಚೇರಿ, ವಿದ್ಯಾನಗರ, ಹುಬ್ಬಳ್ಳಿ–580 021
ಸಂ: ಕಿಮ್ಸ್/ಎಸ್.ಯು.ಪಿ(5)/EQP/Tender/OPH-73/2022-23 ದಿನಾಂಕ: 25-11-2022

ಟೆಂಡರ್ ಪ್ರಕಟಣೆ (ಇ–ಪ್ರೊಕ್ಯೂರ್‌ಮೆಂಟ್ ಮುಖಾಂತರ)

ನಿರ್ದೇಶಕರು, ಕರ್ನಾಟಕ ವೈದ್ಯಕೀಯ ವಿಜ್ಞಾನ ಸಂಸ್ಥೆ, ಹುಬ್ಬಳ್ಳಿ ಇಲ್ಲಿಗೆ ಇವರ ಅರ್ಹ ಟೆಂಡರ್‌ದಾರರಿಂದ ಕಿಮ್ಸ್ ಆಸ್ಪತ್ರೆಯ ನೇತ್ರ ಶಾಸ್ತ್ರ ವಿಭಾಗಕ್ಕೆ ವೈದ್ಯಕೀಯ ಉಪಕರಣಗಳನ್ನು ಪೂರೈಸುವುದಕ್ಕಾಗಿ ಇ–ಟೆಂಡರ್ ಮೂಲಕ ಟೆಂಡರ್ ಪ್ರಕಟಣೆ ಆಹ್ವಾನಿಸಲಾಗಿದೆ.

1	Tenders may be uploaded from	26-11-2022
3	Last date for uploading the tenders	03-12-2022 before 5:00 PM

ಈ ದಾಖಲೆಗಳನ್ನು ಟೆಂಡರ್ ಪ್ರೊಸೆಸ್ಸಿಂಗ್ ಶುಲ್ಕ ಇತ್ಯಾದಿ ವಿವರಗಳಿಗೆ ಕರ್ನಾಟಕ ಸರ್ಕಾರದ ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್‌ನಲ್ಲಿ **https://eproc.karnataka.gov.in** ಮೂಲಕ ಮಾಹಿತಿ ಪಡೆಯಬಹುದು.
ಸಹಿ/– ನಿರ್ದೇಶಕರು ಕರ್ನಾಟಕ ವೈದ್ಯಕೀಯ ವಿಜ್ಞಾನ ಸಂಸ್ಥೆ, ಹುಬ್ಬಳ್ಳಿ

ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ
ಕಾರ್ಯಪಾಲಕ ಅಭಿಯಂತರರರವರ ಕಛೇರಿ, ಗೋವಿಂದರಾಜನಗರ ವಿಭಾಗ, 2ನೇ ಮಹಡಿ, ಶಕ್ತಿ ಸೌಧ, 13ನೇ ಅಡ್ಡರಸ್ತೆ, 4ನೇ ಬಿ ಮುಖ್ಯರಸ್ತೆ, ಎಂಸಿ ಬಡಾವಣೆ, ವಿಜಯನಗರ, ಬೆಂಗಳೂರು–40.
ಸಂ: ಕಾಪಾಅ(ಗೋರಾವಿ)/ಟೆಂಡರ್/ಜಿಎಲ್–26/2022–23 ದಿನಾಂಕ: 24.11.2022

ಅಲ್ಪಾವಧಿ ಟೆಂಡರ್‌ಗಾಗಿ ಆಹ್ವಾನ (ಐಎಫ್‌ಟಿ)
(ಜಿಒಕೆ ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮೂಲಕ ಮಾತ್ರ) (ದ್ವಿಲಕೋಟೆ ಪದ್ಧತಿ)

ಕಾರ್ಯಪಾಲಕ ಅಭಿಯಂತರರು, ಗೋವಿಂದರಾಜನಗರ ವಿಭಾಗ ಇವರು ಅರ್ಹ ಗುತ್ತಿಗೆದಾರರಿಂದ ಕೆಳಕಂಡ ಕಾಮಗಾರಿಗಳಿಗಾಗಿ ಟೆಂಡರನ್ನು ಆಹ್ವಾನಿಸಿದ್ದಾರೆ.

ಕ್ರ. ಸಂ.	ಕಾಮಗಾರಿಯ ವಿವರ	ಅಂದಾಜು ಮೊತ್ತ (ರೂ. ಲಕ್ಷಗಳಲ್ಲಿ)	ಇ.ಎಂ.ಡಿ. (ರೂ.ಗಳಲ್ಲಿ)
1	ವಾರ್ಡ್ ಸಂಖ್ಯೆ 131 ನಾಯಂಡಹಳ್ಳಿಯ ಪಂತರಪಾಳ್ಯದಲ್ಲಿ ಮಲ್ಟಿಸ್ಪೆಷಾಲಿಟಿ ಆಸ್ಪತ್ರೆಯ ನಿರ್ಮಾಣ ಕಾಮಗಾರಿ (2ನೇ ಹಂತ) (ಪ್ಯಾಕೇಜ್–ಜಿಆರ್‌ಎನ್–17).	3200.00	ರೂ. 32.00 ಲಕ್ಷಗಳು (ರೂ 1.00 ಲಕ್ಷ ಆನ್‌ಲೈನ್ ಮೂಲಕ ಹಾಗೂ ಉಳಿದ ಮೊತ್ತ ಬ್ಯಾಂಕ್ ಗ್ಯಾರಂಟಿ ಮೂಲಕ.)

1) ಟೆಂಡರ್ ದಸ್ತಾವೇಜುಗಳನ್ನು ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್‌ನಿಂದ ಡೌನ್‌ಲೋಡ್ ಮಾಡಿಕೊಳ್ಳಬಹುದು. 2) ಪೂರ್ವಭಾವಿ ಸಭೆ ದಿನಾಂಕ : **30.11.2022ರ ಸಂಜೆ 4.30 ಗಂಟೆಗೆ.** 3) ಟೆಂಡರ್ ಡಾಕ್ಯುಮೆಂಟ್‌ಗಳನ್ನು ಸಲ್ಲಿಸಲು ಕೊನೆಯ ದಿನಾಂಕ: **07.12.2022ರ ಸಂಜೆ 4.00 ಗಂಟೆಯವರೆಗೆ** 4) ತಾಂತ್ರಿಕ ಬಿಡ್‌ಗಳನ್ನು ತೆರೆಯುವ ದಿನಾಂಕ: **08.12.2022ರ ಸಂಜೆ 4.30 ಗಂಟೆಗೆ.** ಹೆಚ್ಚಿನ ಮಾಹಿತಿಗಾಗಿ ವೆಬ್‌ಸೈಟ್: **www.eproc.karnataka.gov.in** ನಲ್ಲಿ ಲಾಗಿನ್ ಮಾಡಿ ಅಥವಾ ಕೆಳಸಹಿದಾರರ ಕಛೇರಿಯಲ್ಲಿ ಪಡೆಯಬಹುದು.

ಸಹಿ/– ಕಾರ್ಯಪಾಲಕ ಅಭಿಯಂತರರು, ಗೋವಿಂದರಾಜನಗರ ವಿಭಾಗ.

ಕೃಷಿ ವಿಶ್ವ ವಿದ್ಯಾನಿಲಯ ಬೆಂಗಳೂರು
ಆಸ್ತಿ ಅಧಿಕಾರಿಗಳವರ ಕಛೇರಿ, ಗಾ.ಕೃ.ವಿ.ಕೆ, ಬೆಂಗಳೂರು–560065.
ಸಂ:ಇ.ಒ/ಎಸ್.ಪಿ.ಒ/ಇ–ಪ್ರೊಕ್ಯೂರ್‌ಮೆಂಟ್/130/2022–23 ದಿನಾಂಕ:23.11.2022

ಟೆಂಡರ್ ಪ್ರಕಟಣೆ
(ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮುಖಾಂತರ ಮಾತ್ರ)

ಬೆಂಗಳೂರು ಕೃಷಿ ವಿಶ್ವವಿದ್ಯಾನಿಲಯಕ್ಕೆ ಅವಶ್ಯವಿರುವ ಉಪಕರಣಗಳು ಕ್ರಮ **ಸಂಖ್ಯೆ 1 ರಿಂದ 9 ರ ವರೆವಿಗೆ** ಸರಬರಾಜು ಮಾಡಲು ಸ್ಟ್ಯಾಂಡರ್ಡ್ ಟೆಂಡರ್ ಡಾಕ್ಯುಮೆಂಟ್ ಕೆ.ಜಿ–1 ಮತ್ತು ಕೆ.ಜಿ–2 ನಿಬಂಧನೆಗೊಳಪಟ್ಟಂತೆ ಟೆಂಡರನ್ನು ಕರೆಯಲಾಗಿದೆ. ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್‌ನಲ್ಲಿ ನೊಂದಾಯಿಸಲ್ಪಟ್ಟ ಆಸಕ್ತಿಯುಳ್ಳ ಅರ್ಹ ಕಂಪನಿಗಳು ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ವೆಬ್‌ಸೈಟ್: **www.eproc.karnataka.gov.in** ಮುಖಾಂತರ ಭಾಗವಹಿಸಬಹುದು. ಕೆ.ಜಿ–1, ಮತ್ತು ಕೆ.ಜಿ–2 ಟೆಂಡರ್ ಡಾಕ್ಯುಮೆಂಟ್, ಟೆಂಡರ್ ನೋಟಿಫಿಕೇಷನ್, ಟೆಂಡರ್ ಶೆಡ್ಯೂಲ್, ಇ.ಎಂ.ಡಿ ದರ, ಟೆಂಡರ್ ಫಾರ್ಮ್‌ಗಳನ್ನು ಈ ಮೇಲಿನ ವೆಬ್‌ಸೈಟ್ ಮುಖಾಂತರ ಪಡೆಯಬಹುದು. ಟೆಂಡರ್ ಸಲ್ಲಿಸುವ ಕೊನೆಯ **ದಿನಾಂಕ: 07.12.2022ರ ಸಂಜೆ 4:00 ಗಂಟೆಯವರೆಗೆ** ಮತ್ತು ಆರ್ಥಿಕ ಬಿಡ್ ತೆರೆಯುವ **ದಿನಾಂಕ ಮತ್ತು ಸಮಯ 09.12.2022 ಬೆಳಗ್ಗೆ 10:30 ಗಂಟೆಗೆ,** ಆಸ್ತಿ ಅಧಿಕಾರಿಗಳ ಕಛೇರಿಯ ಟೆಂಡರ್ ಕಮಿಟಿ ಕೊಠಡಿಯಲ್ಲಿ ನಡೆಯುತ್ತದೆ. ಬೆಂಗಳೂರು ಕೃಷಿ ವಿಶ್ವ ವಿದ್ಯಾನಿಲಯವು ಯಾವುದೇ ಕಾರಣ ನೀಡದೆ ಟೆಂಡರ್‌ಗಳನ್ನು ಮುಂದೂಡುವ, ತಿರಸ್ಕರಿಸುವ ಅಥವಾ ಅಂಗೀಕರಿಸುವ ಅಧಿಕಾರವನ್ನು ಹೊಂದಿರುತ್ತದೆ. ಹೆಚ್ಚಿನ ಮಾಹಿತಿಗಾಗಿ **www.uasbangalore.edu.in** ಅಥವಾ **www.eproc.karnataka.gov.in** ಮತ್ತು ಇ–ಪ್ರೊಕ್ಯೂರ್‌ಮೆಂಟ್ ಸಹಾಯವಾಣಿ ಸಂಖ್ಯೆ: 91–8046010000, +91–8068948777 ಮತ್ತು ಸರಕು ಖರೀದಿ ಅಧಿಕಾರಿಗಳು, ಯು.ಎ.ಎಸ್. ಜಿ.ಕೆ.ವಿ.ಕೆ., ಬೆಂಗಳೂರು–560065. ದೂರವಾಣಿ ಸಂಖ್ಯೆ: 080–23630128 ಸಂಪರ್ಕಿಸಿ.

ಸಹಿ/– ಆಸ್ತಿ ಅಧಿಕಾರಿಗಳು.
ವಾಸಾಸಂಇ/ವಾಪ್ರ/ಜಿಎ/3248/2022–23

ಅಬಕಾರಿ ಆಯುಕ್ತರ ಕಛೇರಿ,
ರಾಜ್ಯ ಅಬಕಾರಿ ಇಲಾಖೆ
2ನೇ ಮಹಡಿ, ಟಿಟಿಎಂಸಿ ಕಟ್ಟಡ, 'ಎ'ಬ್ಲಾಕ್, ಬಿಎಂಟಿಸಿ, ಶಾಂತಿನಗರ, ಬೆಂಗಳೂರು–560 027.
ಸಂಖ್ಯೆ: ಇಸಿಡಿ/71/ಲೇಬಲ್/2011–2002(ಭಾಗ–5) ದಿನಾಂಕ: 17.11.2022

ಇ–ಟೆಂಡರ್ ಪ್ರಕಟಣೆ (ದ್ವಿ–ಲಕೋಟೆ ಪದ್ಧತಿ)

ಅಬಕಾರಿ ಭದ್ರತಾ ಚೀಟಿಗಳ ಮುದ್ರಣ ಮತ್ತು ಸರಬರಾಜಿಗೆ ಟೆಂಡರ್ ಕರ್ನಾಟಕ ರಾಜ್ಯ ಸರ್ಕಾರದ ಪರವಾಗಿ, ಅಪರ ಆಯುಕ್ತರು (ಕೇಂದ್ರಸ್ಥಾನ ಮತ್ತು ತಪಾಸಣೆ), ಅಬಕಾರಿ ಆಯುಕ್ತರ ಕಛೇರಿ, ಬೆಂಗಳೂರು ರವರು ಕೆಟಿಪಿಪಿ ಕಾಯ್ದೆ ಮತ್ತು ನಿಯಮ 1999 ರನ್ವಯ ಅರ್ಹ ಉತ್ಪಾದಕರಿಂದ ದ್ವಿ–ಲಕೋಟೆ ಬಿಡ್ ಪದ್ಧತಿಯನ್ವಯ ಟೆಂಡರ್ ದಾಖಲೆಯಲ್ಲಿ ತಿಳಿಸಿರುವ ವೈಶಿಷ್ಟ್ಯತೆ ಒಳಗೊಂಡಂತಹ Paper Based ಅಬಕಾರಿ ಭದ್ರತಾ ಚೀಟಿಗಳನ್ನು ಮೂರು ವರ್ಷಗಳ ಅವಧಿಗೆ ಉತ್ಪಾದಿಸಿ ಸರಬರಾಜು ಮಾಡಲು ಅಬಕಾರಿ ಆಯುಕ್ತರು, ರಾಜ್ಯ ಅಬಕಾರಿ ಇಲಾಖೆ, ಕರ್ನಾಟಕ ಸರ್ಕಾರ ನೇಮಿಸಿದ ಆವರಣದಲ್ಲಿ ಎಲ್ಲಾ ಅಗತ್ಯ ಮೂಲ ಸೌಕರ್ಯಗಳನ್ನು ಸ್ಥಾಪಿಸುವ ಮೂಲಕ ಟೆಂಡರ್ ದಾಖಲೆಯಲ್ಲಿ ತಿಳಿಸಲಾದ ಅವಶ್ಯಕತೆಗಳ ವಿಶೇಷತೆಗಳ ಮತ್ತು ವೇಳಾಪಟ್ಟಿಗಳ ಪ್ರಕಾರ ಇ–ಟೆಂಡರನ್ನು ಆಹ್ವಾನಿಸಲಾಗಿದೆ. ಟೆಂಡರ್ ಶುಲ್ಕ ಮತ್ತು ಇ.ಎಂ.ಡಿ. ಮೊತ್ತದ ವಿವರಗಳು ಇ–ಸಂಗ್ರಹಣಾ ಪೋರ್ಟಲ್ ಪ್ರಕಾರವಾಗಿರುತ್ತದೆ. ಇ–ಟೆಂಡರ್ ವೆಬ್‌ಸೈಟ್ **https://eproc.karnataka.gov.in** ನಲ್ಲಿ ಟೆಂಡರ್ ದಾಖಲೆಯನ್ನು ಡೌನ್‌ಲೋಡ್ ಮಾಡಿಕೊಳ್ಳತಕ್ಕದ್ದು, ಬಿಡ್‌ದಾರರು ಆನ್‌ಲೈನ್ ಮೂಲಕ **ದಿನಾಂಕ:17.12.2022, ಸಂಜೆ: 5.30 ಗಂಟೆಯೊಳಗೆ** ಸಲ್ಲಿಸತಕ್ಕದ್ದು, ತಾಂತ್ರಿಕ ಬಿಡ್‌ನ್ನು ಆನ್‌ಲೈನ್ ಮೂಲಕ **ದಿನಾಂಕ: 19.12.2022** ರಂದು **ಬೆಳಿಗ್ಗೆ 11.00 ಗಂಟೆಗೆ** ತೆರೆಯಲಾಗುತ್ತದೆ. ಹೆಚ್ಚಿನ ವಿವರ ಹಾಗೂ ಯಾವುದೇ ಸ್ಪಷ್ಟೀಕರಣಕ್ಕಾಗಿ ಮೇಲಿನ ಕಛೇರಿ ವಿಳಾಸವನ್ನು ಸಂಪರ್ಕಿಸಬಹುದಾಗಿದೆ.

ಸಹಿ/–
ಅಪರ ಆಯುಕ್ತರು (ಕೇಂದ್ರಸ್ಥಾನ ಮತ್ತು ತಪಾಸಣೆ) ಹಾಗೂ ಟೆಂಡರ್ ಆಹ್ವಾನಿಸುವ ಪ್ರಾಧಿಕಾರ
ವಾಸಾಸಂಇ/ವಾಪ್ರ/ಜಿಎ/3229/2022–23

ಕರ್ನಾಟಕ ಸರ್ಕಾರ
ಕಾರ್ಯನಿರ್ವಾಹಕ ಇಂಜಿನೀಯರರು, ಸಣ್ಣ ನೀರಾವರಿ ಮತ್ತು ಅಂತರ್ಜಲ ಅಭಿವೃದ್ಧಿ ಇಲಾಖೆ ವಿಭಾಗ, ಧಾರವಾಡ

ಉಲ್ಲೇಖ : ಈ ಕಚೇರಿಯ ಟೆಂಡರ್ ಪ್ರಕಟಣೆ ಸಂಖ್ಯೆ 36/2022–23 ದಿನಾಂಕ : 24.11.2022

ಕರ್ನಾಟಕ ಲೋಕೋಪಯೋಗಿ ಹಾಗೂ ಜಲಸಂಪನ್ಮೂಲ ಇಲಾಖೆಗಳಲ್ಲಿ ನೊಂದಾಯಿಸಿ ನವೀಕರಿಸಿಕೊಂಡಿರುವ ಅರ್ಹ ಗುತ್ತಿಗೆದಾರರಿಂದ ಐಟಂ ದರದಲ್ಲಿ ಕರ್ನಾಟಕ ಸಾರ್ವಜನಿಕ ಸಂಗ್ರಹಣೆಯಲ್ಲಿ ಪಾರದರ್ಶಕತೆ ಅಧಿನಿಯಮ–2000 ಮತ್ತು ಇತ್ತೀಚಿನ ತಿದ್ದುಪಡಿಗಳಂತೆ ಈ ವಿಭಾಗ ಕಛೇರಿಯಡಿ ಬರುವ **ರಾಣೆಬೆನ್ನೂರು** ಉಪವಿಭಾಗದ ಈ ಕೆಳಗಿನ ಕಾಮಗಾರಿಯನ್ನು **ಕೆ.ಡಬ್ಲ್ಯು–3&4** (ದ್ವಿ ಲಕೋಟೆ) ಪದ್ಧತಿಯಲ್ಲಿ **"ಇ–ಪ್ರೊಕ್ಯೂರ್‌ಮೆಂಟ್"** ಮುಖಾಂತರ ಟೆಂಡರ್ ಕರೆಯಲಾಗಿದೆ. **ಲೆಕ್ಕ ಶೀರ್ಷಿಕೆ: 4702–ಕೆರೆಗಳ ಆಧುನೀಕರಣ–ಪ್ರಧಾನ ಕಾಮಗಾರಿಗಳು (ಒಟ್ಟು 05 ಕಾಮಗಾರಿಗಳು)**; ಟೆಂಡರ್‌ಗೆ ಇಡಲಾದ ಗರಿಷ್ಠ ಅಂದಾಜು ಮೊತ್ತ ರೂ. **300.00** ಲಕ್ಷಗಳು ಹಾಗೂ ಗರಿಷ್ಠ ಇ.ಎಂ.ಡಿ ಮೊತ್ತ ರೂ: **3.80** ಲಕ್ಷಗಳು ಹಾಗೂ ಕನಿಷ್ಠ ಅಂದಾಜು ಮೊತ್ತ ರೂ. **55.00** ಲಕ್ಷಗಳು ಹಾಗೂ ಕನಿಷ್ಠ ಇ.ಎಂ.ಡಿ ಮೊತ್ತ ರೂ: **0.89** ಲಕ್ಷಗಳು ಖಾಲಿ ಟೆಂಡರ್ ಫಾರಂಗಳನ್ನು ಇ–ಪ್ರೊಕ್ಯೂರ್‌ಮೆಂಟ್‌ನ ವೆಬ್‌ಸೈಟ್ ವಿಳಾಸ : **http://eproc.karnataka.gov.in** ನಲ್ಲಿ ದಿನಾಂಕ : **25/11/2022** ರ ನಂತರದಿಂದ ಡೌನಲೋಡ್ ಮಾಡಿಕೊಳ್ಳುವುದು. ಟೆಂಡರ್ ಕುರಿತಂತೆ ಅನುಮಾನಗಳಿದ್ದರೆ ಕಛೇರಿ ಅಥವಾ ಇ–ಪ್ರೊಕ್ಯೂರ್‌ಮೆಂಟ್‌ನಲ್ಲಿ ಸಂಪರ್ಕಿಸಿ ಪರಿಹರಿಸಿಕೊಳ್ಳಬಹುದಾಗಿದೆ. ಟೆಂಡರ್‌ಗಳನ್ನು ದಿನಾಂಕ : **12.12.2022** ರ 17.30 ಗಂಟೆಯವರೆಗೆ ಸ್ವೀಕರಿಸಲಾಗುವುದು. ಕಾಮಗಾರಿಗಳ ತಾಂತ್ರಿಕ/ಆರ್ಥಿಕ ಬಿಡ್‌ನ್ನು ದಿನಾಂಕ : **13.12.2022** ಸಂಜೆ 17.45 ಗಂಟೆಗೆ ತೆರೆಯಲಾಗುವುದು ಹಾಗೂ ಕಾಮಗಾರಿಯ ಆರ್ಥಿಕ ಬಿಡ್‌ನ್ನು ಸಕ್ಷಮ ಪ್ರಾಧಿಕಾರದಿಂದ ಅನುಮೋದನೆ ದೊರೆತ ನಂತರ ತೆರೆಯಲಾಗುವುದು.

ವಿ.ಸೂ : ಸದರಿ ಟೆಂಡರ್ ಪ್ರಕಟಣೆಗೆ ಸಂಬಂಧಿಸಿದಂತೆ ಯಾವುದೇ ತಿದ್ದುಪಡಿ/ಸೇರ್ಪಡೆ, ದಿನಾಂಕಗಳ ಬದಲಾವಣೆ, ಇನ್ನಿತರೆ ಯಾವುದೇ, ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್‌ನಲ್ಲಿ ಮಾತ್ರವೇ ಪ್ರಕಟಿಸಲಾಗುವುದು.

ಸಹಿ/– ಕಾರ್ಯನಿರ್ವಾಹಕ ಇಂಜಿನೀಯರರು, ಸಣ್ಣ ನೀರಾವರಿ & ಅಂತರ್ಜಲ ಅಭಿವೃದ್ಧಿ ವಿಭಾಗ, ಧಾರವಾಡ.
ವಾಸಾಸಂಇ/ಹಾವೇರಿ/ಎಂ.ಸಿ.ಎ/388/2022–23

ಕೃಷಿ ಉತ್ಪನ್ನ ಮಾರುಕಟ್ಟೆ ಸಮಿತಿ, ಅರಸೀಕೆರೆ
ಸಂಖ್ಯೆ : ಕೃಉಮಾಸ/ಅರಸೀಕೆರೆ/1275/2022–23 ದಿನಾಂಕ: 22/11/2022

ಟೆಂಡರ್ ಪ್ರಕಟಣೆ (ಇ–ಪ್ರೊಕ್ಯೂರ್‌ಮೆಂಟ್ ಮೂಲಕ)

2022–23 ನೇ ಸಾಲಿಗಾಗಿ ಅರಸೀಕೆರೆ ಕೃಷಿ ಉತ್ಪನ್ನ ಮಾರುಕಟ್ಟೆ ಸಮಿತಿಯ ಮುಖ್ಯ ಮಾರುಕಟ್ಟೆ ಪ್ರಾಂಗಣದಲ್ಲಿ ಹಾಗೂ ಜಾವಗಲ್, ಗಂಡಸಿ, ಜೆ.ಸಿ. ಪುರ ಉಪ ಮಾರುಕಟ್ಟೆ ಪ್ರಾಂಗಣಗಳಲ್ಲಿ ಭದ್ರತಾ/ ಸ್ವಚ್ಛತಾ ಸೇವೆಗಾಗಿ ಭದ್ರತಾ ಸಂಸ್ಥೆಯು ಕರ್ನಾಟಕ ಖಾಸಗಿ ಭದ್ರತಾ ಏಜೆನ್ಸಿ ನಿಯಮ 2008 (The Karnataka Private Security Agencies Rules 2008) ರನ್ವಯ ಸಂಬಂಧಪಟ್ಟ ಇಲಾಖೆಯಿಂದ ಲೈಸೆನ್ಸ್ ಪಡೆದಿರುವ ಹಾಗೂ ಕಾರ್ಮಿಕ ಇಲಾಖೆಯಲ್ಲಿ ನೊಂದಾಯಿತ ಅರ್ಹ ಗುತ್ತಿಗೆದಾರರಿಂದ/ ಸಂಸ್ಥೆಗಳಿಂದ ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್ http://eproc.karnataka.gov.in ಮೂಲಕ ಟೆಂಡರ್‌ಗಳನ್ನು ಏಕ ಲಕೋಟೆ ಪದ್ಧತಿಯಲ್ಲಿ ಆಹ್ವಾನಿಸಲಾಗಿದೆ. 1) ಭರ್ತಿ ಮಾಡಿದ ಇ–ಟೆಂಡರ್ ಸ್ವೀಕರಿಸಲು ಕೊನೆಯ ದಿನಾಂಕ: 26/12/2022 ಸಂಜೆ 4–00 ಗಂಟೆವರೆಗೆ. 2) ಇ–ಟೆಂಡರ್ ಗಳನ್ನು ತೆರೆಯುವ ದಿನಾಂಕ: 27/12/2022 ಸಂಜೆ 4–00 ಗಂಟೆಗೆ ಒಂದು ವೇಳೆ ಸದರಿ ದಿನಾಂಕಗಳಂದು ಸಾರ್ವತ್ರಿಕ ರಜೆ ಘೋಷಣೆ ಆದಲ್ಲಿ ಕಾರ್ಯಾಲಯದ ಮುಂದಿನ ಕೆಲಸದ ದಿನ ಸಿಂಧುವಾಗಿರುತ್ತದೆ. ಕ್ರ.ಸಂ. 1.ಕೆಲಸದ ಹೆಸರು: ಹೊರಗುತ್ತಿಗೆ ಆಧಾರದ ಮೇಲೆ ಭದ್ರತಾ/ ಸ್ವಚ್ಛತಾ ಸಿಬ್ಬಂದಿ ಪೂರೈಸುವುದು. ಪೂರೈಸಬೇಕಾದ ಸಿಬ್ಬಂದಿ ಸಂಖ್ಯೆ: 16 ಇ.ಎಂ.ಡಿ ಮೊತ್ತ ರೂ. 1,00,000=00 ಖಾಲಿ ಟೆಂಡರ್ ಫಾರಂ ಬೆಲೆ e-portal ನಿಯಮ ಗಳನ್ವಯ ವಿವರ: ಬೆರಳಚ್ಚುಗಾರರು/ಕಂಪ್ಯೂಟರ್ ಆಪರೇಟರ್ –01. ಡಾಟಾ ಎಂಟ್ರಿ ಅಪರೇಟರ್–02, ವಾಹನ ಚಾಲಕರು–02, ಭದ್ರತಾ ಕಾವಲುಗಾರರು–08 ಸ್ವಚ್ಛತಾ ಸಿಬ್ಬಂದಿ – 03 ಟೆಂಡರ್ ಪ್ರೊಸೆಸ್ಸಿಂಗ್ ಫೀ ಇ–ಪೋರ್ಟಲ್‌ನ ನಿಯಮಗಳನ್ವಯ ಇದ್ದು, ಟೆಂಡರ್ ಷರತ್ತುಗಳು ಹಾಗೂ ನಿಬಂಧನೆಗಳು ಇ–ಪೋರ್ಟಲ್‌ನಲ್ಲಿ ನಮೂದಿಸಿರುವಂತೆ ಇದ್ದು, ಹೆಚ್ಚಿನ ಮಾಹಿತಿಯನ್ನು ರಜಾ ದಿನಗಳನ್ನು ಹೊರತುಪಡಿಸಿ, ಕಛೇರಿ ವೇಳೆಯಲ್ಲಿ ಕಛೇರಿಯಿಂದ ಅಥವಾ http://eproc.karnataka.gov.in ವೆಬ್‌ಸೈಟ್‌ನಲ್ಲಿ ಪಡೆಯಬಹುದಾಗಿದೆ. ಇ–ಪ್ರೊಕ್ಯೂರ್‌ಮೆಂಟ್ ಟೆಂಡರ್‌ನಲ್ಲಿ ಭಾಗವಹಿಸಲು ನೊಂದಾಯಿಸುವ ಬಗ್ಗೆ ಸಹಾಯವಾಣಿ ದೂರವಾಣಿ ಸಂಖ್ಯೆ +91–8046010000, +91–8068948777 ಅಥವಾ ಕಛೇರಿ ದೂರವಾಣಿ ಸಂಖ್ಯೆ 08174–232203 ನ್ನು ಸಂಪರ್ಕಿಸಬಹುದು.

ಸಹಿ/–(ಸಿ.ಎಲ್. ಸಿದ್ದರಂಗಸ್ವಾಮಿ) ಕಾರ್ಯದರ್ಶಿ, ಕೃ.ಉ.ಮಾ.ಸ, ಅರಸೀಕೆರೆ.
ಸಹಿ/– (ವಿಭಾ ವಿದ್ಯಾ ರಾಥೋಡ್) ಆಡಳಿತಾಧಿಕಾರಿಗಳು, ಕೃ.ಉ.ಮಾ.ಸ, ಅರಸೀಕೆರೆ.
ವಾಸಾಸಂಇ/ಹಿಸನಿ/ಹಾಸನ/ಎಂಸಿಎ/774/2022–23

ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ
ಕಾರ್ಯಪಾಲಕ ಅಭಿಯಂತರರ ಕಛೇರಿ, ಪದ್ಮನಾಭ ನಗರ ವಿಭಾಗ, ಬೃ.ಬೆಂ.ಮ.ಪಾಲಿಕೆ ಕುಮಾರಸ್ವಾಮಿ ಬಡಾವಣೆ, ಸಾಗರ್ ಆಸ್ಪತ್ರೆ, ಎದುರು, ಬೆಂಗಳೂರು–560 078.
ಸಂ: ಕಾಪಾಅ(ಪನ)/ಟೆಂಡರ್/12/2022–23 ದಿನಾಂಕ: 25.11.2022

ಟೆಂಡರ್ ಪ್ರಕಟಣೆ
(ಜಿಒಕೆ ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮೂಲಕ ಮಾತ್ರ) (ಏಕ ಮತ್ತು ದ್ವಿ–ಲಕೋಟೆ ಪದ್ಧತಿ)

ಕಾರ್ಯಪಾಲಕ ಅಭಿಯಂತರರು, ಪದ್ಮನಾಭನಗರ ವಿಭಾಗ, ಇವರು ಅರ್ಹ ನೋಂದಾಯಿತ ಗುತ್ತಿಗೆದಾರರಿಂದ ಕೆಳಕಂಡ ವಿವಿಧ ಕಾಮಗಾರಿಗಳಿಗೆ ಐಟಂ ದರದ ಟೆಂಡರ್‌ಗಳನ್ನು ಆಹ್ವಾನಿಸಿದ್ದಾರೆ.

ಕ್ರ. ಸಂ.	ವಾರ್ಡ್ ನಂ.	ಅಂದಾಜು ಮೊತ್ತ (ರೂ. ಲಕ್ಷಗಳಲ್ಲಿ)	ಇಎಂಡಿ ಮೊತ್ತ (ರೂಗಳಲ್ಲಿ)	ಕಾಮಗಾರಿಗಳ ಸಂಖ್ಯೆ
ಸಾಮಾನ್ಯ ಪ್ರವರ್ಗಕ್ಕೆ :				
1	201	10.00 to 60.00	25,000/- to 1,20,000/-	9
2	202	10.00 to 55.00	25,000/- to 1,10,000/-	10
3	203	10.00 to 32.00	25,000/- to 64,000/-	7
4	204	10.00 to 40.00	25,000/- to 80,000/-	9
5	205	10.00 to 57.00	25,000/- to 1,14,000/-	7
6	206	15.00 to 100.00	37,500/- to 2,00,000/-	4
7	207	10.00 to 82.00	25,000/- to 1,64,000/-	6
8	208	10.00 to 55.00	25,000/- to 1,10,000/-	7
9	209	10.00 to 75.00	25,000/- to 1,50,000/-	7
10	Division	110.00 to 500.00	2,00,000/- to 7,50,000/-	2
ಪರಿಶಿಷ್ಟ ಜಾತಿ ಪ್ರವರ್ಗಕ್ಕೆ :				
11	202	20.00	25,000/-	1
12	203	20.00 to 30.00	25,000/- to 30,000/-	3
13	204	15.00	18,750/-	1
14	205	10.00	12,500/-	1
15	206	30.00 to 35.00	30,000/- to 35,000/-	2
16	207	10.00	12,500/-	1
17	208	47.00	58,750/-	1
ಪರಿಶಿಷ್ಟ ಪಂಗಡ ಪ್ರವರ್ಗಕ್ಕೆ :				
18	201	15.00	18,750/-	1
19	203	20.00	25,000/-	2
20	206	10.00	12,500/-	1
21	208	10.00	12,500/-	1
22	209	15.00	18,750/-	1
			ಒಟ್ಟು ಕಾಮಗಾರಿಗಳ ಸಂಖ್ಯೆ	84

1) ಟೆಂಡರ್ ಡಾಕ್ಯುಮೆಂಟ್‌ಗಳನ್ನು ಜಿಓಕೆ ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್ **https://eproc.karnataka.gov.in** ಮುಖಾಂತರ ಡೌನ್‌ಲೋಡ್ ಮಾಡಿಕೊಳ್ಳಬಹುದು. 2) ಪ್ರೀ–ಬಿಡ್ ಮೀಟಿಂಗ್ (ಕ್ರ.ಸಂ. 69 ರಿಂದ 84 ಮಾತ್ರ) : **20.12.2022 ರ ಸಂಜೆ 3.00 ಗಂಟೆಗೆ.** 3) ಟೆಂಡರ್‌ಗಳನ್ನು ಅಪ್‌ಲೋಡ್ ಮಾಡಲು ಕೊನೆಯ ದಿನಾಂಕ : **26.12.2022 ರ ಸಂಜೆ 4.00 ಗಂಟೆಯವರೆಗೆ** 4) ಆರ್ಥಿಕ ಬಿಡ್‌ಗಳನ್ನು ತೆರೆಯುವ ದಿನಾಂಕ (ಕ್ರ.ಸಂ. 69 ರಿಂದ 84 ಹೊರತುಪಡಿಸಿ) : **27.12.2022 ರ ಸಂಜೆ 4.30 ಗಂಟೆಗೆ.** 5) ತಾಂತ್ರಿಕ ಬಿಡ್‌ಗಳನ್ನು ತೆರೆಯುವ ದಿನಾಂಕ (ಕ್ರ.ಸಂ. 69 ರಿಂದ 84 ಮಾತ್ರ) : **27.12.2022 ರ ಸಂಜೆ 4.30 ಗಂಟೆಗೆ.** ಹೆಚ್ಚಿನ ಮಾಹಿತಿಗಾಗಿ ಮೇಲ್ಕಂಡ ಕಛೇರಿಯಲ್ಲಿ ಕಛೇರಿಯ ಸಮಯದಲ್ಲಿ ಹಾಗೂ ವೆಬ್‌ಸೈಟ್: **www.eproc.karnataka.gov.in** ನಲ್ಲಿ ಲಾಗಿನ್ ಮಾಡಿ ಪಡೆಯಬಹುದು.

ಸಹಿ/– ಕಾರ್ಯಪಾಲಕ ಅಭಿಯಂತರರು, ಪದ್ಮನಾಭನಗರ ವಿಭಾಗ.

ಕೃಷ್ಣಾ ಭಾಗ್ಯ ಜಲ ನಿಗಮ ನಿಯಮಿತ
(ಕರ್ನಾಟಕ ಸರಕಾರದ ಅಧೀನಕ್ಕೆ ಒಳಪಟ್ಟಿದೆ)
ಕಾರ್ಯನಿರ್ವಾಹಕ ಅಭಿಯಂತರವರ ಕಛೇರಿ, ಕೃಭಾಜನಿನಿ, ಐಬಿಸಿ, ನಿಮಪೋ ವಿಭಾಗ, ರಾಂಪೂರ (ಪ.ಅ), ತಾ: ಸಿಂದಗಿ, ಜಿ: ವಿಜಯಪುರ.
CIN L 85320 KA 1994 SGC 016101 ದೂರವಾಣಿ ಸಂಖ್ಯೆ: 08488–224328,
ಇ–ಮೇಲ್:kbjnleerampur@gmail.com.
ಸಂ:ಕೃಭಾಜನಿನಿ/ಐಬಿಸಿ/ನಿಮಪೋ/ವಿರಾಂ/ಪಿಬಿ–2/2022–23/1879 ದಿನಾಂಕ:24.11.2022

ಅಲ್ಪಾವಧಿ ಟೆಂಡರ್ ಪ್ರಕಟಣೆ
(ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮುಖಾಂತರ ಮಾತ್ರ)

ಮಾನ್ಯ ವ್ಯವಸ್ಥಾಪಕ ನಿರ್ದೇಶಕರು ಕೃಷ್ಣಾ ಭಾಗ್ಯ ಜಲ ನಿಗಮ ನಿಯಮಿತ ಪರವಾಗಿ ಕಾರ್ಯಪಾಲಕ ಅಭಿಯಂತರರು ಕೃಭಾಜನಿನಿ ಐಬಿಸಿ ನಿಮಪೋ ವಿಭಾಗ, ರಾಂಪೂರ (ಪ.ಅ) ಇವರು ಕರ್ನಾಟಕ ಸರ್ಕಾರದ ಇ–ಪ್ರೊಕ್ಯೂರಮೆಂಟ್ ಪೋರ್ಟಲ್‌ನಲ್ಲಿ 2022–23 ನೇ ಸಾಲಿನ ಯೋಜನೆಯಡಿಯಲ್ಲಿ ಅನುಮೋದನೆಗೊಂಡಿರುವ ಒಟ್ಟು 02 ಕ್ಲೋಜರ್(Call–3) ಕಾಮಗಾರಿಗೆ ರೂ: 145.06 ಲಕ್ಷಗಳಿಗೆ ಕರ್ನಾಟಕ ಸರ್ಕಾರದ ಲೋಕೋಪಯೋಗಿ ಇಲಾಖೆಯಲ್ಲಿ ನೊಂದಾಯಿಸಲ್ಪಟ್ಟ ಅರ್ಹ ಪ್ರಥಮ ದರ್ಜೆ ಮತ್ತು ಮೇಲ್ಪಟ್ಟ ದರ್ಜೆಯ ಗುತ್ತಿಗೆದಾರರಿಂದ ಶೇಕಡಾವಾರು ದರದ ಟೆಂಡರನ್ನು ದ್ವಿ–ಲಕೋಟೆ ಪದ್ಧತಿಯ ಮೂಲಕ ಮರು ಟೆಂಡರನ್ನು ಆಹ್ವಾನಿಸಲಾಗಿದೆ. ಹೆಚ್ಚಿನ ವಿವರಗಳಿಗೆ ಆನ್‌ಲೈನ ಮೂಲಕ ವೆಬ್ ಸೈಟ್ (http://eproc.karnataka.gov.in) ಮಾಹಿತಿ ಖಚಿತಪಡಿಸಿಕೊಂಡು ಟೆಂಡರಿನಲ್ಲಿ ಭಾಗವಹಿಸಬಹುದು.

1) ಇ–ಪ್ರೊಕ್ಯೂರ್‌ಮೆಂಟ್ (http://eproc.karnataka.gov.in) ವೆಬ್‌ಸೈಟ್ ನಿಂದ ಖಾಲಿ ಟೆಂಡರ್ ಬಿಡ್ ದಾಖಲೆಗಳನ್ನು ಡೌನ್‌ಲೋಡ್ ಮಾಡಿಕೊಳ್ಳುವುದು ಮತ್ತು ಭರ್ತಿ ಮಾಡಿದ ಬಿಡ್ ದಾಖಲೆಗಳನ್ನು ಸಲ್ಲಿಸುವ **ದಿನಾಂಕ: 25.11.2022** ರಿಂದ **03.12.2022** ರ ಸಾಯಂಕಾಲ 5.00 ಗಂಟೆಯವರೆಗೆ ಸಲ್ಲಿಸುವುದು.
2) ಗುತ್ತಿಗೆದಾರರು **ದಿನಾಂಕ:03.12.2022**ರ ಸಾಯಂಕಾಲ 5.00 ಘಂಟೆಯವರೆಗೆ ಇ–ಟೆಂಡರ ಪುಸ್ತಕವನ್ನು Access ಮಾಡಬಹುದು.
3) ಕವರ್–1 (ತಾಂತ್ರಿಕ ಬಿಡ್) ಏಕಮಾತ್ರ ಲಕೋಟೆಯನ್ನು ಕಾರ್ಯನಿರ್ವಾಹಕ ಅಭಿಯಂತರರು, ಕೃಭಾಜನಿನಿ. ಐಬಿಸಿ ನಿಮಪೋ ವಿಭಾಗ ರಾಂಪೂರ (ಪಿಎ) ತಾ: ಸಿಂದಗಿ ಜಿಲ್ಲೆ: ವಿಜಯಪೂರ ಕಛೇರಿಯಲ್ಲಿ **ದಿನಾಂಕ: 06.12.2022** ರ ಬೆಳಿಗ್ಗೆ 11.00 ಘಂಟೆಗೆ ತೆರೆಯಲಾಗುವದು.
4) ಹೆಚ್ಚಿನ ಮಾಹಿತಿಗಾಗಿ ಕಾರ್ಯಪಾಲಕ ಅಭಿಯಂತರರು ಕೃಭಾಜನಿನಿ ಐಬಿಸಿ ನಿಮಪೋ ವಿಭಾಗ ರಾಂಪೂರ (ಪ.ಅ) ಕಚೇರಿ ವೇಳೆಯಲ್ಲಿ ಪಡೆಯಬಹುದು ಅಥವಾ (http://eproc.karnataka.gov.in) ವೆಬ್‌ಸೈಟ್ ನಿಂದ ಪಡೆಯಬಹುದು.
5) ಮೇಲ್ಕಂಡ ದಿನಾಂಕಗಳಂದು ಸರ್ಕಾರಿ ರಜೆ ಘೋಷಣೆಯಾದಲ್ಲಿ ಅದರ ಮುಂದಿನ ಕೆಲಸದ ದಿನಾಂಕವನ್ನು ಪರಿಗಣಿಸುವುದು.
6) ಯಾವುದೇ ಕಾರಣ ನೀಡದೇ ಟೆಂಡರನ್ನು ಸ್ವೀಕರಿಸುವ ಅಥವಾ ತಿರಸ್ಕರಿಸುವ ಅಧಿಕಾರವನ್ನು ಈ ಕೆಳಗೆ ಸಹಿ ಮಾಡಿದ ಅಧಿಕಾರಿಗಳು ಹೊಂದಿರುತ್ತಾರೆ.

ಸಹಿ/– ಕಾರ್ಯನಿರ್ವಾಹಕ ಅಭಿಯಂತರರು, ಕೃಭಾಜನಿನಿ, ಐಬಿಸಿ ನಿಮಪೋ ವಿಭಾಗ ರಾಂಪೂರ (ಪಅ)
ವಾಸಾಸಂಇ/ವಿಜಯಪುರ/610/ಎಂಸಿಎ/2022–23

ನಗರಸಭಾ ಕಾರ್ಯಾಲಯ, ಮಂಡ್ಯ.
ಸಂಖ್ಯೆ:ನಸಮಂ/ಕಾಮಗಾರಿ ವಿಭಾಗ/ಟೆಂಡರ್–57/2022–23
ದಿನಾಂಕ: 22–11–2022

ಇ–ಪ್ರೊಕ್ಯೂರ್‌ಮೆಂಟ್ ಟೆಂಡರ್ ಪ್ರಕಟಣೆ

ಮಂಡ್ಯ ನಗರಸಭೆ ವ್ಯಾಪ್ತಿಯಲ್ಲಿ 2022–23ನೇ ಸಾಲಿನ ನಗರಸಭೆಯ ನಿಧಿ ಮತ್ತು 2022–23ನೇ ಸಾಲಿನ 15ನೇ ಹಣಕಾಸು ಯೋಜನೆ ಅಡಿಯಲ್ಲಿ ಕೆಳಕಂಡ ಕಾಮಗಾರಿಯನ್ನು ಕೈಗೊಳ್ಳಲು **KTTP Act -1999** & 2000 ದಂತೆ, ಲೋಕೋಪಯೋಗಿ ಇಲಾಖೆಯಲ್ಲಿ ಮತ್ತು ಇ–ಪ್ರೊಕ್ಯೂರ್‌ಮೆಂಟ್, ಬೆಂಗಳೂರುರವರಲ್ಲಿ ನೋಂದಾಯಿತ ಅರ್ಹ ಗುತ್ತಿಗೆದಾರರುಗಳಿಂದ ಇ–ಪೋರ್ಟಲ್ ಮುಖಾಂತರ ಟೆಂಡರ್‌ನ್ನು KW-1, KG-2 ರ ದಾಸ್ತಾವೇಜು ಮೂಲಕ ಆಹ್ವಾನಿಸಲಾಗಿದ್ದು, ಆಸಕ್ತ ಗುತ್ತಿಗೆದಾರರು ಟೆಂಡರ್‌ಗಳನ್ನು ನಿಗಧಿಪಡಿಸಿದ ಅವಧಿಯೊಳಗೆ ಸಲ್ಲಿಸತಕ್ಕದ್ದು. ಕಾಮಗಾರಿಯ ವಿವರ ಹಾಗೂ ಟೆಂಡರ್ ಪ್ರಕಟಣೆ ವಿವರಗಳನ್ನು ಜಿಲ್ಲಾ ನಗರಾಭಿವೃದ್ಧಿಕೋಶ ಹಾಗೂ ನಗರಸಭೆ, ಮಂಡ್ಯ ಕಛೇರಿ ಸೂಚನಾ ಫಲಕದಲ್ಲಿ ಮತ್ತು ವೆಬ್‌ಸೈಟ್ **www.mandyacity.mrc.gov.in** ನಲ್ಲಿ ವೀಕ್ಷಿಸಬಹುದು. **Visit: https://www.eproc.karnataka.gov.in/** (1) ಆನ್‌ಲೈನ್‌ನಲ್ಲಿ ಟೆಂಡರ್ ಸಲ್ಲಿಸುವ ಕೊನೆಯ ದಿನಾಂಕ : **07.12.2022 at 5.00 pm or any other convenient date notified later.** (2) ಆನ್‌ಲೈನ್‌ನಲ್ಲಿ ಟೆಂಡರ್ ತೆರೆಯುವ ದಿನಾಂಕ : **08.12.2022 at 05.30 pm or any other convenient date notified later.** (3) ಟೆಂಡರ್ ಫಾರಂ ಬೆಲೆ ರೂ.ಗಳಲ್ಲಿ : **ಇ–ಪೋರ್ಟಲ್ ನಲ್ಲಿರುವಂತೆ.** (4) ಕಾಮಗಾರಿ ಪೂರ್ಣಗೊಳಿಸುವ ಅವಧಿ **:60 ದಿನಗಳು (ಮಳೆಗಾಲ ಹೊರತುಪಡಿಸಿ)**

ಕ್ರ. ಸಂ : **01**. ಇಂಡೆಂಟ್ ಸಂಖ್ಯೆ : **DMA/2022-23/RD/WORK_INDENT142265.** ಅಂದಾಜು ಮೊತ್ತ (ರೂ. ಲಕ್ಷಗಳಲ್ಲಿ) : **9.73.** ಟೆಂಡರ್‌ಗಿಟ್ಟ ಮೊತ್ತ (ರೂ. ಲಕ್ಷಗಳಲ್ಲಿ) : **8.24.** ಇ.ಎಂ.ಡಿ. ಮೊತ್ತ (ರೂ.ಗಳಲ್ಲಿ) : **20,700/–.** ಗುತ್ತಿಗೆದಾರರ ದರ್ಜೆ : 4ನೇ ದರ್ಜೆ ಹಾಗೂ ಮೇಲ್ಪಟ್ಟ (ಸಿವಿಲ್). ಕ್ರ. ಸಂ : **02.** ಇಂಡೆಂಟ್ ಸಂಖ್ಯೆ : **DMA/2022-23/ RD/ WORK_ INDENT142264.** ಅಂದಾಜು ಮೊತ್ತ (ರೂ. ಲಕ್ಷಗಳಲ್ಲಿ) : 3.88. ಟೆಂಡರ್‌ಗಿಟ್ಟ ಮೊತ್ತ (ರೂ. ಲಕ್ಷಗಳಲ್ಲಿ) : **3.280.** ಇ.ಎಂ.ಡಿ. ಮೊತ್ತ (ರೂ.ಗಳಲ್ಲಿ) : **8,200/–.** ಗುತ್ತಿಗೆದಾರರ ದರ್ಜೆ : **4ನೇ ದರ್ಜೆ ಹಾಗೂ ಮೇಲ್ಪಟ್ಟ (ಸಿವಿಲ್).** ಕ್ರ. ಸಂ : **03.** ಇಂಡೆಂಟ್ ಸಂಖ್ಯೆ : **No:CMC/Mandya/Updation/KMF-24/2022-23/Call-2.** ಅಂದಾಜು ಮೊತ್ತ (ರೂ. ಲಕ್ಷಗಳಲ್ಲಿ) : **11.21.** ಟೆಂಡರ್‌ಗಿಟ್ಟ ಮೊತ್ತ (ರೂ. ಲಕ್ಷಗಳಲ್ಲಿ) : **11.21.** ಇ.ಎಂ.ಡಿ. ಮೊತ್ತ (ರೂ.ಗಳಲ್ಲಿ) : **23,800/–.** ಗುತ್ತಿಗೆದಾರರ ದರ್ಜೆ : **ಸ್ಥಳೀಯ ನೋಂದಾಯಿತ ಕಾರ್ಮಿಕ ಗುತ್ತಿಗೆದಾರರು/ ಎನ್.ಜಿ.ಓ.ಸಂಸ್ಥೆಗಳು.** ಕ್ರ. ಸಂ : **04.** ಇಂಡೆಂಟ್ ಸಂಖ್ಯೆ : **DMA/2022-23/IND14460/Call-2.** ಅಂದಾಜು ಮೊತ್ತ (ರೂ. ಲಕ್ಷಗಳಲ್ಲಿ) :**11.50.** ಟೆಂಡರ್‌ಗಿಟ್ಟ ಮೊತ್ತ (ರೂ. ಲಕ್ಷಗಳಲ್ಲಿ) : **11.50.** ಇ.ಎಂ.ಡಿ. ಮೊತ್ತ (ರೂ.ಗಳಲ್ಲಿ) : **29,000/–.** ಗುತ್ತಿಗೆದಾರರ ದರ್ಜೆ : **ನೋಂದಾಯಿತ ಅರ್ಹ ಸರಬರಾಜುದಾರರು.**

ಸಹಿ/–ಅಧ್ಯಕ್ಷರು, ನಗರಸಭೆ, ಮಂಡ್ಯ
ಸಹಿ/–ಪೌರಾಯುಕ್ತರು, ನಗರಸಭೆ, ಮಂಡ್ಯ.
ವಾಸಾಸಂಇ/ಸನಿ–ಮಂ/ಎಂಸಿ&ಎ/487/2022–23

ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ
ಕಾರ್ಯಪಾಲಕ ಅಭಿಯಂತರರ ಕಛೇರಿ, ದಾಸರಹಳ್ಳಿ ವಲಯ, ದಾಸರಹಳ್ಳಿ ವಿಭಾಗ, 2ನೇ ಮತ್ತು 3ನೇ ಅಡ್ಡರಸ್ತೆ, 2ನೇ ಮುಖ್ಯ ರಸ್ತೆ, 3ನೇ ಬ್ಲಾಕ್, ಹೆಚ್‌ಎಂಟಿ ಬಡಾವಣೆ, ಬಿಡಬ್ಲ್ಯೂಎಸ್‌ಎಸ್‌ಬಿ ನೀರಿನ ಟ್ಯಾಂಕ್ ಹತ್ತಿರ, ನಾಗಸಂದ್ರ, ಬೆಂಗಳೂರು–73.
ಸಂಖ್ಯೆ:ಬೃಬೆಂಮಪಾ/ಕಾಅ/ದಾವಿ/ಟೆಂಡರ್/12/2022–23 ದಿನಾಂಕ: 25-11-2022

ಟೆಂಡರ್‌ಗಳ ಆಹ್ವಾನ (ಐಎಫ್‌ಟಿ) (ಅಲ್ಪಾವಧಿ ಟೆಂಡರ್ ಪ್ರಕಟಣೆ)
(ದ್ವಿ ಲಕೋಟೆ ಪದ್ಧತಿ) (ಇ-ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮೂಲಕ ಮಾತ್ರ) ಕೆಡಬ್ಲ್ಯೂ : 3

ಕಾರ್ಯಪಾಲಕ ಅಭಿಯಂತರರು, ದಾಸರಹಳ್ಳಿ ವಿಭಾಗ, ಬೃಬೆಂಮಪಾ, ಬೆಂಗಳೂರು ಇವರು ಕೆಳತಿಳಿಸಿದ ನಿರ್ಮಾಣ ಕಾಮಗಾರಿಗಳನ್ನು ನಿರ್ವಹಿಸಲು ನೋಂದಾಯಿತ ಅರ್ಹ ಗುತ್ತಿಗೆದಾರರಿಂದ ಟೆಂಡರ್‌ಗಳನ್ನು ಆಹ್ವಾನಿಸಿದ್ದಾರೆ.

ಕ್ರ. ಸಂ.	ವಾರ್ಡ್ ಸಂಖ್ಯೆ	ನಿಗದಿಪಡಿಸಿದ ಅಂದಾಜು ವೆಚ್ಚ (ರೂ. ಲಕ್ಷಗಳಲ್ಲಿ)	ಇಎಂಡಿ ಮೊತ್ತ (ರೂ. ಗಳಲ್ಲಿ)	ಕಾಮಗಾರಿ ಸಂಖ್ಯೆಗಳು
1	20	60.00 ರಿಂದ 80.00	120000.00 ರಿಂದ 160000.00	6
2	16	60.00 ರಿಂದ 100.00	120000.00 ರಿಂದ 200000.00	4
3	17	60.00 ರಿಂದ 100.00	120000.00 ರಿಂದ 200000.00	5
4	18	60.00 ರಿಂದ 65.00	120000.00 ರಿಂದ 130000.00	3
5	19	60.00 ರಿಂದ 100.00	120000.00 ರಿಂದ 200000.00	3
6	21	75.00	150000.00	2
7	22	70.00 ರಿಂದ 100.00	140000.00 ರಿಂದ 200000.00	4
8	23	62.50 ರಿಂದ 100.00	125000.00 ರಿಂದ 200000.00	5
9	24	70.00 ರಿಂದ 100.00	140000.00 ರಿಂದ 200000.00	4
10	25	70.00 ರಿಂದ 100.00	140000.00 ರಿಂದ 200000.00	4
11	26	55.00 ರಿಂದ 100.00	110000.00 ರಿಂದ 200000.00	6
12	27	70.00 ರಿಂದ 100.00	140000.00 ರಿಂದ 200000.00	4
			ಒಟ್ಟು ಕಾಮಗಾರಿಗಳು	50

ಟೆಂಡರ್ ಕಾರ್ಯಸೂಚಿ: 1) ಟೆಂಡರ್ ದಾಖಲೆಯನ್ನು ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್‌ನಿಂದ ದಿನಾಂಕ: 30–11–2022 ರಿಂದ ಡೌನ್‌ಲೋಡ್ ಮಾಡಬಹುದು. 2) ಟೆಂಡರ್‌ಗಳನ್ನು ಇ-ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮೂಲಕ ಆನ್‌ಲೈನ್‌ನಲ್ಲಿ ಸಲ್ಲಿಸುವ ಕೊನೆಯ ದಿನಾಂಕ: 12–12–2022ರ ಸಂಜೆ 4:00 ಗಂಟೆಯವರೆಗೆ. 3) ಪೂರ್ವ-ಬಿಡ್ ಸಭೆಯು (ದ್ವಿ ಲಕೋಟೆ ಟೆಂಡರ್‌ಗಳಿಗೆ) ಮುಖ್ಯ ಅಭಿಯಂತರರು, ದಾಸರಹಳ್ಳಿ ವಲಯ, ಎಂಇಐ ಬಡಾವಣೆ, ಬಾಗಲಗುಂಟೆ, ಬೆಂಗಳೂರು–560073 ಇಲ್ಲಿ ದಿನಾಂಕ: 06–12–2022 ಬೆಳಗ್ಗೆ 11:30 ಗಂಟೆಗೆ ನಡೆಸಲಾಗುವುದು. 4) ತಾಂತ್ರಿಕ ಬಿಡ್ ತೆರೆಯುವ ದಿನಾಂಕ: 13–12–2022ರ ಸಂಜೆ 4:30 ಗಂಟೆಗೆ. ಹೆಚ್ಚಿನ ವಿವರಗಳನ್ನು ಮೇಲ್ಕಂಡ ಕಛೇರಿಯಿಂದ ಕಛೇರಿ ವೇಳೆಯಲ್ಲಿ ಅಥವಾ https://eproc.karnataka.gov.in ಇಲ್ಲಿಗೆ ಲಾಗಿನ್‌ಮಾಡಿ ಪಡೆಯಬಹುದು.

ಸಹಿ/- ಕಾರ್ಯಪಾಲಕ ಅಭಿಯಂತರರು, ದಾಸರಹಳ್ಳಿ ವಿಭಾಗ, ಬೃಬೆಂಮಪಾ.

ಅಭಿಮತ ಪುಟದ ವಿಳಾಸ
ಸಂಪಾದಕರು, ಅಭಿಮತ ವಿಭಾಗ, ಪ್ರಜಾವಾಣಿ, 75, ಎಂ.ಜಿ.ರಸ್ತೆ, ಬೆಂಗಳೂರು-01
ಇ–ಮೇಲ್ : editpage@prajavani.co.in

ಸುಭಾಷಿತ

ಆತ್ಮಪ್ರಶಂಸೆ ಮತ್ತು ಪರನಿಂದನೆ ಸಲ್ಲದು. ಬದುಕಿನಲ್ಲಿ ಇನ್ನೂ ಬಹುದೂರ ಕ್ರಮಿಸಬೇಕಾಗುತ್ತದೆ ಮತ್ತು ಯಾವಾಗ ಏನು ಬೇಕಾದರೂ ಸಂಭವಿಸಬಹುದು.

–ಸಂತ ಕಬೀರ್

ದತ್ತಾಂಶ ರಕ್ಷಣೆ: ಪರಿಷ್ಕೃತ ಮಸೂದೆಯಲ್ಲಿ ಸರ್ಕಾರಕ್ಕೆ ವ್ಯಾಪಕ ಅಧಿಕಾರ

ಪರಿಷ್ಕೃತ ದತ್ತಾಂಶ ಸಂರಕ್ಷಣಾ ಕರಡು ಮಸೂದೆಗೆ ಸಾರ್ವಜನಿಕರು ಪ್ರತಿಕ್ರಿಯೆ ನೀಡುವುದಕ್ಕೆ ಡಿಸೆಂಬರ್ 17ರವರೆಗೆ ಅವಕಾಶ ಇದೆ. ಈ ಹಿಂದೆ ಸಿದ್ಧಪಡಿಸಲಾಗಿದ್ದ ಮಸೂದೆಯ ಕೆಲವು ಅಂಶಗಳಿಗೆ ವಿವಿಧ ವರ್ಗಗಳಿಂದ ಆಕ್ಷೇಪಗಳು ಬಂದಿದ್ದವು. ಹೀಗಾಗಿ, ಈ ಮಸೂದೆಯನ್ನು ಮೂರು ತಿಂಗಳ ಹಿಂದೆ ವಾಪಸ್ ಪಡೆದುಕೊಳ್ಳಲಾಗಿತ್ತು. ಈ ಹಿಂದಿನ ಮಸೂದೆಯ ಬಗ್ಗೆ ಕೇಳಿಬಂದಿದ್ದ ಕೆಲವು ಆಕ್ಷೇಪಗಳನ್ನು ಹೊಸ 'ಡಿಜಿಟಲ್ ವೈಯಕ್ತಿಕ ದತ್ತಾಂಶ ಸಂರಕ್ಷಣಾ ಮಸೂದೆ- 2022'ರಲ್ಲಿ ಸರಿಪಡಿಸಲಾಗಿದೆ. ಆದರೆ, ಕೆಲವು ಮಹತ್ವದ ವಿಚಾರಗಳ ಕುರಿತು ಏನನ್ನೂ ಮಾಡಲಾಗಿಲ್ಲ. ಗಡಿಯಾಚೆಗೆ ದತ್ತಾಂಶ ಹರಿಯುವಿಕೆ ಕುರಿತು ಕೆಲವು ಅಂಶಗಳನ್ನು ಮಸೂದೆಯಲ್ಲಿ ಸೇರಿಸಬೇಕಾಗಿತ್ತು. ಅದನ್ನು ಮಾಡಿಲ್ಲ. ಗಡಿಯಾಚೆಗೆ ದತ್ತಾಂಶ ಹರಿಯುವಿಕೆಗೆ ಸಂಬಂಧಿಸಿದಂತೆ ಮಸೂದೆಯಲ್ಲಿ ಉಲ್ಲೇಖವಾಗಿದ್ದ ಕಟ್ಟುನಿಟ್ಟು ನಿಯಮಗಳಿಗೆ ದೊಡ್ಡ ತಂತ್ರಜ್ಞಾನ ಕಂಪನಿಗಳು ಮತ್ತು ನವೋದ್ಯಮ ಸಮುದಾಯ ಆಕ್ಷೇಪ ವ್ಯಕ್ತಪಡಿಸಿದ್ದವು. ಈ ಹಿಂದಿನ ಮಸೂದೆ ಪ್ರಕಾರ, ಕಂಪನಿಗಳು 'ಸೂಕ್ಷ್ಮ' ವೈಯಕ್ತಿಕ ದತ್ತಾಂಶಗಳನ್ನು ದೇಶದ ಒಳಗೇ ಇರುವ ಸರ್ವರ್‌ಗಳಲ್ಲಿ ಸಂಗ್ರಹಿಸಿ ಇರಿಸಬೇಕಿತ್ತು. 'ಪ್ರಮುಖ' ಎನಿಸುವಂತಹ ವೈಯಕ್ತಿಕ ದತ್ತಾಂಶಗಳನ್ನು ದೇಶದಿಂದ ಹೊರಗೆ ಒಯ್ಯುವುದಕ್ಕೆ ನಿಷೇಧದ ಪ್ರಸ್ತಾವವೂ ಇತ್ತು. ಆದರೆ, ದತ್ತಾಂಶಗಳನ್ನು ಭಾರತದಲ್ಲಿಯೇ ಸಂಗ್ರಹಿಸಿ ಇರಿಸಬೇಕು ಎಂದು ಪರಿಷ್ಕೃತ ಮಸೂದೆಯು ಹೇಳುತ್ತಿಲ್ಲ.

ಸರ್ಕಾರ ಮತ್ತು ಅದರ ಅಧೀನ ಸಂಸ್ಥೆಗಳಿಗೆ ನೀಡಿರುವ ವಿನಾಯಿತಿಯು ದುರ್ಬಳಕೆ ಆಗಬಹುದು ಮತ್ತು ಖಾಸಗಿತನದ ಉಲ್ಲಂಘನೆಗೆ ಕಾರಣ ಆಗಬಹುದು

ಸರ್ಕಾರವು ಗುರುತಿಸಿರುವ ದೇಶಗಳಿಗೆ ದತ್ತಾಂಶವನ್ನು ವರ್ಗಾಯಿಸುವುದಕ್ಕೆ ಅವಕಾಶ ನೀಡುವ ಪ್ರಸ್ತಾವವೂ ಇದೆ. ಈ ದೇಶಗಳನ್ನು ಹೇಗೆ ಗುರುತಿಸಲಾಗುವುದು ಎಂಬ ಬಗ್ಗೆಯೂ ಮಸೂದೆಯಲ್ಲಿ ಏನೂ ಇಲ್ಲ.

ಖಾಸಗಿತನ ಮತ್ತು ವೈಯಕ್ತಿಕ ದತ್ತಾಂಶಗಳಿಗೆ ಸಂಬಂಧಿಸಿದ ಹಲವು ಮಹತ್ವದ ವಿಚಾರಗಳಲ್ಲಿ ಮಸೂದೆಯು ಹಿಮ್ಮುಖ ಚಲನೆಯ ಪ್ರಸ್ತಾವಗಳನ್ನು ಒಳಗೊಂಡಿದೆ. ಡಿಜಿಟಲ್ ವೈಯಕ್ತಿಕ ದತ್ತಾಂಶಕ್ಕೆ ಮಾತ್ರ ಮಸೂದೆಯು ಗಮನ ಹರಿಸಿದೆ. ಡಿಜಿಟಲ್ ಅಲ್ಲದ ದತ್ತಾಂಶಗಳ ಕುರಿತು ಮಸೂದೆಯು ಗಮನವನ್ನೇ ಹರಿಸಿಲ್ಲ. ಜಂಟಿ ಸಂಸದೀಯ ಸಮಿತಿಯ ಶಿಫಾರಸಿಗೂ ಇದು ವಿರುದ್ಧವಾಗಿದೆ. ಈ ಸಮಿತಿಯು ಹಳೆಯ ಮಸೂದೆಯನ್ನು ಪರಿಶೀಲನೆಗೆ ಒಳಪಡಿಸಿ ಕಳೆದ ವರ್ಷ ವರದಿಯನ್ನೂ ನೀಡಿತ್ತು. ವೈಯಕ್ತಿಕ ದತ್ತಾಂಶ ಮತ್ತು ವೈಯಕ್ತಿಕವಲ್ಲದ ದತ್ತಾಂಶಗಳನ್ನು ಸದಾ ಕಾಲ ಪ್ರತ್ಯೇಕಿಸಿ ನೋಡುವುದು ಸಾಧ್ಯವಿಲ್ಲ, ಹೀಗಾಗಿ, ಈ ಎರಡನ್ನೂ ಮಸೂದೆಯು ಒಳಗೊಳ್ಳಬೇಕು ಎಂದು ಸಮಿತಿಯ ವರದಿಯಲ್ಲಿ ಹೇಳಲಾಗಿತ್ತು. ಪರಿಷ್ಕೃತ ಮಸೂದೆಯು ನಿಯಂತ್ರಕರ ಪಾತ್ರವನ್ನು ತೀರಾ ದುರ್ಬಲಗೊಳಿಸಿದೆ. ಮಸೂದೆಯ ಹಿಂದಿನ ಆವೃತ್ತಿಯಲ್ಲಿ ದತ್ತಾಂಶ ಸಂರಕ್ಷಣಾ ಪ್ರಾಧಿಕಾರ ಮತ್ತು ಅದರ ಅಧಿಕಾರಗಳನ್ನು ಅತ್ಯಂತ ಸ್ಪಷ್ಟವಾಗಿ ವ್ಯಾಖ್ಯಾನಿಸಲಾಗಿತ್ತು. ಪರಿಷ್ಕೃತ ಮಸೂದೆಯು ದತ್ತಾಂಶ ಸಂರಕ್ಷಣಾ ಮಂಡಳಿ ರಚನೆಯ ಪ್ರಸ್ತಾವ ಹೊಂದಿದೆ. ಆದರೆ, ಹಿಂದಿನ ಪ್ರಾಧಿಕಾರಕ್ಕೆ ಹೋಲಿಸಿದರೆ ಮಂಡಳಿಗೆ ಸೀಮಿತ ಅಧಿಕಾರವಷ್ಟೇ ಇದೆ ಮತ್ತು ಸ್ವಾಯತ್ತೆಯೂ ಇಲ್ಲ. ಮಂಡಳಿಯ ಅಧ್ಯಕ್ಷ ಮತ್ತು ಸದಸ್ಯರನ್ನು ಸರ್ಕಾರವೇ ನೇಮಿಸುತ್ತದೆ ಮತ್ತು ಅವರ ಅಧಿಕಾರದ ಅವಧಿಯನ್ನು ಕೂಡ ಸರ್ಕಾರವೇ ನಿರ್ಧರಿಸುತ್ತದೆ. ಇದನ್ನು ಸ್ವತಂತ್ರ ಸಂಸ್ಥೆ ಎಂದು ಪರಿಗಣಿಸುವುದು ಸಾಧ್ಯವಿಲ್ಲ.

ಸರ್ಕಾರ ಮತ್ತು ಅದರ ಅಧೀನ ಸಂಸ್ಥೆಗಳಿಗೆ ವಿನಾಯಿತಿ ನೀಡಿರುವುದು ಮಸೂದೆಯ ಕುರಿತು ಕಳವಳ ಮೂಡಿಸುವ ಇನ್ನೊಂದು ಅಂಶವಾಗಿದೆ. ರಾಷ್ಟ್ರೀಯ ಭದ್ರತೆಯ ಹೆಸರಿನಲ್ಲಿ ಅಧಿಸೂಚನೆಯೊಂದನ್ನು ಹೊರಡಿಸಿ ಸರ್ಕಾರದ ಸಂಸ್ಥೆಗಳನ್ನು ಮಸೂದೆಯ ವ್ಯಾಪ್ತಿಯಿಂದ ಹೊರಗೆ ಇರಿಸುವ ಅಧಿಕಾರವನ್ನು ಸರ್ಕಾರಕ್ಕೆ ನೀಡಲಾಗಿದೆ. ಇದು ಸಂಸದೀಯ ಸಮಿತಿಯು ನೀಡಿದ ಶಿಫಾರಸಿಗೆ ವಿರುದ್ಧವಾದುದಾಗಿದೆ. 'ನ್ಯಾಯಯುತ, ವಿವೇಚನಾಯುಕ್ತ ರೀತಿಯಲ್ಲಿ ಮಾತ್ರ ವಿನಾಯಿತಿ ನೀಡಬೇಕು' ಎಂದು ಸಮಿತಿಯು ಶಿಫಾರಸು ಮಾಡಿತ್ತು. ಸರ್ಕಾರಿ ಸಂಸ್ಥೆಗಳಿಗೆ ಸ್ಥೂಲವಾಗಿ ಇರುವ ವಿನಾಯಿತಿಯು ದುರ್ಬಳಕೆ ಆಗಬಹುದು ಮತ್ತು ಖಾಸಗಿತನದ ಉಲ್ಲಂಘನೆಗೆ ಕಾರಣ ಆಗಬಹುದು. ಅದಲ್ಲದೆ, ಸರ್ಕಾರಕ್ಕೆ ಹೆಚ್ಚು ಅಧಿಕಾರವನ್ನೂ ನೀಡುತ್ತದೆ. ಮಕ್ಕಳ ದತ್ತಾಂಶ ಸಂಸ್ಕರಣೆಯನ್ನು ನಿಷೇಧಿಸುವ ಪ್ರಸ್ತಾವವನ್ನು ಮಸೂದೆ ಹೊಂದಿದೆ. ಆದರೆ, ಈ ನಿಷೇಧಕ್ಕೆ ವಿನಾಯಿತಿ ನೀಡುವ ಅಧಿಕಾರವನ್ನು ಸರ್ಕಾರಕ್ಕೆ ಕೊಡುವ ಪ್ರಸ್ತಾವ ಮಸೂದೆಯಲ್ಲಿ ಇದೆ. ಈ ಮಸೂದೆಯನ್ನು ರೂಪಿಸಿರುವುದು ನಾಗರಿಕರಿಗೆ ಸಂಬಂಧಿಸಿದ ಮಾಹಿತಿಯನ್ನು ಹಾಗೂ ಅವರ ಖಾಸಗಿತನವನ್ನು ರಕ್ಷಿಸುವ ಉದ್ದೇಶದಿಂದ ಅಲ್ಲ; ಬದಲಿಗೆ, ಪ್ರಜೆಗಳ ಮಾಹಿತಿ, ಅವರ ಚಟುವಟಿಕೆಗಳು ಮತ್ತು ಜೀವನವು ಸರ್ಕಾರಕ್ಕೆ ಅನಿರ್ಬಂಧಿತವಾಗಿ ಕಾಣುವಂತಿರಬೇಕು ಹಾಗೂ ಆ ರೀತಿ ಕಣ್ಗಾವಲು ಇರಿಸುವುದಕ್ಕೆ ಕಾನೂನಿನ ಮಾನ್ಯತೆಯೂ ಬೇಕು ಎಂಬ ಉದ್ದೇಶದಿಂದ ಇದನ್ನು ರೂಪಿಸಿರುವಂತೆ ಕಾಣುತ್ತಿದೆ. ಈ ಕರಡು ಮಸೂದೆಯನ್ನು ಕೂಡ ಕೈಬಿಡುವುದು ಒಳ್ಳೆಯ ಕೆಲಸವಾಗುತ್ತದೆ.

ದಿನದ ಟ್ವೀಟ್

ಹಿರಿಯರ ಅರಿಯಿರಿ

ಕಳೆದ ವಾರ ಹೈದರಾಬಾದ್‌ನಲ್ಲಿ ಹಿರಿಯ ನಾಗರಿಕರೊಂದಿಗೆ ಸಂಜೆ ಕಳೆದೆ. ಕಾಡುತ್ತಿರುವ ಒಂಟಿತನ ಮತ್ತು ತಮ್ಮ ಮಕ್ಕಳಿಂದ ನಿರ್ಲಕ್ಷ್ಯಕ್ಕೆ ಒಳಗಾಗಿರುವ ಭಾವವನ್ನು ನಾನು ಅವರಲ್ಲಿ ಪ್ರಮುಖವಾಗಿ ಗಮನಿಸಿದೆ. ನಿಮಗೆ 60 ವರ್ಷ ಆಗುತ್ತಿದ್ದಂತೆಯೇ ನಿಮ್ಮ ವಿಶ್ರಾಂತಿ, ಮೋಜು ಹಾಗೂ ಸಂತೃಪ್ತಿಯ ಅಗತ್ಯಗಳು ಕಡಿಮೆಯಾಗುತ್ತವೆ ಎಂದು ಮಕ್ಕಳು ಭಾವಿಸುತ್ತಾರೆ. ಆದರೆ ನನ್ನ ಪ್ರಕಾರ, ಹೀಗೆ ಅಂದುಕೊಳ್ಳುವುದು ಅಪರಾಧವೇ ಸರಿ. ವಯಸ್ಸಾಗುವಿಕೆಯನ್ನು ನಾವು ಸರಿಯಾದ ರೀತಿಯಲ್ಲಿ ಅರ್ಥೈಸಿಕೊಳ್ಳಬೇಕಾಗಿದೆ.

ರಂಜನಾ ಬ್ಯಾನರ್ಜಿ, ಪತ್ರಕರ್ತೆ

ಕಿಡಿನುಡಿ

ತಮ್ಮನ್ನು ತಾವೇ ಗಂಡಸು ಎಂದು ಹೇಳಿಕೊಂಡು ಗಂಡಸ್ತನದ ಕುರಿತು ಮಾತನಾಡುತ್ತಿದ್ದವರು ಹಾಗೂ ಚಿಲುಮೆ ಸಂಸ್ಥೆಯ ಪ್ರಮುಖ 'ಕಿಂಗ್‌ಪಿನ್'ಗಳು ಕೇಂದ್ರ ಸರ್ಕಾರದ ಸಂಸ್ಥೆಯೊಂದರಿಂದ ಹಲವು ವ್ಯಕ್ತಿಗಳ ಖಾತೆಗೆ ಹಣ ಹಾಕಿಸಿ, ಅವುಗಳನ್ನು ನಗದೀಕರಣ ಮಾಡಿಕೊಂಡಿದ್ದಾರೆ.

ಡಿ.ಕೆ. ಶಿವಕುಮಾರ್, ಕೆಪಿಸಿಸಿ ಅಧ್ಯಕ್ಷ

25 ವರ್ಷಗಳ ಹಿಂದೆ
ಬುಧವಾರ, 26-11-1997

● **ಆ.15ರೊಳಗೆ ಗಡಿ ವಿವಾದ ಅಂತ್ಯಕ್ಕೆ ತೀರ್ಮಾನ**

ಮುಂಬೈ, ನ. 25 (ಪಿಟಿಐ, ಯುಎನ್‌ಐ)– ಕಳೆದ ನಾಲ್ಕು ದಶಕಗಳಷ್ಟು ಹಳೆಯದಾದ ಮಹಾರಾಷ್ಟ್ರ–ಕರ್ನಾಟಕ ಗಡಿ ವಿವಾದವನ್ನು ಮಾತುಕತೆಯ ಮೂಲಕ ಬಗೆಹರಿಸಿಕೊಳ್ಳುವುದಾಗಿ ಉಭಯ ರಾಜ್ಯಗಳ ಮುಖ್ಯಮಂತ್ರಿಗಳು ಇಂದು ಘೋಷಿಸಿದರು.

ಮುಂಬರುವ ಆಗಸ್ಟ್ 15ರೊಳಗಾಗಿ ಗಡಿ ವಿವಾದಕ್ಕೆ ಅಂತಿಮ ತೆರೆ ಎಳೆಯುವ ಇಂಗಿತವನ್ನು ಸುದ್ದಿಗಾರರೊಂದಿಗೆ ಮಾತನಾಡಿದ ಕರ್ನಾಟಕ ಮುಖ್ಯಮಂತ್ರಿ ಜೆ.ಎಚ್. ಪಟೇಲ್ ಹಾಗೂ ಮಹಾರಾಷ್ಟ್ರ ಮುಖ್ಯಮಂತ್ರಿ ಮನೋಹರ್ ಜೋಷಿ ಅವರು ವ್ಯಕ್ತಪಡಿಸಿದರು. ಸ್ವಾತಂತ್ರ್ಯದ ಸುವರ್ಣ ಮಹೋತ್ಸವದ ಸಂದರ್ಭದಲ್ಲಿ ದೇಶದಲ್ಲಿನ ರಾಜ್ಯಗಳ ನಡುವಿನ ಗಡಿ ವಿವಾದ ಬಗೆಹರಿಸಿಕೊಳ್ಳುವುದು ಸೂಕ್ತ ಎಂದರು.

● **ಜೈನ್ ಆಯೋಗದ ವರದಿ ಪುನರ್‌ಪರಿಶೀಲನಾ ಸಮಿತಿಗೆ ಸಲಹೆ: ಕಾಂಗ್ರೆಸ್‌ನಿಂದ ಸಂಧಾನ ಸೂತ್ರ**

ನವದೆಹಲಿ, ನ. 25– ನ್ಯಾಯಮೂರ್ತಿ ಎಂ.ಸಿ. ಜೈನ್ ಆಯೋಗದ ಮಧ್ಯಂತರ ವರದಿಯನ್ನು ಪುನರ್‌ಪರಿಶೀಲಿಸಲು ಮೂವರು ನ್ಯಾಯಮೂರ್ತಿಗಳ ಸಮಿತಿಯೊಂದನ್ನು ರಚಿಸಬೇಕು, ಇದು ತನ್ನ ವರದಿಯನ್ನು ನೀಡಿ ಅದರಲ್ಲಿ ಡಿಎಂಕೆಯನ್ನು ಆರೋಪದಿಂದ ಮುಕ್ತ ಮಾಡುವವರೆವಿಗೆ ಆ ಪಕ್ಷದ ಸಚಿವರನ್ನು ಸಂಪುಟದಿಂದ ದೂರವಿಡಬೇಕು ಎಂಬ ಸಂಧಾನ ಸೂತ್ರವನ್ನು ಸರ್ಕಾರದ ಮುಂದಿಡಲು ಕಾಂಗ್ರೆಸ್ ಹೆಚ್ಚೂಕಡಿಮೆ ನಿರ್ಧರಿಸಿದೆ.

50 ವರ್ಷಗಳ ಹಿಂದೆ
ಭಾನುವಾರ, 26-11-1972

● **ಗಡಿ: 28ರಂದು ಲಾಹೋರಿನಲ್ಲಿ ಟಿಕ್ಕಾ, ಮಾಣೆಕ್ ಷಾ ಚರ್ಚೆ**

ನವದೆಹಲಿ, ನ. 25– ಜಮ್ಮು- ಕಾಶ್ಮೀರದಲ್ಲಿ ಹತೋಟಿ ರೇಖೆ ಗುರುತಿಸುವುದನ್ನು ಅಖೈರಾಗಿ ನಿರ್ಧರಿಸಲು ಮಂಗಳವಾರ (ನವೆಂಬರ್ 28) ಬೆಳಿಗ್ಗೆ 11 ಗಂಟೆಗೆ ಲಾಹೋರಿನಲ್ಲಿ ಭೇಟಿಯಾಗುವಂತೆ ಪಾಕಿಸ್ತಾನ ಸೈನ್ಯದ ದಂಡನಾಯಕ ಜನರಲ್ ಟಿಕ್ಕಾಖಾನ್ ಅವರು ಸೂಚಿಸಿರುವುದನ್ನು ಭಾರತದ ದಂಡನಾಯಕ ಜನರಲ್ ಮಾಣೆಕ್ ಷಾ ಅವರು ಒಪ್ಪಿದ್ದಾರೆ.

ಮಾಣೆಕ್ ಷಾ ಅವರನ್ನು ಮಾತುಕತೆಗಾಗಿ ಲಾಹೋರಿಗೆ ಆಹ್ವಾನಿಸಿದ ಟಿಕ್ಕಾಖಾನ್ ಅವರ ಪತ್ರವು ಭಾರತದ ಸೇನಾ ದಳಪತಿಗೆ ಇಂದು ತಲುಪಿತು ಎಂದು ರಕ್ಷಣಾ ಖಾತೆ ಪ್ರಕಟಣೆ ಸಂಜೆ ತಿಳಿಸಿದೆ.

● **ವಿದೇಶಿ ಪ್ರವಾಸಿಗರನ್ನು ಹೆಚ್ಚು ಆಕರ್ಷಿಸಲು ಕೇಂದ್ರದ ಸರ್ವಯತ್ನ: ಡಾ. ಸರೋಜಿನಿ ಮಹಿಷಿ**

ಹುಬ್ಬಳ್ಳಿ, ನ. 25– ರಾಷ್ಟ್ರದ ವಿದೇಶಿ ವಿನಿಮಯ ಗಳಿಕೆ ಹೆಚ್ಚಿಸಲು ವಿದೇಶಗಳಿಂದ ಹೆಚ್ಚು ಹೆಚ್ಚು ಮಂದಿ ಪ್ರವಾಸಿಗರನ್ನು ಆಕರ್ಷಿಸುವುದಕ್ಕಾಗಿ ಕೇಂದ್ರ ಸರ್ಕಾರ ಸರ್ವ ಪ್ರಯತ್ನ ನಡೆಸುತ್ತಿರುವುದಾಗಿ ಪ್ರವಾಸೋದ್ಯಮ ಹಾಗೂ ನಾಗರಿಕ ವಿಮಾನಯಾನ ಖಾತೆ ಸಚಿವೆ ಡಾ. ಸರೋಜಿನಿ ಮಹಿಷಿ ಅವರು ಇಂದು ಇಲ್ಲಿ ತಿಳಿಸಿದರು.

ಮೀಸಲಾತಿಯು ನಿಜಕ್ಕೂ ಚರ್ಚೆಗೆ ಅರ್ಹವಾದ ವಿಷಯ, ಪರಿಷ್ಕರಣೆಗೂ ಯೋಗ್ಯ!

ಮೀಸಲಾತಿ: ಪಾಲಿಗಾಗಿ ಪೈಪೋಟಿ

ವಿಶ್ಲೇಷಣೆ

ಚಂದ್ರಕಾಂತ ವಡ್ಡು

ಮೀಸಲಾತಿಯನ್ನು ಇದುವರೆಗೂ ವಿರೋಧಿಸಿಕೊಂಡು ಬಂದಿದ್ದ ಹಲವರು ಇದೀಗ ಮೀಸಲಾತಿಯ ಸೌಲಭ್ಯ ಪಡೆಯಲು ಮತ್ತು ಮೀಸಲಾತಿಯ ಪ್ರಯೋಜನವನ್ನು ಪಡೆದಿರುವ ಕೆಲವರು ಅದರ ಪ್ರಮಾಣವನ್ನು ಹೆಚ್ಚಿಸಿಕೊಳ್ಳಲು ಬೇಡಿಕೆ ಮಂಡಿಸುತ್ತಿರುವ ವಿಚಿತ್ರವೂ ವಿಪರ್ಯಾಸಕರವೂ ಆದ ಸಮಕಾಲೀನ ಸಂದರ್ಭಕ್ಕೆ ನಾವೆಲ್ಲಾ ಸಾಕ್ಷಿಯಾಗುತ್ತಿದ್ದೇವೆ. ಈಗೇನಿದ್ದರೂ ಎಲ್ಲರೂ ಮೀಸಲಾತಿ ಪರ! ಅದರಲ್ಲಿ ತಮಗೆ ಅತಿಹೆಚ್ಚು ಪಾಲು ಸಿಗಬೇಕಷ್ಟೇ. ಅದಕ್ಕಾಗಿ ಹೋರಾಟಕ್ಕೆ ನಾ ಮುಂದು ತಾ ಮುಂದು ಎಂದು ಒಂದಾಗುತ್ತಿದ್ದಾರೆ.

'ಪಂಚಮಸಾಲಿ ಸಮುದಾಯಕ್ಕೆ 2ಎ ಮೀಸಲಾತಿ ಕಲ್ಪಿಸುವ ಬಗ್ಗೆ ರಾಜ್ಯ ಹಿಂದುಳಿದ ವರ್ಗಗಳ ಆಯೋಗದಿಂದ ಸರ್ಕಾರವು ಬೆಳಗಾವಿಯಲ್ಲಿ ಡಿಸೆಂಬರ್ 19ರಂದು ಪ್ರಾರಂಭವಾಗುವ ವಿಧಾನಮಂಡಲ ಅಧಿವೇಶನಕ್ಕೂ ಮೊದಲೇ ವರದಿ ಪಡೆಯಬೇಕು' ಎಂದು ಕೂಡಲಸಂಗಮದ ಪಂಚಮಸಾಲಿ ಪೀಠದ ಬಸವಜಯ ಮೃತ್ಯುಂಜಯ ಸ್ವಾಮೀಜಿ ಗಡುವು ನೀಡಿದ್ದಾರೆ. ಒಕ್ಕಲಿಗ ಸಮುದಾಯದ ಮೀಸಲಾತಿ ಪ್ರಮಾಣವನ್ನು ಶೇಕಡ 4ರಿಂದ ಶೇ 12ಕ್ಕೆ ಹೆಚ್ಚಿಸಬೇಕೆಂಬ ಬೇಡಿಕೆ ಈಡೇರಿಕೆಗೆ ಹೋರಾಟ ರೂಪಿಸಲು ಸಜ್ಜಾಗಿರುವ ಒಕ್ಕಲಿಗರ ಸಂಘ ಮತ್ತು ಮೀಸಲಾತಿ ಹೋರಾಟ ಸಮಿತಿಯು ಸಮುದಾಯದ ಸ್ವಾಮೀಜಿಗಳು ಮತ್ತು ರಾಜಕಾರಣಿಗಳ ಸಭೆ ಕರೆದಿವೆ. ಸುಪ್ರೀಂ ಕೋರ್ಟ್ ತೀರ್ಪು ಅನ್ವಯಿಸಿ ಕರ್ನಾಟಕ ಸರ್ಕಾರವೂ ಆರ್ಥಿಕವಾಗಿ ಹಿಂದುಳಿದ ವರ್ಗಕ್ಕೆ ಶೇ 10ರಷ್ಟು ಮೀಸಲಾತಿಯನ್ನು ಶೀಘ್ರ ಜಾರಿ ಮಾಡುವಂತೆ ಒತ್ತಾಯಿಸಿ ಕರ್ನಾಟಕ ರಾಜ್ಯ ಬ್ರಾಹ್ಮಣ ಅಭಿವೃದ್ಧಿ ಮಂಡಳಿಯು ಮುಖ್ಯಮಂತ್ರಿಗೆ ಮನವಿ ಸಲ್ಲಿಸಿದೆ. ಈ ಬಗ್ಗೆ ಸಕಾರಾತ್ಮಕವಾಗಿ ಸ್ಪಂದಿಸಿದ ಮುಖ್ಯಮಂತ್ರಿ, ಅಧಿಕಾರಿಗಳಿಗೆ ಸೂಚನೆಯನ್ನೂ ನೀಡಿದ್ದಾರಂತೆ.

ಬೇಡ ಜಂಗಮ ಸಮುದಾಯಕ್ಕೆ ಪರಿಶಿಷ್ಟ ಜಾತಿ ಪ್ರಮಾಣಪತ್ರ ನೀಡಬೇಕೆಂಬ ಬೇಡಿಕೆ ಮುಂದಿಟ್ಟುಕೊಂಡು ಹೋರಾಟಕ್ಕಿಳಿದಿರುವ ವೀರಶೈವ ಜಂಗಮ ಸಮುದಾಯ ಅನಿರ್ದಿಷ್ಟಾವಧಿ ಧರಣಿ ಹಮ್ಮಿಕೊಂಡಿದೆ. ವಕೀಲ ಬಿ.ಡಿ.ಹಿರೇಮಠ ನೇತೃತ್ವದ ನಿಯೋಗವು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಅವರನ್ನು ಭೇಟಿ ಮಾಡಿ ಚರ್ಚಿಸಿದೆ. 'ಸ್ವಲ್ಪ ಸಮಯ ಕೊಡಿ, ಕಾನೂನು ಇಲಾಖೆ ಅಧಿಕಾರಿಗಳ ಜತೆ ಚರ್ಚಿಸಿ ಒಂದು ಉತ್ತಮ ನಿರ್ಧಾರ ಕೈಗೊಳ್ಳುತ್ತೇನೆ, ಸರ್ಕಾರಕ್ಕೆ ಎಲ್ಲರ ಹಿತವೂ ಮುಖ್ಯ' ಎಂಬ ಆಶ್ವಾಸನೆ ಸಿಕ್ಕಿದೆಯಂತೆ. ಕುರುಬ ಸಮುದಾಯದ ವಿವಿಧ ಸಂಘಟನೆಗಳ ಸಹಯೋಗದಲ್ಲಿ ಹಾಲುಮತ ಮಹಾಸಭಾ ಮತ್ತು ಕಾಗಿನೆಲೆ ಕನಕ ಗುರುಪೀಠದ ನಿರಂಜನಾನಂದಪುರಿ ಸ್ವಾಮೀಜಿ ನೇತೃತ್ವದಲ್ಲಿ ಎಸ್‌.ಟಿ. ಮೀಸಲಾತಿಗಾಗಿ ಒತ್ತಾಯಿಸಿ ಬೆಂಗಳೂರಿನಲ್ಲಿ ಬೃಹತ್ ಸಮಾವೇಶ ನಡೆಯಿತು. ಈ ಸಮುದಾಯದ ಮುಖಂಡರು ಪಾದಯಾತ್ರೆ, ಹಕ್ಕೊತ್ತಾಯಗಳ ನಂತರ ಇದೀಗ ಗಂಭೀರ ಸ್ವರೂಪದ ಹೋರಾಟದ ಎಚ್ಚರಿಕೆಯನ್ನೂ ನೀಡಿದ್ದಾರೆ.

ಇನ್ನು, ಹಾಲಿ ಇದ್ದ ಪರಿಶಿಷ್ಟ ಜಾತಿಯ ಶೇ 15 ಹಾಗೂ ಪರಿಶಿಷ್ಟ ಪಂಗಡದ ಶೇ 3ರಷ್ಟು ಮೀಸಲಾತಿಯನ್ನು ಅನುಕ್ರಮವಾಗಿ ಶೇ 17 ಮತ್ತು ಶೇ 7ಕ್ಕೆ ಏರಿಕೆ ಮಾಡಿ ರಾಜ್ಯ ಸರ್ಕಾರ ಆದೇಶ ಹೊರಡಿಸಿದೆ. ಇದರಿಂದಾಗಿ ಒಟ್ಟು ಮೀಸಲಾತಿ ಪ್ರಮಾಣವು ನಿಗದಿತ ಶೇ 50 ಮೀರಿ ಶೇ 56 ತಲುಪಿರುವುದರಿಂದ ಇದಕ್ಕೆ ಎದುರಾಗಬಹುದಾದ ಸಾಂವಿಧಾನಿಕ ಮನ್ನಣೆಯ ತೊಡಕು ನಿವಾರಿಸಿಕೊಳ್ಳುವ ಹೊಣೆ ಸರ್ಕಾರದ ಮೇಲಿದೆ. ಈ ಮಧ್ಯೆ ಮುಂಬರುವ ಚುನಾವಣೆಯನ್ನು ಗಮನದಲ್ಲಿಟ್ಟುಕೊಂಡ ಆಡಳಿತ ಪಕ್ಷವು ಈ ಸಮುದಾಯಗಳಿಗೆ ಮೀಸಲಾತಿ ಹೆಚ್ಚಳ ಮಾಡಿರುವುದು ತನ್ನ ಐತಿಹಾಸಿಕ ನಿರ್ಧಾರ ಎಂದು ಜನಸಂಕಲ್ಪ ಯಾತ್ರೆಯುದ್ದಕ್ಕೂ ಕಹಳೆ ಊದುತ್ತಿದೆ. ಬಹುಶಃ ಆಡಳಿತಾರೂಢರ ಇಂತಹ ರಾಜಕೀಯ ಲೆಕ್ಕಾಚಾರದ ನಡೆನುಡಿಗಳು ಮತ್ತು ಚುನಾವಣೆ ಸಂದರ್ಭವು ಮೀಸಲಾತಿ ಲಾಭಾಕಾಂಕ್ಷೆಯ ಸಮುದಾಯಗಳಲ್ಲಿ ಹೊಸ ಆಶಾಭಾವನೆ ಮೂಡಿಸಿದಂತೆ ಕಾಣುತ್ತದೆ.

ಮೀಸಲಾತಿಗೆ ಬೇಡಿಕೆ ಮಂಡಿಸುತ್ತಿರುವ ಪ್ರಬಲ ಜಾತಿಗಳು ವಿರೋಧ ಪಕ್ಷಗಳ ಕಣ್ಣಿಗೆ ಕೂಡ ಬರೀ 'ಮತದಾರ ಸಮುದಾಯ'ಗಳಾಗಿ ಕಾಣುತ್ತಿವೆ. ಕಾಂಗ್ರೆಸ್ ಪಕ್ಷದ ಮುಖಂಡರಿಗೆ ಮೀಸಲಾತಿ ವಿವಾದದಲ್ಲಿ ತಲೆಹಾಕದಂತೆ ಹೈಕಮಾಂಡ್ ನಿಯಂತ್ರಣ ಹೇರಿರುವ ವರದಿಗಳಿವೆ. ಕಳೆದ ವಿಧಾನಸಭಾ ಚುನಾವಣೆಯಲ್ಲಿ ಲಿಂಗಾಯತ ಪ್ರತ್ಯೇಕ ಧರ್ಮ ಹೋರಾಟದ ವಿಷಯದಲ್ಲಿ ಕೈಸುಟ್ಟುಕೊಂಡ ಕಹಿ ಅನುಭವದ ಬುತ್ತಿ ಆ ಪಕ್ಷದ ತಲೆಯ ಮೇಲಿದೆ. ಹಾಗಾಗಿ ಚುನಾವಣೆಯ ಹಿನ್ನೆಲೆಯಲ್ಲಿ ಮೀಸಲಾತಿ ವಿಷಯ ರಾಜಕೀಯ ಪಕ್ಷಗಳಿಗೆ ನುಂಗಲಾಗದ ಬಿಸಿತುಪ್ಪವೇ ಸರಿ.

ಪರಿಶಿಷ್ಟ ಪಂಗಡದ ಮೀಸಲಾತಿ ಪ್ರಮಾಣದ ಹೆಚ್ಚಳದ ಮೂಲಕ ಕಲ್ಯಾಣ ಕರ್ನಾಟಕ ಭಾಗದ ವಾಲ್ಮೀಕಿ ಸಮುದಾಯದ ಒಲವು ಗಳಿಸಿದ ಉಮೇದಿನಲ್ಲಿ ಬೀಗುತ್ತಿರುವ ಬಿಜೆಪಿ ನೇತೃತ್ವದ ಸರ್ಕಾರವು ಕಿತ್ತೂರು ಕರ್ನಾಟಕದ ಪಂಚಮಸಾಲಿ, ಹಳೆಯ ಮೈಸೂರು ಪ್ರಾಂತ್ಯದ ಒಕ್ಕಲಿಗರು ಹಾಗೂ ಸಮಗ್ರ ಕರ್ನಾಟಕದಲ್ಲಿ ಹಂಚಿರುವ ಕುರುಬ ಸಮುದಾಯಗಳ ಮೀಸಲಾತಿ ಬೇಡಿಕೆ ಈಡೇರಿಸುವ ಅಡಕತ್ತರಿಯಲ್ಲಿ ಸಿಲುಕಿದೆ. ಅದರಲ್ಲೂ ಶಿಗ್ಗಾವಿ ವಿಧಾನಸಭಾ ಕ್ಷೇತ್ರದಲ್ಲಿ ನಿರ್ಣಾಯಕವಾಗಿರುವ ಪಂಚಮಸಾಲಿ ಸಮಾಜದ ಒತ್ತಡವನ್ನು ಬಸವರಾಜ ಬೊಮ್ಮಾಯಿ ಹೇಗೆ ನಿರ್ವಹಿಸುತ್ತಾರೆ ಎಂಬುದು ಕುತೂಹಲಕಾರಿ.

ಇವೆಲ್ಲದರ ಮಧ್ಯೆ ಮೀಸಲಾತಿ ಸೌಲಭ್ಯ ಪಡೆಯಲು ಮುಗಿಬಿದ್ದಿರುವ ಪ್ರಬಲ ಸಮುದಾಯಗಳು ಮರೆತಿರುವುದು ಅಥವಾ ಮರೆಮಾಚುತ್ತಿರುವುದು ಮೀಸಲಾತಿಯ ಮೂಲ ಉದ್ದೇಶ ಮತ್ತು ಪರಿಕಲ್ಪನೆಯನ್ನು. ಸಂವಿಧಾನದಲ್ಲಿ ಅವಕಾಶ ಕಲ್ಪಿಸಿರುವ ಮೀಸಲಾತಿಯ ಮೂಲ ಆಶಯ ಸಾಮಾಜಿಕ ನ್ಯಾಯ. ಬಹುಮುಖ್ಯವಾಗಿ ಮೀಸಲಾತಿ ಎನ್ನುವುದು ಬಡತನ ನಿರ್ಮೂಲನೆ ಕಾರ್ಯಕ್ರಮವಲ್ಲ, ಸಮುದಾಯಗಳ ಆರ್ಥಿಕ ಅಭಿವೃದ್ಧಿಯ ಯೋಜನೆಯಲ್ಲ, ಜಾತಿ ವಿನಾಶದ ಉದ್ದೇಶವೂ ಇದಕ್ಕಿಲ್ಲ ಎಂಬುದನ್ನು ಮನವರಿಕೆ ಮಾಡಿಕೊಳ್ಳುವ ಅಗತ್ಯವಿದೆ. ಐತಿಹಾಸಿಕವಾಗಿ ಅವಕಾಶವಂಚಿತ ಸಮುದಾಯಗಳಿಗೆ ವ್ಯವಸ್ಥೆಯ ವಿವಿಧ ಹಂತಗಳಲ್ಲಿ ಪಾಲ್ಗೊಳ್ಳುವಿಕೆ ಸಾಧ್ಯವಾಗಿಸುವ ವಿಧಾನವಾಗಿ ಜಾರಿಗೆ ಬರಬೇಕಾದ ಮೀಸಲಾತಿಯು ರಾಜಕಾರಣದ ಆಡುಂಬೊಲ ಆಗಿರುವುದರ ದ್ಯೋತಕವೇ ಈಗಿನ ಮೀಸಲಾತಿ ಪೈಪೋಟಿ.

ಹಾಗೆ ನೋಡಿದರೆ ಮೀಸಲಾತಿಯು ನಿಜಕ್ಕೂ ಚರ್ಚೆಗೆ ಅರ್ಹವಾದ ವಿಷಯ, ಪರಿಷ್ಕರಣೆಗೂ ಯೋಗ್ಯ. ಇದರ ಆಶಯ ಮತ್ತು ಅನುಷ್ಠಾನದ ನಡುವಿನ ಅಂತರ ಬಹುಶಿಸ್ತೀಯ ಅಧ್ಯಯನಕ್ಕೆ ಸಾಮಗ್ರಿ.

ಕಳೆದ ಏಳು ದಶಕಗಳಿಂದ ಜಾರಿಯಲ್ಲಿರುವ ಮೀಸಲಾತಿಯು ಕಟ್ಟಕಡೆಯ ಅರ್ಹರನ್ನು ತಲುಪುವಲ್ಲಿ ಏಕೆ ಸಫಲವಾಗಿಲ್ಲ? ಅವರನ್ನು ಮುಟ್ಟುವುದು ಹೇಗೆ? ಮೀಸಲಾತಿಯ ದುರುಪಯೋಗದಂತಹ ಬಹುದೊಡ್ಡ ಪಿಡುಗನ್ನು ನಿಯಂತ್ರಿಸುವುದು ಹೇಗೆ? ಒಳಮೀಸಲಾತಿಯ ಬೇಡಿಕೆ- ವರದಿ ನನೆಗುದಿಗೆ ಬೀಳಲು ಯಾರು ಕಾರಣ? ಒಳಮೀಸಲಾತಿಗೆ ವಿರೋಧವು ವಿಶಾಲಾರ್ಥದಲ್ಲಿ ಮೀಸಲಾತಿಯ ವಿರೋಧವಲ್ಲವೇ? ಖಾಸಗೀಕರಣ ಮತ್ತು ಜಾಗತೀಕರಣದ ಸನ್ನಿವೇಶದಲ್ಲಿ ಸರ್ಕಾರಿ ವಲಯದ ಉದ್ಯೋಗ-ಶಿಕ್ಷಣ ಅವಕಾಶಗಳಲ್ಲಿ ವಿಪರೀತ ಕಡಿತವಾಗಿದೆ. ಸರ್ಕಾರ ಕೂಡ ಗುತ್ತಿಗೆ ಆಧಾರದ ಕಾಮಗಾರಿ ಮತ್ತು ಬಾಹ್ಯ ಏಜೆನ್ಸಿಗಳನ್ನು ಅವಲಂಬಿಸುವುದರಿಂದ ನೇಮಕಾತಿ ಅವಕಾಶ ಗಣನೀಯವಾಗಿ ತಗ್ಗಿದೆ. ಹೀಗಿರುವಾಗ ಮೀಸಲಾತಿಗೇನು ಅರ್ಥ? ಮೀಸಲಾತಿ ಇನ್ನೆಷ್ಟು ದಿನ ಎಂಬ ಅಸಹನೆಗೆ ದಾರಿಯಾಗದಂತೆ ತ್ವರಿತಗತಿಯಲ್ಲಿ ಮೀಸಲಾತಿಯ ಉದ್ದೇಶ ಈಡೇರಿಸುವುದು ಮತ್ತು ಗುರಿ ಮುಟ್ಟುವುದು ಹೇಗೆ? ಯೋಚಿಸಲು, ಚರ್ಚಿಸಲು, ನಿರ್ಧರಿಸಲು, ಬದಲಿಸಲು, ಜಾರಿಗೊಳಿಸಲು ಇಂತಹ ಎಷ್ಟೊಂದು ಸವಾಲುಗಳು ನಮ್ಮ ಮುಂದಿವೆ.

ಒಟ್ಟಾರೆ ಸಾಮಾಜಿಕ ನ್ಯಾಯ ಪರಿಕಲ್ಪನೆಯೇ ಅಪ್ರಸ್ತುತ ಎಂಬ ಭ್ರಮೆ ಹುಟ್ಟಿಸುವ ಅಪಾಯಕಾರಿ ಘಟ್ಟದಲ್ಲಿ ನಿಂತಿದ್ದೇವೆ!

ಚುರುಮುರಿ

ಗಂಡಾಂತರ

● ನಾರಾಯಣ ರಾಯಚೂರ್

'ಇಲ್ಲಿ ನೋಡೇ, ಹರಿಯಾಣದಲ್ಲಿ ಶ್ವಾನ ಕಲ್ಯಾಣವಂತೆ! 'ಶೆರೂ ವೆಡ್ಸ್ ಸ್ವೀಟಿ' ಅಂತ ದೊಡ್ಡ ಕಟೌಟು, ಮದುವೆ ಪೋಷಾಕು, ಬ್ಯಾಂಡು, ಹಾರ, ಬೀಗರು ಎಲ್ಲಾ ಜಮಾಯಿಸಿದಾರೆ'.

'ಓ ಹೌದಾ! 'ಎವೆರಿ ಡಾಗ್ ಹ್ಯಾಸ್ ಹಿಸ್ ಡೇ' ಅಂತ ಇಂಗ್ಲಿಷ್ ಮೇಷ್ಟ್ರು ಹೇಳ್ತಿದ್ದರು. ಅದಿರ್ಲಿ, ನನ್ನದೊಂದು ಸಮಸ್ಯೆ ಇದೆ. ಇನ್ನೂರಕ್ಕೆ ಹತ್ತು ಸಾವಿರ ಆದರೆ ಸಾವಿರಕ್ಕೆ ಎಷ್ಟು? ಬೇಗ ಹೇಳಿ'.

'ಏನೇ, ತ್ರೈಮಾಸಿಕ ಲೆಕ್ಕ ಕೇಳ್ತಾಯಿದೀಯಾ, ಏನು ನೋಡಿದೆ ಪೇಪರ್‌ನಲ್ಲಿ?'

'ಇನ್ನೇನ್ರೀ, ಸಂಸಾರದ ಸುದ್ದಿ ನಮ್ ಕಣ್ಣಿಗೆ ಬೀಳ್ತಾವೆ. ಟಿಕೆಟ್‌ಗೆ ಅರ್ಜಿ, ಯಾರಿಗೆ ಯಾವ ಕ್ಷೇತ್ರ, ಯಾವ ಗೋಡೆಗೆ ಯಾವ ಬಣ್ಣ ಇವೆಲ್ಲಾ ನಮಗ್ಯಾಕೆ?'

'ಸರಿ, ಸರಿ... ಹೇಳೀಗ ನಿನ್ನ ಒಗಟಿನ ಉತ್ತರ'.

'ವಧು-ವರ ಸಮಾವೇಶದಲ್ಲಿ ಇನ್ನೂರು ಹುಡುಗಿಯರಿಗೆ ಹತ್ತು ಸಾವಿರ ಹುಡುಗರು ಅರ್ಜಿ ಹಾಕೊಂಡಿದ್ದಾರಂತೆ, ನೋಡಿ ಇಲ್ಲಿ, ಹ್ಯಾಗೆ ಜಾತ್ರೇಲಿ ಸೇರಿದ್ದಾಗೆ ಸೇರಿದಾರೆ ಗಂಡು ಹೆತ್ತೋರು!'

'ಎಲ್ಲಾ ಚಕ್ರದ ಚಲನೆ ತರಹ! ಒಮ್ಮೆ ಅದು ಮೇಲು, ಇನ್ನೊಮ್ಮೆ ಇದು ಮೇಲು!'

'ಹೌದೌದು, ಮೇಲು- ಫೀಮೇಲು. ಇದು, ನಾವೇ ಮಾಡಿಕೊಂಡಿದ್ದು. ಹೆಣ್ಣುಮಗು ಅಂದ್ರೆ ಕೀಳಾಗಿ ಕಂಡು, ಭ್ರೂಣಹತ್ಯೆ, ಗರ್ಭಪಾತ ಮಾಡಿಸಿಕೊಂಡು, ಈಗ ಅನುಪಾತ ಸರಿಯಿಲ್ಲಾಂದ್ರೆ? ಅಂತೂ ಗಂಡು ಹೆತ್ತೋರ ಪಾಡು ನಾಯಿಪಾಡು!'

'ಹಾಂ! ಮತ್ತೆ ಬಂದ್ಯಾ, ಶ್ವಾನಕಲ್ಯಾಣಕ್ಕೆ. ಅಲ್ಲಾ... ಹೆಣ್ಣು ನಾಯಿ- ಗಂಡು ನಾಯಿಗಳ ಅನುಪಾತ ಸರಿಯಾಗಿಯೇ ಇರಬೇಕು'.

'ಅವು ಪ್ರಾಣಿಗಳೂರೀ. ನಿಸರ್ಗದ ಮಾತು ಕೇಳೋವು, ನಿಸರ್ಗದ ನಿಯಮಕ್ಕೆ ಎದುರಾಡದೆ ಪಾಲಿಸೋವು. ಈ ಸ್ವಾರ್ಥಿ, ದುರಹಂಕಾರಿ ಮನುಷ್ಯರ ಹಾಗಲ್ಲ'.

'ಚಪ್ಪಾಳೆ... ಚಪ್ಪಾಳೆ... ಚಪ್ಪಾಳೆ!'

ಸಂಗತ

ಕಹಿಯಾಗದಿರಲಿ ಕಬ್ಬಿನ ಉಳುಮೆ

ಗುಜರಾತ್ ಹಾಗೂ ಆಸ್ಟ್ರೇಲಿಯಾ ಮಾದರಿಗಳು ಅನುಸರಣಯೋಗ್ಯ

● ಮಲ್ಲಿಕಾರ್ಜುನ ಹೆಗ್ಗಳಗಿ

ಕಬ್ಬು ಸಿಹಿ. ಆದರೆ ಕಬ್ಬಿನ ವ್ಯವಹಾರವು ಸಮಸ್ಯೆ ಹಾಗೂ ಗೊಂದಲದಿಂದ ಕೂಡಿದೆ. ಕಬ್ಬಿಗೆ ಬೆಲೆ ನಿಗದಿ, ಬಾಕಿ ಉಳಿಸಿಕೊಂಡ ಹಣ ಪಾವತಿ ವಿಚಾರದಲ್ಲಿ ಸದಾ ಸಂಘರ್ಷ. ಪಕ್ವಗೊಂಡ ಕಬ್ಬನ್ನು ಸಮಯಕ್ಕೆ ಸರಿಯಾಗಿ ಕಟಾವು ಮಾಡಿ ಕಾರ್ಖಾನೆಗಳಿಗೆ ಸಾಗಿಸುವುದಕ್ಕಾಗಿ ರೈತರಿಗೆ ತೊಂದರೆ ತಪ್ಪಿದ್ದಲ್ಲ.

ಇವು ಬಗೆಹರಿಸಲಾರದಷ್ಟು ಗಂಭೀರ ಸಮಸ್ಯೆಗಳಲ್ಲ. ಕಾರ್ಖಾನೆಗಳ ಆಡಳಿತ ಮಂಡಳಿಯವರ ಬದ್ಧತೆ ಹಾಗೂ ಸರ್ಕಾರದ ಬಿಗಿ ನಿಲುವಿನ ಕೊರತೆಯಿಂದ ಕಬ್ಬು ಬೆಳೆಗಾರರು ಸಂಕಷ್ಟ ಅನುಭವಿಸುತ್ತಿದ್ದಾರೆ. ಕಬ್ಬು ಬೆಳೆಗಾರರು ಈಚೆಗೆ ಬೆಂಗಳೂರಿನಲ್ಲಿ ತಮ್ಮ ಬೇಡಿಕೆಗಳ ಈಡೇರಿಕೆಗೆ ಆಗ್ರಹಿಸಿ ಅರೆಬೆತ್ತಲೆ ಉರುಳು ಸೇವೆ ಮಾಡಬೇಕಾಗಿ ಬಂದದ್ದು ಯಾವ ಸರ್ಕಾರಕ್ಕೂ ಭೂಷಣವಲ್ಲ.

ನಮ್ಮ ಗುಜರಾತ್ ರಾಜ್ಯ ಹಾಗೂ ಆಸ್ಟ್ರೇಲಿಯಾ ದೇಶ ಅಳವಡಿಸಿಕೊಂಡ ಮಾದರಿಗಳು ಕಬ್ಬು ಬೆಳೆಗಾರರ ಸಮಸ್ಯೆಗಳ ಶಾಶ್ವತ ಪರಿಹಾರಕ್ಕೆ ಸರಳ ಮಾರ್ಗಗಳಾಗಿವೆ. ರಾಜ್ಯದ ಹತ್ತು ಮಂದಿ ಕಬ್ಬು ಬೆಳೆಗಾರರು ಹಾಗೂ ಸಕ್ಕರೆಯ ತಂತ್ರಜ್ಞರು ಈಚೆಗೆ ಗುಜರಾತ್‌ಗೆ ಭೇಟಿ ನೀಡಿ ಅಧ್ಯಯನ ಮಾಡಿದ್ದಾರೆ. ಈ ತಂಡದಲ್ಲಿ ಸಕ್ಕರೆ ಕುರಿತ ತಂತ್ರಜ್ಞನಾಗಿ ನಾನು ಸಹ ಭಾಗವಹಿಸಿದ್ದೆ.

ಗುಜರಾತ್ ಸರ್ಕಾರವು ಸಕ್ಕರೆ ಉದ್ಯಮವನ್ನು ತುಂಬಾ ಶಿಸ್ತುಬದ್ಧವಾಗಿ ನಿಭಾಯಿಸುತ್ತಿದೆ. ಕಬ್ಬು ಪೂರೈಸಿದ 14 ದಿನಗಳ ಒಳಗಾಗಿ ಮೊದಲ ಕಂತಿನ ಹಣವಾಗಿ ಪ್ರತೀ ಟನ್ನಿಗೆ ₹ 2,500 ಕಡ್ಡಾಯವಾಗಿ ಪಾವತಿ ಮಾಡಬೇಕು ಎಂಬ ನಿಯಮವನ್ನು ಜಾರಿ ಮಾಡಲಾಗಿದೆ. ಕಾರ್ಖಾನೆಯು ಬಾಕಿ ಉಳಿಸಿಕೊಂಡರೆ ಮರುದಿನವೇ ಕೃಷಿ ಇಲಾಖೆಯು ಆ ಹಣವನ್ನು ರೈತರ ಬ್ಯಾಂಕ್ ಖಾತೆಗೆ ಪಾವತಿ ಮಾಡುತ್ತದೆ. ಈ ಬಗ್ಗೆ ಇಲಾಖೆಯು ಪತ್ರಿಕೆಗಳಲ್ಲಿ ಪ್ರಕಟಣೆ ನೀಡಿ ಸಾರ್ವಜನಿಕರಿಗೆ ಮಾಹಿತಿ ನೀಡುತ್ತದೆ. ಇದರಿಂದ ಕಾರ್ಖಾನೆಗಳ ಆಡಳಿತ ಮಂಡಳಿಯವರು ಅಪಮಾನಕ್ಕೆ ಗುರಿಯಾಗಬೇಕಾಗುತ್ತದೆ. ಹೀಗೆ ರೈತರಿಗೆ ಪಾವತಿ ಮಾಡಿದ ಹಣವನ್ನು ಇಲಾಖೆಯು ಬಡ್ಡಿ ಸಹಿತ ವಸೂಲು ಮಾಡುತ್ತದೆ. ಕಾರ್ಖಾನೆಯು ಸರ್ಕಾರದ ಈ ಹಣವನ್ನು ಕೊಡಲು ವಿಳಂಬ ಮಾಡಿದರೆ ಭೂಕಂದಾಯ ಬಾಕಿ ಎಂದು ಪರಿಗಣಿಸಿ ವಸೂಲು ಮಾಡಲಾಗುತ್ತದೆ.

ಕಬ್ಬು ನುರಿಸುವ ಹಂಗಾಮು ಮುಗಿದ ಒಂದು ವಾರದಲ್ಲಿ, ಬೆಲೆ ನಿಗದಿಯ ಪ್ರಕಾರ, ಬಾಕಿ ಉಳಿದಿರುವ ಎರಡನೇ ಕಂತಿನ ಹಣವನ್ನು ಪೂರ್ಣ ಪಾವತಿ ಮಾಡಬೇಕು. ಇದಕ್ಕೆ ಕಾರ್ಖಾನೆಯು ವಿಳಂಬ ಮಾಡಿದರೆ ಮತ್ತೆ ಕೃಷಿ ಇಲಾಖೆಯು ಪಾವತಿ ಮಾಡಿ, ಬಾಕಿಯನ್ನು ಕಾರ್ಖಾನೆಯಿಂದ ವಸೂಲು ಮಾಡಲು ಕ್ರಮ ಕೈಗೊಳ್ಳುತ್ತದೆ.

ದೇಶದಲ್ಲಿಯೇ ಗುಜರಾತ್ ರಾಜ್ಯದ ಸಕ್ಕರೆ ಕಾರ್ಖಾನೆಗಳು ಕಬ್ಬಿಗೆ ಅತಿ ಹೆಚ್ಚು ಬೆಲೆ ನೀಡುತ್ತಿರುವುದು ಬಹುದೊಡ್ಡ ಸಾಧನೆಯಾಗಿದೆ. 2020- 21ನೇ ಸಾಲಿನಲ್ಲಿ ಅಲ್ಲಿನ ಕಾರ್ಖಾನೆಗಳು ಪ್ರತೀ ಟನ್ನಿಗೆ ₹ 3,500 ಪಾವತಿ ಮಾಡಿವೆ. ದೇಶದ ಇತರ ಎಲ್ಲ ಕಾರ್ಖಾನೆಗಳು ₹ 2,700ರಿಂದ ₹ 3000ದವರೆಗೆ ಪಾವತಿಸಿವೆ. ಇದು ಗಮನಿಸಬೇಕಾದ ಮುಖ್ಯ ವ್ಯತ್ಯಾಸ. ಆ ರಾಜ್ಯದಲ್ಲಿ ಒಟ್ಟು 19 ಸಕ್ಕರೆ ಕಾರ್ಖಾನೆಗಳಿವೆ. ಇವೆಲ್ಲವೂ ಸಹಕಾರಿ ಸಂಘಗಳಿಗೆ ಸೇರಿವೆ. ಅಲ್ಲಿ ಒಂದೂ ಖಾಸಗಿ ಸಕ್ಕರೆ ಕಾರ್ಖಾನೆ ಇಲ್ಲ ಎಂಬುದು ಗಮನಾರ್ಹ. ಖಾಸಗಿರಂಗದ ಸಕ್ಕರೆ ಕಾರ್ಖಾನೆಗಳನ್ನು ಕಟ್ಟುವುದಕ್ಕೆ ಮತ್ತು ಸಹಕಾರಿ ಕಾರ್ಖಾನೆಗಳನ್ನು ಖಾಸಗಿಯವರಿಗೆ ಹಸ್ತಾಂತರಿಸುವುದಕ್ಕೆ ಗುಜರಾತ್ ರಾಜ್ಯ ಸಹಕಾರಿ ಸಕ್ಕರೆಯ ಉದ್ಯೋಗ ಒಕ್ಕೂಟ ತೀವ್ರ ವಿರೋಧ ಹೊಂದಿದೆ. ಸಕ್ಕರೆ ಕಾರ್ಖಾನೆಗಳನ್ನು ಖಾಸಗಿ ವಲಯದಲ್ಲಿ ಸ್ಥಾಪಿಸುವುದಕ್ಕೆ ಈ ಒಕ್ಕೂಟ ಅವಕಾಶ ಕೊಡುವುದೇ ಇಲ್ಲ.

ಗುಜರಾತ್ ಸಕ್ಕರೆ ಕಾರ್ಖಾನೆಗಳು ಪ್ರತೀ ಟನ್ ಕಬ್ಬಿನಿಂದ 120– 130 ಕಿಲೊ ಸಕ್ಕರೆ ಉತ್ಪಾದಿಸುತ್ತಿವೆ. ಕರ್ನಾಟಕದ ಕಾರ್ಖಾನೆಗಳು ಒಂದು ಟನ್ ಕಬ್ಬಿನಿಂದ 100– 110 ಕಿಲೊ ಸಕ್ಕರೆ ಉತ್ಪಾದಿಸುತ್ತಿವೆ.

ಆಸ್ಟ್ರೇಲಿಯಾ ದೇಶದ ಸಕ್ಕರೆಯ ಉದ್ದಿಮೆ ಜಗತ್ತಿಗೇ ಮಾದರಿಯಾಗಿದೆ. ಇಲ್ಲಿ ಸಕ್ಕರೆ ಮತ್ತು ಸಕ್ಕರೆ ಕೈಗಾರಿಕೆಯ ಉಪ ಉತ್ಪನ್ನಗಳ ಮಾರಾಟದ ಹೊಣೆಯನ್ನು ಕಬ್ಬು ಬೆಳೆಗಾರರೇ ನಿರ್ವಹಿಸುತ್ತಾರೆ. ಕಬ್ಬಿಗೆ ಬೆಲೆಯನ್ನು ಬೆಳೆಗಾರರ ಸಂಘಟನೆಗಳೇ ನಿರ್ಧರಿಸುತ್ತವೆ. ಹೀಗಾಗಿ ರೈತರಿಗೆ ಕಬ್ಬಿನ ಬಿಲ್ ಬಾಕಿ ಉಳಿಯುವ ಪ್ರಸಂಗ ಹಾಗೂ ಯೋಗ್ಯ ಬೆಲೆ ನಿಗದಿಪಡಿಸಲು ರೈತರು ಹೋರಾಟ ನಡೆಸಬೇಕಾದ ಪ್ರಮೇಯವೇ ಬರುವುದಿಲ್ಲ.

ರೈತರೇ ಸಕ್ಕರೆ ಹಾಗೂ ಇತರ ಉತ್ಪನ್ನಗಳನ್ನು ಮಾರಾಟ ಮಾಡಿ ಬೆಳೆಗಾರರಿಗೆ ಹಣ ಪಾವತಿ ಮಾಡುತ್ತಾರೆ. ಇದಕ್ಕಾಗಿ ಆಸ್ಟ್ರೇಲಿಯಾ ರೈತರು ಸಕ್ಕರೆ ಉತ್ಪನ್ನ ಮಾರಾಟ ಸಂಘಗಳನ್ನು ಕಟ್ಟಿಕೊಂಡಿದ್ದಾರೆ. ಸಕ್ಕರೆ ಕಾರ್ಖಾನೆಗಳು ಉತ್ಪಾದಿಸಿದ ಸಕ್ಕರೆ ಹಾಗೂ ಇತರ ಉತ್ಪನ್ನಗಳನ್ನು ಮೂರು ಭಾಗ ಮಾಡಿ, ಎರಡು ಭಾಗವನ್ನು ರೈತರಿಗೆ ಹಾಗೂ ಒಂದು ಭಾಗವನ್ನು ಕಾರ್ಖಾನೆಗೆ ಕೊಡಲಾಗುತ್ತದೆ.

ಗುಜರಾತ್ ಮತ್ತು ಆಸ್ಟ್ರೇಲಿಯಾದ ಈ ಬಗೆಯ ಎರಡು ಮಾದರಿಗಳು ಬಹಳ ಪರಿಣಾಮಕಾರಿಯಾಗಿವೆ. ಸರ್ಕಾರ ಹಾಗೂ ರೈತರು ಎಚ್ಚೆತ್ತುಕೊಂಡು ಬದಲಾವಣೆಗೆ ಮುನ್ನುಡಿ ಬರೆಯಬೇಕು.

ವಾಚಕರ ವಾಣಿ

ಕೇಬಲ್ ಮಾಫಿಯಾ: ಗಾಳಿಯಲ್ಲೇ ತೇಲಿಹೋಗುವ ದೂರು!

ಕೇಬಲ್ ಮಾಫಿಯಾದ ಕಪಿಮುಷ್ಟಿಯ ಬಗ್ಗೆ ಮುಳ್ಳೂರು ಪ್ರಕಾಶ್ ದೂರಿದ್ದಾರೆ (ವಾ.ವಾ., ನ. 23). ಈ ಮೊದಲು ಕೇಬಲ್ ಸಂಪರ್ಕದಲ್ಲಿ ಲಭ್ಯವಿದ್ದ ಯಾವುದೇ ಚಾನೆಲ್‌ಗಳನ್ನು ವೀಕ್ಷಿಸಬಹುದಾಗಿತ್ತು. ಈಗ ಪ್ರತ್ಯೇಕ ಪೇ ಚಾನೆಲ್ ಕಾರಣದಿಂದ ವಿಶ್ವಕಪ್ ಫುಟ್‌ಬಾಲ್ ಪಂದ್ಯಾವಳಿಯ ಉದ್ಘಾಟನಾ ಸಮಾರಂಭವನ್ನು ನೇರವಾಗಿ ವೀಕ್ಷಿಸಲು ತಮಗೆ ಸಾಧ್ಯವಾಗಲಿಲ್ಲ ಎಂದಿದ್ದಾರೆ. ಅವರ ಮಾತನ್ನು ನಾನೂ ಅನುಮೋದಿಸುತ್ತೇನಾದರೂ ಸ್ವಲ್ಪ ಬದಲಾವಣೆ ತರಲು ಬಯಸುತ್ತೇನೆ. ಇಂದು ಇಡೀ ಕೇಬಲ್ ಜಾಲವು ಉತ್ತರ ಭಾರತದ ಮಲ್ಟಿ ಸಿಸ್ಟಮ್ ಆಪರೇಟರ್‌ಗಳ (ಎಂಎಸ್‌ಒ) ಬಳಿ ಇದೆ ಹಾಗೂ ಚಾನೆಲ್‌ಗಳನ್ನು ಇವರೇ ನಿಯಂತ್ರಿಸುತ್ತಾರೆ ಅಥವಾ ಸ್ವತಃ ಮಾಲೀಕರಾಗಿರುತ್ತಾರೆ. ಎಲ್ಲಕ್ಕಿಂತ ಹೆಚ್ಚಾಗಿ ಕ್ರೀಡಾ ಪಂದ್ಯಗಳ ಆಯೋಜಕರು ನೇರ ಪ್ರಸಾರಕ್ಕಾಗಿ ಹರಾಜು ಕೂಗುತ್ತಾರೆ. ಈ ಪದ್ಧತಿಯನ್ನು ಕ್ರಿಕೆಟ್ ಸೇರಿದಂತೆ ಎಲ್ಲಾ ಬಲಾಢ್ಯ ಶ್ರೀಮಂತ ಆಟಗಳಲ್ಲಿ ಕಾಣಬಹುದಾಗಿದ್ದು, ಇದರಲ್ಲಿ ಆಟಗಾರರೂ ಹರಾಜಿನ ಭಾಗವಾಗಿರುತ್ತಾರೆ.

ಬಹುತೇಕ ಚಾನೆಲ್‌ಗಳ ಮಾಲೀಕರು ರಾಜಕಾರಣಿಗಳೇ ಆಗಿದ್ದು, ಸಾರ್ವಜನಿಕರು ನೀಡುವ ದೂರು ಸಂಬಂಧಿತ ವ್ಯಕ್ತಿಗಳಿಗೆ ತಲುಪದೆ ಗಾಳಿಯಲ್ಲೇ ತೇಲಿಹೋಗುತ್ತದೆ. ಎಲ್ಲಕ್ಕಿಂತ ಹೆಚ್ಚಾಗಿ ಸ್ಥಳೀಯ ಕೇಬಲ್ ಆಪರೇಟರ್‌ಗಳಿಗೆ ಕೇಬಲ್ ಪ್ರಸಾರದ ಮೇಲೆ ಇಂದು ಯಾವುದೇ ನಿಯಂತ್ರಣ ಇರುವುದಿಲ್ಲ. ಮೊದಲಿದ್ದ ಚಲನಚಿತ್ರ ಆಯ್ಕೆ, ನಮ್ಮೂರಿನ ಸುದ್ದಿ, ಜಾತ್ರೆ, ಜನ್ಮದಿನಾಚರಣೆ ಯಾವುದರ ಪ್ರಸಾರವೂ ಈಗ ಅವರ ಕೈಯಲ್ಲಿಲ್ಲ. ಒಟ್ಟಾರೆ ಕೇಬಲ್ ಆಪರೇಟರ್‌ಗಳನ್ನು ದೂರಿ ಪ್ರಯೋಜನವಿಲ್ಲ. ಕೇಂದ್ರ ಸರ್ಕಾರದ ನಿಯಂತ್ರಣದಲ್ಲಿರುವ 'ಟ್ರಾಯ್' ಹಲ್ಲು ಕಿತ್ತ ಹಾವಿನಂತಾಗಿದ್ದು, ಮಲ್ಟಿ ಸಿಸ್ಟಮ್ ಆಪರೇಟರ್‌ಗಳನ್ನು ಹದ್ದುಬಸ್ತಿನಲ್ಲಿ ಇಡಲು ವಿಫಲವಾಗಿದೆ ಎನ್ನಬಹುದು.

ಟಿ.ಉಮಾಶಂಕರ್, ಬೆಂಗಳೂರು

ಕಡಿಮೆ ವೇತನಕ್ಕೆ ಹೆಚ್ಚು ದುಡಿಮೆ

ಸರ್ಕಾರಿ ಪ್ರೌಢಶಾಲೆಯೊಂದರಲ್ಲಿ ಅತಿಥಿ ಶಿಕ್ಷಕರಾಗಿ ಕರ್ತವ್ಯ ನಿರ್ವಹಿಸುತ್ತಿರುವ ಮಿತ್ರರೊಬ್ಬರು ತೀವ್ರ ಬೇಸರದಲ್ಲಿ ಇದ್ದುದನ್ನು ಕಂಡು ಮಾತನಾಡಿಸಿದೆ. 'ನಾನು ಸುಮ್ಮನೆ ಅತಿಥಿ ಶಿಕ್ಷಕನಾಗಿ ಕೆಲಸಕ್ಕೆ ಸೇರಿ ತಪ್ಪು ಮಾಡಿದೆ' ಎಂದರು. ಕಾರಣವೇನೆಂದು ಕೇಳಿದಾಗ, 'ಹೊರಗುತ್ತಿಗೆ ಆಧಾರದ ಮೇಲೆ ನಮ್ಮ ಜೊತೆಯಲ್ಲಿಯೇ ಕೆಲಸ ಮಾಡುವ 'ಡಿ' ಗ್ರೂಪ್ ಸಿಬ್ಬಂದಿಗೆ ₹ 19,500 ವೇತನ ನೀಡಲಾಗುತ್ತಿದೆ, ಆದರೆ ನಮಗೆ ಕೇವಲ ₹ 10,500. ಅತಿಥಿ ಶಿಕ್ಷಕರ ವಿಚಾರದಲ್ಲಿ ಸರ್ಕಾರ ಯಾಕೆ ಈ ಬಗೆಯ ತಾರತಮ್ಯ ಮಾಡುತ್ತಿದೆಯೋ ತಿಳಿಯುತ್ತಿಲ್ಲ. ನಮ್ಮ ಸಮಸ್ಯೆಯನ್ನು ಆಲಿಸಿ ನ್ಯಾಯ ಕೊಡಿಸುವವರು ಯಾರೂ ಇಲ್ಲ, ಹಾಗಾಗಿ ಮುಂದಿನ ವರ್ಷದಿಂದ ಬೇರೆ ಕೆಲಸಕ್ಕೆ ಸೇರಲು ನಿರ್ಧರಿಸಿದ್ದೇನೆ' ಎಂದು ಹೇಳುತ್ತ ಕಣ್ತುಂಬಿಕೊಂಡರು.

ಹೆಚ್ಚಿನ ವಿದ್ಯಾಭ್ಯಾಸ ಮಾಡಿದವರಿಗೆ ಕಡಿಮೆ ವೇತನ ನೀಡಿ ಹೆಚ್ಚು ಕೆಲಸ ಮಾಡಿಸಿಕೊಳ್ಳುವ ಅಮಾನವೀಯತೆ ನಮ್ಮ ದೇಶದಲ್ಲಿ ಮಾತ್ರ ಇರಬಹುದೇನೋ ಎನಿಸಿತು.

ಭೀಮಾನಂದ ಮೌರ್ಯ, ಮೈಸೂರು

ಎಥೆನಾಲ್ ಉತ್ಪಾದನೆ: ಹಲವು ಸಮಸ್ಯೆಗೆ ಪರಿಹಾರ

ಕಬ್ಬು ನುರಿಸುವ ಹಂಗಾಮು ಈಗಾಗಲೇ ಪ್ರಾರಂಭವಾಗಿದ್ದು, ಈ ವರ್ಷ ಸಹ ಕಬ್ಬಿನ ಬೆಲೆ ನಿಗದಿ ವಿಚಾರವಾಗಿ ಕಾರ್ಖಾನೆಗಳು ಹಾಗೂ ಕಬ್ಬು ಬೆಳೆಗಾರರ ನಡುವೆ ಸಂಘರ್ಷಗಳು ನಡೆಯುತ್ತಿವೆ. ಬೇಡಿಕೆಗಿಂತ ಉತ್ಪಾದನೆ ಹೆಚ್ಚಾಗಿರುವುದು ಹಾಗೂ ಕಬ್ಬಿನ ವಿವಿಧ ಉತ್ಪನ್ನಗಳಿಗೆ ಸ್ಥಿರವಾದ ಬೆಲೆ ಇಲ್ಲದ ಕಾರಣ ಸಕ್ಕರೆ ಉದ್ಯಮವು ಆರ್ಥಿಕ ಮುಗ್ಗಟ್ಟಿಗೆ ಸಿಲುಕಿದೆ. ಇದರಿಂದಾಗಿ ಕಬ್ಬು ಬೆಳೆಗಾರರಿಗೆ ಯೋಗ್ಯ ದರ ನೀಡುವಷ್ಟು ಕಾರ್ಖಾನೆಗಳೂ ಸಶಕ್ತವಾಗಿಲ್ಲ. ಹಾಗಾಗಿ ಎಥೆನಾಲ್ ಉತ್ಪಾದಿಸಿದರೆ ಸಕ್ಕರೆ ಕಾರ್ಖಾನೆಗಳ ವರಮಾನ ಹೆಚ್ಚುತ್ತದೆ.

ಕೇಂದ್ರ ಸರ್ಕಾರವು ಎಥೆನಾಲ್ ಬಳಕೆ ಹೆಚ್ಚಿಸಲು 2025ರ ಒಳಗಾಗಿ ಪೆಟ್ರೋಲ್, ಡೀಸೆಲ್‌ನಲ್ಲಿ ಸುಮಾರು ಶೇ 30ರಷ್ಟು ಎಥೆನಾಲ್ ಬೆರೆಸುವ ಗುರಿ ಹಾಕಿಕೊಂಡಿದೆ. ಇದು ಸಾಧ್ಯವಾದರೆ ಕಚ್ಚಾ ತೈಲದ ಆಮದು ಅವಲಂಬನೆ ಕಡಿಮೆಯಾಗುತ್ತದೆ. ಪರೋಕ್ಷವಾಗಿ ಸಕ್ಕರೆ ಕಾರ್ಖಾನೆಗಳ ವರಮಾನ ಹೆಚ್ಚಾಗುವುದರ ಜೊತೆಗೆ ರೈತರ ಕಬ್ಬಿನ ಬೆಳೆಗೂ ನ್ಯಾಯಯುತ ಬೆಲೆ ನೀಡಲು ಸಾಧ್ಯವಾಗುತ್ತದೆ. ಹಾಗೆಯೇ ಸಕ್ಕರೆ ಕಾರ್ಖಾನೆಗಳಲ್ಲಿ ವರ್ಷಕ್ಕೆ 5-6 ತಿಂಗಳಷ್ಟೇ ಕೆಲಸ ಇರುತ್ತದೆ. ಎಥೆನಾಲ್ ಉತ್ಪಾದನೆ ಆರಂಭಿಸಿದರೆ ನೌಕರರಿಗೆ ವರ್ಷವಿಡೀ ಕೆಲಸ ದೊರೆಯುತ್ತದೆ.

ಬಾಬು ಶಿರಮೋಜಿ, ಬೆಳಗಾವಿ

ಹೆಜ್ಜೇನು: ಬೇಕು ಅರಿವಿನ ತರಬೇತಿ

ಮೈಸೂರು ಜಿಲ್ಲೆಯ ಗ್ರಾಮವೊಂದರಲ್ಲಿ ಹೆಜ್ಜೇನು ದಾಳಿಯಿಂದ ಇತ್ತೀಚೆಗೆ ವ್ಯಕ್ತಿಯೊಬ್ಬರು ಮೃತಪಟ್ಟಿರುವುದು ಅತ್ಯಂತ ನೋವಿನ ಸಂಗತಿ. ಗ್ರಾಮೀಣ ಭಾಗದಲ್ಲಿ ಇಂಥ ಪ್ರಕರಣಗಳು ವಿರಳವಲ್ಲ. ಸ್ಥಳೀಯ ಆಡಳಿತವು ಇದನ್ನು ಗಂಭೀರವಾಗಿ ಗಮನಿಸಿ, ತಜ್ಞರ ಸಲಹೆ ಪಡೆದು ಹೆಜ್ಜೇನಿನಿಂದ ಸುರಕ್ಷತೆ ಕಾಯ್ದುಕೊಳ್ಳುವ ಬಗ್ಗೆ ರೈತರಲ್ಲಿ ಅರಿವು ಮೂಡಿಸಬೇಕಾಗಿದೆ. ಪ್ರಕೃತಿಯಲ್ಲಿ ವಿವಿಧ ಬಗೆಯ ಜೇನುನೊಣಗಳು ಇದ್ದು ಅವುಗಳ ಪಾತ್ರ ಹಾಗೂ ಜೀವನ ಕ್ರಮ ವಿಸ್ಮಯಕಾರಿಯಾದದ್ದು. ಇವುಗಳಲ್ಲಿ ಹೆಜ್ಜೇನಿಗೆ ಉಗ್ರ ಸ್ವಭಾವವಿದೆ ಮತ್ತು ಅವುಗಳಲ್ಲಿ ಹೆಚ್ಚು ವಿಷಪೂರಿತ ಕೊಂಡಿಗಳಿರುವುದರಿಂದ ಕೆಲವೇ ಕೆಲವು ಜೇನುನೊಣಗಳು ಚುಚ್ಚಿದರೂ ಮಾರಣಾಂತಿಕ ಅಪಾಯ ಎದುರಾಗುತ್ತದೆ. ಆದ್ದರಿಂದ, ಇವುಗಳನ್ನು ಕಾಡುಪ್ರಾಣಿಗಳಂತೆಯೇ ಪರಿಗಣಿಸಲಾಗುತ್ತದೆ. ಆದರೆ, ಸಾಕುವ ಜೇನುಗಳಲ್ಲಿ ಉಗ್ರ ಸ್ವಭಾವವಿಲ್ಲ ಮತ್ತು ಅವುಗಳ ಕೊಂಡಿಗಳಲ್ಲಿ ವಿಷದ ಪ್ರಮಾಣ ಕೂಡ ಕಡಿಮೆಯಿರುತ್ತದೆ. ಆದ್ದರಿಂದ, ತರಬೇತಿಯ ಮೂಲಕ ರೈತರನ್ನು ಜೇನು ಉದ್ಯಮದಲ್ಲೂ ತೊಡಗಿಸಿಕೊಳ್ಳಬಹುದು. ಇದಲ್ಲದೆ, ಜೇನು ಉತ್ಪನ್ನಗಳ ಜೊತೆಗೆ ಇವು ಪರಾಗಸ್ಪರ್ಶ ಕ್ರಿಯೆಯಲ್ಲಿ ತೊಡಗುವುದರಿಂದ ಶೇಕಡ 80ರಷ್ಟು ಬೆಳೆಗಳಲ್ಲಿ ಹೆಚ್ಚಿನ ಇಳುವರಿಯನ್ನೂ ಪಡೆಯಹುದು.

'ಯಾವುದಾದರೊಂದು ದುಷ್ಟಶಕ್ತಿ ಜೇನುನೊಣಗಳನ್ನು ಭೂಮಿಯ ಪರಿಸರದಿಂದ ಹೊರದೂಡಿದರೆ ಮಾನವಕುಲ ಕ್ಷಿಪ್ರವಾಗಿ ನಾಶವಾಗುವುದರಲ್ಲಿ ಸಂದೇಹವಿಲ್ಲ' ಎಂದು ವಿಜ್ಞಾನಿ ಐನ್‌ಸ್ಟೀನ್ ಹೇಳಿದ್ದರು. ಈ ಹೇಳಿಕೆಯ ಮಹತ್ವವನ್ನು ನಾವು ಅರಿಯಬೇಕಾಗಿದೆ.

ಡಾ. ಡಿ.ರಾಜಗೋಪಾಲ್, ಬೆಂಗಳೂರು

Printed and published by B A Ravi on behalf of The Printers (Mysore) Private Ltd., at The Printers (Mysore) Private Ltd, Plot Nos. 7-12, Kumbalgodu Industrial Area, Bengaluru-560 074. News Editor (Responsible for selection of news under the PRB Act): Sudesha Doddapalya. Editorial Office: 75, Mahatma Gandhi Road, Bengaluru- 560 001. E-mail: editorpv@prajavani.co.in. Phone: 080-45557333, Editorial: 080-45557251, Circ: 080-45557204, Advt: 080-45557163/080-45557164. Also printed at Hubballi-Dharwad, Mangaluru, Kalaburagi, Davanagere, Mysuru and Hosapete. © All rights reserved. Reproduction in whole or in part without permission is prohibited. To know more about The Printers (Mysore) Private Ltd, visit www.printersmysore.com.

ಇಡಬ್ಲ್ಯುಎಸ್ ಮೀಸಲು ಸುಪ್ರೀಂ ಕೋರ್ಟ್ ತೀರ್ಪು ಮರುಪರಿಶೀಲನೆ ನಡೆಸಿ

ಮೀಸಲಾತಿ ಚರ್ಚೆ 1

ಜಾತಿ ಆಧಾರಿತವಾದ ಮೀಸಲಾತಿಯ ತತ್ವ ಮತ್ತು ತರ್ಕವನ್ನು ಆರ್ಥಿಕ ಸ್ಥಿತಿ ಆಧಾರಿತ ಮೀಸಲಾತಿಯು ಮುರಿದಿದೆ. ಆರ್ಥಿಕ ಸ್ಥಿತಿ ಆಧಾರಿತವಾದ ಮೀಸಲಾತಿಯಿಂದ ಪರಿಶಿಷ್ಟ ಜಾತಿ, ಪಂಗಡ, ಒಬಿಸಿ ಗುಂಪುಗಳನ್ನು ಹೊರಗೆ ಇರಿಸಿರುವುದು ತಾರತಮ್ಯ ಮಾಡಿದಂತಾಗಿದೆ

• ಎ.ವಿ.ಎಸ್. ನಂಬೂದಿರಿ



‘ಆರ್ಥಿಕವಾಗಿ ದುರ್ಬಲ ವರ್ಗದವರಿಗೆ (ಇಡಬ್ಲ್ಯುಎಸ್) ಶಿಕ್ಷಣ ಮತ್ತು ಸರ್ಕಾರಿ ಉದ್ಯೋಗದಲ್ಲಿ ಶೇ 10ರಷ್ಟು ಮೀಸಲಾತಿ ನೀಡುವುದು ಸಂವಿಧಾನ ಬದ್ಧ’ ಎಂದು ಸುಪ್ರೀಂ ಕೋರ್ಟ್ ತನ್ನ ಇತ್ತೀಚಿನ ತೀರ್ಪಿನಲ್ಲಿ ಹೇಳಿದೆ. ಇದೇ ನವೆಂಬರ್ 7ರಂದು ನೀಡಿದ ಈ ತೀರ್ಪಿನ ಮೂಲಕ, ಕೇಂದ್ರ ಸರ್ಕಾರವು ಸಂವಿಧಾನಕ್ಕೆ ತಂದಿರುವ 103ನೇ ತಿದ್ದುಪಡಿಯನ್ನು ಸುಪ್ರೀಂ ಕೋರ್ಟ್ ಎತ್ತಿಹಿಡಿದಿದೆ. ಈ ಮೂಲಕ ಮೀಸಲಾತಿ ವ್ಯವಸ್ಥೆಯ ಮೂಲ ವ್ಯಾಖ್ಯಾನವನ್ನೇ ಸುಪ್ರೀಂ ಕೋರ್ಟ್ ಬದಲಿಸಿದೆ. ಈವರೆಗೆ ಜಾತಿ-ಸಮುದಾಯ ಆಧಾರಿತವಾಗಿ ಮೀಸಲಾತಿ ನೀಡಲಾಗುತ್ತಿತ್ತು. ಆದರೆ ಈಗ, ವ್ಯಕ್ತಿ ಕೇಂದ್ರಿತವಾದ ಮೀಸಲಾತಿ ವ್ಯವಸ್ಥೆಗೆ ಮಣೆ ಹಾಕಲಾಗಿದೆ. ಮೀಸಲಾತಿಯ ಪರಿಕಲ್ಪನೆಯನ್ನೇ ಬದಲಿಸುವ ಈ ತಿದ್ದುಪಡಿಯನ್ನು ಸುಪ್ರೀಂ ಕೋರ್ಟ್ ಎತ್ತಿಹಿಡಿದಿರುವುದು, ದೇಶದ ಮೀಸಲಾತಿ ವ್ಯವಸ್ಥೆಯ ಮೇಲೆ ಪ್ರತಿಕೂಲ ಪರಿಣಾಮಕ್ಕೆ ಕಾರಣವಾಗಲಿದೆ.

ಮೀಸಲಾತಿಯ ಪರಿಕಲ್ಪನೆ ಮತ್ತು ಈ ಕುರಿತು ನ್ಯಾಯಾಂಗದ ತೀರ್ಪುಗಳು ವೈವಿಧ್ಯಮಯ ಇತಿಹಾಸವನ್ನು ಹೊಂದಿವೆ. ಸ್ವಾತಂತ್ರ್ಯಪೂರ್ವ ಭಾರತದಲ್ಲೇ ಕೆಲವು ಪ್ರಗತಿಪರ ಸಂಸ್ಥಾನಗಳು ಮೀಸಲಾತಿಯನ್ನು ಜಾರಿಗೆ ತಂದಿದ್ದವು. 1932ರಲ್ಲಿ ಮಹಾತ್ಮ ಗಾಂಧಿ ಮತ್ತು ಡಾ.ಬಿ.ಆರ್.ಅಂಬೇಡ್ಕರ್ ಅವರ ಮಧ್ಯೆ ನಡೆದ ಪೂನಾ ಒಪ್ಪಂದವು, ಹಿಂದೂ ಧರ್ಮದ ಮತದಾರರೊಳಗೆ ದಲಿತರಿಗೆ ಪ್ರತ್ಯೇಕ ಪ್ರಾತಿನಿಧ್ಯ ಒದಗಿಸಿತ್ತು. ನಂತರದ ವರ್ಷಗಳಲ್ಲಿ ಈ ಮೀಸಲಾತಿಯು ಹಲವು ಬದಲಾವಣೆಗಳಿಗೆ ತನ್ನನ್ನು ಒಡ್ಡಿಕೊಂಡಿದೆ. ಸುಪ್ರೀಂ ಕೋರ್ಟ್‌ನ ತೀರ್ಪುಗಳೂ ಮೀಸಲಾತಿಯ ವ್ಯಾಪ್ತಿಯನ್ನು ಹೆಚ್ಚಿಸಿವೆ ಮತ್ತು ಅದರ ಪರಿಕಲ್ಪನೆಯನ್ನು ಸ್ಪಷ್ಟಪಡಿಸಿವೆ. ಕೆಲವು ತೀರ್ಪುಗಳು ಮೀಸಲಾತಿಗೆ ಮಿತಿಯನ್ನೂ ಹೇರಿವೆ.

1951ರಲ್ಲಿ ಸಂವಿಧಾನಕ್ಕೆ ಮಾಡಲಾದ ಮೊದಲ ತಿದ್ದುಪಡಿಯು ಮೀಸಲಾತಿಗೆ ಕಾನೂನು ಮತ್ತು ಸಾಂವಿಧಾನಿಕ ಮಂಜೂರಾತಿಯನ್ನು ಕೊಟ್ಟಿತು. ಸಾಮಾಜಿಕ ಮತ್ತು ಆರ್ಥಿಕವಾಗಿ ಹಿಂದುಳಿದ ವರ್ಗಗಳಿಗೆ ವಿಶೇಷವಾಗಿ ಪರಿಶಿಷ್ಟ ಜಾತಿ, ಪಂಗಡಗಳಿಗೆ, ನಂತರದಲ್ಲಿ, ಇತರ ಹಿಂದುಳಿದ ವರ್ಗಗಳಿಗೆ ಮೀಸಲಾತಿ ನೀಡುವ ವಿಶೇಷ ಅವಕಾಶವನ್ನು ಸರ್ಕಾರಕ್ಕೆ ಕೊಟ್ಟಿತು.

ಮೀಸಲಾತಿಯನ್ನು ಪ್ರಶ್ನಿಸಿ ಸಲ್ಲಿಸಲಾಗಿದ್ದ ಚಂಪಕನ್ ದೊರೈರಾಜನ್ ಪ್ರಕರಣದಲ್ಲಿನ ತೀರ್ಪು, ಮೀಸಲಾತಿಗೆ ಸಂಬಂಧಿಸಿದ ಅತ್ಯಂತ ಮಹತ್ವದ ಮೈಲುಗಲ್ಲು. ‘ಮೀಸಲಾತಿಯು ಸಮಾನತೆಗೆ ವಿರುದ್ಧವಾದುದು ಮತ್ತು ಅದು ಸಂವಿಧಾನದ ಮೂರನೇ ಭಾಗದಲ್ಲಿ ಹೇಳಲಾದ ಸಮಾನತೆಯನ್ನು ಉಲ್ಲಂಘಿಸುತ್ತದೆ’ ಎಂದು ಈ ಪ್ರಕರಣದಲ್ಲಿ ಸುಪ್ರೀಂ ಕೋರ್ಟ್ ತೀರ್ಪು ನೀಡಿತ್ತು.

ಈ ತೀರ್ಪೇ, ಸಂವಿಧಾನಕ್ಕೆ ಮೊದಲ ತಿದ್ದುಪಡಿ ತರಲು ಕಾರಣವಾಯಿತು. ಮೀಸಲಾತಿಯು ಸಂವಿಧಾನಕ್ಕೆ ವಿರುದ್ಧವಾದುದು ಎಂದು ಸುಪ್ರೀಂ ಕೋರ್ಟ್ ಹೇಳಿದ್ದರಿಂದಲೇ ಸಂವಿಧಾನದ 15ನೇ ವಿಧಿಗೆ ತಿದ್ದುಪಡಿ ತರಲಾಯಿತು.

1964ರ ದೇವದಾಸನ್ ಪ್ರಕರಣ ಮತ್ತು 1975ರ ಎನ್.ಎಂ.ಥಾಮಸ್ ಪ್ರಕರಣಗಳಲ್ಲಿ ಸುಪ್ರೀಂ ಕೋರ್ಟ್ ತೀರ್ಪುಗಳು, ‘ಮೀಸಲಾತಿ ಎಂಬುದು ಸಮಾನತೆಗೆ ವಿರುದ್ಧವಾದುದಲ್ಲ. ಬದಲಿಗೆ ಮೀಸಲಾತಿಯು ಸಮಾನತೆಯ ಒಂದು ಭಾಗ’ ಎಂದು ವ್ಯಾಖ್ಯಾನಿಸಿದವು.

ನವೆಂಬರ್ 7ರ ತೀರ್ಪಿನ ಮೂಲಕ ಸುಪ್ರೀಂ ಕೋರ್ಟ್, ಮೀಸಲಾತಿ ಪರಿಕಲ್ಪನೆಯನ್ನೇ ದುರ್ಬಲಗೊಳಿಸಿದೆ. 3:2ರ ಬಹುಮತದ ಈ ತೀರ್ಪು, ‘103ನೇ ತಿದ್ದುಪಡಿಯು ಸಂವಿಧಾನದ ಮೂಲ ರಚನೆಗೆ ಧಕ್ಕೆ ತರುವುದಿಲ್ಲ’ ಎಂದು ಹೇಳಿದೆ. ತೀರ್ಪು ಬಂದಾಗ ಮುಖ್ಯ ನ್ಯಾಯಮೂರ್ತಿಯಾಗಿದ್ದ ಯು.ಯು. ಲಲಿತ್ ಮತ್ತು ನ್ಯಾಯಮೂರ್ತಿ ಎಸ್.ರವೀಂದ್ರ ಭಟ್ ಅವರು, ‘ಈ ತಿದ್ದುಪಡಿಯು ತಾರತಮ್ಯದಿಂದ ಕೂಡಿದ್ದು, ಅದನ್ನು ರದ್ದುಪಡಿಸಬೇಕು’ ಎಂದು ಹೇಳಿದ್ದರು. ನ್ಯಾಯಮೂರ್ತಿಗಳಾದ ದಿನೇಶ್ ಮಾಹೇಶ್ವರಿ, ಬೇಲಾ ಎಂ.ತ್ರಿವೇದಿ ಮತ್ತು ಜೆ.ಬಿ.ಪಾರ್ದೀವಾಲಾ ಅವರ ತೀರ್ಪಿಗಿಂತ ಭಿನ್ನವಾದ ತೀರ್ಪನ್ನು ಈ ಇಬ್ಬರು ನ್ಯಾಯಮೂರ್ತಿಗಳು ನೀಡಿದ್ದರು.

ಈ ತಿದ್ದುಪಡಿಯು ತಾರತಮ್ಯವನ್ನು ಮಾಡುತ್ತದೆ. ಏಕೆಂದರೆ ಆರ್ಥಿಕವಾಗಿ ಹಿಂದುಳಿದಿರುವಿಕೆಯ ಆಧಾರದಲ್ಲಿ ಮಾತ್ರ ಇದು ಮೀಸಲಾತಿಯನ್ನು ನೀಡುತ್ತದೆ. ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡ ಮತ್ತು ಇತರೆ ಹಿಂದುಳಿದ ವರ್ಗಗಳನ್ನು ಈ ಮೀಸಲಾತಿಯಿಂದ ಹೊರಗಿಡುತ್ತದೆ. ಮತ್ತು ಈವರೆಗೆ ಇದ್ದ ಮೀಸಲಾತಿಯ ವ್ಯಾಪ್ತಿಯಲ್ಲಿ ಇಲ್ಲದಿದ್ದ ಸವರ್ಣೀಯರು ಹಾಗೂ ಮುಂದುವರಿದ ಜಾತಿಗಳಿಗೆ ಮಾತ್ರ ಈ ಮೀಸಲಾತಿಯನ್ನು ಕಲ್ಪಿಸುತ್ತದೆ. ಈ ಕಾರಣದಿಂದಲೇ ಈ ತಿದ್ದುಪಡಿಯು ತಾರತಮ್ಯದಿಂದ ಕೂಡಿದೆ.

ಐತಿಹಾಸಿಕವಾಗಿ ತುಳಿತಕ್ಕೆ ಒಳಗಾಗಿ ಸಾಮಾಜಿವಾಗಿ ಮತ್ತು ಆರ್ಥಿಕವಾಗಿ ಹಿಂದುಳಿದವರಿಗೆ ವಿಶೇಷ ಸ್ಥಾನ ಕಲ್ಪಿಸುವುದು ಮೀಸಲಾತಿಯ ಉದ್ದೇಶವಾಗಿತ್ತು. ಮೀಸಲಾತಿಯು, ಅಸಮಾನ ಸಮಾಜದಲ್ಲಿ ಸಮಾನತೆಯನ್ನು ಸಾಧಿಸುವ ಒಂದು ಪರಿಹಾರ ರೂಪದ ಸಾಧನ. ಈ ಕಾರಣದಿಂದಲೇ 1992ರ ಇಂದಿರಾ ಸಾಹ್ನಿ ಪ್ರಕರಣದಲ್ಲಿ ಒಂಬತ್ತು ನ್ಯಾಯಮೂರ್ತಿಗಳ ಸಂವಿಧಾನ ಪೀಠವು, ‘ಆರ್ಥಿಕವಾಗಿ ಹಿಂದುಳಿದಿರುವಿಕೆ ಒಂದೇ ಮೀಸಲಾತಿಗೆ ಮಾನದಂಡವಲ್ಲ’ ಎಂದು ಹೇಳಿತ್ತು. ಮತ್ತು ಇತರೆ ಹಿಂದುಳಿದ ವರ್ಗಗಳಿಗೆ ನೀಡಿದ ಮೀಸಲಾತಿಯನ್ನು ಎತ್ತಿಹಿಒಡಿದಿತ್ತು. ಆದರೆ ಈಗಿನ ಐವರು ಸದಸ್ಯರ ಸಂವಿಧಾನ ಪೀಠದ ತೀರ್ಪು, ಆರ್ಥಿಕವಾಗಿ ಹಿಂದುಳಿದಿರುವಿಕೆ ಒಂದೇ ಮೀಸಲಾತಿಗೆ ಮಾನದಂಡ ಎಂಬ ತಿದ್ದುಪಡಿಯನ್ನು ಎತ್ತಿ ಹಿಡಿದಿದೆ. ಮೀಸಲಾತಿಯ ಮೂಲ ಪರಿಕಲ್ಪನೆಗೆ ವ್ಯತಿರಿಕ್ತವಾದ ರೀತಿಯಲ್ಲಿ ಇಡಬ್ಲ್ಯುಎಸ್ ಮೀಸಲಾತಿಯನ್ನು ಈ ತೀರ್ಪು ವ್ಯಾಖ್ಯಾನಿಸಿದೆ.

ಮೀಸಲಾತಿಗೆ ಇದ್ದ ಗರಿಷ್ಠ ಶೇ50ರ ಪ್ರಮಾಣದ ಮಿತಿಯನ್ನು ಮೀರಲೂ ಈ ತೀರ್ಪು ಅವಕಾಶ ಮಾಡಿಕೊಟ್ಟಿದೆ. ಜತೆಗೆ, ಜಾತಿ ಆಧಾರಿತ ಮೀಸಲಾತಿಗಷ್ಟೇ ಇಂತಹ ಮಿತಿ ಅನ್ವಯವಾಗುತ್ತದೆ ಎಂದು ಪ್ರತಿಪಾದಿಸಿದೆ. ಒಮ್ಮೆ ಇಂತಹ ಮಿತಿಯನ್ನು ಮುರಿದರೆ, ಮತ್ತೆ-ಮತ್ತೆ ಅದನ್ನು ಮುರಿಯಲಾಗುತ್ತದೆ. ಆದರೆ ರಾಜಕೀಯ ಕಾರಣಕ್ಕೆ ಇಡಬ್ಲ್ಯುಎಸ್‌ನಂತಹ ಮೀಸಲಾತಿ ನೀಡಲು ಈ ಮಿತಿ ಮುರಿಯಲಾಗುತ್ತದೆಯೇ ಹೊರತು, ಸಾಮಾಜಿಕ ನ್ಯಾಯದ ಉದ್ದೇಶದಿಂದ ಮತ್ತು ಸಾರ್ವಜನಿಕ ಹಿತಾಸಕ್ತಿಯಿಂದ ಅಲ್ಲ.

ವಿನಾಶದ ಬೀಜ

ಇಡೀ ಮೀಸಲಾತಿ ವ್ಯವಸ್ಥೆಯನ್ನು ಉರುಳಿಸುವ ತರ್ಕವು ಇಡಬ್ಲ್ಯುಎಸ್ ಮೀಸಲಾತಿಯ ಯೋಚನೆಯಲ್ಲಿ ಇದೆ. ಬಹುಮತದ ತೀರ್ಪಿನಲ್ಲಿ ಇರುವ ಎರಡು ಅಂಶಗಳು ಗಮನಾರ್ಹ. ‘ಪರಿವರ್ತನಾತ್ಮಕ ಸಂವಿಧಾನವಾದದತ್ತ ಸಾಗುವುದಕ್ಕಾಗಿ ಸಮಾಜದ ಸಮಗ್ರ ಹಿತದೃಷ್ಟಿಯಿಂದ ಮೀಸಲಾತಿ ವ್ಯವಸ್ಥೆಯನ್ನು ಮರುಪರಿಶೀಲನೆಗೆ ಒಳಪಡಿಸಬೇಕಾದ ಅಗತ್ಯ ಇದೆ’ ಎಂದು ನ್ಯಾಯಮೂರ್ತಿ ಬೇಲಾ ತ್ರಿವೇದಿ ಹೇಳಿದ್ದಾರೆ. ಮೀಸಲಾತಿಯು ಸ್ಥಾಪಿತ ಹಿತಾಸಕ್ತಿ ಆಗುವುದಕ್ಕೆ ಅವಕಾಶ ಕೊಡಬಾರದು... ಹಿಂದುಳಿದ ವರ್ಗಗಳ ಹೆಚ್ಚು ಹೆಚ್ಚು ಜನರು ಶಿಕ್ಷಣ ಮತ್ತು ಉದ್ಯೋಗದಲ್ಲಿ ಸ್ವೀಕಾರಾರ್ಹ ಮಟ್ಟಕ್ಕೆ ತಲುಪುತ್ತಲೇ ಅವರನ್ನು ಹಿಂದುಳಿದ ವರ್ಗಗಳಿಂದ ತೆಗೆದು ಬಿಡಬೇಕು’ ಎಂದು ಪಾರ್ದೀವಾಲಾ ಹೇಳಿದ್ದಾರೆ.

ಮುಂದುವರಿದಿದ್ದಾರೆ ಎಂಬ ತರ್ಕದಲ್ಲಿ ಮೀಸಲಾತಿ ವ್ಯವಸ್ಥೆಯನ್ನು ಮರುರೂಪಿಸುವುದರ ಹಿಂದಿನ ಚಿಂತನೆ ಹೀಗಿರಬಹುದು: ಆರ್ಥಿಕ ಸ್ಥಿತಿಗತಿ ಆಧಾರದಲ್ಲಿ ಮೀಸಲಾತಿ ನೀಡಿಕೆಯು ಕಾನೂನುಬದ್ಧ ಮತ್ತು ಸಾಂವಿಧಾನಿಕ ಎಂದಾದರೆ, ಈಗ ಇರುವ ಸಾಂಪ್ರದಾಯಿಕ ಮೀಸಲಾತಿ ವ್ಯವಸ್ಥೆಯನ್ನು ಕೈಬಿಟ್ಟು ಅದನ್ನೇ ಎಲ್ಲರಿಗೂ ಏಕೆ ವಿಸ್ತರಿಸಬಾರದು? ಅದನ್ನು ‘ಒಂದು ದೇಶ, ಒಂದು ಮೀಸಲಾತಿ’ ಎಂದೂ ಬಣ್ಣಿಸಬಹುದು. ಜನರನ್ನು ಅವರ ಜಾತಿಯ ಆಧಾರದಲ್ಲಿ ಗುರುತಿಸಬಾರದು, ಜಾತಿರಹಿತ ಸಮಾಜ ನಿರ್ಮಾಣದ ಪ್ರಯತ್ನ ಇದು ಎಂದು ಭಾವನಾತ್ಮಕವಾಗಿ ಹೇಳಬಹುದು. ಹೀಗಾಗಿ ಜಾತಿ ಆಧಾರಿತ ಮೀಸಲಾತಿಯನ್ನು ರದ್ದುಪಡಿಸಬೇಕು. ಅಗತ್ಯ ಇರುವ ಎಲ್ಲರಿಗೂ ಮೀಸಲಾತಿ ಸಿಗುವ ರೀತಿಯಲ್ಲಿ ಅಥವಾ ಅಗತ್ಯ ಇಲ್ಲದವರಿಗೆ ಸಿಗದ ರೀತಿಯಲ್ಲಿ ಆರ್ಥಿಕ ಸ್ಥಿತಿಗತಿ ಆಧಾರಿತ ಮೀಸಲಾತಿಯನ್ನು ರೂಪಿಸಬಹುದು. ದೇಶದಲ್ಲಿ ಈಗ ರೂಪುಗೊಳ್ಳುತ್ತಿರುವ ವಾತಾವರಣದಲ್ಲಿ ಈ ವಾದಗಳು ಸರಿಯಾಗಿಯೇ ಇವೆ, ವಿವೇಕಯುತವಾದುದು ಎಂದೂ ಕಾಣಿಸಬಹುದು. ಈ ವಾದಗಳನ್ನು ಬಳಸಿಕೊಂಡೇ ಈಗ ಇರುವ ಮೀಸಲಾತಿ ವ್ಯವಸ್ಥೆಯನ್ನು ರದ್ದುಪಡಿಸಬಹುದು.

ಹಿಂದುಳಿದ ವರ್ಗಗಳ ಜನರನ್ನು ಚಾರಿತ್ರಿಕವಾಗಿ ಶೋಷಿಸಲಾಗಿದೆ ಮತ್ತು ದಮನಿಸಲಾಗಿದೆ ಹಾಗೂ ಸವರ್ಣೀಯರಿಗೆ ಹೋಲಿಸಿದರೆ ಶತಮಾನಗಳಿಂದ ಇವರು ಅನನುಕೂಲಕರ ಸ್ಥಿತಿಯಲ್ಲಿಯೇ ಇದ್ದರು ಎಂಬುದನ್ನು ಅವರವರ ಅನುಕೂಲಕ್ಕೆ ತಕ್ಕಂತೆ ನಿರ್ಲಕ್ಷಿಸಬಹುದು.

ತೀರ್ಪನ್ನು ಮರುಪರಿಶೀಲನೆಗೆ ಒಳಪಡಿಸಬೇಕಾದ ಅಗತ್ಯ ಖಂಡಿತವಾಗಿಯೂ ಇದೆ.

ಲೇಖಕ: ಡೆಕ್ಕನ್ ಹೆರಾಲ್ಡ್ ಪತ್ರಿಕೆಯ ಸಂಪಾದಕೀಯ ಸಲಹೆಗಾರ, ನಿವೃತ್ತ ಸಹ ಸಂಪಾದಕ

ತಾರತಮ್ಯಕ್ಕೆ ಅವಕಾಶ

ಆರ್ಥಿಕ ಸ್ಥಿತಿಗತಿಯ ಕಾರಣದಿಂದಾಗಿ ಈ ಮೀಸಲಾತಿ ಪಡೆಯಲು ಅರ್ಹರಾದ ಬಹುದೊಡ್ಡ ಜನವರ್ಗವನ್ನು ಈ ಮೀಸಲಾತಿ ವ್ಯಾಪ್ತಿಯಿಂದ ಹೊರಗೆ ಇರಿಸಲಾಗಿದೆ. ಅವರು ಜಾತಿ ಆಧಾರಿತ ಮೀಸಲಾತಿಗೆ ಅರ್ಹರು ಎಂಬ ಕಾರಣಕ್ಕೆ ಹೀಗೆ ಮಾಡಲಾಗಿದೆ. ಇದುವೇ ಸಂವಿಧಾನಕ್ಕೆ ಮಾಡಲಾದ 103ನೇ ತಿದ್ದುಪಡಿಯ ಬಹುದೊಡ್ಡ ಲೋಪವಾಗಿದೆ. ಇದಕ್ಕೆ ರಾಜಕೀಯವಾದ ತರ್ಕ ಇರಬಹುದು. ಆದರೆ, ಕಾನೂನು ಮತ್ತು ಸಂವಿಧಾನಕ್ಕೆ ಅನುಗುಣವಾಗಿ ಇದು ಇದೆ ಎಂದು ಹೇಳಲಾಗದು. ಬಹುದೊಡ್ಡ ಜನವರ್ಗಕ್ಕೆ ಅವರ ಮೂಲಭೂತ ಹಕ್ಕಾದ ಸಮಾನ ಅವಕಾಶಗಳ ಹಕ್ಕನ್ನು ನಿರಾಕರಿಸಿರುವುದು ಸ್ವೇಚ್ಛಾಚಾರದ ನಿರ್ಧಾರವೇ ಸರಿ. ಒಬ್ಬ ವ್ಯಕ್ತಿಗೆ ಒಂದು ಪ್ರಯೋಜನ ದೊರಕುತ್ತಿದೆ ಎಂಬ ಕಾರಣಕ್ಕೆ ಇನ್ನೊಂದು ಅನುಕೂಲ ಕೊಡಬಾರದು ಎಂಬ ತರ್ಕವು ಸಮರ್ಪಕವೂ ಅಲ್ಲ ಕಾನೂನುಬದ್ಧವೂ ಅಲ್ಲ.

ಈ ತಾರತಮ್ಯವನ್ನು ‘ವಿವೇಚನಾಯುಕ್ತ ವರ್ಗೀಕರಣ’ದ ಹೆಸರಿನಲ್ಲಿ ಎತ್ತಿ ಹಿಡಿದು ಬಹುಮತದ ತೀರ್ಪನ್ನು ನೀಡಲಾಗಿದೆ. ‘ಒಬ್ಬ ವ್ಯಕ್ತಿಯನ್ನು ಇನ್ನೊಬ್ಬ ವ್ಯಕ್ತಿಯಿಂದ ಪ್ರತ್ಯೇಕಿಸಲು ಆರ್ಥಿಕ ಸೂಚಕಗಳ ಆಧಾರದ ಆರ್ಥಿಕ ಮಾನದಂಡವನ್ನು ಬಳಸಿ ವರ್ಗೀಕರಿಸಿ ಸಂವಿಧಾನದ 15ನೇ ವಿಧಿಯ (6)ನೇ ಅಂಶದ ಅಡಿಯಲ್ಲಿ ಮೀಸಲಾತಿ ನೀಡುವುದು ಸ್ವೇಚ್ಛೆಯ ವರ್ಗೀಕರಣ ಅಲ್ಲ. ಈ ತಿದ್ದುಪಡಿಯು ಸಂವಿಧಾನದ ಮೂಲ ಸಂರಚನೆಯನ್ನು ಉಲ್ಲಂಘಿಸುವುದೂ ಇಲ್ಲ’ ಎಂದು ನ್ಯಾಯಮೂರ್ತಿ ಪಾರ್ದೀವಾಲಾ ಅವರು ತಮ್ಮ ತೀರ್ಪಿನಲ್ಲಿ ಹೇಳಿದ್ದಾರೆ.

ಆದರೆ, ಸಮಾಜದ ಕೆಲವು ವರ್ಗಗಳು ಅನುಭವಿಸಿದ ಚಾರಿತ್ರಿಕ ಅನ್ಯಾಯವನ್ನು ಸರಿಪಡಿಸುವುದಕ್ಕಾಗಿ ನೀಡಲಾದ ಮೀಸಲಾತಿಗೆ ಅರ್ಹರಾದವರು ಮತ್ತು ಈಗ, ಆರ್ಥಿಕ ಸ್ಥಿತಿಗತಿಯ ಕಾರಣಕ್ಕೆ ಮೀಸಲಾತಿಗೆ ಅರ್ಹತೆ ಪಡೆದವರು ಸಂವಿಧಾನದ ಮುಂದೆ ಸಮಾನರು. ಅವರನ್ನು ಭಿನ್ನವಾಗಿ ನೋಡಲು ಸಾಧ್ಯವಿಲ್ಲ. ಹಾಗಾಗಿಯೇ ಇಡಬ್ಲ್ಯುಎಸ್ ಮೀಸಲಾತಿಯನ್ನು ಪರಿಶಿಷ್ಟ ಜಾತಿ, ಪಂಗಡ ಮತ್ತು ಇತರ ಹಿಂದುಳಿದ ವರ್ಗಗಳಿಗೆ ನಿರಾಕರಿಸುವುದು ತಾರತಮ್ಯವೇ ಆಗುತ್ತದೆ. ಸಂವಿಧಾನವು ನೀಡಿರುವ ಅವಕಾಶಗಳ ಉಲ್ಲಂಘನೆಯೂ ಆಗುತ್ತದೆ.

ಪರಿಶಿಷ್ಟ ಜಾತಿ, ಪಂಗಡ ಮತ್ತು ಒಬಿಸಿ ಮೀಸಲಾತಿಯು ‘ಉಚಿತ ಪಾಸ್’ನ ರೀತಿಯದ್ದು ಅಲ್ಲ. ಅದು ನಷ್ಟ ಭರ್ತಿ ಮತ್ತು ಪರಿಹಾರ ರೂಪದ ವ್ಯವಸ್ಥೆಯಾಗಿದೆ ಎಂದು ಭಿನ್ನಮತದ ತೀರ್ಪು ನೀಡಿದ ನ್ಯಾಯಮೂರ್ತಿ ರವೀಂದ್ರ ಭಟ್ ಹೇಳಿದ್ದಾರೆ. ಪ್ರಬಲ ಜಾತಿಗಳನ್ನು ಸೇರಿಸಿ, ಸಾಮಾಜಿಕ ಮತ್ತು ಆರ್ಥಿಕವಾಗಿ ಹಿಂದುಳಿದ, ದಮನಕ್ಕೆ ಒಳಗಾದ ಜಾತಿಗಳನ್ನು ಇಡಬ್ಲ್ಯುಎಸ್ ಮೀಸಲಾತಿಯಿಂದ ಹೊರಗೆ ಇರಿಸುವುದು ಕಾನೂನಿನ ಮುಂದೆ ಎಲ್ಲರೂ ಸಮಾನರು ಎಂದು ಸಂವಿಧಾನದ 14ನೇ ವಿಧಿಯು ನೀಡುವ ಖಾತರಿಯನ್ನು ಉಲ್ಲಂಘಿಸುತ್ತದೆ.

ಸ್ವೇಚ್ಛೆಯ ಮೀಸಲು, ಮಾನದಂಡ

ಇತರ ಪ್ರಶ್ನೆಗಳೂ ಇವೆ. ಇಡಬ್ಲ್ಯುಎಸ್ ಮೀಸಲಾತಿಯನ್ನು ಶೇ 10ರಷ್ಟು ಎಂದು ನಿಗದಿ ಮಾಡಿದ್ದು ಏಕೆ? ಶೇ 9 ಅಥವಾ ಶೇ 11 ಅಲ್ಲ ಏಕೆ? ಶೇ 9 ಎಂದರೆ ಬಹಳ ಕಡಿಮೆ ಎಂದೂ ಶೇ 11 ಎಂದರೆ ಬಹಳ ಹೆಚ್ಚು ಎಂದಾಗಬಹುದು ಎಂಬುದು ಕಾರಣವೇ? ಶೇ 10ರಷ್ಟು ಎಂದು ನಿಗದಿ ಮಾಡಿರುವುದನ್ನು ಸಮರ್ಥಿಸಲು ಯಾವುದೇ ದತ್ತಾಂಶ ಇಲ್ಲ. ಹಾಗಾಗಿ, ಈ ನಿಗದಿಯು ಸ್ವೇಚ್ಛೆಯದ್ದೇ ಆಗಿದೆ. ಅನುಷ್ಠಾನದ ವಿಚಾರದಲ್ಲಿಯೂ ಹಲವು ಸಮಸ್ಯೆಗಳು ಇವೆ. ವಾರ್ಷಿಕ ₹8 ಲಕ್ಷದ ಒಳಗಿನ ಆದಾಯದವರು ಇಡಬ್ಲ್ಯುಎಸ್ ಮೀಸಲಾತಿಗೆ ಅರ್ಹರು ಎಂದು ನಿಗದಿ ಮಾಡಲಾಗಿದೆ. ಅಂದರೆ, ದಿನಕ್ಕೆ ₹2,200 ಆದಾಯ ಇರುವವರು ಈ ಮೀಸಲಾತಿಗೆ ಅರ್ಹರು. ವಾರ್ಷಿಕ ₹2.5 ಲಕ್ಷಕ್ಕಿಂತ ಹೆಚ್ಚು ಆದಾಯ ಇರುವವರು ಆದಾಯ ತೆರಿಗೆ ವ್ಯಾಪ್ತಿಗೆ ಬರುವ ದೇಶದಲ್ಲಿ, ಈ ಪ್ರಮಾಣದ ಆದಾಯ ಇರುವವರನ್ನು ಆರ್ಥಿಕವಾಗಿ ದುರ್ಬಲ ವರ್ಗದವರು ಎಂದು ಪರಿಗಣಿಸಲು ಸಾಧ್ಯವೇ? ಯಾವುದೇ ರೀತಿಯ ಪ್ರಮಾಣಪತ್ರವನ್ನು ಖರೀದಿಸಬಹುದಾದ ಈ ದೇಶದಲ್ಲಿ ಇಡಬ್ಲ್ಯುಎಸ್ ವರ್ಗದಲ್ಲಿ ಅರ್ಹತೆ ಪಡೆದುಕೊಳ್ಳುವುದು ಕಷ್ಟವೇ?

ಈ ಮೀಸಲಾತಿಯು ಇಡಿಯಾಗಿ ಇಡಬ್ಲ್ಯುಎಸ್ ಸಮುದಾಯಕ್ಕೆ ನೀಡಿರುವುದಲ್ಲ, ಬದಲಿಗೆ, ಈ ವರ್ಗದಲ್ಲಿ ಇರುವ ವ್ಯಕ್ತಿಗಳಿಗೆ ನೀಡಿರುವುದು. ಆ ವರ್ಗಕ್ಕೆ ಸೇರಿದ್ದಾರೆ ಎಂಬ ಒಂದೇ ಕಾರಣಕ್ಕೆ ಎಲ್ಲರೂ ಈ ಮೀಸಲಾತಿಯನ್ನು ಪಡೆದುಕೊಳ್ಳುವುದು ಸಾಧ್ಯವಿಲ್ಲ. ಏಕೆಂದರೆ, ಈ ಮೀಸಲಾತಿಗೆ ಇರುವ ಅರ್ಹತೆಯ ವ್ಯಾಖ್ಯೆಯೇ ಬದಲಾಗುತ್ತಿರುತ್ತದೆ. ಈ ವರ್ಷದ ಫಲಾನುಭವಿಯು ಮುಂದಿನ ವರ್ಷವೂ ಫಲಾನುಭವಿಯಾಗಿಯೇ ಇರಬಹುದು ಎಂದು ಹೇಳಲಾಗದು. ಏಕೆಂದರೆ, ವ್ಯಕ್ತಿಯ ಆರ್ಥಿಕ ಸ್ಥಿತಿ ಬದಲಾಗಬಹುದು. ಅರ್ಹ ಫಲಾನುಭವಿಯು ಪದೇ ಪದೇ ತಾನು ಈ ಮೀಸಲಾತಿಗೆ ಅರ್ಹ ಎಂಬುದನ್ನು ಸಾಬೀತು ಮಾಡುತ್ತಲೇ ಇರಬೇಕಾಗುತ್ತದೆ. ಸಾರ್ವಜನಿಕ ಸಂಪನ್ಮೂಲವನ್ನು ಬಳಸಿಕೊಳ್ಳುವ ಒಂದು ಮೀಸಲಾತಿ ವ್ಯವಸ್ಥೆಯು ವ್ಯಕ್ತಿಗಳನ್ನು ಗುರಿಯಾಗಿ ಇರಬಹುದೇ? ಮೀಸಲಾತಿಯು ಇರುವುದು ಸಮುದಾಯಗಳಿಗೇ ಹೊರತು ಸಂಕಷ್ಟದಲ್ಲಿರುವ ವ್ಯಕ್ತಿಗಳಿಗೆ ಅಲ್ಲ.

ಅದೂ ಅಲ್ಲದೆ, ಸಂಪನ್ಮೂಲದ ಅಸಮಾನ ಹಂಚಿಕೆ, ಬಡತನವನ್ನು ಹೆಚ್ಚಿಸುವ ರೀತಿಯಲ್ಲಿರುವ ಸರ್ಕಾರದ ಆರ್ಥಿಕ ನೀತಿಗಳೇ ಜನರ ಬಡತನಕ್ಕೆ ಕಾರಣ. ಈ ಕಾರಣಗಳೇ ಬಡವರು ಮತ್ತು ಶ್ರೀಮಂತರ ನಡುವಣ ಅಂತರವನ್ನು ಹೆಚ್ಚಿಸಿವೆ. ಇಂಥವರಲ್ಲಿ ಕೆಲವರ ಪರಿಸ್ಥಿತಿಯನ್ನು ಸುಧಾರಿಸುವುದಕ್ಕಾಗಿ ಸರ್ಕಾರದ ಸಂಪನ್ಮೂಲವನ್ನು ಸಾಂಸ್ಥಿಕವಾಗಿ ಖರ್ಚು ಮಾಡಬಹುದೇ? ಮೀಸಲಾತಿ ಎಂಬುದು ಬಡತನ ನಿರ್ಮೂಲನೆ ಅಥವಾ ಕಲ್ಯಾಣ ಯೋಜನೆ ಅಲ್ಲ.

ಈಗ ಇರುವ ಮೀಸಲಾತಿಯ ಫಲಾನುಭವಿಗಳು ಎರಡೆರಡು ರೀತಿಯಲ್ಲಿ ಅನನುಕೂಲಕ್ಕೆ ಒಳಗಾದವರು. ಅವರು ಚಾರಿತ್ರಿಕ ಕಾರಣಗಳಿಂದ ಸಾಮಾಜಿಕವಾಗಿ ಮತ್ತು ಶೈಕ್ಷಣಿಕವಾಗಿ ಹಿಂದುಳಿದವರು ಹಾಗೂ ಆರ್ಥಿಕವಾಗಿ ಸಂಕಷ್ಟದಲ್ಲಿ ಇರುವವರು. ಅವರಿಗೆ ಮೀಸಲಾತಿ ನೀಡುವುದರಲ್ಲಿ ಮರುಹಂಚಿಕೆ ಮತ್ತು ಪ್ರಾತಿನಿಧ್ಯ ನೀಡಿಕೆಯ ಅಂಶಗಳು ಒಳಗೊಂಡಿವೆ. ಮರುಹಂಚಿಕೆ ಮತ್ತು ಬೆಂಬಲ ನೀಡಿಕೆಗಾಗಿ ಸಮರ್ಪಕ ನೀತಿಯ ಮೂಲಕ ಅವರಿಗೆ ನೆರವಾಗಬಹುದು. ಹಂಚಿಕೆಯ ನ್ಯಾಯದ ಅಗತ್ಯವನ್ನು ಮೀಸಲಾತಿ ಮೂಲಕ ಪ್ರಾತಿನಿಧ್ಯ ಎಂಬುದಾಗಿ ತಪ್ಪು ಅರ್ಥ ಮಾಡಿಕೊಳ್ಳಬಾರದು.

ಶ್ರೀ ಗಣಪತಿ ಸಚ್ಚಿದಾನಂದ ಸ್ವಾಮೀಜಿ

ಪಾರ್ವತಿಗೆ ಪಾತಿವ್ರತ್ಯ ಬೋಧನೆ

ಹಿಮವಂತ ಪಾರ್ವತಿಯನ್ನು ಈಶ್ವರನೊಡನೆ ಕಳುಹಿಸಿಕೊಡುವಾಗ ಬಹಳ ದುಃಖಗೊಂಡ. ಮೇನಾದೇವಿ ಮಗಳು ಪಾರ್ವತಿಗೆ ಅನೇಕ ವಿಧವಾದ ಆಭರಣಗಳನ್ನು ತೊಡಿಸಿ ಅಲಂಕರಿಸಿದಳು. ಅಮೂಲ್ಯವಾದ ಪೀತಾಂಬರಗಳನ್ನು ಉಡಿಸಿದಳು. ವಯೋವೃದ್ಧೆಯೊಬ್ಬಳಿಂದ ಪಾರ್ವತಿಗೆ ಪಾತಿವ್ರತ್ಯಧರ್ಮದ ಉಪದೇಶ ಏರ್ಪಡಿಸಿದಳು. ‘ಎಲೈ ಗಿರಿಜೆ, ನಾನು ಹೇಳುವ ಮಾತನ್ನು ಆದರದಿಂದ ಕೇಳು. ಇದು ಧರ್ಮವರ್ಧನವಾದುದು. ಐಹಿಕಾಮುಷ್ಮಿಕ ಫಲಗಳನ್ನು ಒದಗಿಸಿ, ಸುಖವನ್ನುಂಟು ಮಾಡುವಂಥದು. ಲೋಕದಲ್ಲಿ ಪತಿವ್ರತಾಸ್ತ್ರೀಯೇ ಎಲ್ಲರಿಗಿಂತಲೂ ಪೂಜ್ಯಳಾದವಳು. ಪತಿವ್ರತೆಯ ದರ್ಶನ ಮಾತ್ರದಿಂದಲೇ ಪಾಪಗಳೆಲ್ಲವೂ ನಾಶವಾಗುವುವು. ಯಾವ ಸ್ತ್ರೀಯು ಪತಿಯಲ್ಲಿ ಪ್ರೇಮವಿಟ್ಟು ಅವನೇ ಪರಶಿವನೆಂದು ಸೇವಿಸುವಳೋ, ಅವಳು ಪತಿಯೊಡನೆ ಈ ಲೋಕದಲ್ಲಿ ಸಮಸ್ತ ಸುಖವನ್ನು ಅನುಭವಿಸಿ ಕೊನೆಗೆ ಪರಲೋಕದಲ್ಲಿಯೂ ಪತಿಯೊಡನೆ ಸುಖಿಸುವಳು.

‘ಪತಿವ್ರತೆ ಎಂದರೆ ಸಾವಿತ್ರಿ. ಸಾವಿತ್ರಿಯಂತೆ ಪಾತಿವ್ರತ್ಯಕ್ಕೆ ಹೆಸರಾದವರು ಲೋಪಮುದ್ರಾ, ಅರುಂಧತೀ, ಶಾಂಡಿಲ್ಯಾ, ಶತರೂಪಾ, ಅನಸೂಯಾ, ಲಕ್ಷ್ಮೀ, ಸರಸ್ವತಿ, ಸ್ವಧಾ, ಸಂಜ್ಞಾ, ಸುಮತಿ, ಶ್ರದ್ಧಾ, ಮೇನಾ, ಸ್ವಾಹಾ ಮತ್ತಿತರ ಅನೇಕ ಸಾಧ್ವಿಯರು ಇದ್ದಾರೆ. ಪತಿವ್ರತಾಸ್ತ್ರೀಯರು ತಮ್ಮ ಪಾತಿವ್ರತ್ಯ ಧರ್ಮದಿಂದ ಲೋಕಪೂಜ್ಯರಾಗಿರುವರು. ಬ್ರಹ್ಮ, ವಿಷ್ಣು, ಶಿವ ಇವರುಗಳಿಂದಲೂ ಋಷಿಶ್ರೇಷ್ಠರುಗಳಿಂದಲೂ ಪತಿವ್ರತೆಯರು ಪೂಜಿಸಲ್ಪಡುತ್ತಿರುವರು.

ಆದುದರಿಂದ ನೀನು ಯಾವಾಗಲೂ ನಿನ್ನ ಪತಿ ಶಂಕರನ ಸೇವೆಯನ್ನು ನಿಷ್ಠೆಯಿಂದ ಮಾಡು. ಪತಿವ್ರತೆಯಾದವಳು ಆಚರಿಸಬೇಕಾದ ಕೆಲಸವೇನೆಂದರೆ ಪತಿ ಊಟಮಾಡಿದ ಮೇಲೆ ಊಟಮಾಡಬೇಕು. ಪತಿ ನಿಂತಿದ್ದರೆ ತಾನೂ ನಿಂತಿರಬೇಕು. ಅವನು ಮಲಗಿದರೆ ತಾನು ಮಲಗಬೇಕು. ಅವನು ಏಳುವುದಕ್ಕಿಂತ ಮುಂಚೆ ತಾನು ಏಳಬೇಕು. ಪತಿಯ ವಿಷಯದಲ್ಲಿ ಯಾವ ವಿಧವಾದ ವಂಚನೆಯನ್ನೂ ಮಾಡದೆ ಯಾವಾಗಲೂ ಅವನಿಗೆ ಹಿತವಾಗಿಯೇ ನಡೆದುಕೊಳ್ಳಬೇಕು.

‘ತಾನು ಅಲಂಕರಿಸಿಕೊಂಡೇ ಪತಿಯ ಎದುರಿಗೆ ಓಡಾಡಬೇಕು. ಆದರೆ ಪತಿಯು ಪರಸ್ಥಳಕ್ಕೆ ಹೋಗಿರುವಾಗ ಎಂದಿಗೂ ಅಲಂಕರಿಸಿಕೊಳ್ಳಬಾರದು. ಯಾವಾಗಲೂ ಪತಿವ್ರತೆಯು ಪತಿಯ ಹೆಸರನ್ನು ಹಿಡಿದು ಕೂಗಬಾರದು. ಪತಿಯು ಒಂದು ವೇಳೆ ಕೋಪದಿಂದ ಏಳೆದರೂ ಕೂಗಿಕೊಳ್ಳಬಾರದು. ಯಾವಾಗಲೂ ಶಾಂತಭಾವದಿಂದ ಪತಿಯ ಇಷ್ಟಗಳನ್ನು ಈಡೇರಿಸಬೇಕು.

‘ಪತಿಯು ಕರೆದರೆ ಎಂತಹ ಕೆಲಸವಿದ್ದರೂ ಬಿಟ್ಟು ಅವನ ಬಳಿಗೆ ಧಾವಿಸಬೇಕು. ಪತಿಗೆ ನಮಸ್ಕರಿಸಿ, ‘ಓ ಸ್ವಾಮಿಯೇ, ನನ್ನನ್ನೇಕೆ ಕೂಗಿದಿರಿ. ಅದನ್ನು ತಿಳಿಸಿ ನನ್ನನ್ನು ಅನುಗ್ರಹಿಸಬೇಕು’ ಎಂದು ನಮ್ರಳಾಗಿ ಕೇಳಿಕೊಳ್ಳಬೇಕು. ಅವನು ಯಾವ ಕೆಲಸವನ್ನು ಹೇಳಿದರೂ ನಿರ್ಮಲಚಿತ್ತಳಾಗಿ ಸಂತೋಷದಿಂದ ಮಾಡಬೇಕು.

‘ಹೊರಬಾಗಿಲಲ್ಲಿ ಹೆಚ್ಚು ಹೊತ್ತು ನಿಂತಿರಬಾರದು. ಮತ್ತೊಬ್ಬರ ಮನೆಗೆ ಹೋಗಬಾರದು. ದೇವರ ಪೂಜೆಗೆ ಯೋಗ್ಯವಾದ ಉಪಕರಣಗಳನ್ನು ಪತಿಯಿಂದ ಹೇಳಿಸಿಕೊಳ್ಳದೇ ಸಿದ್ಧಪಡಿಸಬೇಕು. ಪತಿಗೆ ಯಾವ ಯಾವ ಕಾಲದಲ್ಲಿ ಏನೇನು ಬೇಕಾಗಿರುವುದೋ ಅದನ್ನು ನಡೆಸಿಕೊಡಬೇಕು. ಪತಿಯ ಅಪ್ಪಣೆಯನ್ನು ಪಡೆಯದೆ ತೀರ್ಥಯಾತ್ರೆಗೆ ಹೋಗಬಾರದು. ಜನಗಳ ಗುಂಪಿನಿಂದ ದೂರ ಇರಬೇಕು. ಯಾವುದಾದರೂ ಉತ್ಸವ ಸಮಾರಂಭವನ್ನು ನೋಡಲು ಒಬ್ಬಳೇ ಯಾವಾಗಲೂ ಹೋಗಬಾರದು. ತೀರ್ಥೋದಕವನ್ನು ಕುಡಿಯಬೇಕೆಂಬ ಇಷ್ಟವಿದ್ದರೆ ಪತಿಯ ಪಾದೋದಕವನ್ನು ಕುಡಿಯಬೇಕು. ಏಕೆಂದರೆ ಪತಿಯ ಪಾದದಲ್ಲಿ ಎಲ್ಲಾ ತೀರ್ಥಗಳೂ ಕ್ಷೇತ್ರಗಳೂ ನೆಲಸಿರುವವು.’ •

ಪದಬಂಧ 5150

– ವಿದ್ಯಾ ವಿನಯ್

ಎಡದಿಂದ ಬಲಕ್ಕೆ

1. ಕಲೆಸಿದ ಗೋಧಿ ಹಿಟ್ಟು (3)
3. ನಿಧಾನವಾಗಿ ನೋಡಿ! ಒಪ್ಪಂದ ಇಲ್ಲಿ ಕಾಣುತ್ತಿದೆ (3)
5. ಈತ ಬುದ್ಧಿಗೆಟ್ಟವನು! (5)
6. ಅಲೆಯುತ್ತಿರುವಾಗ ಉಲ್ಟಾ ಬಡಿದ ತರಂಗ! (2)
8. ಸಂತತಿಯಲ್ಲಿರುವ ಸಾಧು (2)
9. ನಾಗರೀಕರು ಹಿಡಿದ ಗುಂಜು (2)
10. ಅಧಿಕೃತ ದಾಖಲೆಗಳ ಕೊನೆಯಲ್ಲಿ ಸೇರಿಸುವ ವಿಶೇಷ ಅಂಶ (2)
14. ಮತ ಧರ್ಮವನ್ನು ಅನುಸರಿಸದವನು (5)
15. ಮರಳ ಹತ್ತಿರವಿರುವ ಹುಚ್ಚ ತಿರುಗಿದ್ದಾನೆ (3)
16. ಕಣದಲ್ಲಿ ನಡೆದ ಮದುವೆ (3)

ಮೇಲಿಂದ ಕೆಳಕ್ಕೆ

1. ಕಲೆಯೊಳಗಿರುವ ಆಹ್ವಾನ ಪತ್ರ (4)
2. ಕೊಲೆಗಾರನಿಲ್ಲಿ ತಿರುಗಿ ನಿಂತಿದ್ದಾನಲ್ಲಾ! (3)
3. ಕಟಕಟೆಯಲ್ಲಿ ತೋಡಿಕೊಂಡ ನೋವು! (3)
4. ಅದೇ ತಾನೆ ಹುಟ್ಟಿದುದು (4)
7. ಹೂಗಳಿಂದ ತೆಗೆದ ಸುಗಂಧ ದ್ರವ್ಯ (3)
8. ಆನಂದ ಹೀಗೆ ಬಂದಿದೆ (3)
9. ನಾರಿ ಹಿಡಿದಿರುವ ತೆಂಗಿನಕಾಯಿ (4)
11. ವಾಲ್ಮೀಕಿ ವಿರಚಿತ ಬೃಹತ್ ಗ್ರಂಥ (4)
12. ಧಮಕಿ ಹಾಕುತ್ತಿರುವವ ಬಲು ನೀಚ (3)
13. ಚಕಚಕನೆ ನೇಯುವ ರಾಟೆ (3)



5149ನೇ ಪದಬಂಧದ ಉತ್ತರ

ಎಡದಿಂದ ಬಲಕ್ಕೆ:
3.ನವರಂಗ 5.ರಮಣಿ
6.ಸುಧಾರಕ
8.ಸಮಾಗಮ
12.ಅಂತರ್ಧಾನ
14.ಪರಿಚಿತ 15.ಕಣಜ
16.ವನವಾಸ

ಮೇಲಿಂದ ಕೆಳಕ್ಕೆ:
1.ವಾರಪತ್ರಿಕೆ 2.ರಾಣಿವಾಸ
3.ನವಸುಮ 4.ಗಣಕ
7.ರಕ್ತ 9.ಗಣಿತ
10.ಅಪ್ರಯೋಜಕ
11.ದಾರಿ
12.ಅಂತರ್ವಾಸ
13.ನವ್ಯಕವಿ 14.ಪಲ್ಲವ

ಸುಡೊಕು 5536

	8			9		5		
6		5					1	
			1		5		7	6
		4	8		3		5	
	5					1		9
2				5			6	
1			9					
	3					6		1
8		6		3	1		9	

5535 ಸುಡೊಕು

4	9	3	7	2	8	6	5	1
8	6	2	1	4	5	7	9	3
5	7	1	9	3	6	2	4	8
2	4	6	3	5	1	8	7	9
1	3	7	2	8	9	4	6	5
9	8	5	4	6	7	3	1	2
7	2	8	5	1	4	9	3	6
6	1	9	8	7	3	5	2	4
3	5	4	6	9	2	1	8	7

ಆಡುವುದು ಹೇಗೆ?

ಮನೆಗಳನ್ನು 1ರಿಂದ 9ರವರೆಗಿನ ಅಂಕಿಗಳಿಂದ ತುಂಬಿ. ಮೇಲಿನಿಂದ ಕೆಳಕ್ಕೆ, ಎಡದಿಂದ ಬಲಕ್ಕೆ ಪ್ರತಿ ಸಾಲಿಗೂ ಇದೇ ನಿಯಮ. ದೊಡ್ಡ ಚೌಕದ ಒಳಗಿನ ಮಧ್ಯಮ ಚೌಕದ ಮನೆಗಳನ್ನೂ ತುಂಬಬೇಕು. ಯಾವ ಅಂಕಿಯೂ ಯಾವುದೇ ಸಾಲು, ಮಧ್ಯಮ ಚೌಕದಲ್ಲಿ ಪುನರಾವರ್ತನೆ ಆಗಬಾರದು.

ಗುಂಡಣ್ಣ

ದಿನ ಭವಿಷ್ಯ

ವಿದ್ಯಾಶಂಕರ ಸೋಮಯಾಜಿ. ಕಮ್ಮರಡಿ

ಶನಿವಾರ ನವೆಂಬರ್ 26, 2022

ಶ್ರೀ ಶುಭಕೃತ್ ನಾಮ ಸಂವತ್ಸರ ದಕ್ಷಿಣಾಯನ ಹೇಮಂತ ಋತು ತಿಥಿ: ಮಾರ್ಗಶೀರ್ಷ ಶುಕ್ಲ ತೃತೀಯ ಗಂ. 19-28 ನಕ್ಷತ್ರ: ಮೂಲಾ ಗಂ. 14-58 ಯೋಗ: ಶೂಲ ಗಂ. 25-13, ಕರಣ: ತೈತಿಲ ಗಂ. 09-02, ವೃಶ್ಚಿಕ ಮಾಸದ 09 ನೇ ದಿನ. ರಾಹುಕಾಲ : ಬೆಳಿಗ್ಗೆ 09-00–10-30
ಸೂರ್ಯೋದಯ : 06-39 ಸೂರ್ಯಾಸ್ತ : 05-57
ಮುಸ್ಲಿಂ ದಿನಾಂಕ : 01 ಜುಮಾದುಲ್ಲಾವಲ್
ದೃಷ್ಟ ಸಂಖ್ಯೆ : 9, 11

ಮೇಷ: ಖರ್ಚು-ವೆಚ್ಚದಲ್ಲಿ ಮಿತಿ ಇದ್ದರೆ ಉತ್ತಮ. ಮುಖ್ಯವಾಗಿ ವಾಹನ ಚಾಲನೆಯಲ್ಲಿ ಜಾಗರೂಕತೆ ಮಾಡಿರಿ. ಅಭಿವೃದ್ಧಿಯನ್ನು ನೋಡಿ ಬಂಧು ಮಿತ್ರರು ಶತ್ರುಗಳಂತೆ ನಿಮ್ಮ ವಿರುದ್ಧದ ಮನೋಭಾವನೆ ಹೊಂದುವರು.

ವೃಷಭ: ಹಿಂದಿನ ನಿಮ್ಮ ಸೋಲು ಬಾಧಿಸುತ್ತಿದ್ದರೂ ಈ ದಿನ ಮರಳಿ ಪ್ರಯತ್ನ ಮಾಡುವುದರಿಂದ ಜಯಶಾಲಿಯಾಗಬಹುದು. ಹೆಂಡತಿಯ ಆರೋಗ್ಯದಲ್ಲಿ ವ್ಯತ್ಯಾಸಗಳಾಗಬಹುದು. ಹಣದ ಅಡಚಣೆ ಇರುವುದಿಲ್ಲ.

ಮಿಥುನ: ಎಲ್ಲರೊಂದಿಗೆ ಎಲ್ಲ ವಿಚಾರದಲ್ಲಿ ಹೊಂದಿಕೊಳ್ಳುವ ಗುಣ ಹಾಗೂ ಸಾಮರ್ಥ್ಯ ಈ ದಿನ ಮುಖ್ಯವೆನಿಸುವುದು. ಹಿಂದಿನಿಂದ ಬಾಕಿ ಇರುವ ಮನೆ ದೇವರ ಕೆಲಸಗಳನ್ನು ಮಾಡಿ ಮುಗಿಸುವ ನಿರ್ಧಾರಕ್ಕೆ ಬರುವಂತಾಗುವುದು

ಕರ್ಕಾಟಕ: ಲೆಕ್ಕ ಪತ್ರಗಳನ್ನು ಸರಿಯಾಗಿ ಪರಿಶೀಲಿಸಿ ಸಹಿ ಮಾಡುವುದು ಒಳಿತು. ಮಗಳ ಮದುವೆಯ ಸಲುವಾಗಿ ಆಭರಣ ಕೊಳ್ಳುವ ಬಗ್ಗೆ ಯೋಚಿಸಿ. ಕಂದಾಯ ಇಲಾಖೆಯ ನೌಕರರಿಗೆ ಹಣದ ಮುಗ್ಗಟ್ಟು ತೀವ್ರವಾಗುವುದು.

ಸಿಂಹ: ನೂತನ ವ್ಯಕ್ತಿಯ ಪರಿಚಯವು ನಿಮ್ಮ ಸರ್ಕಾರಿ ಕೆಲಸಕ್ಕೆ ಅನುಕೂಲ ಉಂಟುಮಾಡುವವನಾಗಿರುತ್ತಾನೆ. ಲೆಕ್ಕ ಪತ್ರಗಳ ಪರಿಶೀಲನೆ ನಡೆಸುವಿರಿ. ಮಕ್ಕಳ ವಿಚಾರದಲ್ಲಿ ಅಗತ್ಯ ಕ್ರಮಗಳನ್ನು ಕೈಗೊಳ್ಳುವುದು ಉತ್ತಮ.

ಕನ್ಯಾ: ತತ್ವ ಆದರ್ಶಗಳ ಜತೆಗೆ ಹಿರಿಯರ ಅನುಭವ ಸಲಹೆಗಳನ್ನು ಅಳವಡಿಸಿಕೊಳ್ಳುವಿರಿ.. ಕಂಟ್ರಾಕ್ಟ್ದಾರರಿಗೆ ಬಾಕಿ ಇದ್ದಂತಹ ಹಣ ಕೈಸೇರಲಿದೆ. ಚಿತ್ರಕಲಾ ಪ್ರದರ್ಶನಗಳಲ್ಲಿ ಭಾಗವಹಿಸಿ ಬಹುಮಾನ ಪಡೆಯುವಿರಿ.

ತುಲಾ: ವೈಯಕ್ತಿಕ ಜೀವನದ ಸಮಸ್ಯೆಗಳು ಬಗೆಹರಿದು ಮನಸ್ಸಿಗೆ ನೆಮ್ಮದಿ ಮೂಡಲಿದೆ. ವೈದ್ಯಕೀಯ ವಿದ್ಯಾರ್ಥಿಗಳಿಗೆ ಸಾಧನೆಗೆ ಸುಸಮಯ. ಅಪರೂಪದ ಅತಿಥಿಗಳ ಆಗಮನದಿಂದ ಮನೆಯಲ್ಲಿ ಸಂತಸದ ವಾತಾವರಣ.

ವೃಶ್ಚಿಕ: ಇಂದು ಅದೃಷ್ಟದ ಕಾಲವಾದ ಕಾರಣ ಬಂದ ಅವಕಾಶಗಳನ್ನು ಒಳ್ಳೆಯ ರೀತಿಯಲ್ಲಿ ಉಪಯೋಗಿಸಿಕೊಂಡಲ್ಲಿ ವ್ಯಪಾರ ವ್ಯವಾಹಾರದಲ್ಲಿ ಅಧಿಕ ಲಾಭ ಕಾಣಬಹುದು. ನಿಮ್ಮ ಲಾಭಕ್ಕಾಗಿ ಇನ್ನೊಬ್ಬರಿಗೆ ಮೋಸ ಮಾಡಬೇಡಿ

ಧನು: ಹೂಡಿಕೆ ವಿಚಾರದಲ್ಲಿ ಆಳವಾಗಿ ಯೋಚಿಸಿ ತೀರ್ಮಾನ ಕೈಗೊಳ್ಳಿ. ಮಿತ್ರರಿಂದ ಸಲಹೆ ಸ್ವೀಕರಿಸಿ. ಹಣಕಾಸು ಸಂಸ್ಥೆಗೆ ಪಾಲುದಾರರಾಗುವುದು ದಾರಿಯಲ್ಲಿ ಹೋಗುವ ಸಮಸ್ಯೆ ಮನೆಗೆ ಕರೆತಂದಂತೆ ಆಗುತ್ತದೆ.

ಮಕರ: ಹಿಡಿದ ಕೆಲಸಗಳನ್ನು ಸಾಧಿಸುವಲ್ಲಿ ಯಶಸ್ವಿಯಾಗುವಿರಿ. ಸಂಘ ಸಂಸ್ಥೆಗಳಿಂದ ಮನ್ನಣೆ ಹಾಗೂ ಸನ್ಮಾನ ಪಡೆಯುವಂತಾಗಬಹುದು. ಚಿಲ್ಲರೆ ಮಾರಾಟಗಾರರಿಗೆ ಮತ್ತು ಹೂವು, ಹಣ್ಣು ಬೆಳೆಗಾರರಿಗೆ ಶುಭ ದಿನ.

ಕುಂಭ: ಸಂಘ ಸಂಸ್ಥೆಗಳ ಅಧಿಕಾರ ಪಡೆದುಕೊಳ್ಳುವ ವಿಚಾರದಲ್ಲಿ ಯಾವುದೇ ವಾಮಮಾರ್ಗವನ್ನು ಅನುಸರಿಸಬೇಡಿ. ಆಡಿಟಿಂಗ್ ವೃತ್ತಿಯವರಿಗೆ ತೃಪ್ತಿಕರ ಆದಾಯವಿರುವುದು. ಕಾನೂನು ವಿದ್ಯಾರ್ಥಿಗಳಿಗೆ ಪರಿಶ್ರಮದಿಂದ ಯಶಸ್ಸು .

ಮೀನ: ಓದು ಅಥವಾ ಉದ್ಯೋಗ ಆಯ್ಕೆ ವಿಚಾರದಲ್ಲಿ ಸ್ನೇಹಿತರಿಂದ ಸೂಕ್ತ ಸಲಹೆ ದೊರೆಯಲಿದೆ. ಸರ್ಕಾರಿ ಗುತ್ತಿಗೆ ಕೆಲಸದ ವಿಪುಲ ಅವಕಾಶಗಳು ಒದಗಿ ಬರುವ ಸೂಚನೆ ಕಾಣುವಿರಿ, ಹಾಗಾಗಿ ಆದಾಯದಲ್ಲಿ ಹೆಚ್ಚಳ.

ಪ್ರಜಾವಾಣಿ ಶ್ರದ್ಧಾಂಜಲಿ & ಸವಿನೆನಪು ಜಾಹೀರಾತುಗಳು

Log on to : https://homages.deccanherald.com
or
Scan QR code to access booking form

ವೈಕುಂಠ ಸಮಾರಾಧನೆ

ಶ್ರೀ ಸಿ. ಸುರೇಂದ್ರ

ಜನನ: 28–01–1969 – ನಿಧನ: 16–11–2022

ಇವರು ದಿನಾಂಕ 16–11–2022ನೇ ಬುಧವಾರದಂದು ದೈವಾಧೀನರಾದರೆಂದು ತಿಳಿಸಲು ವಿಷಾದಿಸುತ್ತೇವೆ. ತತ್ಸಂಬಂಧವಾಗಿ ಉತ್ತರಕ್ರಿಯಾದಿ ಮತ್ತು ವೈಕುಂಠ ಸಮಾರಾಧನೆಯನ್ನು ದಿನಾಂಕ: 27–11–2022ನೇ ಭಾನುವಾರ ಬೆಳಿಗ್ಗೆ 11:00ಕ್ಕೆ ಮೃತರ ಸ್ವಗೃಹ ನಂ. 512, 36ನೇ ಮೇನ್, 17ನೇ ಕ್ರಾಸ್, 6ನೇ ಹಂತ, ಜೆ.ಪಿ. ನಗರ, ಬೆಂಗಳೂರು–78 ಇಲ್ಲಿ ನಡೆಸಲು ನಿಶ್ಚಯಿಸಿರುತ್ತೇವೆ. ಆದ್ದರಿಂದ ತಾವುಗಳು ಸಕಾಲಕ್ಕೆ ಆಗಮಿಸಿ ಮೃತರ ಆತ್ಮಕ್ಕೆ ಶಾಂತಿ ಕೋರಬೇಕಾಗಿ ವಿನಂತಿ.

ಇಂತಿ ದುಃಖತಪ್ತರು:
ಶ್ರೀಮತಿ ಸುಶೀಲಾದೇವಿ ಮತ್ತು ಶ್ರೀ ಚಂದ್ರಶೇಖರಯ್ಯ
ಶ್ರೀಮತಿ ತ್ರಿವೇಣಿ ಸುರೇಂದ್ರ, ಮಕ್ಕಳು
ಮಾಯ, ನೀಲ್ ಮತ್ತು ಬಂಧು–ಮಿತ್ರರು

19ನೇ ವರ್ಷದ ಪುಣ್ಯ ಸ್ಮರಣೆ



ಎ.ಆರ್. ವೆಂಕಟರಮಣರೆಡ್ಡಿ
ಜನನ: 5.11.1940 ಮರಣ: 26.11.2003

ನಿಮ್ಮ ಜೀವನದ ಸರಳತೆ, ಪ್ರೀತಿ, ಔದಾರ್ಯ ಹಾಗೂ ಮೌಲ್ಯಗಳನ್ನು ಸದಾ ಸ್ಮರಿಸುತ್ತಾ ಮುನ್ನಡೆಯುತ್ತಿರುವ

ಇಂತಿ
ಆರ್. ಸಾವಿತ್ರಮ್ಮ, ಮತ್ತು ಕುಟುಂಬದವರು, ಕೈಕೊಂಡ್ರಹಳ್ಳಿ.

3ನೇ ವರ್ಷದ ಪುಣ್ಯಸ್ಮರಣೆ

ಶ್ರೀ ಡಿ.ಎಂ. ನಂಜುಂಡಯ್ಯನವರು
(ಜನನ: 15.05.1950 ● ಮರಣ: 26.11.2019)

ನಿಮ್ಮ ನೆನಪು ಸದಾ ನಮ್ಮಲ್ಲಿ ಅಚ್ಚಳಿಯದೆ ಉಳಿದಿದೆ.
ನಿಮ್ಮ ಆತ್ಮಕ್ಕೆ ಚಿರಶಾಂತಿ ಕೋರುವ

ಮಗ: ಉದಯ್ ಎನ್. ಸರಳಶ್ರೀ ಎನ್.
ಮಗಳು: ಉಷಾ ಎನ್. ರಮೇಶ್‌ಬಾಬು ಆರ್,
ಮೊಮ್ಮಕ್ಕಳು ಹಾಗೂ ಬಂಧು–ಮಿತ್ರರು

ಷೇರುಪೇಟೆ ವಹಿವಾಟು



ಎನ್‌ಎಸ್‌ಇ ನಿಫ್ಟಿ

ಹಿಂದಿನ ಅಂತ್ಯ	18,484
ಇಂದಿನ ಅಂತ್ಯ	18,512
▲	28
ದಿನದ ಗರಿಷ್ಠ	18,534

ತೆಂಗು ಧಾರಣೆ (ಸಾವಿರಕ್ಕೆ)

ಮಂಗಳೂರು
1ನೇ ದರ್ಜೆ ₹16000-20000
2ನೇ ದರ್ಜೆ ₹12000-15000

ಎನ್‌ಇಸಿಸಿ ಸೂಚಿಸಿರುವ ಮೊಟ್ಟೆ ಧಾರಣೆ

ಬೆಂಗಳೂರು	
100 ಮೊಟ್ಟೆಗೆ	₹555
12 ಮೊಟ್ಟೆಗೆ	₹72
ಮೈಸೂರು	
100 ಮೊಟ್ಟೆಗೆ	₹555

ಖಾದ್ಯ ತೈಲ ಮುಂಬೈ

(10 ಕೆಜಿಗೆ)

ಶೇಂಗಾ (ರಿಫೈನ್ಡ್)	₹1515 (1520)
ಸೋಯಾ (ರಿಫೈನ್ಡ್)	₹1330 (1335)
ಸೂರ್ಯಕಾಂತಿ (ರಿಫೈನ್ಡ್)	₹1440 (1450)
ಪಾಮೋಲಿನ್	₹975 (970)

ಎಐಎಲ್‌ನಿಂದ ಹೊಸ ಷೇರು ಮಾರಾಟದ ಮೂಲಕ ₹20 ಸಾವಿರ ಕೋಟಿ ಸಂಗ್ರಹ ನಿರೀಕ್ಷೆ

ಬಂಡವಾಳ ಸಂಗ್ರಹದತ್ತ ಅದಾನಿ ಸಮೂಹ

ನವದೆಹಲಿ (ಪಿಟಿಐ): ಗೌತಮ್ ಅದಾನಿ ನೇತೃತ್ವದ ಅದಾನಿ ಸಮೂಹವು ಬಂಡವಾಳ ಮಾರುಕಟ್ಟೆಯಿಂದ ಹೊಸದಾಗಿ ₹ 20 ಸಾವಿರ ಕೋಟಿ ಸಂಗ್ರಹಿಸಲಿದೆ. ಬಂದರುಗಳಿಂದ ಆರಂಭಿಸಿದ ವಿದ್ಯುತ್ ಉತ್ಪಾದನೆವರೆಗೆ ವಿಸ್ತರಿಸಿಕೊಂಡಿರುವ ಉದ್ಯಮ ಸಮೂಹವು ತನ್ನ ಚಟುವಟಿಕೆಗಳನ್ನು ಇನ್ನಷ್ಟು ಹಿಗ್ಗಿಸಲು ಈ ಬಂಡವಾಳ ಸಂಗ್ರಹಕ್ಕೆ ಮುಂದಾಗಿದೆ.

ಅದಾನಿ ಸಮೂಹದ ಪ್ರಮುಖ ಕಂಪನಿಯಾಗಿರುವ ಅದಾನಿ ಎಂಟರ್‌ಪ್ರೈಸಸ್ ಲಿಮಿಟೆಡ್ (ಎಐಎಲ್) ಹೊಸದಾಗಿ ಷೇರುಗಳನ್ನು ಮಾರಾಟ ಮಾಡುವ ಮೂಲಕ ಬಂಡವಾಳ ಸಂಗ್ರಹಿಸಲಿದೆ. ಈ ವಿಚಾರವನ್ನು ಅದು ಷೇರುಪೇಟೆಗೆ ತಿಳಿಸಿದೆ.

ಗೌತಮ್ ಅದಾನಿ

ಹೀಗೆ ಬಂಡವಾಳ ಸಂಗ್ರಹಿಸುವುದರಿಂದ ಕಂಪನಿಗೆ ತನ್ನ ಷೇರುದಾರರ ನೆಲೆಯನ್ನು ವಿಸ್ತರಿಸಿಕೊಳ್ಳಲು ಸಾಧ್ಯವಾಗಲಿದೆ, ಹೂಡಿಕೆದಾರರ ನಡುವೆ ವಿಶ್ವಾಸಾರ್ಹತೆ ಮತ್ತು ಸ್ವೀಕಾರಾರ್ಹತೆಯನ್ನು ಇನ್ನಷ್ಟು ಗಟ್ಟಿಮಾಡಿಕೊಳ್ಳಲು ಆಗಲಿದೆ.

ಮುಖ್ಯಾಂಶಗಳು
- ಷೇರುದಾರರ ನೆಲೆ ವಿಸ್ತರಿಸಲು ಈ ಕ್ರಮ
- ಒಂದು ವರ್ಷದಲ್ಲಿ ದುಪ್ಪಟ್ಟು ಬೆಳೆದಿರುವ ಎಐಎಲ್ ಮೌಲ್ಯ

ಅದಾನಿ ಎಂಟರ್‌ಪ್ರೈಸಸ್‌ನಲ್ಲಿ ಈಗ ಪ್ರವರ್ತಕರು ಶೇಕಡ 72.63ರಷ್ಟು ಷೇರುಗಳನ್ನು ಹೊಂದಿದ್ದಾರೆ. ಇನ್ನುಳಿದ ಶೇ 27.37ರಷ್ಟು ಷೇರುಗಳಲ್ಲಿ ಸರಿಸುಮಾರು ಶೇ 20ರಷ್ಟು ಷೇರುಗಳು ವಿಮಾ ಕಂಪನಿಗಳು ಹಾಗೂ ವಿದೇಶಿ ಹೂಡಿಕೆದಾರರ ಬಳಿ ಇವೆ.

ಈ ಕಂಪನಿಯ ಷೇರುಗಳು ಒಂದು ವರ್ಷದ ಅವಧಿಯಲ್ಲಿ ಎರಡು ಪಟ್ಟಿಗೂ ಹೆಚ್ಚು ಮೌಲ್ಯವೃದ್ಧಿಸಿಕೊಂಡಿವೆ. ಈಗ ಕಂಪನಿಯ ಮಾರುಕಟ್ಟೆ ಬಂಡವಾಳ ಮೌಲ್ಯವು ₹ 4.46 ಲಕ್ಷ ಕೋಟಿ ಆಗಿದೆ. ಹೊಸದಾಗಿ ಬಂಡವಾಳ ಸಂಗ್ರಹಿಸುವ ಪ್ರಕ್ರಿಯೆಗೆ ಕಂಪನಿಯ ಷೇರುದಾರರ ಸಮ್ಮತಿ ಬೇಕಾಗಿದೆ.

ಅದಾನಿ ಸಮೂಹವು ಈಗ ಬಂದರು, ವಿಮಾನ ನಿಲ್ದಾಣ ನಿರ್ವಹಣೆ, ವಿದ್ಯುತ್ ಉತ್ಪಾದನೆ, ನವೀಕರಿಸಬಹುದಾದ ಇಂಧನ, ವಿದ್ಯುತ್ ವಿತರಣೆ, ರಿಯಲ್ ಎಸ್ಟೇಟ್, ಎಫ್‌ಎಂಸಿಜಿ, ಸಿಮೆಂಟ್, ಹಣಕಾಸು ಸೇವಾ ಉದ್ಯಮಗಳಲ್ಲಿ ತೊಡಗಿಸಿಕೊಂಡಿದೆ. ಸಮೂಹವು ಈಚೆಗೆ ಮಾಧ್ಯಮ ವಹಿವಾಟಿಗೂ ಕಾಲಿರಿಸಿದೆ.

‘ಅದಾನಿ ಎಂಟರ್‌ಪ್ರೈಸಸ್ ಕಂಪನಿಗೆ ಹಲವು ಹೊಸ ಯೋಜನೆಗಳಿಗೆ, ಸ್ವಾಧೀನ ಪ್ರಕ್ರಿಯೆಗಳಿಗೆ ಹಣ ಬೇಕಾಗಿದೆ’ ಎಂದು ಮೂಲವೊಂದು ತಿಳಿಸಿದೆ.

ರಾಮನಗರ ರೇಷ್ಮೆಗೂಡು ಧಾರಣೆ

ಮಿಶ್ರತಳಿ (ಸಿ.ಬಿ) ₹503-678
ದ್ವಿತಳಿ (ಬಿ.ವಿ) ₹532-843

ಎನ್.ಆರ್.ಪುರ ರಬ್ಬರ್

ಆರ್‌ಎಸ್‌ಎಸ್-4	₹143.50
ಆರ್‌ಎಸ್‌ಎಸ್-5	₹135.50
ಗುಡ್ ಲಾಟ್	₹128.50

(ಪ್ರತಿ ಕೆ.ಜಿಗೆ)

ಈರುಳ್ಳಿ ಧಾರಣೆ

(ಕ್ವಿಂಟಲ್‌ಗೆ)

ದಪ್ಪ	₹1800-2600
ಮಧ್ಯಮ	₹1000-1800

ಅಶೋಕ್ ಚಂದ್ರ ಕೆನರಾ ಬ್ಯಾಂಕ್‌ಗೆ ನೇಮಕ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಅಶೋಕ್ ಚಂದ್ರ ಅವರನ್ನು ಕೆನರಾ ಬ್ಯಾಂಕ್‌ನ ಕಾರ್ಯನಿರ್ವಾಹಕ ನಿರ್ದೇಶಕ ಆಗಿ ನೇಮಕ ಮಾಡಲಾಗಿದೆ ಎಂದು ಬ್ಯಾಂಕ್‌ನ ಪ್ರಕಟಣೆ ತಿಳಿಸಿದೆ. ಅವರು ನವೆಂಬರ್ 21ರಂದು ಅಧಿಕಾರ ವಹಿಸಿಕೊಂಡಿದ್ದಾರೆ.

ಅಶೋಕ್ ಚಂದ್ರ

ಅಶೋಕ್ ಚಂದ್ರ ಅವರು 1991ರಲ್ಲಿ ಕಾರ್ಪೊರೇಷನ್ ಬ್ಯಾಂಕ್ ಮೂಲಕ ತಮ್ಮ ವೃತ್ತಿ ಜೀವನ ಆರಂಭಿಸಿದರು. ಅವರು ಅರ್ಥಶಾಸ್ತ್ರದಲ್ಲಿ ಸ್ನಾತಕೋತ್ತರ ಪದವಿ ಪಡೆದಿದ್ದಾರೆ.

ಇನ್‌ಸೈಡರ್ ಟ್ರೇಡಿಂಗ್ ವ್ಯಾಪ್ತಿಗೆ ಮ್ಯೂಚುವಲ್ ಫಂಡ್ ಯೂನಿಟ್

ನವದೆಹಲಿ (ಪಿಟಿಐ): ಮ್ಯೂಚುವಲ್ ಫಂಡ್ ಯೂನಿಟ್‌ಗಳ ಖರೀದಿ ಹಾಗೂ ಮಾರಾಟವನ್ನು ‘ಇನ್‌ಸೈಡರ್ ಟ್ರೇಡಿಂಗ್’ ವ್ಯಾಪ್ತಿಗೆ ತರಲು ಭಾರತೀಯ ಷೇರುಪೇಟೆ ನಿಯಂತ್ರಣ ಮಂಡಳಿಯು (ಸೆಬಿ) ನಿಯಮಗಳಿಗೆ ತಿದ್ದುಪಡಿ ತಂದಿದೆ.

ನಿರ್ದಿಷ್ಟ ಕಂಪನಿಯ ಷೇರು ಮೌಲ್ಯದ ಮೇಲೆ ಪರಿಣಾಮ ಬೀರಬಹುದಾದ ಅಪ್ರಕಟಿತ ಮಾಹಿತಿಯನ್ನು ಹೊಂದಿದ್ದು, ಆ ಕಂಪನಿಯ ಷೇರುಗಳ ವಹಿವಾಟು ನಡೆಸುವುದು (ಷೇರುಪೇಟೆಯಲ್ಲಿ ನೋಂದಾಯಿತ ಆಗಿರುವ ಅಥವಾ ನೋಂದಾಯಿತವಾಗಲು ಬಯಸಿರುವ ಕಂಪನಿಗಳ ಷೇರುಗಳು) ಈಗಿರುವ ನಿಯಮಗಳ ಅಡಿಯಲ್ಲಿ ‘ಇನ್‌ಸೈಡರ್ ಟ್ರೇಡಿಂಗ್’ ವ್ಯಾಪ್ತಿಗೆ ಬರುತ್ತದೆ. ಆದರೆ, ಮ್ಯೂಚುವಲ್ ಫಂಡ್ ಯೂನಿಟ್‌ಗಳನ್ನು ಈ ನಿಯಮಗಳಿಂದ ಹೊರಗೆ ಇರಿಸಲಾಗಿತ್ತು.

ಫ್ರ್ಯಾಂಕ್ಲಿನ್ ಟೆಂಪಲ್‌ಟನ್ ಆಸ್ತಿ ನಿರ್ವಹಣಾ ಕಂಪನಿಯಲ್ಲಿ ನಡೆದ ಕೆಲವು ವಿದ್ಯಮಾನಗಳ ನಂತರದಲ್ಲಿ ಸೆಬಿ ಈ ತೀರ್ಮಾನ ಕೈಗೊಂಡಿದೆ. ಫ್ರ್ಯಾಂಕ್ಲಿನ್ ಟೆಂಪಲ್‌ಟನ್ ಆಸ್ತಿ ನಿರ್ವಹಣಾ ಕಂಪನಿಯು ಸಾಲಪತ್ರ ಆಧಾರಿತ (ಡೆಟ್) ಆರು ಮ್ಯೂಚುವಲ್ ಫಂಡ್ ಯೋಜನೆಗಳನ್ನು ಸ್ಥಗಿತಗೊಳಿಸುವ ಮೊದಲು ಕಂಪನಿಯ ಕೆಲವು ಸಿಬ್ಬಂದಿ, ಆ ಯೋಜನೆಗಳಲ್ಲಿ ತೊಡಗಿಸಿದ್ದ ಹಣವನ್ನು ನಗದಾಗಿ ಪರಿವರ್ತಿಸಿಕೊಂಡಿದ್ದರು ಎಂಬ ಆರೋಪ ಇತ್ತು.

‘ಮ್ಯೂಚುವಲ್ ಫಂಡ್ ಯೂನಿಟ್‌ನ ಬೆಲೆಯ ಮೇಲೆ ಪ್ರಭಾವ ಬೀರಬಲ್ಲ ಅಪ್ರಕಟಿತ ಮಾಹಿತಿಯನ್ನು ಹೊಂದಿರುವ ಯಾವುದೇ ವ್ಯಕ್ತಿ ಆ ಯೂನಿಟ್‌ಗಳ ಖರೀದಿ, ಮಾರಾಟದಲ್ಲಿ ತೊಡಗುವಂತೆ ಇಲ್ಲ’ ಎಂದು ಸೆಬಿ ಶುಕ್ರವಾರ ಹೊರಡಿಸಿರುವ ಅಧಿಸೂಚನೆಯಲ್ಲಿ ಹೇಳಿದೆ.

ಟ್ವಿಟರ್: ಬರಲಿದೆ ಗೋಲ್ಡ್, ಗ್ರೇ ಟಿಕ್

ಬೆಂಗಳೂರು (ರಾಯಿಟರ್ಸ್): ಟ್ವಿಟರ್ ಖಾತೆಗಳನ್ನು ‘ವೈಯಕ್ತಿಕ, ಕಂಪನಿ ಮತ್ತು ಸರ್ಕಾರಕ್ಕೆ ಸೇರಿದ್ದು ಎಂದು ವರ್ಗೀಕರಿಸುವ ಉದ್ದೇಶದಿಂದ’ ಬ್ಲೂ ಟಿಕ್ ಜೊತೆಗೆ ಗೋಲ್ಡ್ ಮತ್ತು ಗ್ರೇ ಟಿಕ್ ವ್ಯವಸ್ಥೆಯನ್ನೂ ಜಾರಿಗೊಳಿಸಲಾಗುವುದು ಎಂದು ಕಂಪನಿಯ ಸಿಇಒ ಇಲಾನ್ ಮಸ್ಕ್ ಶುಕ್ರವಾರ ಹೇಳಿದ್ದಾರೆ.

ಕಂಪನಿಗಳಿಗೆ ಗೋಲ್ಡ್ ಟಿಕ್, ಸರ್ಕಾರಗಳಿಗೆ ಗ್ರೇ ಟಿಕ್ ಹಾಗೂ ವೈಯಕ್ತಿಕ ಬಳಕೆದಾರರಿಗೆ ಬ್ಲೂ ಟಿಕ್ ಮಾರ್ಕ್ ಇರಲಿದೆ. ಇದು ಕಷ್ಟಕರವಾದರೂ ಅಗತ್ಯವಾಗಿದೆ ಎಂದು ಮಸ್ಕ್ ತಮ್ಮ ಟ್ವೀಟ್‌ನಲ್ಲಿ ತಿಳಿಸಿದ್ದಾರೆ.

ಈ ಚೆಕ್ ಮಾರ್ಕ್‌ಗಳು ಸಕ್ರಿಯಗೊಳ್ಳುವ ಮೊದಲು ದೃಢೀಕರಿಸುವ ಕೆಲಸ ಕೂಡ ನಡೆಯಲಿದೆ.

ಬ್ಲೂ ಟಿಕ್‌ಗೆ ಶುಲ್ಕ ವಿಧಿಸಲು ಆರಂಭಿಸಿದ ಬಳಿಕ ನಕಲಿ ಖಾತೆಗಳ ಸಂಖ್ಯೆ ಹೆಚ್ಚಾಯಿತು. ಹೀಗಾಗಿ ಕಂಪನಿಯು ಈಚೆಗಷ್ಟೇ ಆ ಸೇವೆಯನ್ನು ತಾತ್ಕಾಲಿಕವಾಗಿ ನಿಲ್ಲಿಸಿತ್ತು. ಇದೀಗ ಮುಂದಿನ ಶುಕ್ರವಾರದಿಂದ ಮತ್ತೆ ಬ್ಲೂಟಿಕ್ ಸೇವೆ ಬಳಕೆಗೆ ಲಭ್ಯವಾಗಲಿದೆ ಎಂದು ಮಸ್ಕ್ ತಿಳಿಸಿದ್ದಾರೆ.

ವೈಯಕ್ತಿಕ ಬಳಕೆದಾರರು ಒಂದು ನಿರ್ದಿಷ್ಟ ಸಂಸ್ಥೆಗೆ ಸೇರಿದವರು ಎನ್ನುವುದಕ್ಕೆ ಬ್ಲೂ ಟಿಕ್ ಮಾರ್ಕ್ ಎದುರು ಮತ್ತೊಂದು ಸಣ್ಣ ಲೋಗೊ ನೀಡಲಾಗುವುದು. ಆದರೆ, ಅದಕ್ಕೆ ಆ ಸಂಸ್ಥೆಯ ದೃಢೀಕರಣ ಅಗತ್ಯ. ಈ ಕುರಿತು ಮುಂದಿನ ವಾರ ಹೆಚ್ಚಿನ ವಿವರಣೆ ನೀಡುವುದಾಗಿ ಅವರು ಇನ್ನೊಂದು ಟ್ವೀಟ್‌ನಲ್ಲಿ ಹೇಳಿದ್ದಾರೆ.

‘ಕ್ಷಮಾದಾನ’: ಅಮಾನತ್ತಾಗಿರುವ ಟ್ವಿಟರ್ ಖಾತೆಗಳಿಗೆ ‘ಕ್ಷಮಾದಾನ’ ನೀಡಲಾಗುವುದು ಎಂದು ಮಸ್ಕ್ ಹೇಳಿದ್ದಾರೆ. ಆದರೆ ಈ ನಿರ್ಧಾರದಿಂದಾಗಿ ಟ್ವಿಟರ್‌ನಲ್ಲಿ ದ್ವೇಷದ ಮಾತುಗಳು ಮತ್ತು ತಪ್ಪು ಮಾಹಿತಿಗಳು ಹೆಚ್ಚಾಗಲಿವೆ ಎಂದು ತಜ್ಞರು ಅಂದಾಜಿಸಿದ್ದಾರೆ.

ಇನೋವಾ ಹೈಕ್ರಾಸ್ ಅನಾವರಣ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಟೊಯೋಟ ಕಿರ್ಲೋಸ್ಕರ್ ಮೋಟರ್ ಕಂಪನಿಯು ಹೊಸ ಹೈಬ್ರಿಡ್ ವಾಹನ ‘ಇನೋವಾ ಹೈಕ್ರಾಸ್’ ಅನಾವರಣ ಮಾಡಿದೆ.

ಟೊಯೋಟ ನ್ಯೂ ಗ್ಲೋಬಲ್ ಆರ್ಕಿಟೆಕ್ಚರ್ (ಟಿಎನ್‌ಜಿಎ) ಆಧಾರಿತ 5ನೇ ಪೀಳಿಗೆಯ ಸೆಲ್ಫ್ ಚಾರ್ಜಿಂಗ್ ಹೈಬ್ರಿಡ್ ಎಲೆಕ್ಟ್ರಿಕ್ ವ್ಯವಸ್ಥೆಯನ್ನು ಇದು ಹೊಂದಿದೆ. 2.0 ಲೀಟರ್ 4 ಸಿಲಿಂಡರ್ ಗ್ಯಾಸೊಲಿನ್ ಎಂಜಿನ್ ಒಳಗೊಂಡಿದೆ ಎಂದು ಕಂಪನಿಯು ಪ್ರಕಟಣೆಯಲ್ಲಿ ತಿಳಿಸಿದೆ.

6 ಎಸ್‌ಆರ್‌ಎಸ್ ಏರ್‌ಬ್ಯಾಗ್, ರಿಯರ್ ಡಿಸ್ಕ್ ಬ್ರೇಕ್ಸ್, ಹಿಲ್ ಸ್ಟಾರ್ಟ್ ಅಸಿಸ್ಟ್, ಎಲೆಕ್ಟ್ರಾನಿಕ್ ಪಾರ್ಕಿಂಗ್ ಬ್ರೇಕ್ (ಇಪಿಬಿ) ಸೇರಿದಂತೆ ಹಲವು ವೈಶಿಷ್ಟ್ಯಗಳನ್ನು ಹೊಂದಿದೆ.

ಭಾರತದಲ್ಲಿ 25 ವರ್ಷದ ಸಂಭ್ರಮದಲ್ಲಿ ಇರುವ ಕಂಪನಿಗೆ ಇದೊಂದು ಅದ್ಭುತ ವರ್ಷವಾಗಿದೆ. ಇಂಗಾಲದ ಹೊರಸೂಸುವಿಕೆಯನ್ನು ಕಡಿಮೆ ಮಾಡುವ ಗುರಿಯೊಂದಿಗೆ, ಶುದ್ಧ ಮತ್ತು ಹಸಿರು ಇಂಧನ ಬಳಕೆಯನ್ನು ಜಾಗತಿಕ ಮಟ್ಟದಲ್ಲಿ ಹೆಚ್ಚಿಸಲು ಸೂಕ್ತ ಸಮಯ ಇದು ಎಂದು ಕಂಪನಿಯ ಉಪಾಧ್ಯಕ್ಷ ವಿಕ್ರಂ ಕಿರ್ಲೋಸ್ಕರ್ ಹೇಳಿದ್ದಾರೆ.

ಜಿಎಸ್‌ಟಿ ಪರಿಹಾರ: ಕರ್ನಾಟಕಕ್ಕೆ ₹1,915 ಕೋಟಿ

ಪ್ರಜಾವಾಣಿ ವಾರ್ತೆ

ನವದೆಹಲಿ: ಕೇಂದ್ರ ಹಣಕಾಸು ಸಚಿವಾಲಯವು ಜಿಎಸ್‌ಟಿ ಪರಿಹಾರ ರೂಪದಲ್ಲಿ (ಈ ವರ್ಷದ ಏಪ್ರಿಲ್‌ನಿಂದ ಜೂನ್ ವರೆಗಿನ ಬಾಕಿ ಮೊತ್ತ) ಕರ್ನಾಟಕ ಸರ್ಕಾರಕ್ಕೆ ₹1,915 ಕೋಟಿಯನ್ನು ಶುಕ್ರವಾರ ಬಿಡುಗಡೆ ಮಾಡಿದೆ.

ವಿವಿಧ ರಾಜ್ಯಗಳಿಗೆ ಬಿಡುಗಡೆ ಮಾಡಿರುವ ಒಟ್ಟು ಮೊತ್ತ ₹17 ಸಾವಿರ ಕೋಟಿ. ಪರಿಹಾರ ಮೊತ್ತದಲ್ಲಿ ವಿವಿಧ ರಾಜ್ಯಗಳಿಗೆ ಈ ವರ್ಷ ಬಿಡುಗಡೆ ಮಾಡಿರುವ ಒಟ್ಟು ಮೊತ್ತ ₹1,15,662 ಕೋಟಿ ಎಂದು ಹಣಕಾಸು ಸಚಿವಾಲಯದ ಪ್ರಕಟಣೆ ತಿಳಿಸಿದೆ.

ಗರಿಷ್ಠ ಮಟ್ಟದಲ್ಲಿ ಸೆನ್ಸೆಕ್ಸ್, ನಿಫ್ಟಿ

ಮುಂಬೈ (ಪಿಟಿಐ): ಮುಂಬೈ ಷೇರುಪೇಟೆ ಸೂಚ್ಯಂಕ ಸೆನ್ಸೆಕ್ಸ್ ಮತ್ತು ರಾಷ್ಟ್ರೀಯ ಷೇರುಪೇಟೆ ಸೂಚ್ಯಂಕ ನಿಫ್ಟಿ ಶುಕ್ರವಾರ ದಾಖಲೆಯ ಮಟ್ಟದಲ್ಲಿ ವಹಿವಾಟು ಅಂತ್ಯಗೊಳಿಸಿವೆ.

ಸೆನ್ಸೆಕ್ಸ್ 62,293 ಹಾಗೂ ನಿಫ್ಟಿ 18,512 ಅಂಶಗಳಲ್ಲಿ ವಹಿವಾಟು ಕೊನೆಗೊಳಿಸಿವೆ. ‘ದೇಶಿ ಮಾರುಕಟ್ಟೆಗಳು ಇತರ ಮಾರುಕಟ್ಟೆಗಳಿಗೆ ಹೋಲಿಸಿದರೆ ಹೆಚ್ಚಿನ ಪ್ರಮಾಣದ ಏರಿಕೆ ಕಾಣುವುದನ್ನು ಮುಂದುವರಿಸಲಿವೆ ಎಂಬುದು ನಮ್ಮ ನಂಬಕೆ’ ಎಂದು ಹೆಮ್ ಸೆಕ್ಯುರಿಟೀಸ್‌ನ ನಿಧಿ ನಿರ್ವಾಹಕ ಮೋಹಿತ್ ನಿಗಮ್ ಹೇಳಿದ್ದಾರೆ.

ದೇಶದಾದ್ಯಂತ ಮಾರುಕಟ್ಟೆ ಧಾರಣೆ

ಅಡಿಕೆ	
ಬಂಟ್ವಾಳ	
ಕೋಕ	12500-25000
ಹಳತು	48000-54500
ಹೊಸತು	27500-38000
ಕಾರ್ಕಳ	
ಹೊಸತು	25000-37500
ಹಳತು	40000-55500
ಚಿತ್ರದುರ್ಗ	
ಆಪಿ	45419-45859
ಬೆಟ್ಟೆ	35129-35599
ಕೆಂಪುಗೋಟು	29109-29510
ರಾಶಿ	44939-45369
ಹೊಸನಗರ	
ಬಿಳಿಗೋಟು	25699-25699
ಚಾಲಿ	34109-34499
ಕೆಂಪುಗೋಟು	33899-36299
ರಾಶಿ	43009-46721
ಕುಮಟ	
ಚಿಪ್ಪು	24089-33019
ಕೋಕ	17019-29999
ಫ್ಯಾಕ್ಟರಿ	10189-20299
ಹಳೇಚಾಲಿ	36099-39399
ಹೊಸಚಾಲಿ	28089-32699
ಪುತ್ತೂರು	
ಕೋಕ	11000-26000
ಹೊಸತು	32000-38000
ಶಿವಮೊಗ್ಗ	
ಬೆಟ್ಟೆ	48309-50519
ಗೊರಬಲು	17100-37201
ಹೊಸತು	45039-46299
ರಾಶಿ	44009-47409
ಸಿದ್ದಾಪುರ	
ಬಿಳಿಗೋಟು	27300-32899
ಚಾಲಿ	35569-38599
ಕೋಕ	26709-33469
ಕೆಂಪುಗೋಟು	26889-26889
ರಾಶಿ	43099-45699
ತಟ್ಟಿಬೆಟ್ಟೆ	38899-41209
ಶಿರಸಿ	
ಬೆಟ್ಟೆ	38523-44589
ಬಿಳಿಗೋಟು	18099-35676
ಚಾಲಿ	31109-40401
ಕೆಂಪುಗೋಟು	27123-32723
ರಾಶಿ	38399-46399
ಯಲ್ಲಾಪುರ	
ಬಿಳಿಗೋಟು	25001-34226
ಚಾಲಿ	35799-39669
ಕೋಕ	16899-28899
ಕೆಂಪುಗೋಟು	27076-33299
ರಾಶಿ	45180-50049
ತಟ್ಟಿಬೆಟ್ಟೆ	37869-43919
ಕಾಫಿ ಧಾರಣೆ (50 ಕೆ.ಜಿಗೆ)	
ಎಪಿ	13200
ಎಸಿ	6720
ಆರ್‌ಪಿ	8500
ಆರ್‌ಸಿ	4530

ಬಂಡವಾಳ ವೃದ್ಧಿ ತೆರಿಗೆ: ಬದಲಾವಣೆ ಸಾಧ್ಯತೆ

ನವದೆಹಲಿ (ಪಿಟಿಐ): ದೀರ್ಘಾವಧಿ ಬಂಡವಾಳ ವೃದ್ಧಿ ತೆರಿಗೆಯಲ್ಲಿ (ಎಲ್‌ಟಿಸಿಜಿ) ಕೆಲವು ಬದಲಾವಣೆಗಳನ್ನು ತರಲು ಕೇಂದ್ರ ಹಣಕಾಸು ಸಚಿವಾಲಯ ಪರಿಶೀಲನೆ ನಡೆಸಿದೆ.

ಒಂದು ವರ್ಷಕ್ಕಿಂತ ಹೆಚ್ಚಿನ ಅವಧಿಗೆ ಡಿಮ್ಯಾಟ್ ಖಾತೆಯಲ್ಲಿ ಇರಿಸಿಕೊಂಡ ಷೇರುಗಳ ಮಾರಾಟ ಮಾಡಿದ ನಂತರ ಬರುವ ಲಾಭಕ್ಕೆ ಈಗ ಎಲ್‌ಟಿಸಿಜಿ ತೆರಿಗೆ ಅನ್ವಯವಾಗುತ್ತಿದೆ. ಸ್ಥಿರಾಸ್ತಿಯನ್ನು ಸಂಪಾದಿಸಿದ ಎರಡು ವರ್ಷಗಳ ನಂತರ ಮಾರಾಟ ಮಾಡಿದಾಗ ಸಿಗುವ ಲಾಭಕ್ಕೆ, ಆಭರಣಗಳನ್ನು ಮೂರು ವರ್ಷಗಳ ನಂತರ ಮಾರಾಟ ಮಾಡಿದಾಗ ಬರುವ ಲಾಭಕ್ಕೆ ಎಲ್‌ಟಿಸಿಜಿ ತೆರಿಗೆ ಅನ್ವಯವಾಗುತ್ತದೆ.

‘ಬಂಡವಾಳ ವೃದ್ಧಿ ತೆರಿಗೆಯನ್ನು ಸರಳೀಕರಿಸುವ ಹಾಗೂ ಅದನ್ನು ತೆರಿಗೆದಾರ ಸ್ನೇಹಿ ಆಗಿಸುವ ಉದ್ದೇಶ ಇದೆ. ಬೇರೆ ಬೇರೆ ಆಸ್ತಿಗಳ ವಿಚಾರವಾಗಿ ಇರುವ ಭಿನ್ನ ತೆರಿಗೆ ಪ್ರಮಾಣಗಳಲ್ಲಿ ಸಮಾನತೆ ತರುವ ಉದ್ದೇಶವೂ ಇದೆ’ ಎಂದು ಮೂಲಗಳು ಹೇಳಿವೆ. ಫೆಬ್ರುವರಿಯಲ್ಲಿ ಮಂಡನೆಯಾಗುವ ಕೇಂದ್ರ ಬಜೆಟ್‌ನಲ್ಲಿ ಈ ಕುರಿತು ಘೋಷಣೆ ಮಾಡುವ ನಿರೀಕ್ಷೆ ಇದೆ.

ಕೊಬ್ಬರಿ ಧಾರಣೆ

ಅರಸೀಕೆರೆ	₹12000-12360
ಬೆಂಗಳೂರು	₹14000-16000
ತುರುವೇಕೆರೆ	₹12300-12300

ಮುಂಬೈ ಧಾರಣೆ

ಶೇಂಗಾ

25–11–2022

ಜಾವಾ 70/80(ಹೊಸ)	11800-11850
ಜಾವಾ 80/90(ಹೊಸ)	10900-10950
ದಪ್ಪ ಮಧ್ಯಪ್ರದೇಶ(ಹೊಸ)	9300-9400
ದಪ್ಪ ಗುಜರಾತ್(ಹೊಸ)	10000-10100

ಶೇಂಗಾ ಎಣ್ಣೆ (10 ಕೆಜಿಗೆ)

ಕಚ್ಚಾ (ತೆರಿಗೆ ಬಿಟ್ಟು)	1525 (1530)
ಒಂದು ವಾರದ ಡೆಲಿವರಿ	1520 (1525)
ಸೋಯಾ ಕಚ್ಚಾ	1320 (1320)
ಪಾಮ್ ವಾರದ ಡೆಲಿವರಿ	973 (968)
ಸೂರ್ಯಕಾಂತಿ ಎಣ್ಣೆ ಕಚ್ಚಾ	--- (---)

ಚಿನ್ನ- ಬೆಳ್ಳಿ (ಜಿಎಸ್‌ಟಿ ಸೇರಿಲ್ಲ)

ಅಪರಂಜಿ ಚಿನ್ನ 10ಗ್ರಾಂ
52,350 (52,450)
ಬೆಳ್ಳಿ ಕೆ.ಜಿ 61,800 (62,225)

ಆವರಣದಲ್ಲಿ ಹಿಂದಿನ ದಿನದ ಧಾರಣೆ

ಪ್ರಜಾವಾಣಿ ಶ್ರದ್ಧಾಂಜಲಿ & ಸವಿನೆನಪು ಜಾಹೀರಾತುಗಳು

ನಿಮ್ಮ ಪ್ರೀತಿಪಾತ್ರರ ಅಗಲಿಕೆಯನ್ನು ಶ್ರದ್ಧಾಂಜಲಿ ಜಾಹೀರಾತು ಮೂಲಕ ಪ್ರಕಟಿಸಲು ಅಥವಾ ನಿಮ್ಮ ಪ್ರೀತಿಪಾತ್ರರ ಸವಿನೆನಪಿಗೆ ಸಂತಾಪ ಸೂಚನೆ ಪ್ರಕಟಿಸಲು ಬಯಸುವಿರಾದರೆ, ನಮ್ಮ

ಡೆಕ್ಕನ್ ಹೆರಾಲ್ಡ್ ಮತ್ತು ಪ್ರಜಾವಾಣಿ

ಪತ್ರಿಕೆಗಳಲ್ಲಿ ನಿಮ್ಮ ಜಾಹೀರಾತುಗಳನ್ನು ಪ್ರಕಟಿಸಲು ಅಗತ್ಯವಿರುವ ಎಲ್ಲ ಮಾರ್ಗದರ್ಶನ ನೀಡುತ್ತೇವೆ.

ದಯವಿಟ್ಟು ಸಂಪರ್ಕಿಸಿ:
Vishal : 9845114560
Jerry : 9731810277 | Tanveer : 9886213331
Ravichandra : 9901641752 | Anitha R: 9900428036

ನಿಮ್ಮ ಮಾರ್ಗದರ್ಶನಕ್ಕಾಗಿ ಕೆಲವು ಅನುಕೂಲಕರ ಫಾರ್ಮಾಟ್ಸ್ ಹಾಗೂ ಟೆಕ್ಸ್ಟ್ ಆಯ್ಕೆಗಳನ್ನು ಹೊಂದಿರುವ ಒಂದು ವೆಬ್‌ಸೈಟ್‌ನ್ನು ಕೂಡ ನಾವು ಆರಂಭಿಸಿದ್ದೇವೆ. ದಯವಿಟ್ಟು ಲಾಗಾನ್ ಮಾಡಿರಿ
https://homages.deccanherald.com
ಅಥವಾ QR code ಸ್ಕ್ಯಾನ್ ಮಾಡಿ
ನಮ್ಮ ಆನ್‌ಲೈನ್ ಬುಕ್ಕಿಂಗ್ ಫಾರಂ ಪಡೆಯಿರಿ.

ಪ್ರಜಾವಾಣಿ

ಕ್ಲಾಸಿಫೈಡ್ಸ್

ಪ್ರತಿಯೊಬ್ಬರಿಗೂ ಉಪಯುಕ್ತ

email: dhclassifieds@deccanherald.co.in
ಜಾಹೀರಾತುಗಳಿಗಾಗಿ ಸಂಪರ್ಕಿಸಿ:
080 - 45557160 /161/ 162/ 163/ 164
9845114560 / 9731810277/ 9886213331

ಉದ್ಯೋಗಾವಕಾಶ

Hospital & Medical Jobs

ತಕ್ಷಣ ಬೇಕಾಗಿದ್ದಾರೆ ಮಹಿಳೆಯರು, ಪುರುಷರು ಹೋಂನರ್ಸಿಂಗ್ ಕೆಲಸಕ್ಕೆ ಸಂಪರ್ಕಿಸಿ. ಊಟ ವಸತಿ ಉಚಿತದೊಂದಿಗೆ ಸಂಬಳ 12000- 22000 ಇರುತ್ತದೆ (ಸರ್ಕಾರಿ ನೊಂದಾಯಿತ ಸಂಸ್ಥೆ) 9742270055, 9743135666.

Drivers

ಪ್ರಮುಖ ಟ್ಯಾಕ್ಸಿ ಕಂಪನಿಗೆ ಡ್ರೈವರ್ ಬೇಕಾಗಿದ್ದಾರೆ (ತಕ್ಷಣವೇ ಸೇರುವಿಕೆ) ಬೆಂಗಳೂರಿನಾದ್ಯಂತ ಮುಕ್ತ ಸ್ಥಾನ ಆಟೋಮ್ಯಾಟಿಕ್ ಕಾರ್: ಒತ್ತಡ ಮುಕ್ತ ಚಾಲನೆ ಸಂಬಳ : 18000-20000 ಪ್ರತಿ ತಿಂಗಳು + ಕುಟುಂಬಕ್ಕೆ ಖಾಸಗಿ ವಿಮೆ + ಮಕ್ಕಳ ಶೈಕ್ಷಣಿಕ ಬೆಂಬಲ ನೀಡಲಾಗುವುದು ಹೆಚ್ಚಿನ ಮಾಹಿತಿಗಾಗಿ ಸಂಪರ್ಕಿಸಿ: 08047106868

General

✓ ಕರ್ನಾಟಕದ್ಯಂತ MNC ಕಂಪನಿಗಳಿಗೆ SSLC ಮೇಲ್ಪಟ್ಟು 1986 ಯುವಕರು, ಯುವತಿಯರು ಬೇಕಾಗಿದ್ದಾರೆ. ವಸತಿಯೂಟವಿರುತ್ತದೆ. ಸಂಬಳ 16,000- 80000. 7760014526, 7795199673

✓ ತಕ್ಷಣ ಬೇಕಾಗಿದ್ದಾರೆ: ಟಾಟಾಮೋಟಾರ್ಸ್, ಟಯೋಟಾ, ಬ್ರಿಟಾನಿಯಾ, ಆನ್‌ಲೈನ್‌ಗಳಿಗೆ SSLC,PUC,Degree-Diplomaದವರುಗಳು (ವಿದ್ಯಾರ್ಹತೆಯಿಲ್ಲದವರಿಗೂ) 18,000- 56,000/- ವಸತಿಯೂಟದೊಂದಿಗೆ 9035520339/ 9036125229

ಬೆಂಗಳೂರಿನ ಬಾಣಸವಾಡಿ ಮನೆಯಲ್ಲಿ ಅಡುಗೆ (ವೆಜ್ & ನಾನ್‌ವೆಜ್) ಕೆಲಸ ಹಾಗೂ ಮನೆಕೆಲಸ ಮಾಡಲು ಮಹಿಳೆ ಬೇಕಾಗಿದ್ದಾರೆ. ವಯಸ್ಸು: 30-40 ವರ್ಷ. ಸಂಬಳ: 10,000. ಉಚಿತ ಊಟ+ವಸತಿ ಕೊಡಲಾಗುವುದು. ಸಂಪರ್ಕಿಸಿ: 9902817655

Cook

ಅಡುಗೆಯವರು ಬೇಕಾಗಿದ್ದಾರೆ / WANTED COOK. ಪೂರ್ಣಪ್ರಜ್ಞ ವೈಜ್ಞಾನಿಕ ಸಂಶೋಧನಾ ಸಂಸ್ಥೆ, ದೇವನಹಳ್ಳಿ ಕ್ಯಾಂಪಸ್, ಬೆಂಗಳೂರು ಇಲ್ಲಿ ನಿಯತಕಾಲಿಕ ಅಡುಗೆ (ಸಸ್ಯಾಹಾರಿ) ಕೆಲಸ ಮಾಡಲು ಇಚ್ಛಿಸುವವರು ಈ ಕೆಳಕಂಡ ದೂರವಾಣಿ ಸಂಖ್ಯೆಗೆ ಕರೆಮಾಡಿ. ಉಚಿತ ಊಟ ಮತ್ತು ವಸತಿ ಲಭ್ಯವಿದೆ. ದೂರವಾಣಿ ಸಂಖ್ಯೆ: 96630 75675, 86600 60615

Part-Time Jobs

ವಿದ್ಯಾರ್ಥಿಗಳಿಗೆ, ಗೃಹಿಣಿಯರಿಗೆ & ವಯಸ್ಕರಿಗೆ. ಮನೆಯಲ್ಲಿಯೇ ಕುಳಿತು ನಾವು ಕೊಡುವ ಫಾರಂನಲ್ಲಿ ಅಂಕಿಗಳನ್ನು, ಅಕ್ಷರಗಳನ್ನು ತುಂಬುವ ಹಾಗೂ ಬುಕ್ ಬರೆಯುವ ಮೂಲಕ ತಿಂಗಳಿಗೆ 15000- 20000 ಗಳಿಸಿ. ಕರೆಮಾಡಿ: 9611224633/ 9611225344

✓ ಮನೆಯಲ್ಲೇ ಕುಳಿತು ನಾವು ಕೊಡುವ ಪುಸ್ತಕ ಬರೆಯುವ ಹಾಗೂ ಫಾರಂತುಂಬುವ ಮೂಲಕ, ತಿಂಗಳಿಗೆ 15,000-20,000/- ಸಂಪಾದಿಸಿ. ಕೊರಿಯರ್ ಸೌಲಭ್ಯವಿದೆ. 8884777502, 8884777503.

Wanted

ಅಡ್ವೋಕೇಟ್ ಬೇಕಾಗಿದ್ದಾರೆ: ಕೋರ್ಟಿಗೆ ಸಂಬಂಧಪಟ್ಟ ಕಾರ್ಯನಿರ್ವಹಿಸಿಕೊಂಡು ಹೋಗಲು ತಾಲ್ಲೂಕು,ಜಿಲ್ಲಾ ಮತ್ತು ಹೈಕೋರ್ಟ್ ನಲ್ಲಿ ತಿಳುವಳಿಕೆಯುಳ್ಳ ವಕೀಲರು ನಮ್ಮಸಂಸ್ಥೆಗೆ ಬೇಕಾಗಿದ್ದಾರೆ. ಸಂಪರ್ಕಿಸಿ: 9731063110.

ಆಯುರ್ವೇದಿಕ್ ಉತ್ಪನ್ನಗಳ ನೇರ ಮಾರಾಟ 50 ಮಹಿಳಾ ಪ್ರತಿನಿಧಿಗಳು ಬೇಕಾಗಿದ್ದಾರೆ ಸಂಬಳ 30 ರಿಂದ 50 ಸಂಪರ್ಕಿಸಿ: 8892501007/ 9606701007

Book Your Classifieds Ads
Online Log in to dhclassifieds.com
Contact :
9845114560 : 9731810277
9901641752 : 9886213331
080 - 45557163 / 164
DH DECCAN HERALD ಪ್ರಜಾವಾಣಿ

ಪ್ರವಾಸ

Travel

★16.02.2023 ಶಿವರಾತ್ರಿ★ ವಿಶೇಷ 9ದಿನ ಕಾಶಿಯಲ್ಲಿ ತಂಗುವುದು, 07.02.2023 16ದಿನ 95ದಿವ್ಯದೇಶ ಪ್ರವಾಸ. ಆರ್.ಗಾಂಧಿ ಟೂರ್ಸ್ (ರಿ) 9945445809, 9902433500

ರಾಮಕಮಲ್ ಟೂರಿಸಂ 30.11.2022 ಶಿರಡಿ, ನಾಸಿಕ್, ಪಂಢರಪುರ, ಕೊಲ್ಲಾಪುರ, ತ್ರ್ಯಂಬಕೇಶ್ವರ 22.12.2022 ಮಂತ್ರಾಲಯ, ಶ್ರೀಶೈಲ, ಅಹೋಬಲ ಪ್ರವಾಸ. 9481226296, 9945476296

18.11.2022`ಮತ್ತು 9.01.23ರಿಂದ 13/16ದಿನಗಳು ವಿಮಾನ`ಮತ್ತು ಏಸಿ.ಬಸ್ಸಿನಲ್ಲಿ ಪಶುಪತಿನಾಥ್,ಮುಕ್ತಿನಾಥ್, ಫೋಕ್ರ,ಪುರಿ,ಜನಕಪುರಿ,ನೇಪಾಳ, ಕಾಶಿ,ಕೋಲ್ಕತ್ತ ಹಾಗು 9.12.2022ರಿಂದ `ಮಹಾಶಿವರಾತ್ರಿ`ಪ್ರಯುಕ್ತ ಪಶುಪತಿನಾಥ`ದರ್ಶನ: ಏಷ್ಯನ್`ಟ್ರಾವೆಲ್`ಲೈನ್ಸ್. 164/3`ಅರ್.ವಿ.ರಸ್ತೆ, ಬೆಂಗಳೂರು~04. ಸಂಪರ್ಕಿಸಿ:`ಷಣ್ಮುಗಾನಂದ~ 8105657052/ 9480182865

21.12.22/ 28.12.22ರಿಂದ 7/9ದಿನಗಳ`ವಿಮಾನ`ಮತ್ತು ಏಸಿ.ಬಸ್ಸಿನಲ್ಲಿ ಕಾಶಿವಿಶ್ವನಾಥೇಶ್ವರ, ಬೈದ್ಯನಾಥೇಶ್ವರ,2 ಜ್ಯೋತಿರ್ಲಿಂಗ ಸಮೇತ`ಗಯಾ,ನೈಮಿಷಾರಣ್ಯ, ಅಲಹಾಬಾದ್,ಅಯೋಧ್ಯ ಹಾಗು`14/12/2022ರಿಂದ 13ದಿನಗಳ`ಪಂಚರಾಮಕ್ಷೇತ್ರ, ಸಮೇತ`ಅನ್ನವರಂ,ಸಿಂಹಾಚಲಂ, ಶ್ರೀರಾಮಾನುಜಪ್ರತಿಮೆ`ಕೂಡಲೇ ವಿಚಾರಿಸಿ:~ಏಷ್ಯನ್`ಟ್ರಾವೆಲ್ ಲೈನ್ಸ್.164/3`ಅರ್.ವಿ.ರಸ್ತೆ ಬೆಂಗಳೂರು~04. ಸಂಪರ್ಕಿಸಿ`ಷಣ್ಮುಗಾನಂದ: 8105657052/ 9480182865.

ಸುಸಜ್ಜಿತ ವ್ಯವಸ್ಥೆಗಳೊಂದಿಗೆ: 26.01.2023 ರಿಂದ 8 ದಿನಗಳ ವಿಯಟ್ನಂ ಕಾಂಬೋಡಿಯಾ. 22.01.2023 04.02.2023 ರಿಂದ 6 ದಿನಗಳ ದುಬೈ,ಅಬುಧಾಬಿ. 22.01.2023 09.02.2023 ರಿಂದ 7/11 ದಿನಗಳ ಸಿಂಗಾಪುರ್ ಮಲೇಶಿಯಾ ಥೈಲ್ಯಾಂಡ್. 24.12.2022 ರಿಂದ 8 ದಿನಗಳ ಸ್ನೋ ಸ್ಪೆಷಲ್ ಶಿಮ್ಲಾ ಮನಾಲಿ. 25.12.2022 ರಿಂದ 5 ದಿನಗಳ ಕನ್ಯಾಕುಮಾರಿ ರಾಮೇಶ್ವರ. 20.01.2023 08.02.2023 23.02.2023 ರಿಂದ 8 ದಿನಗಳ ಕಾಶಿ,ಗಯಾ,ಚಿತ್ರಕೂಟ ನೈಮಿಶಾರಣ್ಯ. 30.01.2023 04.03.2023 ರಿಂದ 8 ದಿನಗಳ ಪುರಿ,ಕೊಲ್ಕತ್ತ,ಕಾಶಿ. 20.01.2023 06.02.2023 ರಿಂದ 8/17 ದಿನಗಳ ಗುಜರಾತ್ ರಾಜಸ್ಥಾನ್. 23.02.2023 ರಿಂದ 11 ದಿನಗಳ ಮಧ್ಯಪ್ರದೇಶ. ಪ್ರವಾಸಗಳಿಗೆ ಸಂಪರ್ಕಿಸಿ: ಆನಂದ್ ವಿಹಾರಿ ಬೆಂಗಳೂರು23. 8088887677 080-23385837

CONNECT

ಸಾಲ ಲಭ್ಯವಿದೆ
ಆಸ್ತಿ ಮೇಲಿನ ಸಾಲ
- ಮನೆ ಸಾಲ
- ಮನೆ ವಿಸ್ತರಣೆ ಸಾಲ
- ಇತರ ಬ್ಯಾಂಕ್ ಸಾಲವನ್ನುತೆಗೆದುಕೊಳ್ಳಲಾಗುತ್ತದೆ
- ಅಡಮಾನ ಸಾಲ
- ಫ್ಲಾಟ್ ಖರೀದಿ ಸಾಲ

* ಸಿಬಿಲ್ ಅಗತ್ಯವಿಲ್ಲ * ಆದಾಯದ ದಾಖಲೆ ಅಗತ್ಯವಿಲ್ಲ
* ಕಡಿಮೆ ಪೇಪರ್ ವರ್ಕ್ * ತ್ವರಿತ ಸಂಸ್ಕರಣೆ
* ಸಮಂಜಸವಾದ ಬಡ್ಡಿ ದರ

Saminath Financial Services
#2 P.Guttahalli, Vinayaka circle Malleshwaram, Bangalore-003
www.saminathfinance.com
info@saminathfinance.com
79758 47433, 80880 91647

A/C ರೂಂ ಹಾಗು A/C ಬಸ್ಸಿನಲ್ಲಿ 11.01.2023 15.02.2023 ಸಿಂಗಾಪುರ್,ಮಲೇಶಿಯಾ ಥೈಲ್ಯಾಂಡ್ 7/11 ದಿನಗಳು 17.01.2023 08.02.2023 ದುಬೈ,ಅಬುಧಾಬಿ 5 ದಿನಗಳು. 13.12.2022 12.01.2023 ಗುಜರಾತ್ 8 ದಿನಗಳು. 13.12.2022 03.01.2023 ರಾಜಸ್ಥಾನ್ 9 ದಿನಗಳು. 17.01.2023 11.02.2023 ಕಾಶಿ,ಗಯಾ,ಅಯೋಧ್ಯ 7 ದಿನಗಳು. 04.12.2022 18.01.2023 ಕುಂಭಕೋಣಂ,ರಾಮೇಶ್ವರ 6 ದಿನಗಳು. 22.12.2022 28.12.2022 ಧರ್ಮಸ್ಥಳ ಹೊರನಾಡು 4 ದಿನಗಳು. ಜೈನ್ ಟ್ರಾವೆಲ್ಸ್ ಬೆಂಗಳೂರು.3 9448402248 7022547922

ವ್ಯಾಪಾರ

Business Offers

General

FASHION DESIGNER & Tailoring Students Internship in Fashion & Apparel & Sustainable Development & 3R -Work from Home with Certificate. Home based Fashion Designers and Tailors can also apply- Contact Fonstich WhatsApp 8147287527

ಬಿಲ್ಡರ್ ಎಸೆನ್ಷಿಯಲ್

Water Proofing

ಲೀಕೇಜ್.. ಲೀಕೇಜ್.. ನಿಮ್ಮಮನೆ, ಕಛೇರಿಯ ಮೇಲ್ಛಾವಣಿ, ಸಂಪ್‌ಟ್ಯಾಂಕ್, ಬಾತ್‌ರೂಂ ಹಾಗೂ ಗೋಡೆಯ ಬಿರುಕುಗಳನ್ನು ನೂತನ ತಂತ್ರಜ್ಞಾನದಿಂದ ಸ್ಥಗಿತಗೊಳಿಸಲಾಗುವುದು. ಸಂಪರ್ಕಿಸಿ: 9880916988

ಭವಿಷ್ಯ

Astrology

ಸಮಸ್ಯೆ ಏನೇಯಿರಲಿ ಎಷ್ಟೇ ಕಠಿಣವಾಗಿರಲಿ 600ವರ್ಷ ಹಳೆಯ 108ಜ್ಯೋತಿಷ್ಯ ತಂತ್ರಗಳಿಂದ ವಶೀಕರಣ, ಪ್ರೇಮವಿಚಾರ, ದಾಂಪತ್ಯ, ಹಣಕಾಸು, ಇನ್ನಾವುದೇ ಸಮಸ್ಯೆಗಳಿಗೆ ಪರಿಹಾರ ಶತಸಿದ್ಧ. ಪಂಡಿತ್ ಗಣೇಶ್‌ಕುಮಾರ್ 9880444450

ವೈವಾಹಿಕ

Grooms Wanted

Telugu

ALLIANCE INVITED from qualified, employed, unmarried Bangalore settled boy for telugu yadava bangalore girl 42 yrs/5'4' MCA nw, nv' whatsapp 9380397152, vijaykumarn2000@rediffmail.com.

ಸಮಾಜಸೇವೆ

Old Age Home

ಸೇವಾ ಮನೋಭಾವವುಳ್ಳ ಯುವಕ, ಯುವತಿಯರು ಹಾಗೂ ದಂಪತಿಗಳು ಬೆಂಗಳೂರಿನಲ್ಲಿ ಕೆಲಸಕ್ಕೆ ಬೇಕಾಗಿದ್ದಾರೆ, ಉಚಿತ ಊಟ ವಸತಿಯೊಂದಿಗೆ ಉತ್ತಮ, ಸಂಬಳ, ತರಬೇತಿ ನೀಡಲಾಗುವುದು ಸಂಪರ್ಕಿಸಿ: 9900371597, 9739320897, 9916544057,

ಓದುಗರ ಗಮನಕ್ಕೆ

ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಾರ್ಹವಾದವು. ಆದರೆ, ಅದರಲ್ಲಿ ಪ್ರತಿಪಾದಿತವಾದ ವಸ್ತು, ವಿಷಯ, ವಿಚಾರಗಳು ಜಾಹೀರಾತುದಾರರ ಅಭಿಪ್ರಾಯ ಆಗಿರುತ್ತವೆಯೇ ಹೊರತು ಪತ್ರಿಕೆಯ ಅಭಿಪ್ರಾಯವಾಗಿರುವುದಿಲ್ಲ. ಈ ಅಭಿಪ್ರಾಯಗಳಿಗೆ ಪತ್ರಿಕೆ ಯಾವುದೇ ರೀತಿಯಿಂದ ಹೊಣೆಯಲ್ಲ.
ಜಾಹೀರಾತು ವ್ಯವಸ್ಥಾಪಕರು,
ದಿ ಪ್ರಿಂಟರ್ಸ್ (ಮೈಸೂರು) ಪ್ರೈವೇಟ್ ಲಿ. ಬೆಂಗಳೂರು

ಏಕದಿನ ಕ್ರಿಕೆಟ್: ಶಿಖರ್, ಗಿಲ್, ಶ್ರೇಯಸ್ ಅರ್ಧಶತಕ; ಕಿವೀಸ್ ಜಯಭೇರಿ

ಟಾಮ್, ಕೇನ್ ದಾಖಲೆ ಆಟ

ನ್ಯೂಜಿಲೆಂಡ್‌ನ ಕೇನ್ ವಿಲಿಯಮ್ಸನ್ ಹಾಗೂ ಟಾಮ್ ಲಥಾಮ್ –ಪಿಟಿಐ ಚಿತ್ರ

ಆಕ್ಲೆಂಡ್ (ಪಿಟಿಐ): ಐದನೇ ಕ್ರಮಾಂಕದಲ್ಲಿ ಕ್ರೀಸ್‌ಗೆ ಬಂದು ಅಬ್ಬರದ ಶತಕ ಗಳಿಸಿದ ಟಾಮ್ ಲಥಾಮ್ ನ್ಯೂಜಿಲೆಂಡ್ ತಂಡಕ್ಕೆ ಗೆಲುವಿನ ಕಾಣಿಕೆ ನೀಡಿದರು.

ಈಡನ್ ಪಾರ್ಕ್‌ನಲ್ಲಿ ಶುಕ್ರವಾರ ನಡೆದ ಏಕದಿನ ಕ್ರಿಕೆಟ್ ಸರಣಿಯ ಮೊದಲ ಪಂದ್ಯದಲ್ಲಿ ಆತಿಥೇಯ ಕಿವೀಸ್ ತಂಡವು 7 ವಿಕೆಟ್‌ಗಳಿಂದ ಭಾರತ ತಂಡವನ್ನು ಮಣಿಸಿತು. ಮೂರು ಪಂದ್ಯಗಳ ಸರಣಿಯಲ್ಲಿ 1–0 ಮುನ್ನಡೆ ಸಾಧಿಸಿತು.

ಟಾಸ್ ಗೆದ್ದ ನ್ಯೂಜಿಲೆಂಡ್ ತಂಡವು ಫೀಲ್ಡಿಂಗ್ ಆಯ್ಕೆ ಮಾಡಿಕೊಂಡಿತು. ನಾಯಕ ಶಿಖರ್ ಧವನ್ (72; 77ಎ, 4X13), ಶುಭಮನ್ ಗಿಲ್ (50; 65ಎ, 4X1, 6X3) ಹಾಗೂ ಶ್ರೇಯಸ್ ಅಯ್ಯರ್ (80; 76ಎ, 4X4, 6X4) ಅವರ ಆಕರ್ಷಕ ಅರ್ಧಶತಕಗಳಿಂದಾಗಿ ತಂಡವು 7 ವಿಕೆಟ್‌ಗಳಿಗೆ 306 ರನ್ ಗಳಿಸಿತು.

ಆದರೆ ಈ ದೊಡ್ಡ ಗುರಿಯನ್ನು ಆತಿಥೇಯ ತಂಡವು ಇನಿಂಗ್ಸ್‌ನಲ್ಲಿನ್ನೂ 17 ಎಸೆತಗಳು ಬಾಕಿಯಿರುವಾಗಲೇ ಮುಟ್ಟಿತು. ಅದಕ್ಕೆ ಕಾರಣವಾಗಿದ್ದು ನಾಯಕ ಕೇನ್ ವಿಲಿಯಮ್ಸನ್ (94; 98ಎ) ಹಾಗೂ ಅಜೇಯ ಶತಕ ಹೊಡೆದ ಟಾಮ್ (145; 104ಎ) ಅವರ ದಾಖಲೆಯ ಜೊತೆಯಾಟ. ಇಬ್ಬರೂ ಸೇರಿ ಮುರಿಯದ ನಾಲ್ಕನೇ ವಿಕೆಟ್ ಜೊತೆಯಾಟದಲ್ಲಿ 221 ರನ್‌ಗಳನ್ನು ಸೇರಿಸಿದರು.

ಇವರಿಬ್ಬರೂ ಕ್ರೀಸ್‌ನಲ್ಲಿ ಜೊತೆಗೂಡಿದಾಗ ತಂಡವು 88 ರನ್‌ಗಳಿಗೆ 3 ವಿಕೆಟ್‌ಗಳನ್ನು ಕಳೆದುಕೊಂಡಿತ್ತು. 'ಕಾಶ್ಮೀರ್ ಎಕ್ಸ್‌ಪ್ರೆಸ್' ಉಮ್ರಾನ್ ಮಲಿಕ್ (66ಕ್ಕೆ2) ಡೆವೊನ್ ಕಾನ್ವೆ ಹಾಗೂ ಡೆರಿಲ್ ಮಿಚೆಲ್ ವಿಕೆಟ್‌ಗಳನ್ನು ಕಬಳಿಸಿದ್ದರು. ಇದರಿಂದಾಗಿ ಕಿವೀಸ್ ಆತಂಕದಲ್ಲಿತ್ತು.

20ನೇ ಓವರ್‌ನಲ್ಲಿ ಕ್ರೀಸ್‌ಗೆ ಬಂದ ಟಾಮ್ ಬೌಲರ್‌ಗಳನ್ನು ದಂಡಿಸಲು ಆರಂಭಿಸಿದರು. ಐದು ಸಿಕ್ಸರ್ ಹಾಗೂ 19 ಬೌಂಡರಿಗಳನ್ನು ಸಿಡಿಸಿದ ಅವರ ಆಟಕ್ಕೆ ಭಾರತ ತಂಡದ ಯೋಜನೆಗಳು ವಿಫಲವಾದವು. ಇನ್ನೊಂದು ಕಡೆ ಕೇನ್ ಕೂಡ ತಾಳ್ಮೆಯಿಂದ ಇನಿಂಗ್ಸ್ ಕಟ್ಟಿದರು. ಉತ್ತಮ ಲಯದಲ್ಲಿದ್ದ ಟಾಮ್ ಅವರಿಗೇ ಹೆಚ್ಚು ಹೊತ್ತು ಸ್ಟ್ರೈಕ್ ಬಿಟ್ಟುಕೊಟ್ಟರು.

ಇದರಿಂದಾಗಿ ಭಾರತದ ಆರಂಭಿಕ ಜೋಡಿಯ ಶತಕದ ಜೊತೆಯಾಟ (124 ರನ್) ಹಾಗೂ ಶ್ರೇಯಸ್ ಚೆಂದದ ಬ್ಯಾಟಿಂಗ್ ವ್ಯರ್ಥವಾದವು.

ಸಂಕ್ಷಿಪ್ತ ಸ್ಕೋರು: ಭಾರತ: 50 ಓವರ್‌ಗಳಲ್ಲಿ 7 ವಿಕೆಟ್‌ಗಳಿಗೆ 306 (ಶಿಖರ್ ಧವನ್ 72, ಶುಭಮನ್ ಗಿಲ್ 50, ಶ್ರೇಯಸ್ ಅಯ್ಯರ್ 80, ಸಂಜು ಸ್ಯಾಮ್ಸನ್ 36, ವಾಷಿಂಗ್ಟನ್ ಸುಂದರ್ ಔಟಾಗದೆ 37, ಟಿಮ್ ಸೌಥಿ 73ಕ್ಕೆ3, ಲಾಕಿ ಫರ್ಗ್ಯುಸನ್ 59ಕ್ಕೆ3) ನ್ಯೂಜಿಲೆಂಡ್: 47.1 ಓವರ್‌ಗಳಲ್ಲಿ 3 ವಿಕೆಟ್‌ಗಳಿಗೆ 309 (ಫಿನ್ ಅಲೆನ್ 22, ಡೆವೊನ್ ಕಾನ್ವೆ 24, ಕೇನ್ ವಿಲಿಯಮ್ಸನ್ ಔಟಾಗದೆ 94, ಟಾಮ್ ಲಥಾಮ್ ಔಟಾಗದೆ 145, ಉಮ್ರಾನ್ ಮಲಿಕ್ 66ಕ್ಕೆ2) ಫಲಿತಾಂಶ: ನ್ಯೂಜಿಲೆಂಡ್‌ಗೆ 7 ವಿಕೆಟ್‌ಗಳ ಜಯ. ಮುಂದಿನ ಪಂದ್ಯ: ನ. 27, ಹ್ಯಾಮಿಲ್ಟನ್.

ನಾಲ್ಕನೇ ವಿಕೆಟ್ ಜೊತೆಯಾಟ (ಏಕದಿನ)

ರನ್	ಆಟಗಾರ	ದೇಶ	ಸ್ಥಳ	ವರ್ಷ
226*	ಮಾರ್ಗನ್–ಬೋಪಾರ	ಇಂಗ್ಲೆಂಡ್	ಡಬ್ಲಿನ್	2013
221*	ಕೇನ್–ಲಥಾಮ್	ನ್ಯೂಜಿಲೆಂಡ್	ಆಕ್ಲೆಂಡ್	2022

ಆದೇಶ್ ನಾಯಕ

ಬೆಂಗಳೂರು: ಆದೇಶ್ ಡಿ ಅರಸ್ ಬಿಸಿಸಿಐ 16 ವರ್ಷದೊಳಗಿನವರ ವಿಜಯ್ ಮರ್ಚಂಟ್ ಟ್ರೋಫಿ ಕ್ರಿಕೆಟ್ ಟೂರ್ನಿಯಲ್ಲಿ ಕರ್ನಾಟಕ ತಂಡದ ನಾಯಕತ್ವ ವಹಿಸಲಿದ್ದಾರೆ.

ಕರ್ನಾಟಕ ರಾಜ್ಯ ಕ್ರಿಕೆಟ್ ಸಂಸ್ಥೆಯು ಶುಕ್ರವಾರ ತಂಡವನ್ನು ಪ್ರಕಟಿಸಿದೆ. ಡಿ. 23ರಿಂದ ವಿದರ್ಭದಲ್ಲಿ ಟೂರ್ನಿಯು ನಡೆಯಲಿದೆ. ಆಯ್ಕೆಯಾಗಿರುವ ಆಟಗಾರರು ಶನಿವಾರ ಬೆಳಿಗ್ಗೆ 8.30ಕ್ಕೆ ಕೆಎಸ್‌ಸಿಎ 'ಎ' ಮೈದಾನದಲ್ಲಿ ಹಾಜರಿರಬೇಕು ಎಂದು ಪ್ರಕಟಣೆ ತಿಳಿಸಿದೆ.

ತಂಡ: ಆದೇಶ್ ಡಿ ಅರಸ್ (ನಾಯಕ; ರಾಜಾಜಿನಗರ ಕ್ರಿಕೆಟರ್ಸ್), ಎಸ್. ಅನಂತ್ (ಬೆಂಗಳೂರು ಎಸ್‌ಸಿ), ಅರ್ಣವ್ ಮಿಶ್ರಾ (ವಲ್ಚರ್ಸ್ ಸಿಸಿ), ಸಿದ್ಧೇಶ್ ಎ ಅಸಲಕರ್(ಧಾರವಾಡ ವಲಯ/ಸೋಷಿಯಲ್ ಕ್ರಿಕೆಟರ್ಸ್), ಎಸ್. ದೈವಿಕ್ (ದ ಬೆಂಗಳೂರು ಕ್ರಿಕೆಟರ್ಸ್), ಅನಿಕೇತ್ ರೆಡ್ಡಿ (ರಾಯಚೂರು ವಲಯ/ವಿಜಯಾ ಸಿಸಿ), ಆರ್ಣವ್ ಶರ್ಮಾ (ವಿಕೆಟ್ ಕೀಪರ್–ಬೆಂಗಳೂರು ಎಸ್‌ಸಿ), ರಿಷಭ್ ಬಿ ನಾಯಕ (ವಿಕೆಟ್‌ಕೀಪರ್–ಮಂಗಳೂರು ವಲಯ/ವಿಶ್ವೇಶ್ವರಪುರಂ ಸಿಸಿ), ಅಕ್ಷತ್ ಪ್ರಭಾಕರ್ (ವಿಜಯಾ ಸಿಸಿ), ಮಣಿಕಾಂತ್ ಶಿವಾನಂದ (ಧಾರವಾಡ ವಲಯ/ವಲ್ಚರ್ಸ್ ಸಿಸಿ), ಈಸಾ ಎಚ್ ಪುತ್ತಿಗೆ (ಕೆಂಬ್ರಿಡ್ಜ್ ಸಿಸಿ), ಸಮ್ಯಕ್ ವೆಲಾಲೊರ್ (ವಲ್ಚರ್ಸ್ ಸಿಸಿ), ಕೆ.ಎ. ತೇಜಸ್ (ರಾಜಾಜಿನಗರ ಕ್ರಿಕೆಟರ್ಸ್), ಮೊಹಮ್ಮದ್ ಇಬ್ರಾಹಿಂ ರಯಾನ್ (ಶಿವಮೊಗ್ಗ ವಲಯ/ಕೆಂಬ್ರಿಡ್ಜ್ ಸಿಸಿ), ಆರ್. ಹಿಮೇಶ್ (ಮೈಸೂರು ವಲಯ/ಸ್ವಸ್ತಿಕ್). ಕುನಾಲ್ ಕಪೂರ್ (ಕೋಚ್), ಸ್ನೇಹಿತ್ ರೈ (ಸ್ಟ್ರೆಂಥ್–ಕಂಡಿಷನಿಂಗ್), ಎಚ್.ಎಸ್. ಗೌತಮ್ (ಫಿಸಿಯೊ), ಪಿ.ವಿ. ಸುಮಂತ್ (ಮ್ಯಾನೇಜರ್).

ಕ್ರಿಕೆಟ್: ಕರ್ನಾಟಕ– ಜಾರ್ಖಂಡ್ ಪ್ರೀಕ್ವಾರ್ಟರ್ ಇಂದು

ಮಯಂಕ್ ಪಡೆಗೆ ಸವಾಲಿನ ಹಾದಿ

ಮನೀಷ್ ಪಾಂಡೆ, ವಿ. ಕೌಶಿಕ್ ಹಾಗೂ ಮಯಂಕ್ ಆಗರವಾಲ್

ಅಹಮದಾಬಾದ್: ಗುಂಪು ಹಂತದಲ್ಲಿ ಅನುಭವಿಸಿದ ಒಂದು ಸೋಲಿನಿಂದಾಗಿ ಕರ್ನಾಟಕ ತಂಡವು ಎಂಟರ ಘಟ್ಟಕ್ಕೆ ನೇರಪ್ರವೇಶದ ಅವಕಾಶ ಕಳೆದುಕೊಂಡಿದೆ. ಆದರೆ, ಪ್ರಶಸ್ತಿ ಜಯಿಸುವ ಕನಸು ನನಸು ಮಾಡಿಕೊಳ್ಳಲು ಇನ್ನೂ ಅವಕಾಶ ಇದೆ.

ಅದಕ್ಕಾಗಿ ನಾಲ್ಕು ಸವಾಲುಗಳನ್ನು ಮೀರಿ ನಿಲ್ಲಬೇಕಿದೆ. ಈ ಹಾದಿಯ ಮೊದಲ ಸವಾಲು ಶನಿವಾರ ನಡೆಯಲಿರುವ ಪ್ರೀಕ್ವಾರ್ಟರ್‌ಫೈನಲ್ ಪಂದ್ಯ. ಈ ಹಣಾಹಣಿಯಲ್ಲಿ ಮಯಂಕ್ ಅಗರವಾಲ್ ಬಳಗವು ಜಾರ್ಖಂಡ್ ತಂಡವನ್ನು ಎದುರಿಸಲಿದೆ. ಬಿ ಗುಂಪಿನ ಪಂದ್ಯದಲ್ಲಿ ಉಭಯ ತಂಡಗಳು ಮುಖಾಮುಖಿಯಾಗಿದ್ದವು. ಅದರಲ್ಲಿ ಕರ್ನಾಟಕ ಗೆದ್ದಿತ್ತು.

ಆದರೆ, ಆರಂಭಿಕ ಜೋಡಿ ಮಯಂಕ್ ಮತ್ತು ಸಮರ್ಥ್ ಅವರ ಬ್ಯಾಟಿಂಗ್ ಲಯದಲ್ಲಿರುವ ಅಸ್ಥಿರತೆ ತಂಡದ ಚಿಂತೆಗೆ ಕಾರಣವಾಗಿದೆ. ಹೊಸಪ್ರತಿಭೆ ನಿಕಿನ್ ಜೋಸ್, ಅನುಭವಿ ಮನೀಷ್ ಪಾಂಡೆ, ಆಲ್‌ರೌಂಡರ್ ಶ್ರೇಯಸ್ ಗೋಪಾಲ್ ಅವರು ಉತ್ತಮವಾಗಿ ಆಡುತ್ತಿದ್ದಾರೆ. ಅವರು ನಾಕೌಟ್ ಹಂತದಲ್ಲಿಯೂ ತಮ್ಮ ಸಾಮರ್ಥ್ಯ ಮೆರೆದರೆ ತಂಡಕ್ಕೆ ಉಪಯುಕ್ತವಾಗಬಹುದು.

ಬೌಲಿಂಗ್ ವಿಭಾಗದಲ್ಲಿ ಅನುಭವಿ ರೋನಿತ್ ಮೋರೆ, ಸ್ಪಿನ್ನರ್ ಕೆ. ಗೌತಮ್, ವಿ. ಕೌಶಿಕ್ ಹಾಗೂ ವಿದ್ವತ್ ಕಾವೇರಪ್ಪ ಅವರು ಎದುರಾಳಿ ಬ್ಯಾಟಿಂಗ್ ಪಡೆಯನ್ನು ಕಟ್ಟಿಹಾಕುವ ತಂತ್ರಗಾರಿಕೆಯನ್ನು ಅಚ್ಚುಕಟ್ಟಾಗಿ ನಿಭಾಯಿಸಿದರೆ ಕ್ವಾರ್ಟರ್‌ಫೈನಲ್‌ಗೆ ಸಾಗುವ ಕನಸು ಕೈಗೂಡಬಹುದು.

ಐಪಿಎಲ್‌ನಲ್ಲಿ ಮಿಂಚಿದ್ದ ವಿರಾಟ್ ಸಿಂಗ್, ಶಹಬಾಜ್ ನದೀಂ ಅವರು ಇರುವ ಜಾರ್ಖಂಡ್ ತಂಡವು ಈ ಅವಕಾಶವನ್ನು ಬಳಸಿಕೊಂಡು ಪ್ರಶಸ್ತಿ ಗೆಲುವಿನ ಆಸೆಯನ್ನು ಜೀವಂತವಾಗುಳಿಸಿಕೊಳ್ಳುವತ್ತ ಚಿತ್ತ ನೆಟ್ಟಿದೆ.

ಪಂದ್ಯ ಆರಂಭ: ಬೆಳಿಗ್ಗೆ 9

ಹಾಕಿ: ಮೈಸೂರಿಗೆ ಸಮಗ್ರ ಪ್ರಶಸ್ತಿ

ಪ್ರಜಾವಾಣಿ ವಾರ್ತೆ

ಮಡಿಕೇರಿ: ಮೈಸೂರು ವಿಭಾಗ ತಂಡವು ಇಲ್ಲಿನ ಭಾರತ ಕ್ರೀಡಾ ಪ್ರಾಧಿಕಾರದ ಹಾಕಿ ಮೈದಾನದಲ್ಲಿ ಶುಕ್ರವಾರ ಮುಕ್ತಾಯಗೊಂಡ ಪ್ರಾಥಮಿಕ ಮತ್ತು ಪ್ರೌಢಶಾಲಾ ಬಾಲಕ, ಬಾಲಕಿಯರ ರಾಜ್ಯಮಟ್ಟದ ಹಾಕಿ ಟೂರ್ನಿಯಲ್ಲಿ ಸಮಗ್ರ ಪ್ರಶಸ್ತಿ ಜಯಿಸಿತು. ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಇಲಾಖೆಯಿಂದ ಆಯೋಜಿಸಿದ್ದ ಟೂರ್ನಿಯಲ್ಲಿ ಮೈಸೂರು ತಂಡವು 33 ಪಾಯಿಂಟ್ಸ್ ಮೂಲಕ ಅಗ್ರಸ್ಥಾನ ಪಡೆಯಿತು.

ಫಲಿತಾಂಶ: 17 ವರ್ಷ ವಯೋ ಮಿತಿಯೊಳಗಿನ (ಪ್ರೌಢಶಾಲೆ) ಬಾಲಕಿಯರ ವಿಭಾಗ: ಮೈಸೂರು ವಿಭಾಗ ಪ್ರಥಮ (12 ಪಾಯಿಂಟ್), ಕ್ರೀಡಾ ಶಾಲೆ ಕೂಡಿಗೆ ದ್ವಿತೀಯ, ಬೆಳಗಾವಿ ತೃತೀಯ.

14 ವರ್ಷ ವಯೋಮಿತಿಯೊಳಗಿನ (ಪ್ರಾಥಮಿಕ ಶಾಲೆ) ಬಾಲಕರ ವಿಭಾಗ: ಮೈಸೂರು ಪ್ರಥಮ (9), ಬೆಳಗಾವಿ ದ್ವಿತೀಯ, ಕಲಬುರಗಿ ತೃತೀಯ.

17 ವರ್ಷ ವಯೋಮಿತಿಯೊಳಗಿನ (ಪ್ರೌಢಶಾಲೆ) ಬಾಲಕರ ವಿಭಾಗ: ಮೈಸೂರು ಪ್ರಥಮ (12 ಪಾಯಿಂಟ್), ಕ್ರೀಡಾ ಶಾಲೆ ಕೂಡಿಗೆ ದ್ವಿತೀಯ, ಬೆಂಗಳೂರು ತೃತೀಯ.

ಲೋಪಮುದ್ರಾಗೆ ಸಾರಥ್ಯ

ಬೆಂಗಳೂರು: ರಾಷ್ಟ್ರೀಯ ಚಾಂಪಿಯನ್‌ಷಿಪ್‌ಗೆ ಕರ್ನಾಟಕ ಮಹಿಳಾ ಬ್ಯಾಸ್ಕೆಟ್‌ಬಾಲ್ ತಂಡವನ್ನು ಪ್ರಕಟಿಸಲಾಗಿದ್ದು, ಲೋಪಮುದ್ರಾ ತಿಮ್ಮಯ್ಯ ಅವರು ನಾಯಕಿಯಾಗಿ ಆಯ್ಕೆಯಾಗಿದ್ದಾರೆ.

ರಾಷ್ಟ್ರೀಯ ಚಾಂಪಿಯನ್‌ಷಿಪ್ ರಾಜಸ್ಥಾನದ ಉದಯಪುರದಲ್ಲಿ ನವೆಂಬರ್ 27ರಿಂದ ಡಿಸೆಂಬರ್ 5ರವರೆಗೆ ನಡೆಯಲಿದೆ.

ಕರ್ನಾಟಕ ತಂಡ ಇಂತಿದೆ: ಲೋಪಮುದ್ರಾ ತಿಮ್ಮಯ್ಯ (ನಾಯಕಿ), ಪಾವನಿ ಸಗ್ವಾನ್, ನಿಹಾರಿಕಾ ರೆಡ್ಡಿ, ಮೇಖಲಾ ಗೌಡ, ರೋಶಿನಿ, ಲೇಖನಾ, ಸಹನಾ, ಮಾನಸಾ, ಅನುಷಾ, ವರ್ಷಾನಂದಿನಿ, ಆದ್ಯಾ ಐತಾಳ, ಜೆಷ್ಣವಿ, ಜಯವಂತಿ (ಕೋಚ್), ಸತ್ಯನಾರಾಯಣ (ಸಹಾಯಕ ಕೋಚ್ ಮತ್ತು ಮ್ಯಾನೇಜರ್)

ಬ್ಯಾಸ್ಕೆಟ್‌ಬಾಲ್: 'ಮೈಕಾ', 'ನಿಟ್ಟೆ' ಗೆಲುವಿನ ಆರಂಭ

ಪ್ರಜಾವಾಣಿ ವಾರ್ತೆ

ಮೈಸೂರು: ಬೆಂಗಳೂರಿನ ನಿಟ್ಟೆ ಮೀನಾಕ್ಷಿ ಕಾಲೇಜು ಹಾಗೂ ಮೈಸೂರಿನ ಮೈಕಾ ಕಾಲೇಜು ತಂಡಗಳು ಇಲ್ಲಿನ ಮೈಸೂರು ವಿಶ್ವವಿದ್ಯಾಲಯದ ಬ್ಯಾಸ್ಕೆಟ್‌ಬಾಲ್ ಅಂಗಳದಲ್ಲಿ ಶುಕ್ರವಾರ ಆರಂಭವಾದ 'ಚಾಲೆಂಜರ್ಸ್ ಕಪ್' ಅಂತರರಾಜ್ಯ ಪದವಿ ಕಾಲೇಜು ಬ್ಯಾಸ್ಕೆಟ್ ಬಾಲ್ ಟೂರ್ನಿಯಲ್ಲಿ ಜಯಗಳಿಸಿದವು.

ಮೈಕಾ ಕಾಲೇಜು ತಂಡದ ಆಟಗಾರರು 61–21 ಪಾಯಿಂಟ್ ಅಂತರದಲ್ಲಿ ಜೆಎಸ್‌ಎಸ್ ಉನ್ನತ ಶಿಕ್ಷಣ ಮತ್ತು ಸಂಶೋಧನಾ ಅಕಾಡೆಮಿ ತಂಡದ ವಿರುದ್ಧ ಗೆದ್ದರು. ಮೈಕಾ ತಂಡದ ದೀಪಕ್ 14 ಪಾಯಿಂಟ್ ಗಳಿಸಿದರು. ಜೆಎಸ್‌ಎಸ್‌ನ ಶ್ರೇಯಸ್ 7 ಪಾಯಿಂಟ್ ಕಲೆಹಾಕಿದರು.

ನಿಟ್ಟೆ ಮೀನಾಕ್ಷಿ ಕಾಲೇಜು ತಂಡವು 70–44ರಿಂದ ಮೈಸೂರಿನ ವಿದ್ಯಾವರ್ಧಕ ಎಂಜಿನಿಯರಿಂಗ್ ಕಾಲೇಜು ತಂಡದ ವಿರುದ್ಧ ಜಯಿಸಿತು. ನಿಟ್ಟೆ ತಂಡದ ಧೀರಜ್ ತಂಡಕ್ಕೆ 15 ಪಾಯಿಂಟ್ ಕಾಣಿಕೆ ನೀಡಿದರು. ವಿದ್ಯಾವರ್ಧಕ ತಂಡದ ಅಭಿರೂಪ್ (6 ಪಾಯಿಂಟ್) ಉತ್ತಮವಾಗಿ ಆಡಿದರು.

ತಮಿಳುನಾಡಿನ ಸೇಲಂನ ಎವಿಎಸ್ ಕಾಲೇಜು ತಂಡವು 66–25 ಪಾಯಿಂಟ್‌ಗಳಲ್ಲಿ ಜೆಎಸ್‌ಎಸ್ ಎಎಚ್‌ಇಆರ್ ವಿರುದ್ಧ ಗೆದ್ದಿತು. ಎವಿಎಸ್‌ನ ಖಲೀಲ್ 12 ಪಾಯಿಂಟ್ ಗಳಿಸಿದರು. ಮತ್ತೊಂದು ಪಂದ್ಯದಲ್ಲಿ ಚೆನ್ನೈನ ಸತ್ಯಭಾಮ ವಿಶ್ವವಿದ್ಯಾಲಯ ತಂಡವು ಲಕ್ಷ್ಮಣ್ (14 ಪಾಯಿಂಟ್) ಅವರ ಉತ್ತಮ ಆಟದ ಬಲದಿಂದ 64–44 ಪಾಯಿಂಟ್ ಅಂತರದಲ್ಲಿ ಮೈಸೂರಿನ ಮೈಕಾ ಕಾಲೇಜು ತಂಡವನ್ನು ಮಣಿಸಿತು.

ಮೈಸೂರಿನ ಜೆಎಸ್‌ಎಸ್ ಎಎಚ್‌ಇಆರ್ ತಂಡ ಹಾಗೂ ಸೇಲಂನ ಎವಿಎಸ್ ಕಾಲೇಜು ಆಟಗಾರರ ಪೈಪೋಟಿ

ಬಿಎಫ್‌ಸಿಗೆ ಗೆಲುವಿನ ಛಲ

ಮಡಗಾಂವ್, ಗೋವಾ: ಸತತ ಸೋಲುಗಳಿಂದ ಕಂಗೆಟ್ಟಿರುವ ಬೆಂಗಳೂರು ಫುಟ್‌ಬಾಲ್ ಕ್ಲಬ್ (ಬಿಎಫ್‌ಸಿ), ಇಂಡಿಯನ್ ಸೂಪರ್ ಲೀಗ್ (ಐಎಸ್‌ಎಲ್) ಟೂರ್ನಿಯಲ್ಲಿ ಶನಿವಾರ ಎಫ್‌ಸಿ ಗೋವಾ ಸವಾಲು ಎದುರಿಸಲಿದೆ.

ಇಲ್ಲಿಯ ಜವಾಹರಲಾಲ್ ನೆಹರೂ ಕ್ರೀಡಾಂಗಣದಲ್ಲಿ ಪಂದ್ಯ ನಡೆಯಲಿದ್ದು, ಬಿಎಫ್‌ಸಿ ಗೆಲುವಿನ ಲಯ ಕಂಡುಕೊಳ್ಳುವ ವಿಶ್ವಾಸದಲ್ಲಿದೆ. ಆರು ಪಂದ್ಯಗಳನ್ನು ಆಡಿರುವ ತಂಡವು ಕೇವಲ ಒಂದು ಪಂದ್ಯದಲ್ಲಿ ಗೆಲುವು ಸಾಧಿಸಿದೆ. ಒಂದು ಪಂದ್ಯ ಡ್ರಾ ಮಾಡಿಕೊಂಡಿದ್ದರೆ, ಈ ಹಿಂದಿನ ಸತತ ನಾಲ್ಕು ಹಣಾಹಣಿಗಳಲ್ಲಿ ಸೋಲು ಕಂಡಿದೆ. ಸುನಿಲ್ ಚೆಟ್ರಿ ನಾಯಕತ್ವದ ಬಿಎಫ್‌ಸಿ ಸದ್ಯ ಪಾಯಿಂಟ್ಸ್ ಪಟ್ಟಿಯಲ್ಲಿ 10ನೇ ಸ್ಥಾನದಲ್ಲಿದೆ.

ಪಂದ್ಯ ಆರಂಭ: ಸಂಜೆ 5.30

ನೇರ ಪ್ರಸಾರ: ಸ್ಟಾರ್ ಸ್ಪೋರ್ಟ್ಸ್

ಮೈಸೂರು ರೇಸ್

ಟ್ಯಾಕ್ಟಿಕಲ್ ಕಮಾಂಡ್ ಗೆಲ್ಲುವ ನಿರೀಕ್ಷೆ

ಡಿ. ವಿ. ವಿಶ್ವನಾಥ್ ಮೆಮೋರಿಯಲ್ ಟ್ರೋಫಿ ಶನಿವಾರದ ಪ್ರಧಾನ ಆಕರ್ಷಣೆಯಾಗಿದ್ದು, ಟ್ಯಾಕ್ಟಿಕಲ್ ಕಮಾಂಡ್ ಗೆಲ್ಲುವ ನಿರೀಕ್ಷೆಯಿದೆ. ಮಧ್ಯಾಹ್ನ 1.00ಕ್ಕೆ ಪ್ರಾರಂಭವಾಗಲಿರುವ ದಿನದ ಒಂಬತ್ತು ರೇಸ್‌ಗಳಿಗೆ ನಮ್ಮ ಆಯ್ಕೆ ಈ ಕೆಳಕಂಡಂತಿದೆ

1ನೇ ರೇಸ್: ಕಂಟ್ರೀಸ್ ಪೇಸ್ 1, ಕಿಂಗ್ಸ್ ಕಮಾಂಡ್ 6, ರೂಮರ್ ಲೇಡಿ 5

2ನೇ ರೇಸ್: ಪರ್ಸಿವೇಲ್ 3, ವಿವಾ ಲಾ ವಿಡಾ 2, ಕ್ಯಾಲಿಫೋರ್ನಿಯಾ ಗೋಲ್ಡ್ 6

3ನೇ ರೇಸ್: ಮಿಸ್ ಚೈನಾ 9, ಸ್ವಿಸ್ ಬೇ 15, ಲೈಕ್ ಮೈ ಡ್ಯಾಡಿ 7

4ನೇ ರೇಸ್: ಓ ಮಾಂಚಾಲಿ 9, ಬ್ಯೂಟಿಫುಲ್ ಆಬ್ಲಿವಿಯನ್ 3, ಫಾರ್ಚ್ಯೂನ್ ಕುಕೀ 5

5ನೇ ರೇಸ್: ಜೆಮಿನಿ 6, ಇಂಪೀರಿಯಸ್ 7, ಅಮೆಜಾನಿಯಾ 2

6ನೇ ರೇಸ್: ಕ್ವಾಂಡೊ ಕ್ವಾಂಡೊ 13, ಎನ್ ಆರ್ ಐ ಲೆವೆಲ್ 15, ರಿಯಲ್ ಶೋ 5

7ನೇ ರೇಸ್: ಟ್ಯಾಕ್ಟಿಕಲ್ ಕಮಾಂಡ್ 6, ಹಿಸ್ ಎಮಿನೆನ್ಸ್ 2, ಸೆಗೆರಾ 4

8ನೇ ರೇಸ್: ಬಯೋಮೆಟ್ರಿಕ್ 1, ಸ್ಟಾರ್ ಆಫ್ ಥಿಯಾ 5, ಜಬ್ಬರ್ 11

9ನೇ ರೇಸ್: ಫಾರ್ಸೈಟ್ ಐ 11, ಸ್ಪಾರ್ಕಲ್ಸ್ 8, ಹೀರೋಯಿಸ್ 3

ಅತ್ಯುತ್ತಮ ಬೆಟ್: ಓ ಮಾಂಚಾಲಿ

ಜಾಕ್‌ಪಾಟ್	1ನೇ ಟ್ರಿಬಲ್	2ನೇ ಟ್ರಿಬಲ್	3ನೇ ಟ್ರಿಬಲ್
5,6,7,8,9	1,2,3	4,5,6	7,8,9

ವಿಶ್ವ ಚೆಸ್: ಭಾರತ ಪರಾಭವ

ಜೆರುಸಲೇಂ (ಪಿಟಿಐ): ಭಾರತ ತಂಡದವರು ಇಲ್ಲಿ ನಡೆಯುತ್ತಿರುವ ಫಿಡೆ ವಿಶ್ವ ತಂಡ ಚೆಸ್ ಚಾಂಪಿಯನ್‌ಷಿಪ್‌ನ ಸೆಮಿಯಲ್ಲಿ ಸೋತು ಹೊರಬಿದ್ದರು.

ಶುಕ್ರವಾರ ನಡೆದ ಪಂದ್ಯದಲ್ಲಿ ಭಾರತ 1–3 ರಲ್ಲಿ ಉಜ್ಬೆಕಿಸ್ತಾನ ಎದುರು ಪರಾಭವಗೊಂಡಿತು. ತಲಾ ನಾಲ್ಕು ಗೇಮ್‌ಗಳನ್ನು ಒಳಗೊಂಡ ಎರಡು ಸೆಟ್‌ಗಳ ಸೆಮಿಫೈನಲ್‌ನ ಮೊದಲ ಸೆಟ್ 2–2 ರಲ್ಲಿ ಸಮಬಲದಲ್ಲಿ ಕೊನೆಗೊಂಡಿತು. ಎರಡನೇ ಸೆಟ್‌ನಲ್ಲಿ ಉಜ್ಬೆಕಿಸ್ತಾನ 2.5–1.5 ರಲ್ಲಿ ಗೆದ್ದು ಫೈನಲ್ ಪ್ರವೇಶಿಸಿತು.

ಉಜ್ಬೆಕಿಸ್ತಾನ ತಂಡವು ಪ್ರಶಸ್ತಿಗಾಗಿ ಚೀನಾ ತಂಡದ ಸವಾಲು ಎದುರಿಸಲಿದೆ.

ಗೋಧ್ರೋತ್ತರ ಹಿಂಸಾಚಾರವನ್ನು ನೆನಪಿಸಿಕೊಂಡ ಗೃಹ ಸಚಿವ ಅಮಿತ್ ಶಾ

2002ರಲ್ಲಿ ಹಿಂಸೆಗಿಳಿದವರಿಗೆ ತಕ್ಕ ಪಾಠ

ಪ್ರಜಾವಾಣಿ ವಾರ್ತೆ

ಅಹಮದಾಬಾದ್: ಗುಜರಾತ್ ವಿಧಾನಸಭೆಗೆ ಮತದಾನ ಹತ್ತಿರವಾಗುತ್ತಿದ್ದಂತೆಯೇ ಪ್ರಚಾರದ ಭರಾಟೆ ಜೋರಾಗಿದೆ. ಬಿಜೆಪಿ ಮುಖಂಡ ಅಮಿತ್ ಶಾ ಅವರು ಕಾಂಗ್ರೆಸ್ ಮೇಲೆ ಶುಕ್ರವಾರ ಹರಿಹಾಯ್ದಿದ್ದಾರೆ. ಹಿಂಸೆಯಲ್ಲಿ ತೊಡಗಿದ್ದವರಿಗೆ ಕಾಂಗ್ರೆಸ್ ಪಕ್ಷವು ಆಶ್ರಯ ಕೊಟ್ಟಿದೆ. ಆದರೆ, 2002ರಲ್ಲಿ ಇಂತಹ ಶಕ್ತಿಗಳಿಗೆ ತಕ್ಕ ಪಾಠ ಕಲಿಸಲಾಯಿತು. ಹೀಗಾಗಿಯೇ, ಆ ಬಳಿಕ ಅಂತಹ ಘಟನೆಗಳು ನಡೆಯಲಿಲ್ಲ ಎಂದು ಶಾ ಅವರು ಹೇಳಿದ್ದಾರೆ.

ಶಾ ಅವರು ಶುಕ್ರವಾರ ಕೇಂದ್ರ ಗುಜರಾತ್‌ನಲ್ಲಿ ಪ್ರಚಾರ ನಡೆಸಿದರು. ಅವರು ಭಾಗವಹಿಸಿದ ಇನ್ನೂ ಎರಡು ರ‍್ಯಾಲಿಗಳಲ್ಲಿಯೂ ಇದೇ ವಿಚಾರವನ್ನು ಅವರು ಹೇಳಿದರು. 2002ರ ಗೋಧ್ರೋತ್ತರ ಗಲಭೆಗಳನ್ನು ಉಲ್ಲೇಖಿಸಿ ಅವರು ಹೀಗೆ ಹೇಳಿದ್ದಾರೆ. ಈ ವರ್ಷ ಇದೇ ಮೊದಲ ಬಾರಿಗೆ 2002ರ ಹಿಂಸಾಚಾರದ ಕುರಿತು ಮಾತನಾಡಿದ್ದಾರೆ. ಕಾಂಗ್ರೆಸ್ ಪಕ್ಷದ ಸರ್ಕಾರ ಇದ್ದಾಗ ಆಗಾಗ ಕೋಮುಗಲಭೆಗಳು ನಡೆಯುತ್ತಿದ್ದವು, ಆಗಾಗ ಕರ್ಫ್ಯೂ ಹೇರಲಾಗುತ್ತಿತ್ತು, ಕಾನೂನು–ಸುವ್ಯವಸ್ಥೆ ಸರಿ ಇರಲಿಲ್ಲ ಎಂದು ಶಾ ಹೇಳಿದ್ದಾರೆ.

'ಕಾಂಗ್ರೆಸ್ ಆಳ್ವಿಕೆ ಇದ್ದಾಗ ಕೋಮು ಹಿಂಸೆ ನಡೆಯುತ್ತಿತ್ತೇ ಇಲ್ಲವೇ ಹೇಳಿ? 2002ರಲ್ಲಿ ನರೇಂದ್ರ ಮೋದಿ ಅವರು ಮುಖ್ಯಮಂತ್ರಿ ಆಗಿದ್ದಾಗ ಹಿಂಸಾಚಾರದ ಪ್ರಯತ್ನ ನಡೆಯಿತು. ಆಗ ಅವರಿಗೆ ಸರಿಯಾದ ಪಾಠ ಕಲಿಸಲಾಯಿತು. ಅದಾದ ಬಳಿಕ ಒಂದೇ ಒಂದು ಕೋಮು ಹಿಂಸಾಚಾರ ನಡೆದಿಲ್ಲ. ಹಿಂಸೆಯಲ್ಲಿ ತೊಡಗಿದ್ದವರನ್ನು ಉಚ್ಚಾಟಿಸಲಾಯಿತು. ಕರ್ಫ್ಯೂರಹಿತ ಗುಜರಾತ್ ಅನ್ನು ಬಿಜೆಪಿ ಸ್ಥಾಪಿಸಿದೆ' ಎಂದು ಶಾ ಹೇಳಿದರು. ಖೇಡಾ ಜಿಲ್ಲೆಯ ಮಹುಧಾ ಮತ್ತು ಭರೂಚ್ ಜಿಲ್ಲೆಯ ವಗ್ರದಲ್ಲಿ ಕೂಡ ಇದೇ ಭಾಷಣವನ್ನು ಶಾ ಅವರು ಪುನರಾವರ್ತಿಸಿದರು.

ಈ ಹಿಂದೆ ಗುಜರಾತ್‌ನಲ್ಲಿ ಇದ್ದ ಗೂಂಡಾ ಅಬ್ದುಲ್ ಲತೀಫ್ ಹೆಸರನ್ನು ಶಾ ಉಲ್ಲೇಖಿಸಿದರು. ವಿಧಾನಸಭಾ ಚುನಾವಣೆಯಲ್ಲಿ ಸ್ಪರ್ಧೆ ಇರುವುದು ಬಿಜೆಪಿ ಮತ್ತು ಕಾಂಗ್ರೆಸ್ ನಡುವೆ ಮಾತ್ರ ಎಂದರು. ಅಯೋಧ್ಯೆಯಲ್ಲಿ ರಾಮ ಮಂದಿರ ನಿರ್ಮಾಣಕ್ಕೆ ವಿರೋಧ ವ್ಯಕ್ತಪಡಿಸಿದ್ದಾರೆ ಎಂದು ಆರೋಪಿಸಿ ಕಾಂಗ್ರೆಸ್ ನಾಯಕ ರಾಹುಲ್ ಗಾಂಧಿ ಅವರನ್ನು ಟೀಕಿಸಿದರು.

ಕಾಂಗ್ರೆಸ್ ಪಕ್ಷವು ಸುದೀರ್ಘ ಕಾಲ ಆಳ್ವಿಕೆ ನಡೆಸಿದ್ದರೂ ಸಂವಿಧಾನದ 370ನೇ ವಿಧಿ ಅಡಿಯಲ್ಲಿ ಜಮ್ಮು–ಕಾಶ್ಮೀರಕ್ಕೆ ನೀಡಿದ್ದ ವಿಶೇಷ ಸ್ಥಾನಮಾನವನ್ನು ರದ್ದುಪಡಿಸಲಿಲ್ಲ. ಮತಬ್ಯಾಂಕ್ ರಾಜಕಾರಣ ಇದಕ್ಕೆ ಕಾರಣ ಎಂದರು.



ಕೇಂದ್ರ ಗೃಹ ಸಚಿವ ಅಮಿತ್ ಶಾ ಅವರು ದಹೋಡ್ ಜಿಲ್ಲೆಯ ಜಲೋದ್ ಎಂಬಲ್ಲಿ ಶುಕ್ರವಾರ ಪ್ರಚಾರ ನಡೆಸಿದರು –ಪಿಟಿಐ ಚಿತ್ರ

ಪ್ರಜಾ ಮತ

ಜನತಂತ್ರದ ಹಬ್ಬ 2022

ಪ್ರಚಾರದಲ್ಲಿ ಮಕ್ಕಳ ದುರ್ಬಳಕೆ: ಮೋದಿ ಮೇಲೆ ಕಾಂಗ್ರೆಸ್ ದೂರು

ನವದೆಹಲಿ (ಪಿಟಿಐ): ಕಾಂಗ್ರೆಸ್ ಮುಖಂಡರ ನಿಯೋಗವೊಂದು ಚುನಾವಣಾ ಆಯೋಗವನ್ನು ಶುಕ್ರವಾರ ಭೇಟಿಯಾಗಿ ಪ್ರಧಾನಿ ನರೇಂದ್ರ ಮೋದಿ ಅವರ ಮೇಲೆ ದೂರು ನೀಡಿದೆ. ಗುಜರಾತ್ ಚುನಾವಣಾ ಪ್ರಚಾರದಲ್ಲಿ ಮಕ್ಕಳನ್ನು ದುರ್ಬಳಕೆ ಮಾಡಿಕೊಳ್ಳಲಾಗಿದೆ ಎಂದು ದೂರಿನಲ್ಲಿ ಹೇಳಲಾಗಿದೆ. ಮಕ್ಕಳು ಚುನಾವಣಾ ಪ್ರಚಾರ ನಡೆಸುವ ವಿಡಿಯೊವನ್ನು ಮೋದಿ ಅವರು ಸಾಮಾಜಿಕ ಜಾಲತಾಣದಲ್ಲಿ ಹಂಚಿಕೊಂಡಿದ್ದಾರೆ ಎಂದೂ ಕಾಂಗ್ರೆಸ್ ನಿಯೋಗವು ದೂರಿದೆ.

ಇದೊಂದು ಗಂಭೀರ ವಿಚಾರ. ಇದಕ್ಕೆ ಕಾರಣರಾದವರ ಮೇಲೆ ಕಾನೂನು ಕ್ರಮ ಕೈಗೊಳ್ಳಬೇಕು ಎಂದು ಕಾಂಗ್ರೆಸ್ ಒತ್ತಾಯಿಸಿದೆ.

ಕೇಂದ್ರದ ಮಾಜಿ ಸಚಿವ ಸಲ್ಮಾನ್ ಖುರ್ಷಿದ್, ಜಮ್ಮು–ಕಾಶ್ಮೀರದ ಎಐಸಿಸಿ ಉಸ್ತುವಾರಿ ರಜನಿ ಪಾಟೀಲ್ ಮತ್ತು ಎಐಸಿಸಿ ಕಾರ್ಯದರ್ಶಿ ರಂಜೀತ್ ರಂಜನ್ ಅವರು ನಿಯೋಗದಲ್ಲಿ ಇದ್ದರು. ಹುಡುಗಿಯೊಬ್ಬಳು ಚುನಾವಣಾ ಪ್ರಚಾರ ನಡೆಸುತ್ತಿದ್ದ ವಿಡಿಯೊವನ್ನು ಮೋದಿ ಹಂಚಿಕೊಂಡಿದ್ದರು. ಕೇಂದ್ರದ ಹಲವು ಸಚಿವರು ಇದೇ ವಿಡಿಯೊವನ್ನು ಹಂಚಿಕೊಂಡಿದ್ದಾರೆ. ಇದು ಕಾನೂನಿನ ಉಲ್ಲಂಘನೆ ಎಂದು ಕಾಂಗ್ರೆಸ್ ಆರೋಪಿಸಿದೆ.

ಹೆಣ್ಣುಮಕ್ಕಳು ಮುಂದೆ ಬರಬೇಕು, ಅವರಿಗೆ ಶಿಕ್ಷಣ ದೊರೆಯಬೇಕು ಎಂದು ಎಲ್ಲರೂ ಹೇಳುತ್ತಿದ್ದಾರೆ. ಆದರೆ, ಪ್ರಧಾನಿಯವರು ಹೆಣ್ಣು ಮಕ್ಕಳನ್ನು ಚುನಾವಣಾ ಪ್ರಚಾರಕ್ಕೆ ಬಳಸಿದ್ದಾರೆ ಎಂದು ಪಾಟೀಲ್ ಅವರು ಹೇಳಿದ್ದಾರೆ.

ಸಲಿಂಗ ವಿವಾಹಕ್ಕೆ ಮಾನ್ಯತೆ: ಕೇಂದ್ರಕ್ಕೆ 'ಸುಪ್ರೀಂ' ನೋಟಿಸ್

ನವದೆಹಲಿ (ಪಿಟಿಐ): ವಿಶೇಷ ವಿವಾಹ ಕಾಯ್ದೆಯಡಿಯಲ್ಲಿ ತಮ್ಮ ಮದುವೆಯನ್ನು ಮಾನ್ಯ ಮಾಡಲು ನಿರ್ದೇಶನ ನೀಡುವಂತೆ ಕೋರಿ ಸಲಿಂಗ ದಂಪತಿ ಸಲ್ಲಿಸಿರುವ ಅರ್ಜಿಗಳಿಗೆ ಸಂಬಂಧಿಸಿ ಕೇಂದ್ರ ಸರ್ಕಾರ ಮತ್ತು ಅಟಾರ್ನಿ ಜನರಲ್ ಆರ್. ವೆಂಕಟರಮಣಿ ಅವರಿಗೆ ಸುಪ್ರೀಂಕೋರ್ಟ್ ಶುಕ್ರವಾರ ನೋಟಿಸ್ ನೀಡಿದೆ.

ಅರ್ಜಿಗಳ ವಿಚಾರಣೆ ನಡೆಸಿದ ಮುಖ್ಯ ನ್ಯಾಯಮೂರ್ತಿ ಡಿ.ವೈ. ಚಂದ್ರಚೂಡ್ ಮತ್ತು ನ್ಯಾಯಮೂರ್ತಿ ಹಿಮಾ ಕೊಹ್ಲಿ ಅವರನ್ನೊಳಗೊಂಡ ನ್ಯಾಯಪೀಠವು, ನಾಲ್ಕು ವಾರಗಳೊಳಗೆ ಪ್ರತಿಕ್ರಿಯೆ ಸಲ್ಲಿಸುವಂತೆ ಸೂಚಿಸಿತು.

ಇದಕ್ಕೂ ಮುನ್ನ, ಹಿರಿಯ ವಕೀಲ ಮುಕುಲ್ ರೋಹಟಗಿ ವಾದ ಮಂಡಿಸಿದರು.

ಒಂದು ಅರ್ಜಿಯನ್ನು ಹೈದರಾಬಾದ್ ನಿವಾಸಿಗಳಾದ ಸುಪ್ರಿಯೋ ಚಕ್ರವರ್ತಿ ಮತ್ತು ಅಭಯ್ ದಂಗ್ ಸಲ್ಲಿಸಿದ್ದು, ಮತ್ತೊಂದು ಅರ್ಜಿಯನ್ನು ಪಾರ್ಥ ಫಿರೋಜ್ ಮೆಹ್ರೋತ್ರಾ ಮತ್ತು ಉದಯ್ ರಾಜ್ ಎಂಬ ಸಲಿಂಗ ದಂಪತಿ ಸಲ್ಲಿಸಿದ್ದಾರೆ.

'ತಮ್ಮ ಇಚ್ಛೆಯ ವ್ಯಕ್ತಿಯನ್ನು ಮದುವೆಯಾಗುವ ಹಕ್ಕನ್ನು ಎಲ್‌ಜಿಬಿಟಿಕ್ಯೂ ಸಮುದಾಯಕ್ಕೆ ಸೇರಿದ ವ್ಯಕ್ತಿಗಳಿಗೂ ವಿಸ್ತರಿಸಬೇಕು. ಸಲಿಂಗ ವಿವಾಹಗಳಿಗೆ ಮಾನ್ಯತೆ ನೀಡದಿರುವುದು ಸಂವಿಧಾನದ 14 ಮತ್ತು 21ನೇ ವಿಧಿ ಅಡಿಯಲ್ಲಿ ನೀಡಲಾಗಿರುವ ಸಮಾನತೆ ಮತ್ತು ಬದುಕುವ ಹಕ್ಕುಗಳ ಉಲ್ಲಂಘನೆಯಾಗುತ್ತದೆ' ಎಂದು ಅರ್ಜಿದಾರರು ಪ್ರತಿಪಾದಿಸಿದ್ದಾರೆ.

2018ರಲ್ಲಿ ಐತಿಹಾಸಿಕ ತೀರ್ಪು ನೀಡಿದ್ದ ಐವರು ನ್ಯಾಯಮೂರ್ತಿಗಳಿದ್ದ ಸಂವಿಧಾನ ಪೀಠ, 'ಐಪಿಸಿ ಸೆಕ್ಷನ್ 377ರ ಅಡಿಯಲ್ಲಿ ಅನೈಸರ್ಗಿಕ ಲೈಂಗಿಕತೆ ಅಪರಾಧ' ಎಂದು ಹೇಳಿದ್ದ 158 ವರ್ಷಗಳ ಹಳೆಯದಾದ, ವಸಾಹತುಶಾಹಿ ಕಾಲದ ಕಾನೂನನ್ನು ರದ್ದುಪಡಿಸಿತ್ತು.

ಬಹು ಮಾಧ್ಯಮ ಪ್ರಜಾವಾಣಿ 75
www.prajavani.net LIVE
Prajavani.net Prajavani Prajavani
ಫೇಸ್‌ಬುಕ್, ಯೂಟ್ಯೂಬ್, ಟ್ವಿಟರ್‌ನಲ್ಲಿ ಏಕಕಾಲಕ್ಕೆ ನೇರಪ್ರಸಾರ
ಇಂದು
ಸೆಲೆಬ್ರಿಟಿ LIVE
ಕೊಂಡದಕುಳಿ ರಾಮಚಂದ್ರ ಹೆಗಡೆ
ಯಕ್ಷಗಾನ ಕಲಾವಿದ

ಯಕ್ಷ ಪ್ರಯೋಗಿ
ಬೆಳಿಗ್ಗೆ 11 ಗಂಟೆಗೆ
ಪ್ರಜಾವಾಣಿ ಕನ್ನಡ ಧ್ವನಿ
ಪಾಡ್‌ಕಾಸ್ಟ್: ಪ್ರಚಲಿತ: ಬೆಳಿಗ್ಗೆ 9. ಸಂಪಾದಕೀಯ: ಬೆಳಿಗ್ಗೆ 9.30
ಪ್ರಜಾವಾಣಿ ವಾರ್ತೆ: ಬೆಳಿಗ್ಗೆ 8, ಮಧ್ಯಾಹ್ನ 2 ಮತ್ತು ರಾತ್ರಿ 8

ಎನ್‌.ಜೆ.ಯಶಸ್ವಿ ಸ್ಮರಣಾರ್ಥ ಉಪನ್ಯಾಸ

ಸುರೇಶ್ ಪ್ರಭು

ಹೈದರಾಬಾದ್: 'ರಾಜಕಾರಣಿಗಳು ಅಥವಾ ಉದ್ಯಮಿಗಳು ಅಥವಾ ಅಧಿಕಾರಿಗಳು ಮಾತ್ರವೇ ನಾಯಕರಲ್ಲ. ನಾಯಕರಾದವರು ಸುಸ್ಥಿರ ಸಮಾಜದ ಅಭಿವೃದ್ಧಿಗೆ ಮತ್ತು ವ್ಯಕ್ತಿಗತವಾದ ಪ್ರಗತಿಗೆ ದುಡಿಯುತ್ತಾರೆ. ಗುಣಮಟ್ಟದ ಶಿಕ್ಷಣದ ಮೂಲಕ ಆಧುನಿಕ ಭಾರತವನ್ನು ಕಟ್ಟುವಲ್ಲಿ ಯಶಸ್ವಿ ಸಂಸ್ಥೆಯು ಮುಂದಾಳುವಾಗಿದೆ' ಎಂದು ಕೇಂದ್ರದ ಮಾಜಿ ಸಚಿವ ಸುರೇಶ್ ಪ್ರಭು ಹೇಳಿದ್ದಾರೆ.

ಐಸಿಎಫ್ಎಐ ಶೈಕ್ಷಣಿಕ ಸಂಸ್ಥೆಗಳ ಸಂಸ್ಥಾಪಕರಾದ ಎನ್.ಜೆ.ಯಶಸ್ವಿ ಸ್ಮರಣಾರ್ಥ ಉಪನ್ಯಾಸ ಕಾರ್ಯಕ್ರಮದಲ್ಲಿ ಅವರು ಮಾತನಾಡಿದರು.

'ದೇಶದಲ್ಲಿ ಉನ್ನತ ಶಿಕ್ಷಣ ಕ್ಷೇತ್ರದಲ್ಲಿ ಖಾಸಗಿ ಸಂಸ್ಥೆಗಳೂ ಭಾಗಿಯಾಗುವಲ್ಲಿ ಯಶಸ್ವಿ ಅವರ ಕೊಡುಗೆ ಮಹತ್ವದ್ದು. ಅವರು ಆ ಕಾಲದ ಶಿಕ್ಷಣ ವ್ಯವಸ್ಥೆಗೆ ಸವಾಲೆಸೆದು, ಹೊಸ ಪಠ್ಯಕ್ರಮವನ್ನು ಜಾರಿಗೆ ತಂದಿದ್ದರು' ಎಂದು ಸುರೇಶ್ ಪ್ರಭು ಹೇಳಿದರು.

ಸ್ವಾತಂತ್ರ್ಯದ ಅಮೃತ ಮಹೋತ್ಸವ: ಸಂಗೀತ ನಾಟಕ ಅಕಾಡೆಮಿಯ ಪುರಸ್ಕಾರ

ಐವರು ಕನ್ನಡಿಗರಿಗೆ 'ಅಮೃತ ಪ್ರಶಸ್ತಿ'

ಪ್ರಜಾವಾಣಿ ವಾರ್ತೆ

ಆರ್‌.ಕೆ. ಪದ್ಮನಾಭ

ಗರ್ತಿಕೆರೆ ರಾಘಣ್ಣ

ಎಚ್‌.ಆರ್‌. ಲೀಲಾವತಿ

ರವೀಂದ್ರ ಯಾವಗಲ್

ನವದೆಹಲಿ: ಸ್ವಾತಂತ್ರ್ಯದ ಅಮೃತ ಮಹೋತ್ಸವದ ಅಂಗವಾಗಿ ಕೇಂದ್ರ ಸಂಗೀತ ನಾಟಕ ಅಕಾಡೆಮಿಯು ಸಂಗೀತ, ನಾಟಕ ಹಾಗೂ ನೃತ್ಯ ಕ್ಷೇತ್ರಗಳಲ್ಲಿ ಅಮೋಘ ಸಾಧನೆ ಮಾಡಿರುವ ಕರ್ನಾಟಕದ ಐವರು ಸಾಧಕರು ಸೇರಿದಂತೆ ವಿವಿಧ ರಾಜ್ಯಗಳ 86 ಮಂದಿಗೆ 'ಸಂಗೀತ ನಾಟಕ ಅಕಾಡೆಮಿ ಅಮೃತ ಪ್ರಶಸ್ತಿ'ಯನ್ನು ಶುಕ್ರವಾರ ಘೋಷಿಸಿದೆ.

ರಾಜ್ಯದ ಹಿರಿಯ ಸಾಧಕರಾದ ಗೌರಿ ಕುಪ್ಪುಸ್ವಾಮಿ (ಕರ್ನಾಟಕ ಸಂಗೀತ), ಅನುಸೂಯ ಕುಲಕರ್ಣಿ (ಕರ್ನಾಟಕ ಸಂಗೀತ), ಲಲಿತಾ ಶ್ರೀನಿವಾಸನ್ (ಭರತನಾಟ್ಯ), ಎ.ಎಸ್.ಜಯತೀರ್ಥ (ರಂಗಭೂಮಿ), ಮಾರೆಪ್ಪ ಚನ್ನದಾಸರ (ಜನಪದ) ಪ್ರಶಸ್ತಿಗೆ ಆಯ್ಕೆಯಾಗಿದ್ದಾರೆ.

ಈ ಪ್ರಶಸ್ತಿಯು ತಲಾ ₹1 ಲಕ್ಷ ನಗದು ಹಾಗೂ ತಾಮ್ರಪತ್ರವನ್ನು ಒಳಗೊಂಡಿದೆ. 75 ವರ್ಷ ದಾಟಿದ ಹಾಗೂ ಈವರೆಗೆ ರಾಷ್ಟ್ರೀಯ ಪ್ರಶಸ್ತಿಯನ್ನು ಪಡೆಯದ ಕಲಾವಿದರನ್ನು ಗುರುತಿಸಿ ಈ ಗೌರವಕ್ಕೆ ಆಯ್ಕೆ ಮಾಡಲಾಗಿದೆ ಎಂದು ಅಕಾಡೆಮಿಯ ಪ್ರಕಟಣೆ ತಿಳಿಸಿದೆ.

ಇದೇ ವೇಳೆ, 2019, 2020, 2021ನೇ ಸಾಲಿನ ಸಂಗೀತ ನಾಟಕ ಅಕಾಡೆಮಿ ಪ್ರಶಸ್ತಿಯ ಪುರಸ್ಕೃತ ಹೆಸರನ್ನು (ಅಕಾಡೆಮಿ ಪುರಸ್ಕಾರ) ಪ್ರಕಟಿಸಲಾಗಿದೆ. 2019ನೇ ಸಾಲಿನ ಪ್ರಶಸ್ತಿಗೆ ವಿನಾಯಕ ತೊರವಿ (ಹಿಂದೂಸ್ಥಾನಿ ಸಂಗೀತ), ವಸುಂಧರಾ ದೊರೆಸ್ವಾಮಿ (ಭರತನಾಟ್ಯ), ಮಂಜು ಭಾರ್ಗವಿ (ಕೂಚಿಪುಡಿ), ಎನ್.ಕೆ.ರಾಮಕೃಷ್ಣ (ಮೇಕಪ್) ಆಯ್ಕೆಯಾಗಿದ್ದಾರೆ.

2020ನೇ ಸಾಲಿನ ಪ್ರಶಸ್ತಿಗೆ ಆರ್.ಕೆ.ಪದ್ಮನಾಭ (ಕರ್ನಾಟಕ ಸಂಗೀತ), ಎಸ್.ಜಿ.ಲಕ್ಷ್ಮಿದೇವಮ್ಮ (ಜನಪದ), ಆರತಿ ಅಂಕಲಿಕರ್ (ಹಿಂದೂಸ್ಥಾನಿ ಸಂಗೀತ), 2021ನೇ ಸಾಲಿನ ಪ್ರಶಸ್ತಿಗೆ ರವೀಂದ್ರ ಯಾವಗಲ್ (ತಬಲಾ), ಎಚ್. ಆರ್.ಲೀಲಾವತಿ (ಸುಗಮ ಸಂಗೀತ), ಗರ್ತಿಕೆರೆ ರಾಘಣ್ಣ (ಜನಪದ) ಹಾಗೂ ಡಿ.ಬಾಲಕೃಷ್ಣ (ವೀಣೆ) ಅವರನ್ನು ಆಯ್ಕೆ ಮಾಡಲಾಗಿದೆ.

ಅಕಾಡೆಮಿ ಪ್ರಶಸ್ತಿ ಪುರಸ್ಕೃತರಿಗೆ ತಲಾ ₹1 ಲಕ್ಷ ನಗದು ಹಾಗೂ ಪ್ರಶಸ್ತಿ ಪತ್ರ ನೀಡಲಾಗುತ್ತದೆ. ರಾಷ್ಟ್ರಪತಿ ಅವರು ಪ್ರಶಸ್ತಿ ಪ್ರದಾನ ಮಾಡಲಿದ್ದಾರೆ ಎಂದು ಪ್ರಕಟಣೆಯಲ್ಲಿ ತಿಳಿಸಲಾಗಿದೆ.

ಉಸ್ತಾದ್ ಬಿಸ್ಮಿಲ್ಲಾ ಖಾನ್ ಯುವ ಪುರಸ್ಕಾರಕ್ಕೆ (2019, 2020 ಹಾಗೂ 2021) ಬಿ.ಎಸ್.ಅರುಣ್ ಕುಮಾರ್ (ಸಂಗೀತ), ಅಮಿತ್ ಎ.ನಾಡಿಗ್ (ಕೊಳಲು), ವಸಂತ್ ಕಿರಣ್ (ಕೂಚಿಪುಡಿ) ಅವರನ್ನು ಆಯ್ಕೆ ಮಾಡಲಾಗಿದೆ. ಈ ಪ್ರಶಸ್ತಿಯು ತಲಾ ₹25 ಸಾವಿರ ನಗದು ಹಾಗೂ ಪ್ರಶಸ್ತಿ ಪತ್ರವನ್ನು ಒಳಗೊಂಡಿದೆ ಎಂದು ಪ್ರಕಟಣೆ ತಿಳಿಸಿದೆ.

ಆನಂದ್ ತೇಲ್ತುಂಬ್ಡೆ ಜಾಮೀನು ಪ್ರಶ್ನಿಸಿದ್ದ ಅರ್ಜಿ ವಜಾ

ನವದೆಹಲಿ (ಪಿಟಿಐ): ಎಲ್ಗಾರ್ ಪರಿಷತ್– ಮಾವೊ ಸಂಪರ್ಕ ಪ್ರಕರಣದಲ್ಲಿ ಚಿಂತಕ, ಸಾಮಾಜಿಕ ಕಾರ್ಯಕರ್ತ ಆನಂದ್ ತೇಲ್ತುಂಬ್ಡೆ ಅವರಿಗೆ ಬಾಂಬೆ ಹೈಕೋರ್ಟ್ ಜಾಮೀನು ನೀಡಿದ್ದನ್ನು ಪ್ರಶ್ನಿಸಿ ರಾಷ್ಟ್ರೀಯ ತನಿಖಾ ಸಂಸ್ಥೆಯು (ಎನ್‌ಐಎ) ಸಲ್ಲಿಸಿದ್ದ ಅರ್ಜಿಯನ್ನು ಶುಕ್ರವಾರ ಸುಪ್ರೀಂ ಕೋರ್ಟ್ ವಜಾಗೊಳಿಸಿದೆ.

ಸಂತೋಷ್ ನಿರಾಳ

ಹೈದರಾಬಾದ್: ಬಿಆರ್‌ಎಸ್ ಶಾಸಕರನ್ನು ಖರೀದಿಸಲು ಯತ್ನಿಸಲಾಗಿತ್ತು ಎಂಬ ಪ್ರಕರಣದಲ್ಲಿ ಬಿಜೆಪಿ ರಾಷ್ಟ್ರೀಯ ಸಂಘಟನಾ ಪ್ರಧಾನ ಕಾರ್ಯದರ್ಶಿ ಬಿ.ಎಲ್.ಸಂತೋಷ್ ಅವರಿಗೆ ಶುಕ್ರವಾರ ತಾತ್ಕಾಲಿಕ ನಿರಾಳತೆ ಸಿಕ್ಕಿದೆ.

ಈ ಪ್ರಕರಣಕ್ಕೆ ಸಂಬಂಧಿಸಿ ವಿಚಾರಣೆಗೆ ಹಾಜರಾಗುವಂತೆ ಸಂತೋಷ್ ಅವರಿಗೆ ಎಸ್‌ಐಟಿ ನೀಡಿದ್ದ ನೋಟಿಸ್‌ಗಳಿಗೆ ತಡೆ ನೀಡಿದ ತೆಲಂಗಾಣ ಹೈಕೋರ್ಟ್, ವಿಚಾರಣೆಯನ್ನು ಡಿ.5ಕ್ಕೆ ಮುಂದೂಡಿತು.

ಪೈಲಟ್ 'ನಂಬಿಕೆದ್ರೋಹಿ' ಅಂದಿದ್ದು ಆಕಸ್ಮಿಕ: ಕಾಂಗ್ರೆಸ್

ಸನಾವದ್ (ಮಧ್ಯಪ್ರದೇಶ) (ಪಿಟಿಐ): ರಾಜಸ್ಥಾನದ ಮುಖ್ಯಮಂತ್ರಿ ಅಶೋಕ್ ಗೆಹಲೋತ್ ಅವರು ತಮ್ಮ ಪಕ್ಷದ ಸಹೋದ್ಯೋಗಿ ಸಚಿನ್ ಪೈಲಟ್ ಅವರನ್ನು 'ನಂಬಿಕೆದ್ರೋಹಿ' ಎಂದು ಕರೆದಿರುವುದು 'ಅನಿರೀಕ್ಷಿತ' ಎಂದು ಕಾಂಗ್ರೆಸ್‌ನ ಹಿರಿಯ ನಾಯಕ ಜೈರಾಂ ರಮೇಶ್ ಶುಕ್ರವಾರ ಹೇಳಿದ್ದಾರೆ.

ಕಾಂಗ್ರೆಸ್ ಮುಖಂಡ ರಾಹುಲ್ ಗಾಂಧಿ ನೇತೃತ್ವದ 'ಭಾರತ್ ಜೋಡೊ' ಯಾತ್ರೆಯಲ್ಲಿ ಮಾತನಾಡಿದ ಅವರು, 'ಗೆಹಲೋತ್ ಅವರು ಕಾಂಗ್ರೆಸ್‌ನ ಹಿರಿಯ ನಾಯಕರು. ಅನುಭವಿಗಳು. ಟಿ.ವಿ ಸಂದರ್ಶನದಲ್ಲಿ ಅವರು ಸಚಿನ್ ವಿರುದ್ಧ ಈ ರೀತಿ ಪದ ಬಳಸಿರುವುದು ನನಗೂ ಅನಿರೀಕ್ಷಿತವಾಗಿದ್ದು, ಅಚ್ಚರಿ ತಂದಿದೆ' ಎಂದಿದ್ದಾರೆ.

'ಪಕ್ಷಕ್ಕೆ ಈ ಇಬ್ಬರು ನಾಯಕರ ಅಗತ್ಯವಿದೆ. ಕೆಲವು ಭಿನ್ನಾಭಿಪ್ರಾಯಗಳಿವೆ ನಿಜ. ಆದರೆ, ನಾವು ಅದರಿಂದ ಪಲಾಯನ ಮಾಡುತ್ತಿಲ್ಲ. ರಾಜಸ್ಥಾನದ ಸಮಸ್ಯೆಗೆ ಸೂಕ್ತ ನಾಯಕತ್ವದಲ್ಲಿ ಪರಿಹಾರ ಕಂಡುಕೊಳ್ಳಲಾಗುವುದು. ಸಂಘಟನೆ ಮುಖ್ಯವೇ ಹೊರತು ವ್ಯಕ್ತಿಗಳಲ್ಲ' ಎಂದೂ ತಿಳಿಸಿದ್ದಾರೆ.

'ಸಚಿನ್ ಪೈಲಟ್ ಅವರು ಯುವ, ಶಕ್ತಿಯುತ, ಜನಪ್ರಿಯ ಮತ್ತು ವರ್ಚಸ್ವಿ ನಾಯಕ' ಎಂದು ಜೈರಾಂ ರಮೇಶ್ ಬಣ್ಣಿಸಿದ್ದಾರೆ.

ಇದೇ ವೇಳೆ ಬಿಜೆಪಿಯನ್ನು ಟೀಕಿಸಿದ ಅವರು, 'ಕಾಂಗ್ರೆಸ್ ನಾಯಕರು ಯಾವುದೇ ಭಯವಿಲ್ಲದೆ ತಮ್ಮ ಹೃದಯದಿಂದ ಮಾತನಾಡಬಹುದು. ಏಕೆಂದರೆ ಪಕ್ಷದ ನಾಯಕತ್ವವು ಸರ್ವಾಧಿಕಾರಿಯಂತೆ ಯಾವುದೇ ನಿರ್ಧಾರವನ್ನು ತೆಗೆದುಕೊಳ್ಳುವುದಿಲ್ಲ ಮತ್ತು ಇದುವೇ ಕಾಂಗ್ರೆಸ್ ಮತ್ತು ಬಿಜೆಪಿ ನಡುವಿನ ವ್ಯತ್ಯಾಸವಾಗಿದೆ' ಎಂದೂ ಹೇಳಿದ್ದಾರೆ.

'ಸಚಿನ್ ಪೈಲಟ್ ನಂಬಿಕೆ ದ್ರೋಹಿ. ಅವರು ನನ್ನ ಸ್ಥಾನ ತುಂಬಲಾರರು. 2020ರಲ್ಲಿ ಪಕ್ಷದಲ್ಲಿ ನನ್ನದೇ ವಿರುದ್ಧ ಅವರು ಬಂಡಾಯವೆದ್ದಿದ್ದರು. ಅವರನ್ನು ರಾಜಸ್ಥಾನ ಮುಖ್ಯಮಂತ್ರಿಯನ್ನಾಗಿ ಮಾಡಲು ಸಾಧ್ಯವಿಲ್ಲ' ಎಂದು ಅಶೋಕ್ ಗೆಹಲೋತ್ ಅವರು ಗುರುವಾರ ಟಿ.ವಿ ಸಂದರ್ಶನವೊಂದರಲ್ಲಿ ಹೇಳಿದ್ದರು.

ನಿಧನ ವಾರ್ತೆ

ಕೋಳೂರು ಬಸವನಗೌಡ

ಬಳ್ಳಾರಿ: ಬಳ್ಳಾರಿ ಲೋಕಸಭಾ ಕ್ಷೇತ್ರದ ಮಾಜಿ ಸದಸ್ಯ ಕೋಳೂರು ಬಸವನಗೌಡ (89) ಶುಕ್ರವಾರ ನಗರದ ತಮ್ಮ ಮನೆಯಲ್ಲಿ ವಯೋಸಹಜ ಕಾಯಿಲೆಯಿಂದ ನಿಧನರಾದರು.

1999ರಿಂದ 2004ರವರೆಗೆ ಬಳ್ಳಾರಿ ಲೋಕಸಭಾ ಕ್ಷೇತ್ರವನ್ನು ಬಸವನಗೌಡ ಪ್ರತಿನಿಧಿಸಿದ್ದರು. ಕಾಂಗ್ರೆಸ್ ಪಕ್ಷದ ಮಾಜಿ ಅಧ್ಯಕ್ಷೆ ಸೋನಿಯಾ ಗಾಂಧಿ ಅವರ ರಾಜೀನಾಮೆಯಿಂದ ತೆರವಾದ ಸ್ಥಾನಕ್ಕೆ ಅವರು ಆಯ್ಕೆಯಾಗಿದ್ದರು.

ಅವರಿಗೆ ಪತ್ನಿ ಕಾಮಾಕ್ಷಮ್ಮ, ವೀರಶೈವ ಕಾಲೇಜಿನ ನಿವೃತ್ತ ಪ್ರಾಂಶುಪಾಲ ಪ್ರೊ. ಬಿ.ಟಿ. ಪಾಟೀಲ್ ಸೇರಿದಂತೆ ಇಬ್ಬರು ಪುತ್ರರು ಹಾಗೂ ಪುತ್ರಿ ಇದ್ದಾರೆ. ಅಂತ್ಯಕ್ರಿಯೆ ನಾಳೆ ಮಧ್ಯಾಹ್ನ ವೀರಶೈವ ರುದ್ರಭೂಮಿಯಲ್ಲಿ ನಡೆಯಲಿದೆ ಎಂದು ಕುಟುಂಬದ ಮೂಲಗಳು ತಿಳಿಸಿವೆ.

1980ರಲ್ಲಿ ವೀರಶೈವ ಎಂಜಿನಿಯರಿಂಗ್ ಕಾಲೇಜು ಸ್ಥಾಪಿಸುವಲ್ಲಿ ಅವರು ಪ್ರಮುಖ ಪಾತ್ರ ವಹಿಸಿದ್ದರು.

2–0 ಗೋಲುಗಳ ಗೆಲುವು; ರೂಜ್ಬೆ ಚೆಷ್ಮಿ, ರಮಿನ್ ರೆಜಿಯಾನ್ ಮಿಂಚು

ವೇಲ್ಸ್‌ಗೆ ಇರಾನ್ ಆಘಾತ

ಅಲ್ ರಯ್ಯಾನ್, ಕತಾರ್ (ರಾಯಿಟರ್ಸ್): ಇಂಜುರಿ ಅವಧಿಯಲ್ಲಿ ಗಳಿಸಿದ ಎರಡು ಗೋಲುಗಳ ನೆರವಿನಿಂದ ಇರಾನ್ ತಂಡ ವೇಲ್ಸ್ ವಿರುದ್ಧ ಗೆದ್ದು, ವಿಶ್ವಕಪ್ ಟೂರ್ನಿಯ ನಾಕೌಟ್ ಹಂತ ಪ್ರವೇಶಿಸುವ ಕನಸನ್ನು ಜೀವಂತವಾಗಿರಿಸಿಕೊಂಡಿತು.

ಅಹಮದ್ ಬಿನ್ ಅಲಿ ಕ್ರೀಡಾಂಗಣದಲ್ಲಿ ಶುಕ್ರವಾರ ನಡೆದ ಜಿದ್ದಾಜಿದ್ದಿನ ಸೆಣಸಾಟದಲ್ಲಿ ಸೋತ ವೇಲ್ಸ್ ತಂಡದ ನಾಕೌಟ್ ಪ್ರವೇಶದ ಸಾಧ್ಯತೆ ಕ್ಷೀಣಿಸಿದೆ. ಕೊನೆಯ ನಿಮಿಷಗಳಲ್ಲಿ ಕಾಲ್ಚಳಕ ಮೆರೆದ ರೂಜ್ಬೆ ಚೆಷ್ಮಿ (90 + 8 ನೇ ನಿ.) ಮತ್ತು ರಮಿನ್ ರೆಜಿಯಾನ್ (90 + 11 ನೇ ನಿ.) ಅವರು ಇರಾನ್ ತಂಡದ ಸ್ಮರಣೀಯ ಗೆಲುವಿಗೆ ಕಾರಣರಾದರು.

ಮೊದಲ ಪಂದ್ಯದಲ್ಲಿ ಇಂಗ್ಲೆಂಡ್ ಕೈಯಲ್ಲಿ 2–6 ಗೋಲುಗಳ ಹೀನಾಯ ಸೋಲು ಅನುಭವಿಸಿದ್ದ ಇರಾನ್, ಲೀಗ್ ಹಂತದಲ್ಲೇ ಹೊರಬೀಳುವ ಆತಂಕ ಎದುರಿಸಿತ್ತು. ಆದರೆ ವೇಲ್ಸ್ ವಿರುದ್ಧ ದೊರೆತ ಗೆಲುವು ತಂಡಕ್ಕೆ ಮರುಜೀವ ನೀಡಿದೆ.

ಈ ಗೆಲುವಿನ ಮೂಲಕ ಇರಾನ್ ತಂಡ 'ಬಿ' ಗುಂಪಿನಲ್ಲಿ ಮೂರು ಪಾಯಿಂಟ್ಸ್ ಗಳಿಸಿ, ವೇಲ್ಸ್‌ಗಿಂತ ಮೇಲಕ್ಕೇರಿತು. ಆರಂಭಿಕ ಪಂದ್ಯದಲ್ಲಿ ಅಮೆರಿಕ ಜತೆ 1–1 ಗೋಲುಗಳ ಸಮಬಲ ಸಾಧಿಸಿದ್ದ ವೇಲ್ಸ್ ಬಳಿ ಒಂದು ಪಾಯಿಂಟ್ ಇದೆ.

ಮೊದಲ ಅವಧಿಯಲ್ಲಿ ತುರುಸಿನ ಪೈಪೋಟಿ ನಡೆದರೂ ಗೋಲುಗಳು ಬರಲಿಲ್ಲ. ಎರಡನೇ ಅವಧಿಯಲ್ಲಿ ಉಭಯ ತಂಡಗಳು ಆಕ್ರಮಣಕಾರಿ ಆಟವಾಡಿದವು. ಇರಾನ್‌ನ ಮೂವರು ಆಟಗಾರರಿಗೆ ಗೋಲು ಗಳಿಸಲು ಉತ್ತಮ ಅವಕಾಶ ದೊರೆತರೂ ಅದೃಷ್ಟ ಕೈಕೊಟ್ಟಿತು.

ಸರ್ದಾರ್ ಅಜ್ಮೋನ್ ಅವರು ಒದ್ದ ಚೆಂಡು ಗೋಲುಕಂಬಕ್ಕೆ ಬಡಿದು ವಾಪಸಾಯಿತು. ರಿಬೌಂಡ್ ಆಗಿ ಬಂದ ಚೆಂಡನ್ನು ಅಲಿ ಗೋಲಿಜಾದೆ ಬಲವಾಗಿ ಒದ್ದರೂ ಅದು ಗೋಲುಪೆಟ್ಟಿಗೆಯ ಇನ್ನೊಂದು ಬದಿಯ ಕಂಬಕ್ಕೆ ಬಡಿಯಿತು. ತಮ್ಮತ್ತ ಬಂದ ಚೆಂಡನ್ನು ಅಜ್ಮೋನ್ ಹೆಡ್ ಮಾಡಿದರೂ ಗೋಲ್‌ಕೀಪರ್ ವೇಯ್ನ್ ಹೆನೆಸ್ಸಿ ತಡೆದರು.

70ನೇ ನಿಮಿಷದಲ್ಲಿ ಹೆನೆಸ್ಸಿ ಮತ್ತೊಮ್ಮೆ ವೇಲ್ಸ್ ರಕ್ಷಣೆಗೆ ನಿಂತರು. ಸಯೇದ್ ಎಜತೊಲಾಹಿ ಅವರ ಪ್ರಯತ್ನವನ್ನು ಯಶಸ್ವಿಯಾಗಿ ತಡೆದರು. ಆದರೆ 87ನೇ ನಿಮಿಷದಲ್ಲಿ ಹೆನೆಸ್ಸಿ ರೆಡ್‌ಕಾರ್ಡ್ ಪಡೆದು ಹೊರನಡೆದ ಬಳಿಕ ವೇಲ್ಸ್ 10 ಮಂದಿಯೊಂದಿಗೆ ಆಡಬೇಕಾಯಿತು. ಈ ಅವಕಾಶವನ್ನು ಸಮರ್ಥವಾಗಿ ಬಳಸಿಕೊಂಡ ಇರಾನ್ ಅಲ್ಪ ಅಂತರದಲ್ಲಿ ಎರಡು ಗೋಲುಗಳನ್ನು ಗಳಿಸಿ ಗೆಲುವಿನ ನಗು ಬೀರಿತು.

ರಾಷ್ಟ್ರಗೀತೆ ಹಾಡಿದ ಇರಾನ್ ಆಟಗಾರರು

ಇರಾನ್ ತಂಡದ ಆಟಗಾರರು ಈ ಪಂದ್ಯಕ್ಕೆ ಮುನ್ನ ರಾಷ್ಟ್ರಗೀತೆ ಹಾಡಿದರು. ಇಂಗ್ಲೆಂಡ್ ವಿರುದ್ಧದ ಮೊದಲ ಪಂದ್ಯಕ್ಕೆ ಮುನ್ನ ರಾಷ್ಟ್ರಗೀತೆ ನುಡಿಸುವಾಗ ಇರಾನ್ ಆಟಗಾರರು ದನಿಗೂಡಿಸಲಿಲ್ಲ. ತಮ್ಮ ದೇಶದಲ್ಲಿ ನಡೆಯುತ್ತಿರುವ ಸರ್ಕಾರಿ ವಿರೋಧಿ ಪ್ರತಿಭಟನೆಗೆ ಬೆಂಬಲ ಸೂಚಿಸಲು ಈ ನಿರ್ಧಾರ ತೆಗೆದುಕೊಂಡಿದ್ದರು.

ಘರ್ಷಣೆ: ಪಂದ್ಯಕ್ಕೆ ಮುನ್ನ ಕ್ರೀಡಾಂಗಣದ ಹೊರಗೆ ಇರಾನ್ ಸರ್ಕಾರದ ಪರ ಮತ್ತು ವಿರೋಧ ಇರುವವರ ಮಧ್ಯೆ ಸಂಘರ್ಷ ನಡೆದಿದೆ. ಇರಾನ್‌ನಲ್ಲಿ ನಡೆಯುತ್ತಿರುವ ಪ್ರತಿಭಟನೆಯನ್ನು ಬೆಂಬಲಿಸುವ ಟಿ–ಶರ್ಟ್ ಮತ್ತು ಲೋಗೊವನ್ನು ಕ್ರೀಡಾಂಗಣದ ಒಳಗೆ ಕೊಂಡೊಯ್ಯಲು ಭದ್ರತಾ ಸಿಬ್ಬಂದಿ ಅವಕಾಶ ನೀಡಲಿಲ್ಲ.

ಗೋಲ್‌ಕೀಪರ್ ಹೆನೆಸ್ಸಿಗೆ ರೆಡ್ ಕಾರ್ಡ್

ವೇಲ್ಸ್ ತಂಡದ ಗೋಲ್‌ಕೀಪರ್ ವೇಯ್ನ್ ಹೆನೆಸ್ಸಿ ಅವರನ್ನು ರೆಫರಿ 87ನೇ ನಿಮಿಷದಲ್ಲಿ ರೆಡ್ ಕಾರ್ಡ್ ತೋರಿಸಿ ಹೊರಕ್ಕೆ ಕಳುಹಿಸಿದರು. ಈ ಟೂರ್ನಿಯಲ್ಲಿ ರೆಡ್‌ಕಾರ್ಡ್ ಪಡೆದು ಹೊರನಡೆದ ಮೊದಲ ಆಟಗಾರ ಅವರು.

ಗೋಲುಪೆಟ್ಟಿಗೆ ಬಿಟ್ಟು ತುಂಬಾ ಮುಂದೆ ಬಂದ ಹೆನೆಸ್ಸಿ ಚೆಂಡನ್ನು ತಡೆಯುವ ಯತ್ನದಲ್ಲಿ ಎದುರಾಳಿ ತಂಡದ ಮೆಹ್ದಿ ತರೆಮಿ ಅವರನ್ನು ಬೀಳಿಸಿದರು. ಮೊದಲು ಹಳದಿ ಕಾರ್ಡ್ ಹೊರತೆಗೆದ ರೆಫರಿ, ರೀಪ್ಲೆ ವೀಕ್ಷಿಸಿದ ಬಳಿಕ ತಮ್ಮ ನಿರ್ಧಾರ ಬದಲಿಸಿ ರೆಡ್ ಕಾರ್ಡ್ ನೀಡಿದರು. ಆ ಬಳಿಕ ವೇಲ್ಸ್ 10 ಮಂದಿಯೊಂದಿಗೆ ಆಡಬೇಕಾಯಿತು.

ಇರಾನ್–2
ರೂಜ್ಬೆ ಚೆಷ್ಮಿ (90+8 ನೇ ನಿ.)
ರಮಿನ್ ರೆಜಿಯಾನ್ (90+11 ನೇ ನಿ.)

ವೇಲ್ಸ್–0

ಇರಾನ್ ತಂಡದ ರಮಿನ್ ರೆಜಿಯಾನ್ –ಎಎಫ್‌ಪಿ ಚಿತ್ರ

ಬ್ರೆಜಿಲ್ ಶುಭಾರಂಭ

ದೋಹಾ (ಎಎಫ್‌ಪಿ): ದಾಖಲೆಯ ಆರನೇ ಪ್ರಶಸ್ತಿಯತ್ತ ಕಣ್ಣಿಟ್ಟಿರುವ ಬ್ರೆಜಿಲ್ ತಂಡ ಫಿಫಾ ವಿಶ್ವಕಪ್ ಫುಟ್‌ಬಾಲ್ ಟೂರ್ನಿಯಲ್ಲಿ ಶುಭಾರಂಭ ಮಾಡಿದೆ.

ಲುಸೈಲ್ ಕ್ರೀಡಾಂಗಣದಲ್ಲಿ ಗುರುವಾರ ರಾತ್ರಿ ನಡೆದ ಪಂದ್ಯದಲ್ಲಿ ಬ್ರೆಜಿಲ್, 2–0 ಗೋಲುಗಳಿಂದ ಸರ್ಬಿಯಾ ತಂಡವನ್ನು ಮಣಿಸಿತು. ಎರಡೂ ಗೋಲುಗಳನ್ನು ರಿಚಾರ್ಲಿಸನ್ ಗಳಿಸಿದರು.ಮೊದಲ ಅವಧಿಯ ಆಟದಲ್ಲಿ ಸರ್ಬಿಯಾ ತಂಡದವರು ಬಲಿಷ್ಠ ಎದುರಾಳಿಗಳಿಗೆ ತಕ್ಕ ಪೈಪೋಟಿ ನೀಡುವಲ್ಲಿ ಯಶಸ್ವಿಯಾದರು. ಆದರೆ ಎರಡನೇ ಅವಧಿಯಲ್ಲಿ ಚುರುಕಿನ ಆಟವಾಡಿದ ಬ್ರೆಜಿಲ್ 62 ಮತ್ತು 73ನೇ ನಿಮಿಷಗಳಲ್ಲಿ ಗೋಲು ಗಳಿಸಿತು.

ನೇಮರ್ ನೀಡಿದ ಪಾಸ್‌ನಲ್ಲಿ ವಿನೀಸಿಯಸ್ ಜೂನಿಯರ್ ಗುರಿಯತ್ತ ಒದ್ದ ಚೆಂಡನ್ನು ಗೋಲ್ ಕೀಪರ್ ಮುಂದಕ್ಕೆ ತಳ್ಳಿದರು. ಅಲ್ಲೇ ಕಾಯುತ್ತಿದ್ದ ರಿಚಾರ್ಲಿಸನ್ ನಿರಾ ಯಾಸದಿಂದ ಗುರಿ ಸೇರಿಸಿದರು. ಗೋಲು ಬಿದ್ದದ್ದೇ ತಡ, ಬ್ರೆಜಿಲ್ ಆಕ್ರಮಣದ ವೇಗ ಹೆಚ್ಚಿಸಿತು.

ಸುಂದರ ಗೋಲು: ರಿಚಾರ್ಲಿಸನ್ 73ನೇ ನಿಮಿಷದಲ್ಲಿ ಗಳಿಸಿದ 2ನೇ ಗೋಲು ಚೇತೋಹಾರಿಯಾಗಿತ್ತು. ವಿನೀಸಿಯಸ್ ನೀಡಿದ ಪಾಸ್‌ನಲ್ಲಿ ರಿಚಾರ್ಲಿಸನ್ ಅವರು ಚೆಂಡನ್ನು ತಮ್ಮ ಎಡಗಾಲಿನ ಮೂಲಕ ಅಲ್ಪ ಮೇಲಕ್ಕೆ ಅಟ್ಟಿದರು. ಚೆಂಡು ನೆಲಕ್ಕೆ ಬೀಳುವ ಮುನ್ನವೇ ಮೇಲಕ್ಕೆ ಜಿಗಿದು 'ಅಕ್ರೊಬ್ಯಾಟಿಕ್' ಶೈಲಿಯಲ್ಲಿ ಬಲಗಾಲಿನಲ್ಲಿ ಮಿಂಚಿನ ವೇಗದಲ್ಲಿ ಗೋಲುಪೆಟ್ಟಿಗೆಯತ್ತ ಒದ್ದರು. ಇಬ್ಬರು ಡಿಫೆಂಡರ್‌ಗಳು, ಗೋಲ್‌ಕೀಪರ್‌ಅನ್ನು ದಾಟಿದ ಚೆಂಡು ನೆಟ್‌ನೊಳಕ್ಕೆ ಸೇರಿತು.

2 ಪಂದ್ಯಗಳಿಗೆ ನೇಮರ್ ಅಲಭ್ಯ

ದೋಹಾ (ರಾಯಿಟರ್ಸ್): ಬ್ರೆಜಿಲ್ ತಂಡದ ನೇಮರ್ ಮತ್ತು ಡ್ಯಾನಿಲೊ ಗಾಯಗೊಂಡಿದ್ದು, ಇನ್ನುಳಿದ ಎರಡು ಲೀಗ್ ಪಂದ್ಯಗಳಿಗೆ ಅಲಭ್ಯರಾಗಿದ್ದಾರೆ.

'ನೇಮರ್ ಹಾಗೂ ಡ್ಯಾನಿಲೊ ಪಾದದ ಗಾಯಕ್ಕೆ ಒಳಗಾಗಿದ್ದು ಎಂಆರ್‌ಐ ಸ್ಕ್ಯಾನಿಂಗ್‌ಗೆ ಒಳಪಡಿಸಲಾಗಿದೆ. ಇಬ್ಬರಿಗೂ ವಿಶ್ರಾಂತಿಗೆ ಸೂಚಿಸಲಾಗಿದ್ದು, ಮುಂದಿನ ಎರಡು ಪಂದ್ಯಗಳಲ್ಲಿ ಆಡುತ್ತಿಲ್ಲ' ಎಂದು ಬ್ರೆಜಿಲ್ ತಂಡದ ವೈದ್ಯ ರಾಡ್ರಿಗೊ ಲಸ್ಮರ್ ಹೇಳಿದ್ದಾರೆ. ಸರ್ಬಿಯಾ ವಿರುದ್ಧ ಗುರುವಾರ ನಡೆದ ಪಂದ್ಯದ ವೇಳೆ ಗಾಯಗೊಂಡಿದ್ದ ನೇಮರ್ ಅವರ ಪಾದ ಊದಿಕೊಂಡಿತ್ತು.

ಬ್ರೆಜಿಲ್‌ನ ರಿಚಾರ್ಲಿಸನ್ ಅವರು 2ನೇ ಗೋಲು ಗಳಿಸಿದ ಕ್ಷಣ –ಎಎಫ್‌ಪಿ ಚಿತ್ರ



ಭಾರತದ ಕ್ಷೀರಕ್ರಾಂತಿಯ ಹರಿಕಾರನ 101ನೇ ಹುಟ್ಟುಹಬ್ಬವನ್ನು ಆಚರಿಸಲಾಗುತ್ತಿದೆ!

ಫಿಫಾ ವಿಶ್ವಕಪ್ ವೈದ್ಯಕೀಯ ತಂಡದಲ್ಲಿ ತುಳುನಾಡ ಮಹಿಳೆ

ಪ್ರಜಾವಾಣಿ ವಾರ್ತೆ

ಮಂಗಳೂರು: ಕತಾರ್‌ನಲ್ಲಿ ನಡೆಯುತ್ತಿರುವ ವಿಶ್ವಕಪ್ ಫುಟ್‌ಬಾಲ್ ಟೂರ್ನಿಯಲ್ಲಿ ಕಾರ್ಯನಿರ್ವಹಿಸುತ್ತಿರುವ ವೈದ್ಯಕೀಯ ತಂಡದಲ್ಲಿ ತುಳುನಾಡಿನ ಪ್ರತಿಭಾ ಎನ್.ದರ್ಖಾಸು ಇದ್ದಾರೆ.

ದಕ್ಷಿಣ ಕನ್ನಡ ಜಿಲ್ಲೆ ಬಂಟ್ವಾಳ ತಾಲ್ಲೂಕಿನ ಕುಡಂಬೆಟ್ಟು ಗ್ರಾಮದ ದೋಟ ದರ್ಖಾಸು ನಿವಾಸಿ ನವೀನ್ ಪೂಜಾರಿ ಅವರ ಪತ್ನಿ ಪ್ರತಿಭಾ ಎನ್. ದರ್ಖಾಸು ಅವರು ಕತಾರ್‌ನ ಹಾಮದ್ ಮೆಡಿಕಲ್ ಕಾರ್ಪೋರೇಷನ್ ಸರ್ಕಾರಿ ಅಸ್ಪತ್ರೆಯ ಶುಶ್ರೂಷಕ ಸಿಬ್ಬಂದಿ. ವಿಶ್ವಕಪ್ ಟೂರ್ನಿಯಲ್ಲಿ ಗಾಯಾಳುಗಳ ಆರೈಕೆಗೆ ಆಸ್ಪತ್ರೆಯ ಒಂದು ಸಾವಿರ ಶುಶ್ರೂಷಕರನ್ನು ನೇಮಕ ಮಾಡಲಾಗಿದೆ. ಅವರಲ್ಲಿ ಪ್ರತಿಭಾ ಅವರೂ ಒಬ್ಬರು.

ಬಂಟ್ವಾಳ ತಾಲ್ಲೂಕು ಸಿದ್ಧಕಟ್ಟೆ ಸೂರಂಡೆ ನಿವಾಸಿಗಳಾದ ನಾರಾಯಣ ಪೂಜಾರಿ ಮತ್ತು ಶ್ರೀಮತಿ ದಂಪತಿಯ ಪುತ್ರಿಯಾದ ಪ್ರತಿಭಾ ಅವರು ವಾಮದಪದವಿನ ಕುಡಂಬೆಟ್ಟು ನಿವಾಸಿ ನವೀನ್ ಪೂಜಾರಿ ಅವರ ಪತ್ನಿ. ಕೆಲವು ವರ್ಷಗಳಿಂದ ಸಂಸಾರ ಸಮೇತ ಕತಾರ್‌ನದೋಹಾದಲ್ಲಿನೆಲೆಸಿದ್ದಾರೆ.

ವಿಶ್ವಕಪ್ ಅಂಗಣದಿಂದ ದೂರವಾಣಿಯ ಮೂಲಕ 'ಪ್ರಜಾವಾಣಿ' ಜೊತೆ ಮಾತನಾಡಿದ ಪ್ರತಿಭಾ 'ನಾನು ಫ್ಯಾನ್ ಝೋನ್‌ನಲ್ಲಿ ಕಾರ್ಯನಿರ್ವಹಿಸುತ್ತಿದ್ದು ವಿಶ್ವದ ನಾನಾ ತಂಡಗಳ ಅಭಿಮಾನಿಗಳ ಆರೋಗ್ಯದ ಕಾಳಜಿ ವಹಿಸುವ ತಂಡದಲ್ಲಿದ್ದೇನೆ. ಇಲ್ಲಿ ವಿಶ್ವಕಪ್ ಫುಟ್‌ಬಾಲ್‌ನ ಅಲೆ ಎದ್ದಿದ್ದು ನಾವೆಲ್ಲರೂ ಅದರಲ್ಲಿ ಸಂಭ್ರಮಿಸುತ್ತಿದ್ದೇವೆ. ದಕ್ಷಿಣ ಕನ್ನಡದ ಇನ್ನೂ ಕೆಲವು ಸಹೋದ್ಯೋಗಿಗಳು ನನ್ನೊಂದಿಗೆ ಇದ್ದಾರೆ' ಎಂದರು.

ಪ್ರತಿಭಾ ಎನ್‌ದರ್ಖಾಸು

ಕತಾರ್‌ಗೆ ಮತ್ತೆ ನಿರಾಸೆ

3–1 ಗೋಲುಗಳಿಂದ ಗೆಲುವು ಸಾಧಿಸಿದ ಸೆನೆಗಲ್ ತಂಡ

ದೋಹಾ (ಎಎಫ್‌ಪಿ): ಅತಿಥೇಯ ಕತಾರ್ ತಂಡ ವಿಶ್ವಕಪ್ ಟೂರ್ನಿಯ ಲೀಗ್ ಹಂತದಲ್ಲೇ ಹೊರಬಿದ್ದಿದೆ.

ಅಲ್ ತುಮಾಮಾ ಕ್ರೀಡಾಂಗಣದಲ್ಲಿ ಶುಕ್ರವಾರ ನಡೆದ 'ಎ' ಗುಂಪಿನ ಪಂದ್ಯದಲ್ಲಿ ಸೆನೆಗಲ್ 3–1 ಗೋಲುಗಳಿಂದ ಕತಾರ್ ವಿರುದ್ಧ ಗೆದ್ದಿತು. ಮೊದಲ ಪಂದ್ಯದಲ್ಲಿ ನೆದರ್ಲೆಂಡ್ಸ್ ಎದುರು ಸೋತಿದ್ದ ಸೆನೆಗಲ್ ಈ ಗೆಲುವಿನ ಮೂಲಕ ಪ್ರೀ ಕ್ವಾರ್ಟರ್ ಫೈನಲ್ ಪ್ರವೇಶಿಸುವ ಆಸೆ ಜೀವಂತವಾಗಿರಿಸಿಕೊಂಡಿದೆ.

ಬೊಲಾಯೆ ದಿಯಾ (41ನೇ ನಿ.), ಫಮರ ದಿಯೆದಿಯೊ (48ನೇ ನಿ.) ಮತ್ತು ಚೀಕ್ ಡೆಂಗ್ (84ನೇ ನಿ.) ಅವರು ಸೆನೆಗಲ್ ಪರ ಗೋಲು ಗಳಿಸಿದರು. ಕತಾರ್ ತಂಡದ ಏಕೈಕ ಗೋಲನ್ನು ಮೊಹಮ್ಮದ್ ಮುಂತರಿ 78ನೇ ನಿಮಿಷದಲ್ಲಿ ತಂದಿತ್ತರು.

ಟೂರ್ನಿಯ ಉದ್ಘಾಟನಾ ಪಂದ್ಯದಲ್ಲಿ 0–2 ರಲ್ಲಿ ಈಕ್ವೆಡಾರ್ ಎದುರು ಸೋತಿದ್ದ ಕತಾರ್, ಈ ಪಂದ್ಯದಲ್ಲೂ ಪ್ರಭಾವಿ ಪ್ರದರ್ಶನ ನೀಡುವಲ್ಲಿ ವಿಫಲವಾಯಿತು.

ಮೊದಲ ಅವಧಿಯ ಆರಂಭದಿಂದಲೇ ಸೆನೆಗಲ್ ಆಕ್ರಮಣಕಾರಿ ಆಟದ ಮೂಲಕ ಎದುರಾಳಿ ಡಿಫೆಂಡರ್‌ಗಳ ಮೇಲೆ ಒತ್ತಡ ಹೇರಿತು. ಕತಾರ್ ತಂಡದ ಡಿಫೆಂಡರ್ ಬೌಲೆಮ್ ಕುವಾಕಿ ಮಾಡಿದ ಎಡವಟ್ಟು, ಸೆನೆಗಲ್‌ಗೆ ಗೋಲಿನ ಖಾತೆ ತೆರೆಯಲು ನೆರವಾಯಿತು.

ಕುವಾಕಿ ಅವರಿಗೆ ಚೆಂಡನ್ನು ಸುಲಭವಾಗಿ ತಡೆದು ದೂರ ಅಟ್ಟಬಹುದಿತ್ತು. ಆದರೆ ಅದರಲ್ಲಿ ಎಡವಿದ್ದರಿಂದ ದಿಯಾ ಗೋಲು ಗಳಿಸಿದರು. ಎರಡನೇ ಅವಧಿ ಆರಂಭದಲ್ಲೇ ಸೆನೆಗಲ್, ಮುನ್ನಡೆಯನ್ನು 2–0ಗೆ ಹೆಚ್ಚಿಸಿತು.

ದಕ್ಷಿಣ ಆಫ್ರಿಕಾ ತಂಡವನ್ನು (2010ರ ಟೂರ್ನಿ) ಹೊರತುಪಡಿಸಿ ಯಾವುದೇ ಅತಿಥೇಯ ರಾಷ್ಟ್ರ ವಿಶ್ವಕಪ್ ಟೂರ್ನಿಯ ಲೀಗ್ ಹಂತದಲ್ಲೇ ಹೊರಬಿದ್ದಿರಲಿಲ್ಲ. ಎ ಗುಂಪಿನ ಇನ್ನೊಂದು ಪಂದ್ಯದಲ್ಲಿ ಈಕ್ವೆಡಾರ್ ತಂಡವು ನೆದರ್ಲೆಂಡ್ಸ್ ಜೊತೆಗೆ 1–1ರಿಂದ ಡ್ರಾ ಸಾಧಿಸಿದ್ದರಿಂದ ಕತಾರ್‌ಗೆ ನಾಕೌಟ್ ಬಾಗಿಲು ಮುಚ್ಚಿತು.

ಗೋಲು ಗಳಿಸಿದ ಸಂಭ್ರಮದಲ್ಲಿ ಸೆನೆಗಲ್‌ನ ಫಮರ ದಿಯೆದಿಯೊ –ಎಎಫ್‌ಪಿ ಚಿತ್ರ

ಡ್ರಾ ಪಂದ್ಯದಲ್ಲಿ ನೆದರ್ಲೆಂಡ್ಸ್–ಈಕ್ವೆಡಾರ್

ದೋಹಾ (ರಾಯಿಟರ್ಸ್): ನೆದರ್ಲೆಂಡ್ಸ್ ಮತ್ತು ಈಕ್ವೆಡಾರ್ ತಂಡಗಳ ನಡುವೆ ಇಲ್ಲಿ ನಡೆದ ಎ ಗುಂಪಿನ ಪಂದ್ಯವು 1–1ರಿಂದ ಡ್ರಾನಲ್ಲಿ ಅಂತ್ಯವಾಯಿತು.



ಎನ್ನರ್

ಇಲ್ಲಿನ ಖಲೀಫಾ ಅಂತರರಾಷ್ಟ್ರೀಯ ಕ್ರೀಡಾಂಗಣದಲ್ಲಿ ಜಿದ್ದಾಜಿದ್ದಿನ ಪೈಪೋಟಿ ಕಂಡುಬಂದ ಪಂದ್ಯದ ಆರನೇ ನಿಮಿಷದಲ್ಲಿ ಗೋಲು ದಾಖಲಿಸಿದ ನೆದರ್ಲೆಂಡ್ಸ್‌ನ ಕೋಡಿ ಗಾಕ್‌ಪೊ ಮುನ್ನಡೆ ತಂದುಕೊಟ್ಟರು. ಆದರೆ ಎನ್ನರ್ ವೆಲೆನ್ಸಿಯಾ 49ನೇ ನಿಮಿಷದಲ್ಲಿ ದಾಖಲಿಸಿದ ಗೋಲು ಈಕ್ವೆಡಾರ್ ಸಬಮಲ ಸಾಧಿಸಲು ಕಾರಣವಾಯಿತು. ಇದರೊಂದಿಗೆ ಈಕ್ವೆಡಾರ್ ಮತ್ತು ನೆದರ್ಲೆಂಡ್ಸ್ ತಂಡಗಳಿಗೆ 16ರ ಘಟ್ಟದ ಹಾದಿ ಮುಕ್ತವಾಗಿದೆ. ಉಭಯ ತಂಡಗಳು ತಲಾ ನಾಲ್ಕು ಪಾಯಿಂಟ್ಸ್ ಗಳಿಸಿವೆ.

33 ವರ್ಷದ ಎನ್ನರ್ ಅವರಿಗೆ ಈ ವಿಶ್ವಕಪ್ ಟೂರ್ನಿಯಲ್ಲಿ ಇದು ಮೂರನೇ ಗೋಲು. ಅವರು ಈ ಪಂದ್ಯದಲ್ಲಿ ಗಾಯಗೊಂಡರು.

ಕತಾರ್ ಎದುರಿನ ಪಂದ್ಯದಲ್ಲಿ ಅವರು 2 ಗೋಲು ಹೊಡೆದಿದ್ದರು. ಈ ಫಲಿತಾಂಶದೊಂದಿಗೆ ಕತಾರ್ 16ರ ಘಟ್ಟ ತಲುಪುವ ಕನಸು ಕಮರಿಹೋಯಿತು.

ಮೆಸ್ಸಿ ಬಳಗಕ್ಕೆ ಅಗ್ನಿಪರೀಕ್ಷೆ

ದೋಹಾ (ಎಪಿ): ಮೊದಲ ಪಂದ್ಯದಲ್ಲಿ ಅನಿರೀಕ್ಷಿತ ಆಘಾತ ಅನುಭವಿಸಿರುವ ಲಯೊನೆಲ್ ಮೆಸ್ಸಿ ನೇತೃತ್ವದ ಅರ್ಜೆಂಟೀನಾ ತಂಡ ಶನಿವಾರ ಮೆಕ್ಸಿಕೊ ವಿರುದ್ಧ ಪೈಪೋಟಿ ನಡೆಸಲಿದ್ದು, ಗೆಲ್ಲಲೇಬೇಕಾದ ಒತ್ತಡಕ್ಕೆ ಸಿಲುಕಿದೆ.

ಪ್ರಶಸ್ತಿ ಗೆಲ್ಲುವ ನೆಚ್ಚಿನ ತಂಡಗಳಲ್ಲಿ ಒಂದೆನಿಸಿರುವ ಅರ್ಜೆಂಟೀನಾ 'ಸಿ' ಗುಂಪಿನ ಅರಂಭಿಕ ಪಂದ್ಯದಲ್ಲಿ ಸೌದಿ ಆರೇಬಿಯಾ ಎದುರು 1–2 ಗೋಲುಗಳಿಂದ ಮುಖಭಂಗ ಅನುಭವಿಸಿತ್ತು. ಆ ನಿರಾಸೆಯಿಂದ ಹೊರಬಂದು ಪುಟಿದೆದ್ದು ನಿಲ್ಲುವ ಸವಾಲು ತಂಡದ ಮುಂದಿದೆ.

ಮೊದಲ ಸುತ್ತಿನ ಪಂದ್ಯಗಳ ಬಳಿಕ 'ಸಿ' ಗುಂಪಿನಲ್ಲಿ ಸೌದಿ ಮೂರು ಪಾಯಿಂಟ್ಸ್‌ಗಳೊಂದಿಗೆ ಅಗ್ರಸ್ಥಾನದಲ್ಲಿದೆ. ತಲಾ ಒಂದು ಪಾಯಿಂಟ್ ಗಳಿಸಿರುವ ಪೋಲೆಂಡ್ ಹಾಗೂ ಮೆಕ್ಸಿಕೊ ಬಳಿಕದ ಸ್ಥಾನಗಳಲ್ಲಿದ್ದರೆ, ಪಾಯಿಂಟ್ ಖಾತೆ ತೆರೆಯದ ಅರ್ಜೆಂಟೀನಾ ಕೊನೆಯ ಸ್ಥಾನದಲ್ಲಿದೆ.

ಆದ್ದರಿಂದ ನಾಕೌಟ್ ಹಂತ ಪ್ರವೇಶಿಸುವ ಆಸೆ ಜೀವಂತವಾಗಿರಿಸಿಕೊಳ್ಳಬೇಕಾದರೆ ಮೆಸ್ಸಿ ಬಳಗಕ್ಕೆ ಶನಿವಾರ ಗೆಲುವು ಅನಿವಾರ್ಯ. ಡ್ರಾ ಸಾಧಿಸಿದರೂ ತಂಡ ಮುಂದಿನ ಹಂತ ಪ್ರವೇಶಿಸುವ ಸಾಧ್ಯತೆ ಕ್ಷೀಣಿಸಲಿದೆ.

ಫ್ರಾನ್ಸ್–ಡೆನ್ಮಾರ್ಕ್ ಸೆಣಸು: 'ಡಿ' ಗುಂಪಿನ ಪಂದ್ಯದಲ್ಲಿ ಹಾಲಿ ಚಾಂಪಿಯನ್ ಫ್ರಾನ್ಸ್ ತಂಡ ಡೆನ್ಮಾರ್ಕ್ ವಿರುದ್ಧ ಪೈಪೋಟಿ ನಡೆಸಲಿದೆ. ಮೊದಲ ಪಂದ್ಯ ಗೆದ್ದಿರುವ ಫ್ರಾನ್ಸ್ ಮೂರು ಪಾಯಿಂಟ್ಸ್ ಹೊಂದಿದೆ.

ಲಯೊನೆಲ್ ಮೆಸ್ಸಿ

ಇಂದಿನ ಪಂದ್ಯ

ಪಂದ್ಯ	ಸಮಯ
ಟ್ಯುನಿಷಿಯಾ Vs ಆಸ್ಟ್ರೇಲಿಯಾ	ಮಧ್ಯಾಹ್ನ 3.30
ಪೋಲೆಂಡ್ Vs ಸೌದಿ - ಅರೇಬಿಯಾ	ಸಂಜೆ 6.30
ಫ್ರಾನ್ಸ್ Vs ಡೆನ್ಮಾರ್ಕ್	ರಾತ್ರಿ 9.30
ಅರ್ಜೆಂಟೀನಾ Vs ಮೆಕ್ಸಿಕೊ	ತಡರಾತ್ರಿ 12.30

ಲೈವ್: ಸ್ಪೋರ್ಟ್ಸ್ 18, ಎಂಟಿವಿ, ಜಿಯೊ ಸಿನೆಮಾ ಆ್ಯಪ್

ಹಾಕಿ: ಡಿಪಿಎಸ್‌ಇಗೆ ಭರ್ಜರಿ ಜಯ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಶಾಹಲ್ ಹಾಗೂ ಅಶು ಗಳಿಸಿದ ಹ್ಯಾಟ್ರಿಕ್ ಗೋಲುಗಳ ನೆರವಿನಿಂದ ಡೆಲ್ಲಿ ಪಬ್ಲಿಕ್ ಸ್ಕೂಲ್ ಈಸ್ಟ್ (ಡಿಪಿಎಸ್‌ಇ) ತಂಡವು ರಾಜ್ಯ ಸಿ ಡಿವಿಷನ್ ಲೀಗ್ ಹಾಕಿ ಚಾಂಪಿಯನ್‌ಷಿಪ್‌ನಲ್ಲಿ ಭರ್ಜರಿ ಜಯ ಗಳಿಸಿತು.

ಶುಕ್ರವಾರ ಇಲ್ಲಿ ನಡೆದ ಪಂದ್ಯದಲ್ಲಿ ಡಿಪಿಎಸ್‌ಇ 5–0ಯಿಂದ ಸದರ್ನ್ ಅಲ್ಫಾ ಸ್ಪೋರ್ಟ್ಸ್ ಅಕಾಡೆಮಿ ತಂಡವನ್ನು ಸೋಲಿಸಿತು. ಶಾಹಲ್ 2 ಮತ್ತು 29ನೇ ನಿಮಿಷಗಳಲ್ಲಿ ಗೋಲು ಗಳಿಸಿದರು. ಅಶು (8 ಮತ್ತು 17ನೇ ನಿ.) ಮೊಹಮ್ಮದ್ ಸಿಯಾ (19ನೇ ನಿ.) ವಿಜೇತ ತಂಡದ ಪರ ಗೋಲು ದಾಖಲಿಸಿದರು

ಇನ್ನೊಂದು ಪಂದ್ಯದಲ್ಲಿ ಈಸ್ಟ್ ಇಂಡಿಯಾ ಹಾಕಿ ಕ್ಲಬ್ 2–2ರಿಂದ ಐಡಿಯಲ್ ಸ್ಪೋರ್ಟ್ಸ್ ಅಕಾಡೆಮಿ ತಂಡದೊಂದಿಗೆ ಡ್ರಾ ಸಾಧಿಸಿತು.

ಪ್ರೊ ಕಬಡ್ಡಿ: ದಬಾಂಗ್‌ಗೆ ಸತತ ಮೂರನೇ ಗೆಲುವು

ಹೈದರಾಬಾದ್ (ಪಿಟಿಐ): ದಬಾಂಗ್ ಡೆಲ್ಲಿ ತಂಡ ಪ್ರೊ ಕಬಡ್ಡಿ ಲೀಗ್ ಪಂದ್ಯದಲ್ಲಿ 50–47ರಲ್ಲಿ ಗುಜರಾತ್ ಜೈಂಟ್ಸ್ ತಂಡವನ್ನು ಮಣಿಸಿ ಸತತ ಮೂರನೇ ಗೆಲುವಿನ ಸಾಧನೆ ಮಾಡಿತು.

ಗಚಿಬೌಳಿ ಒಳಾಂಗಣ ಕ್ರೀಡಾಂಗಣದಲ್ಲಿ ಶುಕ್ರವಾರ ನಡೆದ ಪಂದ್ಯದಲ್ಲಿ ಸೊಗಸಾದ ಆಟವಾಡಿದ ಆಶು ಮಲಿಕ್ (12 ಪಾಯಿಂಟ್ಸ್), ನವೀನ್ ಕುಮಾರ್ ಮತ್ತು ವಿಜಯ್ ಮಲಿಕ್ (ತಲಾ 11 ಪಾಯಿಂಟ್ಸ್) ಅವರು ದಬಾಂಗ್ ಗೆಲುವಿನಲ್ಲಿ ಪ್ರಮುಖ ಪಾತ್ರ ವಹಿಸಿದರು.

ಪ್ರಥಮಾರ್ಧ ಕೊನೆಗೊಂಡಾಗ ಉಭಯ ತಂಡಗಳು 21–21 ರಲ್ಲಿ ಸಮಬಲ ಸಾಧಿಸಿದ್ದವು. ಎರಡನೇ ಅವಧಿಯಲ್ಲಿ ದಬಾಂಗ್ ಮೇಲುಗೈ ಗಳಿಸಿತು. ಗುಜರಾತ್ ಪರ ಪ್ರತೀಕ್ ದಹಿಯಾ 20 ಪಾಯಿಂಟ್ಸ್ ಗಳಿಸಿ ಗಮನ ಸೆಳೆದರು.

ಪ್ಯಾಂಥರ್ಸ್‌ಗೆ ಜಯ: ಜೈಪುರ ಪಿಂಕ್ ಪ್ಯಾಂಥರ್ಸ್ ತಂಡ 41–26 ರಲ್ಲಿ ತಮಿಳ್ ತಲೈವಾಸ್ ವಿರುದ್ಧ ಸುಲಭವಾಗಿ ಗೆದ್ದಿತು. ಮತ್ತೊಂದು ಪಂದ್ಯದಲ್ಲಿ ಹರಿಯಾಣ ಸ್ಟೀಲರ್ಸ್ ತಂಡವು 33–23ರಿಂದ ಪಟ್ನಾ ಪೈರೇಟ್ಸ್ ತಂಡವನ್ನು ಸೋಲಿಸಿತು.

ಇಂದಿನ ಪಂದ್ಯಗಳು: ಯು ಮುಂಬಾ– ಬೆಂಗಾಲ್ ವಾರಿಯರ್ಸ್

ಪುಣೇರಿ ಪಲ್ಟನ್– ತೆಲುಗು ಟೈಟನ್ಸ್

ಯು.ಪಿ.ಯೋಧಾಸ್– ಪಟ್ನಾ ಪೈರೇಟ್ಸ್

ಪಾಯಿಂಟ್ಸ್ ಪಟ್ಟಿ
(ಅಗ್ರ ಆರು ತಂಡಗಳು)

ತಂಡ	ಪಂದ್ಯ	ಜಯ	ಸೋಲು	ಟೈ	ಪಾಯಿಂಟ್
ಪುಣೇರಿ	17	11	4	2	64
ಜೈಪುರ	17	11	6	0	59
ಬೆಂಗಳೂರು	17	10	6	1	58
ಯುಪಿ	16	8	6	2	50
ಡೆಲ್ಲಿ	17	9	8	0	50
ಬೆಂಗಾಲ್	16	8	6	2	48

ಹಾಕಿ: ಭಾರತಕ್ಕೆ ಆಸ್ಟ್ರೇಲಿಯಾ ಸವಾಲು

ಅಡಿಲೇಡ್ (ಪಿಟಿಐ): ವಿಶ್ವಕಪ್ ಟೂರ್ನಿಗೂ ಮೊದಲು ತನ್ನ ಬಲ ಮತ್ತು ದೌರ್ಬಲ್ಯಗಳನ್ನು ಅರಿತುಕೊಳ್ಳಲು ಭಾರತ ಪುರುಷರ ಹಾಕಿ ತಂಡಕ್ಕೆ ಮತ್ತೊಂದು ಅವಕಾಶ ಸಿಕ್ಕಿದೆ. ಶನಿವಾರ ಇಲ್ಲಿ ಆರಂಭವಾಗುವ ಐದು ಪಂದ್ಯಗಳ ಸರಣಿಯ ಮೊದಲ ಹಣಾಹಣಿಯಲ್ಲಿ ಆಸ್ಟ್ರೇಲಿಯಾ ತಂಡವನ್ನು ಎದುರಿಸಲಿದೆ.

ವಿಶ್ವ ಹಾಕಿಯಲ್ಲಿ ಬಲಿಷ್ಠ ತಂಡಗಳಲ್ಲಿ ಒಂದಾದ ಆಸ್ಟ್ರೇಲಿಯಾ ಎದುರು ಭಾರತ ಕೊನೆಯ ಬಾರಿ ಆಡಿದ್ದು ಬರ್ಮಿಂಗ್‌ಹ್ಯಾಮ್ ಕಾಮನ್‌ವೆಲ್ತ್ ಗೇಮ್ಸ್‌ನಲ್ಲಿ. ಆ ಪಂದ್ಯದಲ್ಲಿ ಭಾರತ 0–7ರಿಂದ ಆಸ್ಟ್ರೇಲಿಯಾಕ್ಕೆ ಮಣಿದಿತ್ತು. ಭಾರತ ತಂಡವನ್ನು ಹರ್ಮನ್‌ಪ್ರೀತ್ ಸಿಂಗ್ ಮುನ್ನಡೆಸಲಿದ್ದಾರೆ.

ಪಂದ್ಯ ಆರಂಭ: ಬೆಳಿಗ್ಗೆ 11

E-book today at www.marutisuzuki.com or visit your nearest Maruti Suzuki dealership. | For bulk orders, please contact: shubham.mittal@maruti.co.in

MARUTI SUZUKI AUTHORISED DEALERS: BENGALURU: VARUN MOTORS: MALLESHWARAM, HEBBAL, INFANTRY ROAD, RAJANAKUNTE PH: 78991 00200. BIMAL: ITPL ROAD, YELAHANKA, BANASHANKARI, VARTHUR, OLD AIRPORT ROAD, HOSKOTE, CHIKKABALLAPUR, DEVANAHALLI, BAGEPALLI, SIDLAGHATTA, VIJAYPURA, H CROSS, BUDIGERE, GUDIBANDA, HESARGHATTA PH: 080-30693069. KALYANI: MYSORE ROAD, BANNERGHATTA ROAD, NAGARBHAVI, BANASWADI, LALBAGH, RAMANAGARAM, CHANNAPATNA, KANAKPURA, BANNERGATTA, BIDADI: 95909 90011. KATARIA: KANAKAPURA ROAD, PH: 78990 40000. MANDOVI: BASAVANAGUDI, COX TOWN, BASAVESHWARA NAGAR, YELAHANKA, MALUR, KOLAR, GOURIBIDNUR, PH: 97400 30077. PRATHAM: HSR LAYOUT, BELLANDHUR, ANEKAL, MAGADI, CHINTAMANI, MULBAGAL, DODDABALLAPUR, SARJAPUR VILLAGE, PH: PH: 9591991199. RNS MOTORS: YESHWANTHPUR, BOMMANAHALLI, NELAMANGALA, PH: 9538965804. SURAKSHAA CAR CARE: ELECTRONICS CITY, KORAMANGALA, BANGARPET, ATTIBELLE, SRINIVASAPURA, HAROHALLI PH: 8884442299. TUMKUR: SAKETH: TUMKUR, CHITRADURGA, TIPTUR, KUNIGAL, GUBBI, HOSADURGA, CHALLAKERE, PH: 9980211099.

*Offer includes consumer offer, exchange bonus and corporate offer (wherever applicable) on selected models/ variants. Above mentioned savings amount is the value of maximum savings on selected models/variants. *^Terms and conditions apply. Finance scheme details mentioned in the advertisement are at the sole discretion of the financier and terms and conditions as specified by the financier shall apply. Credit at the sole discretion of the Bank. 100% on-road funding is provided by select financiers only. Terms and conditions are subject to change without any prior notice. Features and accessories shown may not be part of standard fitment. Black Glass Shade on the vehicle is due to the lighting effect. Images used are for illustration purposes only. color may vary due to printing on paper. #As certified by Test Agency under Rule 115(G) of CMVR 1989. This fuel efficiency is for AMT variant. Offers vary across variants. Maruti Suzuki India Limited reserves the right to discontinue offers without notice. Above offers are valid till 30th November, 2022.